ದೀಪಾವಳಿ ವಿಶೇಷ

ಅಕ್ಟೋಬರ್ 1998 ರೂ. 10

ಬಿಸಿಲ

■ ವಾಣಿಜ್ಯ ■ ವಿಕಾಸ ■ ಮಾಹಿತಿ ■ ಸಂಪರ್ಕ

ಮಾಸಪತ್ರಿಕೆ



ನೇರ ಮಾರಾಟ ಜಾಲ

ಗಳಿಕೆಯ ಮತ್ತೊಂದು ಮೂಲ

ಬಿಡುಗಡೆ

ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್ ಸ್ಟಾಪ್ ಬಳಿ, ಬಸವೇಶ್ವರನಗರ ಮೇನ್ ರೋಡ್, ಬೆಂಗಳೂರು - 560 079.

ವೈವಾಹಿಕ/ ವರ್ಗೀಕೃತ ಜಾಹೀರಾತು ಅರ್ಜಿ ನಮೂನೆ

ದಯವಿಟ್ಟು ಈ ಕೆಳಗಿನ ವೈವಾಹಿಕ/ ವರ್ಗೀಕೃತ ಜಾಹೀರಾತನ್ನು ನಿಮ್ಮ ಮಾಸ ಪತ್ರಿಕೆಯ ಮುಂಬರುವ.......................... ತಿಂಗಳ ಸಂಚಿಕೆಯಲ್ಲಿ ಪ್ರಕಟಿಸಿ.

- ಜಾಹೀರಾತಿನ ವಿಷಯ 50 ಶಬ್ದಗಳನ್ನು ಮೀರಬಾರದು. ○ ಶಬ್ದಗಳು ಕಡಿಮೆ ಇದ್ದರೆ ದಪ್ಪ ಅಕ್ಷರಗಳಲ್ಲಿ ಎದ್ದು ಕಾಣುವಂತೆ ಪ್ರಕಟಿಸಲು ಸಾಧ್ಯ.
- ವೈವಾಹಿಕ/ವರ್ಗೀಕೃತ ಜಾಹೀರಾತಿನ ದರ ರೂ. 100. ○ ವಿಷಯವು 50 ಶಬ್ದಗಳಿಗಿಂತ ಹೆಚ್ಚಿದ್ದರೆ 2 ಜಾಹೀರಾತುಗಳೆಂದು ಪರಿಗಣಿಸಲಾಗುವುದು. ಹೆಚ್ಚುವರಿ ವಿಷಯವನ್ನು ಪ್ರತ್ಯೇಕ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಬೇಕು.
- ವೈವಾಹಿಕ ಜಾಹೀರಾತಿನೊಂದಿಗೆ ವಿಳಾಸ ಪ್ರಕಟಿಸುವುದಿಲ್ಲ. ಬಾಕ್ಸ್ ನಂಬರ್ ಶುಲ್ಕ ರೂ. 50ನ್ನು ಕಡ್ಡಾಯವಾಗಿ ಕಳಿಸಬೇಕು.

ಜಾಹೀರಾತು ಮೊತ್ತ ರೂ............ ನಗದಾಗಿ ಅಥವಾ ಅಂಕುರ ಪ್ರಕಾಶನದ ಹೆಸರಿನಲ್ಲಿ ಡಿ.ಡಿ. (ನಂ................ ದಿನಾಂಕ.................... ಬ್ಯಾಂಕ್.........................) ಅಥವಾ ಎಂ. ಓ (ಸಂಖ್ಯೆ................ ದಿನಾಂಕ.....................)ಮೂಲಕ ಸಂದಾಯ ಮಾಡಲಾಗಿದೆ.

ಜಾಹೀರಾತುದಾರರ ಪೂರ್ಣ ವಿಳಾಸ:..
....
....

ಪಿನ್ ಕೋಡ್:.............................. ದೂರವಾಣಿ ಸಂಖ್ಯೆ:..................................

ಜಾಹೀರಾತುದಾರರ ಸಹಿ/ ದಿನಾಂಕ

ಕಚೇರಿ ಬಳಕೆಗೆ:

ಬಾಕ್ಸ್ ನಂಬರ್ :

ಕೊನೆ ದಿನಾಂಕ :

ಪ್ರತಿಕ್ರಿಯೆಗಳನ್ನು ರವಾನಿಸಿದ್ದು : ಅಂಚೆ/ಕೊರಿಯರ್

ಬಿಸಿಲ ಬದುಕು

ಅಕ್ಟೋಬರ್ 1998 ಸಂಪುಟ 2 ಸಂಚಿಕೆ 4

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಅರವಿಂದ ನಾವಡ, ರವಿಶಂಕರ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ಹೆಚ್.ಎಂ.ಪಿ. ಆರಾಧ್ಯ

ಅಕ್ಷರ ಜೋಡಣೆ
ನರೇಂದ್ರ, ಪಾಟೀಲ, ಕೋಕಿಲ

ಮುಖ ಪುಟ ವಿನ್ಯಾಸ
ಹರಿಹರನ್

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross,I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattar ahalli, Old Madras Road, Bangalore - 49 Editor : Chandrakanta Vaddu

ಅಧ್ಯಯನ ಯಾತ್ರೆ

ಮುಖ್ಯಮಂತ್ರಿ ಜೆ.ಎಚ್‌ಪಟೇಲರ ತಂಡ ವಿದೇಶ ಪ್ರವಾಸ ಮುಗಿಸಿ ಬರುತ್ತಿದ್ದಂತೆ ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರ ತಂಡ ಪರದೇಶ ಯಾತ್ರೆಗೆ ಹೊರಟಿದೆ. ಎಂ.ಪಿ.ಪ್ರಕಾಶ್, ಪಿ.ಜಿ.ಆರ್.ಸಿಂಧ್ಯಾ, ಸಿ.ಬೈರೇಗೌಡ, ಕೆ.ಎನ್.ನಾಗೇಗೌಡ ಮೊದಲಾದ ಮಂತ್ರಿಗಳು ಕಾಲರ್ ನೀವಿಕೊಂಡು ವಿಮಾನ ಹತ್ತಿದ್ದಾರೆ. ಈ ಹಿಂದೆ ಶಾಸಕರ ತಂಡ, ಬೆಂಗಳೂರು ಮಹಾಪೌರರ ತಂಡ ಇಂಥ ಯಾತ್ರೆ ಪೂರೈಸಿಯಾಗಿದೆ. ಹೀಗೆ ವಿದೇಶ ಪ್ರವಾಸ ಕೈಗೊಳ್ಳುವ ಎಲ್ಲಾ ರಾಜಕಾರಣಿಗಳ ಘೋಷಿತ ಉದ್ದೇಶ: ಭೇಟಿ ಕೊಡುವ ರಾಷ್ಟ್ರದಲ್ಲಿ 'ಅಧ್ಯಯನ' ನಡೆಸುವುದು. ಆದರೆ ಇವರು ನಡೆಸಿ ಬಂದ 'ಅಧ್ಯಯನ'ದ ಫಲ ಯಾರಿಗೆ ಸಿಕ್ಕಿದೆ ಎಂಬುದು ಮಾತ್ರ ಸಾಮಾನ್ಯ ಪ್ರಜೆಗಳಿಗೆ ಇನ್ನೂ ಅರ್ಥವಾಗಿಲ್ಲ.

ಈ ಮಹಾನುಭಾವರು ನಿಜವಾಗಿ 'ಅಧ್ಯಯನ' ಮಾಡಬೇಕಾಗಿರುವುದು ಜನಸಾಮಾನ್ಯರ ದೈನಂದಿನ ಜೀವನವನ್ನು. ಹಣಕಾಸು ಖಾತೆ ನಿರ್ವಹಿಸುತ್ತಿರುವ ಸಿದ್ಧರಾಮಯ್ಯನವರು 30 ರೂಪಾಯಿಗೆ ಒಂದು ಕೆ.ಜಿ. ಉಳ್ಳಾಗಡ್ಡಿ ಕೊಳ್ಳುವ ಪ್ರಜೆಯ ಕಣ್ಣೊಳಗಿನ ಆಂತಕವನ್ನು ಅಧ್ಯಯನ ಮಾಡಬೇಕಾಗಿದೆ. ಹದಗೆಟ್ಟ ರಸ್ತೆಯಲ್ಲಿ ಬಾರದ ಬಸ್ಸಿಗಾಗಿ ಕಾಯುವ ಜನರ ಎದೆಯ ಕುದಿತವು ಪಿ.ಜಿ.ಆರ್.ಸಿಂಧ್ಯಾ ಅವರ ಅಧ್ಯಯನಕ್ಕೆ ಸೂಕ್ತ ವಸ್ತು. ದಳದ ಅಧಿಕಾರದಲ್ಲಿ ದಮ್ಮಡಿಯಷ್ಟೂ ನೆಮ್ಮದಿ ಇಲ್ಲದೆ ಗೋಳಾಡುತ್ತಿರುವ ಹಳ್ಳಿ ಜನರ ಬದುಕು ಎಂ.ಪಿ.ಪ್ರಕಾಶರ ಅಧ್ಯಯನಕ್ಕೆ ಯೋಗ್ಯವಾದುದು.

ಇಲ್ಲಿ ಇರುವ ಇಂಥ ಸ್ಥಿತಿಯನ್ನು ಆಳವಾಗಿ ಅರಿಯದೆ ಇನ್ನೆಲ್ಲಿಯೋ ಅಧ್ಯಯನ ಮಾಡಿ ಇಲ್ಲಿನ ಜನರನ್ನು ಉದ್ಧರಿಸುತ್ತೇನೆ ಎಂಬ ಧೋರಣೆಯ ಸೋಗಲಾಡಿತನ ಎಲ್ಲರಿಗೂ ಅರ್ಥವಾಗುವಂತಹದು.

ಅಧ್ಯಯನದ ಹೆಸರಿನಲ್ಲಿ ವಿದೇಶ ಪರ್ಯಟನ ಕೈಗೊಂಡು ಕರದಾತರ ಹಣವನ್ನು ಪೋಲು ಮಾಡುವವರ ಒಳಹೊರಗನ್ನು ಮತದಾರರು 'ಅಧ್ಯಯನ' ಮಾಡುತ್ತಾರೆ ಎಂಬ ಎಚ್ಚರಿಕೆ ಈ ರಾಜಕಾರಣಿಗಳಿಗೆ ಇರಬೇಕು.

ಇಲ್ಲದಿದ್ದರೆ ಅವರು ಮತದಾರರ ಅಧ್ಯಯನದ ಫಲವನ್ನು ಮುಂಬರುವ ಚುನಾವಣೆಯಲ್ಲಿ ಸವಿಯಲಿದ್ದಾರೆ.

- ಸಂಪಾದಕ

ಸರಸ ವಾರ್ತೆ



ಈ ಚಿತ್ರ ನೋಡ್ತಿದ್ದೀರಲ್ಲಾ? ಕಡ್ಲೇಕಾಯಿ, ಕಡ್ಲೇಕಾಯಿ ಅಂತ ಲಾಲ್‌ಬಾಗ್, ಕಬ್ಬನ್ ಪಾರ್ಕಿನಲ್ಲಿ ಮಾರ್ಕೊಂಡು ಬರೋರ ನೆನಪಾಯ್ತೇ! ನೀವೆಣಿಸಿದ ಹಾಗೆ ಇವರು ಕಡ್ಲೇಕಾಯಿ ಮಾರೋ ಹುಡುಗಿಯರು ಅಲ್ಲ. ಇವರು ತೊಟ್ಟಿರೋದು ಹೊಸ ಮಾದರಿಯ ಡ್ರೆಸ್. ಅದು ನ್ಯೂಸ್ ಪೇಪರ್‌ಗಳಿಂದಲೇ ತಯಾರಿಸಿದ್ದು. ಚಿತ್ರದ ಬಲಗಡೆ ಇರೋ ಮುದುಕಿ ಹುಡುಗಿಯನ್ನು ಅಪ್ಪಿಕೊಂಡಿರೋ ಪೇಪರ್ನ ಓದುವುದರಲ್ಲಿ ಮಗ್ನಳಾಗಿದ್ದಾಳೆ. ಈ ಪ್ರದರ್ಶನದ ಮೂಲಕ ಅಂತರಾಷ್ಟ್ರೀಯ ಸೌಂದರ್ಯ ದಿನದಂದು ಕೀವ್‌ನಲ್ಲಿ ಈ ಕಾಗದಧಾರಿ ಮಹಿಳಾಮಣಿಗಳು ನೆರೆದಿದ್ದ ಜನಸಮೂಹದ ಮನಕ್ಕೆ ಕಾವು ನೀಡಿದರು. ಚಿತ್ರದಲ್ಲಿರೋ ನಾಲ್ಕು ಜನರದ್ದೂ ಒಂದೊಂದು ವೇಷ. ಅಬ್ಬಬ್ಬಾ, ಬರೀ ಕಾಗದದಲ್ಲಿ ಮೈ ಮುಚ್ಚಿಕೊಳ್ಳೋಕೆ ಮಹಿಳಾಮಣಿಗಳ ಭಗೀರಥ ಯತ್ನ. ಇವರೆಲ್ಲಾ ಅಲ್ಲಿನ ಹೆಸರಾಂತ ಮಾಡೆಲ್ಲುಗಳು. ನೋಡಿದ್ರಾ ಉದರ ನಿಮಿತ್ತಂ ಬಹುಕೃತವೇಷಂ, ರದ್ದಿ ಪೇಪರ್ರೂ ಇನ್ಮೇಲೆ ಬಹು ಅಮೂಲ್ಯಂ.

○

ಬಸ್ ಸ್ಟಾಪ್‌ನಲ್ಲಿ ನಿಂತ ಹುಡುಗಿಯರ್ನ ಚುಡಾಯಿಸೋರು ಇದ್ದಾರೆ. ಅವರ ಪರ್ಸ್ ಕದಿಯೋ ಪಿಕ್‌ಪಾಕೆಟರ್ಸ್, ಪಿಕ್‌ಪಾಕೆಟಿಣಿಯರಿದ್ದಾರೆ. ಆದರೆ ಕೂದಲನ್ನ ಕದಿಯೋರಿದ್ದಾರೆಯೇ? ಹೌದು, ಕೂದಲು ಕದಿತಿದ್ದವನೊಬ್ಬನನ್ನು ಬಂಧಿಸಿದ ಬಗ್ಗೆ ಸೆಂಟ್ ಪಾಲ್‌ನಿಂದ ವರದಿಯಾಗಿದೆ. 43ರ ಹರೆಯದ ಜಾನ್‌ಗೆ ಇದೊಂದು ಹುಚ್ಚು. ಹುಡುಗಿಯರ ಕುದುರೆ ಬಾಲಗಳನ್ನು (ಜಡೆಯನ್ನ) ಕತ್ತರಿಸುವುದೇ ಕೆಲಸ. ಯಾವಾಗಲೂ ಇವನು ಶಸ್ತ್ರಸಜ್ಜಿತ. ಅಂದ್ರೆ, ಕೈಯಲ್ಲಿ ಕತ್ತರಿ. ಮೊನ್ನೆ ಹೀಗೆ ಬಸ್‌ಸ್ಟಾಂಡಿನಲ್ಲಿ ಬೆನೊಯಿಟ್ ಹಾಗೂ ಅವಳ ಫ್ರೆಂಡ್ ನಿಂತಿದ್ದರಂತೆ. ಅಲ್ಲಿಗೆ ಬಂದ ಈ ಕುದುರೆಬಾಲಪ್ರಿಯ ನಿಮ್ಮ ಕೂದಲನ್ನ ಕೊಡಿ. ನಾನು ಬೆಲೆಕೊಟ್ಟು ತಗೊಳ್ತೀನೆ ಅಂದ್ನಂತೆ. ಅದ್ಕೆ ಅವಳು ಅದನ್ನ ತಿರಸ್ಕರಿಸಿ ಮುಂದಿನ ಬಸ್‌ಸ್ಟಾಪ್‌ನಲ್ಲಿ ನಿಂತಳು. ಇವನು ಬಿಟ್ಟಾನೆಯೇ, ತಿಂಡಿ ನೋಡಿದ ನಾಯಿ ತರಹ ಅವಳನ್ನೇ ಹಿಂಬಾಲಿಸಿ ಅವಳ ಕುದುರೆ ಬಾಲಕ್ಕೆ ಕೈಹಾಕಿ ಕತ್ತರಿ ಪ್ರಯೋಗ ಮಾಡಿಯೇಬಿಟ್ಟ. ಸರಿ, ಮೋಟುಕೂದಲಿನಲ್ಲೇ ಪಾಪ ಬೆನಾಯಿಟ್ ಪೋಲಿಸ್ ಠಾಣೆಗೆ ಓಡಿಹೋಗಿ ಇವನ ಮೇಲೆ ಕ್ರಿಮಿನಲ್ ಕಂಪ್ಲೆಂಟ್ ನೀಡಿದಳು. ಈಗ ಅವನು ಬಂಧನದಲ್ಲಿ. ಹೀಗೇನೇ ದ್ರೌಪದಿ ಕೂದಲ ಮಾಹಾತ್ಮೆ ಕೂಡ! ಈಗ ಇವನ ಸರದಿ. 'ಮಹಾ ಅಪಾಯಂ ಮಹಿಳಾಮಣಿಗಳ ಕೇಶಂ; ಅಂತಾ ದೂರದಲ್ಲಿದ್ದರೆ ಬಹಳ ಅಚ್ಛಾ ಸ್ವಚ್ಛ.

○

'ಹಲೋ, ಐ ಲವ್ ಯು, ಐ ಲೈಕ್ ಯು - ಹೀಗೆ ಇನ್ನೂ ಮುಂದಕ್ಕೆ ಹೋಗಿ ಮಿಲನ-ಸ್ಖಲನದ ಬಗ್ಗೆ ಕ್ಷಣದಲ್ಲೇ ಎಲ್ಲಾ ಮಾತಾಡಿ, ಬಾಯಿ ಚಪ್ಪರಿಸ್ಕೊಂತಾ ಹಗಲುಕನಸಿನಲ್ಲೇ ಕಳೆಯೋ ಮಂದಿ ಗೊತ್ತಲ್ಲಾ. ಈ ಪರಂಪರೆ ವಿದೇಶದಲ್ಲಿ ಪಾರ್ಟಲೈನ್, ಫ್ರೆಂಡ್ಸ್‌ಲೈನ್ ಅಂತಾ ಶುರುವಾಗಿದೆ. ಅರ್ಥವಾಗ್ಲಿಲ್ಲಾ? ಇದನ್ನು ಆಧುನಿಕ ಭಾಷೇಲಿ ಫೋನ್-ರತಿ ಅಂತಾರೆ. ಫೋನ್‌ನಲ್ಲಿ ಸರಸ-ಸಲ್ಲಾಪದಿಂದ ಪ್ರಾರಂಭಿಸಿ ರತಿಕ್ರೀಡೆನೂ ಕ್ಷಣದಲ್ಲಿಯೇ ನಡೆದು ಹೋಗಿಬಿಡುತ್ತೆ, ಬಿಡಿ. ಈಗ ಬಿ.ಜೆ.ಪಿ. ಸರಕಾರ ಭಾರತದಲ್ಲಿ ಈ ರತಿಸುಖ ಅನುಭವಿಸೋ ವಿಧಾನದ ಮೇಲೆ ನಿಷೇಧ ಹೇರಿದ್ದಾರೆ. ಕೆಲವು ಕಡೆ ಕದ್ದು-ಕದ್ದು ಈ ರತಿಕ್ರಿಡೆಯಲ್ಲಿ ತೊಡಗಲೂ ಬಹುದು. ನಮ್ಮ ಭಾರತದಲ್ಲಿ, ನೀವೂ ರೆಡೀನಾ? ಕಿಸೆಯಲ್ಲಿ ಸಾಕಷ್ಟು ಪೈಸೆ ಇಟ್ಕೊಂಡು ಈ ಕ್ಯಾಬಿನ್ ಹೊಕ್ಕರೆ ಸರಿ. ಯಾಕಂದ್ರೆ ಹಾರ್ಟ್ ಬೀಟ್‌ನ್ನು ಮೀರಿಸೋ ವೇಗ ಈ ಮೀಟರ್‌ಗೆ. ಆದ್ರೆ ಕೆಲವು ರಸಿಕರ ಮಹಾಶಯರ ಅಂಬೋಣ ಹೀಗಿದೆ:

ಕ್ಷಣದ ಸುಖಕ್ಕೆ ಸಾವಿರ ಗಟ್ಟಲೆ ಸುರಿಯೋದಕ್ಕಿಂತ ಇದು ಎಷ್ಟೋವಾಸಿ ಸ್ವಾಮಿ. ಜೊತೆಗೆ ನಿಜರತಿ ಪ್ರಾಯೋಗಿಕ, ಈ ಫೋನ್‌ರತಿ ಸೈದ್ಧಾಂತಿಕ.


○

ನನ್ನಂತೆ ಇನ್ನೊಬ್ಬನನ್ನು ಸೃಷ್ಟಿಸೋದಕ್ಕೆ ತದ್ರೂಪ್ ಅಥವಾ ಕ್ಲೋನಿಂಗ್ ಅಂತಾರೆ. ಈ ಹಿಂದೆ ಹಸು, ಕುರಿಗಳೆಲ್ಲಾ ಈ ಪ್ರಯೋಗಕ್ಕೆ ಬಲಿಯಾಗಿದ್ದವು. ನ್ಯೂಯಾರ್ಕ್‌ನಲ್ಲಿ ಮನುಷ್ಯನ್ನೇ ಇಂತಾ ಕ್ಲೋನಿಂಗ್ ಪ್ರಯೋಗಕ್ಕೆ ಬಳಸೋದಿಕ್ಕೆ ತಯಾರಾಗ್ತಾ ಇದಾರೆ. ಬಹಳಷ್ಟು ವಿರೋಧವೂ ವ್ಯಕ್ತವಾಗಿದೆ. ಅದು ಅನಾಗರೀಕತೆ ಅನ್ನೋರು ಕೆಲವರಾದರೆ, ಮಿಲಿಯನ್-ಕೋಟಿಯನ್ನರಿಗೆ ಈ ಮಾಫಿಯಾ ಗ್ಯಾಂಗ್‌ನವರ ಚಿಂತೆ. ಯಾಕೆಂದ್ರೆ, ಆಸ್ತಿ ಹೊಡೆಯೋಕೆ ತನ್ನ ತರಹ ಇನ್ನೊಬ್ಬನನ್ನು ಸೃಷ್ಟಿಸಿದರೆ ಕಷ್ಟವಲ್ವೇ. ಈ ಪ್ರಯತ್ನ ಸಫಲವಾದ್ರೆ, ಇನ್ಮುಂದೆ ಮದುವೆ, ಹೆಂಡತಿ, ಮನೆ-ಸಂಸಾರ, ಹಾಸಿಗೆ-ಹಾಲು ಎಲ್ಲಾ ನೆನೆಗುದಿಗೆ. ರೂಪವಂತ, ಬುದ್ಧಿವಂತರಿಗೆ ಬಹಳ ಡಿಮ್ಯಾಂಡ್. ಅಂಗೈನಲ್ಲೇ ಜಗತ್ತನ್ನು ಸೃಷ್ಟಿಸೋ ಮಟ್ಟಕ್ಕೆ ಬೆಳೆದಿರೋ ಮನುಷ್ಯನಿದ್ದ ಮೇಲೆ ದೇವರಿಗೇನು ಕೆಲಸ ಬಿಡಿ. ಅವನು ಅನಂತ ಶಯನನಾಗಿಯೇ ಇರಲಿ. ಒಂದಂತೂ ನಿಜ, ಈ ಪ್ರಯೋಗದಿಂದ ಲಾಭ ಆಗೋದು ಯಾರಿಗ್ಗೊತ್ತಾ? ಚಲನಚಿತ್ರ ನಿರ್ದೇಶಕರಿಗೆ, ನಿರ್ಮಾಪಕರಿಗೆ. ದ್ವಿ-ತ್ರಿಪಾತ್ರಗಳ ಸನ್ನಿವೇಶಗಳಲ್ಲಿ, ಶೂಟಿಂಗ್ ನಡುವೆ ಕೈಕೊಡುವ ನಟಿಮಣಿಯರ ಮುಂದಿನ ಪಾತ್ರಗಳಲ್ಲಿ ಅಭಿನಯಿಸಲು ಪ್ರತಿರೂಪವೇ ಪರಿಹಾರ. ಇನ್ನು ಹೆರೋ-ಹೊರೋ ಕಷ್ಟ ಅನುಭವಿಸೋದಿಕ್ಕೆ ತಯಾರಿಲ್ಲದ ಸೌಂದರ್ಯಾರಾಧಕರಿಗೆ, ನೀನಾ ಗುಪ್ತಳ ತರಹದ ವಿಶೇಷ ತಾಯಂದಿರಿಗೆ ಬಹಳ ಅನುಕೂಲ.

○

ಗಣಪತಿ ಬಪ್ಪ ಮೋರೆಯಾ, ಮಂಗಳ ಮೂರ್ತಿ ಮೋರೆಯಾ ಅಂತಾ ಕೂಗ್ತಾ ಗಣೇಶನ್ನ ಮೆರವಣಿಗೆ ಮಾಡಿಸಿ ಕೊನೆಗೆ ನೀರಿನಲ್ಲಿ ಮುಳುಗಿಸಿ ಮನೆಗೆ ಬಂದು ಗಡದ್ದಾಗಿ ಊಟಮಾಡಿ ಮಲಕೊಳ್ಳೊದು......... ಆದ್ರೆ ನೀರೇ ಇಲ್ಲದಿದ್ರೆ ಹೇಗೆ? ಮುಂದಿನ ವರ್ಷದ ತನಕ ಹಾಗೇ ಇಡೋಕ್ಕಾಗುತ್ತಾ? ಇಲ್ವಲ್ಲಾ. ಈ ಸಮಸ್ಯೆ ಇತ್ತೀಚೆಗೆ ಚಿತ್ರದುರ್ಗದ ಯುವಕರಿಗೆ ಕಾಡಿತ್ತಂತೆ. ಯುವಕರು ಊರಲ್ಲಿರೋ ಮಠದ ಬಾವಿಗೆ ತೆರಳಿ ಅನುಮತಿ ಕೇಳಿದ್ರಂತೆ. ಅದ್ಕೆ ಮಠದವರು ಇಲ್ರಪ್ಪಾ, ಇರೋದೇ ಒಂದು ಬಾವಿ. ಅದ್ರ ನೀರು ಕುಡೀತಾರೆ, ನೀವು ಗಣಪತಿ ವಿಸರ್ಜನೆ ಮಾಡಿದ್ರೆ, ಆ ನೀರು ಕಲುಷಿತವಾಗುತ್ತೆ ಅಂತಾ ಹೇಳಿ ಅನುಮತೀನಾ ನಿರಾಕರಿಸಿದ್ರು. ಸರಿ ಕೆಲಕ್ಷಣ ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದದ್ದೇ ತಡ ಗುಂಡಿ ತೋಡಲಿಕ್ಕೆ ಶುರು ಮಾಡಿದರು. ಎಷ್ಟು ಬೇಕೋ ಅಷ್ಟು ಗುಂಡಿ ತೆಗೆದು ಗಣಪತಿನ್ನ ಇಟ್ಟು ಮಣ್ಣು ಮುಚ್ಚಿಯೇಬಿಟ್ಟರು. ಇವರ ಈ ಕಾರ್ಯಕ್ಕೆ ಮಣ್ಣಿನ ಗಣಪ ಮಣ್ಣಿಗೆ ಹೋಗಬೇಕು ಅನ್ನೋ ಸಮರ್ಥನೆ. ಆದ್ರೆ ನನಗೆ ತಿಳಿದದ್ದು ಇಷ್ಟು. ಗುಂಡಿ ಮೇಲೆ ಗುರುತಿಗೊಂದು ಗುಲಾಬಿ ಗಿಡ ನೆಟ್ಟರೆ ಒಳ್ಳೇದಿತ್ತು. ಯಾಕಂದ್ರೆ ಮುಂದಿನ ಜನಾಂಗಕ್ಕೆ ಅದೊಂದು ದೊಡ್ಡ ಸಮಾಧಿಯಾಗಿ ಪ್ರೇಕ್ಷಣೀಯ ಸ್ಥಳವಾಗುತ್ತಲ್ಲಾ ಅಂತಾ. ■

ಒಳನೋಟ



ಪೋಲೀಸ್ ಅರೆಸ್ಟ್!

ಅರೆಸ್ಟ್ ವಾರೆಂಟ್	ಕೆ. ಈಶ್ವರ ಪ್ರಸಾದ್	8
ನಮ್ಮ ಪೊಲೀಸರು ಏಕೆ ಹೀಗೆ?	ಮಾಧವ ಐತಾಳ್	14
ನೀರ ಮಾರಾಟ ಜಾಲ	ಕೆ.ಬಿ. ಮೋಹನಕುಮಾರ್	18
ನಾನೂ ಟೋಪಿ ಹಾಕಿಕೊಂಡೆ!	ಡಾ. ಎಚ್.ಎಸ್. ವೆಂಕಟೇಶ್	24
ನಿಮ್ಮ ಹಲ್ಲು: ನಿಮಗೆಷ್ಟು ಗೊತ್ತು?	ಡಾ. ಅರವಿಂದ ಡಿ. ಎನ್	29
ತಂದೆ ತಾಯಿಗಳ ವರ್ತನೆ	ಸಿ. ಎಸ್. ಭಾರತಿ	31
ಹೆಸರು ಕಂಡ ಯುವಕ	ಎಂ. ಎಸ್. ಮೂರ್ತಿ	34
'ಡಾಲರ್' ಚಕ್ರಾಧಿಪತ್ಯಕ್ಕೆ 'ಯೂರೊ'	ಸುಧಾಶರ್ಮ	36
ಗಣಿತ ಆಟ ಆಡುವ ಎಳೆಯ	ಡಾ. ಟಿ.ಕೆ. ತಾಪಸ್	37
ಯೇತಿಯನ್ನು ಕಂಡ ಪರ್ವತಾರೋಹಿ	ನಾರಾಯಣ ಎಂ. ಭಟ್	57
ಕಲಾಗ್ರಾಮದ ಕನಸುಗಾರ ಮಾರುತಿ	ಎಸ್. ಎಂ. ನಾಗಭೂಷಣ	60
ಅಲ್ಲಾವುದ್ದೀನನ ಅದ್ಭುತ ದೀಪ	ಮುರಳೀಧರ	61
ಪುನರ್ಜನ್ಮದ ಚಿದಂಬರ ರಹಸ್ಯ	ಬಸವರಾಜ ಪುರಾಣಿಕ	64
ಧನ್ವಂತರಿ ಯಾರು?	ಕೋ. ಚೆನ್ನಬಸಪ್ಪ	66
ಬೀರಖೋಲ್ ಗುಡ್ಡ	ಎಂ. ರವೀಂದ್ರ	69
ನೀವು ಬದುಕುವಿರಾ? ಬಾಳುವಿರಾ?	ಕೃಶಾಂಗ	71
ನತದೃಷ್ಟ ಪ್ರತಿಭೆ ದೊಡ್ಡ ಗಣೇಶ್	ಗರ್ತಿಕರೆ ವಿ. ಪ್ರಕಾಶ್	73
ದೊಡ್ಡಣ್ಣ :ತೂಕಕ್ಕೆ ತಕ್ಕ ಬೆಲೆ?		79

ವಿದ್ಯೆ - ಉದ್ಯೋಗ

ಬಿಜಾಪುರದ ಸೈನಿಕ ಶಾಲೆ	45
ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ	47
ಪ್ರವಾಸೋದ್ಯಮದಲ್ಲಿ ಉದ್ಯೋಗಾವಕಾಶ	48
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಪ್ರವೇಶ	49
ಮಾರ್ಗದರ್ಶಿ	50
ಸೊಂಡೂರಿನ ವಸತಿ ಶಾಲೆ	52
ನೀವೂ ಇಂಗ್ಲಿಷ್ ಕಲಿಯಿರಿ	54
ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ	56



ಸ್ಥಿರ ಶೀರ್ಷಿಕೆಗಳು

ಸರಸ ವಾರ್ತೆ	4	ಆಪ್ತ ಸಮಾಲೋಚನೆ	43
ಕ್ವಿಜ್	28	ಮಾರ್ಗದರ್ಶಿ	50
ಹೊಸ ಪುಸ್ತಕ	32	ವ್ಯಕ್ತಿತ್ವ ವಿಕಾಸ	71
ಸಂವೇದನೆ	34	ಪದಬಂಧ	75
ಅಡುಗೆ ಮನೆ	38	ಕಿಲ ಕಿಲ	76
ವಯಸ್ಕರ ಸಂದೇಹ ಸಲಹೆ	41	ತಾರಾ ಬದುಕು	79

ಹೊಸ ಅಂಕಣ

ವೈವಾಹಿಕ ವರ್ಗೀಕೃತ ಜಾಹೀರಾತು 21

ಟಪಾಲು

ಮಾಸದಿಂದ ಮಾಸಕ್ಕೆ

-ಕೇಶವ ಉಮರ್ಜಿ, ಜಮಖಂಡಿ

ಮಾಸದಿಂದ ಮಾಸಕ್ಕೆ 'ಬದುಕು' ಸುಂದರ ಮುಖಪುಟದೊಂದಿಗೆ ವಿಷಯ ವೈವಿಧ್ಯಗಳ ನ್ನೊಳಗೊಂಡು ಬರುತ್ತಿರುವುದು ಸಂತೋಷ ತಂದಿದೆ. ಇನ್ನು ಮುಂದೆ ಪ್ರಾರಂಭಿಸಲಿರುವ ವೈವಾಹಿಕ ಜಾಹೀರಾತು ಸೂಕ್ತವಾದುದು. ಅದ ರಂತೆ 'ಪತ್ರ ಮಿತ್ರರು' ಅಂಕಣ - ಒಂದು ಪುಟಕ್ಕೆ ಸೀಮಿತ - ಪ್ರಾರಂಭಿಸಿದರೆ 'ಬದುಕು' ಇನ್ನಷ್ಟು ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ.

ಧನ್ಯವಾದಗಳು

-ಪಿ.ಎಚ್.ದಯಾನಂದ, ಹೊನ್ನಾವರ

ನಮ್ಮ 'ಬದುಕು' ರೂಪಿಸಲು ನೀವು ಬಹಳ ಶ್ರಮ ಪಡುತ್ತಿದ್ದೀರಿ. ಇದಕ್ಕಾಗಿ ತಮಗೆ ಅನಂತಾನಂತ ಧನ್ಯವಾದಗಳು.

ಚೆಕ್ ತಲುಪಿದೆ

- ಕೆ.ಎಸ್.ಲಕ್ಷ್ಮಿ, ಬೆಂಗಳೂರು

ನೀವು ಕಳುಹಿಸಿದ ಕ್ವಿಜ್-9ರ ಮೊದಲ ಬಹುಮಾನದ ರೂ.500 ಚೆಕ್ ತಲುಪಿತು. ಇದರಿಂದ ನನಗೆ ತುಂಬಾ ಸಂತೋಷವಾಯಿತು. ಆ ಹಣ ನಮ್ಮ ಶಾಲೆಯಲ್ಲಿ ಗೈಡ್ಸ್‌ಗೆ ಸೇರಲು ನನಗೆ ಉಪಯೋಗವಾಯಿತು. ಕ್ವಿಜ್‌ನ್ನು ಬರಿ ಮಕ್ಕಳಿಗೋಸ್ಕರ ಇರಿಸಿದರೆ ಒಳ್ಳೆಯದು.

ಅನಾಕರ್ಷಕ

-ಶ್ರೀಶೈಲ ಕಾಖಂಡಕಿ, ರಬಕವಿ

ಇತ್ತೀಚೆಗೆ 'ಬದುಕು' ಮುಖಪುಟ ಚೆನ್ನಾಗಿ ಬರುತ್ತಿಲ್ಲ, ಆಕರ್ಷಕವೂ ಆಗಿಲ್ಲ. ಏಕೆ?

ಒಳ್ಳೆಯವರಾಗಲು

-ಚಂದ್ರಶೇಖರ ಕಮ್ಮಾರ, ಯಲಬುರ್ಗಾ

ಈ ಪುಸ್ತಕ ಓದಿ ನಾವು ನಿಜವಾಗಿಯೂ ಒಳ್ಳೆಯವರಾಗಿ ಬದುಕಲು ಸಾಧ್ಯ.

ವಿನಂತಿಯು

- ವಿ.ಎಸ್.ಕೆಂಡದಮಠ, ಶಿಡೇನೂರ

ಪತ್ರಿಕೆಯು ತುಂಬಾ ಆಕರ್ಷಕವಾಗಿದ್ದು ಸಾಕಷ್ಟು ಜನರ ಮೆಚ್ಚುಗೆಯನ್ನು ಪಡೆಯುತ್ತಿದೆ. ಈ ಪತ್ರಿಕೆಯನ್ನು ಮಾರಾಟ ಮಾಡಲು ನಮಗೆ ಅತೀವ ಆನಂದವಾಗುತ್ತಿದೆ. ಜುಲೈಗಿಂತ ಆಗಸ್ಟ್ ಸಂಚಿಕೆಯ ಮುಖಪುಟ ಬಹಳ ಆಕರ್ಷಕ ವಾಗಿದ್ದು ಪ್ರತಿ ಸಂಚಿಕೆಯು ಹೀಗೆಯೇ ಮೂಡಿ ಬರಲಿ. ಜ್ಞಾನಾರ್ಜನೆಗೆ ಸಂಬಂಧಿಸದ ಯಾವುದೇ ಅನಾವಶ್ಯಕ ಜಾಹೀರಾತುಗಳನ್ನು ಪ್ರಕಟಿಸ ಬಾರದಾಗಿ ವಿನಂತಿಯು.

ರಾಜಕಾರಣಿಗಳ ಪ್ರಣಯ

-ಕುಪೇಂದ್ರ ವಠಾರ್, ಯಾದಗಿರಿ

'ರಾಜಕಾರಣಿಗಳ ಪ್ರಣಯ' ಸಮಗ್ರ ಲೇಖನವು ಬಹಳ ಪ್ರಾಮುಖ್ಯ ಹೊಂದಿದ್ದರಿಂದ 'ಬದುಕ'ನ್ನು ಸದಾ ಕಾಯ್ದಿಡುವಂತಾಗಿದೆ. ರಾಜ್ಯ, ರಾಷ್ಟ್ರವಷ್ಟೇ ಅಲ್ಲದೆ, ಅಂತಾರಾಷ್ಟ್ರೀಯ ಮಟ್ಟದ ಪ್ರಮುಖ ರಾಜಕಾರಣಿಗಳ ಪ್ರಣಯದ ವಿವರಗಳನ್ನು ನೀಡಿದ್ದಕ್ಕೆ ಧನ್ಯವಾದಗಳು. ಅನೈತಿಕತೆ ಬಗ್ಗೆ ಡಾ.ಚಂದ್ರಶೇಖರ ಅವರ ವಿಶ್ಲೇಷಣೆಯು ಮಾರ್ಮಿಕವಾಗಿದೆ. 'ಬಡ ಜಿಲ್ಲೆ ಗಳಿಗೆ ತಡವಾದ ಸ್ವಾತಂತ್ರ್ಯ' (ಸದಾನಂದ ಪೆರ್ಲ) ಲೇಖನ ಸಮಯೋಚಿತವಾಗಿದೆ. ನಾನು ಹಿಂದೆ ಕಳುಹಿಸಿದ್ದ ಹನಿಗವನ ಪ್ರಕಟಿಸದ್ದಕ್ಕೆ ಸ್ವಲ್ಪ ಬೇಸರ.

ವಿಷಾದ

- ಸಂ.

ಸೆಪ್ಟಂಬರ್ ಸಂಚಿಕೆಯ 34ನೇ ಪುಟದಲ್ಲಿ ಪ್ರಕಟವಾದ ಲೇಖನದೊಂದಿಗೆ ಪ್ರಕಟವಾದ ಪ್ರೊ.ಹಿರೇಮಲ್ಲೂರ ಈಶ್ವರನ್ ಅವರ ಫೋಟೋ ತೆಗೆದವರು ಡಾ.ಎಚ್.ಚಂದ್ರಶೇಖರ. ಅವರ ಹೆಸರು ಬಿಟ್ಟುಹೋದದ್ದಕ್ಕೆ ವಿಷಾದಿಸುತ್ತೇವೆ.

ಅನಾಥ ರಕ್ಷಕ

-ಎಂ.ಮ್ಯಾಥ್ಯೂ, ಶಿವಪುರ

ನಾನು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಶಿವಪುರ ಎಂಬ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ವಯಸ್ಸು 26, ಗೃಹಸ್ಥ. ಅನಾಥ ಮಕ್ಕಳನ್ನು ಸಾಕುವ ಹಂಬಲ ಇರುವು ದರಿಂದ ಜೂನ್ 97ರಂದು ಮೂರು ಅನಾಥ ಮಕ್ಕಳನ್ನು ಪಡೆದೆ. ಈಗ ನನ್ನ ಬಳಿ 6 ಅನಾಥ ಮಕ್ಕಳಿದ್ದಾರೆ. ನಾನು, ನನ್ನ ಹೆಂಡತಿ ಮಕ್ಕಳ ಪೋಷಣೆಯಲ್ಲಿ ನಿರತರಾಗಿದ್ದೇವೆ. ಈ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ವಿದ್ಯಾಭ್ಯಾಸಕ್ಕೆ ಸಹಾಯಕರಾಗಿದ್ದೇವೆ. ದೇವರ ಚಿತ್ತವಾದರೆ ಮುಂದೆ ''ಆಶ್ರಯ ಚಾರಿಟೇಬಲ್ ಟ್ರಸ್ಟ್'' ಸ್ಥಾಪಿಸುವ ಆಲೋಚನೆ ಇದೆ. ಓದಲು ಆಸಕ್ತಿ ಉಳ್ಳ ಅನಾಥ ಗಂಡು ಮಕ್ಕಳು ನಿಮ್ಮ ಗಮನಕ್ಕೆ ಬಂದರೆ (10 ವರ್ಷದೊಳಗಿನವರು) ನನ್ನ ವಿಳಾಸಕ್ಕೆ ಕಳಿಸಿ : ವೀರಾಜಪ್ಪ ಬಿಲ್ಡಿಂಗ್, ಶಿವಪುರ - 571429, ಮಂಡ್ಯ ಜಿಲ್ಲೆ.

ಆಕರ್ಷಕ

-ಜಿ.ಈಶ್ವರಮ್ಮ, ಹೊಸ ಮೋಕಾ

ಸೆಪ್ಟಂಬರ್ ಸಂಚಿಕೆಯ ಮುಖಪುಟ ಆಕರ್ಷಕವಾಗಿತ್ತು. ''ರಾಜಕಾರಣಿಗಳ ಪ್ರಣಯ'' ಹಾಗೂ ''ಇದು ಏಡ್ಸ್‌ಗಿಂತ ಭೀಕರ'' ಲೇಖನಗಳು ಚೆನ್ನಾಗಿದ್ದವು. ಸ್ಥಿರ ಶೀರ್ಷಿಕೆಯಾದ 'ಕ್ಲಾಸ್ ರೂಂ' ಮುಂದುವರಿಸಿ.

ತಾರತಮ್ಯವೇಕೆ ?

-ಬಿ.ವೀರೇಶ್, ಬಮ್ಮನಹಳ್ಳಿ

ನಿಮ್ಮ ಪತ್ರಿಕೆಯು ಒಂದು ಒಳ್ಳೆಯ ಪತ್ರಿಕೆ. ಸಂತೋಷ. ಆದರೆ ನೀವು ಪ್ರಕಟಿಸುವ ವಿದ್ಯೆ-ಉದ್ಯೋಗ ಮಾಹಿತಿಯಲ್ಲಿ ಬರಿ ಐ.ಎ.ಎಸ್., ಕೆ.ಎ.ಎಸ್., ಬ್ಯಾಂಕಿಂಗ್, ಇಂಜಿನಿ ಯರಿಂಗ್ ಸೇರಿರುತ್ತದೆ. ನಿಮ್ಮ ಪತ್ರಿಕೆಯನ್ನು ಐ.ಎ.ಎಸ್./ಕೆ.ಎ.ಎಸ್. ಕಲಿತವರು ಮಾತ್ರ ಖರೀದಿಸಬೇಕೇ? ಐ.ಟಿ.ಐ, ಡಿಪ್ಲೊಮಾ ಮೊದ ಲಾದ ಕೋರ್ಸುಗಳಿಗೆ ಸಂಬಂಧಿಸಿದ ಮಾಹಿತಿ ಯನ್ನೇಕೆ ನೀಡುವುದಿಲ್ಲ? ಈ ತಾರತಮ್ಯ ಏಕೆ?

ಕಥೆ, ಜ್ಯೋತಿಷ್ಯ

-ಮಹಮದ್ ರಫಿ, ಮಲ್ಲಪ್ಪನಹಳ್ಳಿ

'ಬದುಕು' ತುಂಬಾ ಸೊಗಸಾಗಿ ಮೂಡಿಬರುತ್ತಿದೆ. ಮುಖಪುಟವಂತೂ ಅದ್ಭುತ. ಆರೋಗ್ಯ ಭಾಗ್ಯ, ಕಥೆ, ಪತ್ರಮಿತ್ರ ವಿಭಾಗ, ಜ್ಯೋತಿಷ್ಯ - ಇವುಗಳನ್ನೂ ಪ್ರಕಟಿಸಿದರೆ ಪತ್ರಿಕೆ ಇನ್ನಷ್ಟು ಉತ್ತಮವಾಗುವುದೆಂದು ನನ್ನ ಅನ್ನಿಸಿಕೆ.

ಕಠಿಣ ಕ್ವಿಜ್

-ಎ.ಜಿ. ಗಾಣಿಗೇರ, ಪೋತ್ನಾಳ

ಕ್ವಿಜ್ ಸ್ಪರ್ಧೆಯಲ್ಲಿ ಕೇಳುವ ಪ್ರಶ್ನೆಗಳು ಇನ್ನಷ್ಟು ಕಠಿಣವಾಗಿರಲಿ. ಬಹಳ ಸರಳ ಪ್ರಶ್ನೆಗಳು ಬೇಡ. ಹಾಗೆಯೇ ಈಗಿರುವ 5 ಪ್ರಶ್ನೆಗಳಿಗೆ ಇನ್ನೂ 5 ಪ್ರಶ್ನೆ ಸೇರಿಸಿರಿ. ಕೆಲವು ಅನಾವಶ್ಯಕ ಲೇಖನಗಳನ್ನು ಪ್ರಕಟಿಸಬೇಡಿ.

ನಮ್ಮ ರಾಮಣ್ಣ

-ಕೆ.ಜಿ. ಮಾಶೆಟ್ಟಿ, ಹುಡಗಿ

ಚಂದ್ರಶೇಖರ ಪಾಟೀಲರ 'ನಮ್ಮ ರಾಮಣ್ಣ' ತುಂಬ ಮನಮಿಡಿಯುವ ಪರಿಚಯ ಲೇಖನ. ಹಳ್ಳಿಯಿಂದ ಪಟ್ಟಣ ಸೇರಿದವರಲ್ಲಿ ಬಹುಪಾಲು ಜನ ತಮ್ಮತನ ಮರೆತವರೇ ಆಗಿರುತ್ತಾರೆ. ಆದರೆ ಡಾ.ರಾಮಣ್ಣನಂಥವರು ಬದುಕಿನಲ್ಲಿ ಬರಹದಲ್ಲಿ ತಮ್ಮತನ ಬಿಟ್ಟವರಲ್ಲ. ಹಳ್ಳಿಯ ಗಮಾರತನದಲ್ಲೂ ಎಂತಹ ಮಾನವೀಯತೆ, ಮಾಂತ್ರಿಕತೆ!

ಮಹಿಳೆಯರಿಗೆ ಬೇಸರ!

-ಕೆ.ರಮೇಶ ಬಾಬು, ಹ.ಹಳ್ಳಿ

ಹೆಣ್ಣುಮಕ್ಕಳ ವಲಯದಲ್ಲಿ ಅತ್ಯಂತ ಜನಪ್ರಿಯವಾದ 'ಅಡುಗೆ ಮನೆ' ಅಂಕಣವನ್ನು

ಇತ್ತೀಚೆಗೆ ಪ್ರಕಟಿಸುತ್ತಿಲ್ಲ. ಇದರಿಂದ ನಮ್ಮ ಸುತ್ತಮುತ್ತಲಿನ ಹೆಣ್ಣುಮಕ್ಕಳಿಗೆ ಬೇಸರ ಬಂದಂತಿದೆ. ದಯಮಾಡಿ ಈ ಅಂಕಣವನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಏಕೆ ಉಚಿತ?

-ಶಿವರಾಜಮ್ಮ, ಕಂಬತ್ತನಹಳ್ಳಿ

ಸೆಪ್ಟಂಬರ್ ಸಂಚಿಕೆ ನನ್ನ ವಿಳಾಸಕ್ಕೆ ಉಚಿತವಾಗಿ ಬಂದು ಸೇರಿದಾಗ ಆದ ಸಂತೋಷ ಅಷ್ಟಿಷ್ಟಲ್ಲ. ಆದರೆ ಪತ್ರಿಕೆ ಉಚಿತವಾಗಿ ಬಂದದ್ದರ ಕಾರಣ ತಿಳಿಯಲಿಲ್ಲ. ಅದೇ ಪತ್ರಿಕೆಯಲ್ಲಿ ನನ್ನ ಹನಿಗವನ ಪ್ರಕಟವಾಗಿದೆ. ಕವನವನ್ನು ಮೆಚ್ಚಿ ಪತ್ರಿಕೆಯನ್ನು ಉಚಿತವಾಗಿ ಕಳಿಸಿದಿರೋ ಹೇಗೆ? ನನಗೆ ಈ ಬಗ್ಗೆ ಅತೀವ ಚಿಂತೆಯಾಗಿದೆ.

[ಬರಹ ಪ್ರಕಟವಾದಾಗ ಲೇಖಕರಿಗೆ 'ಗೌರವ ಪ್ರತಿ' ಕಳಿಸುವುದು ವಾಡಿಕೆ. ಹಾಗೆಯೇ ನಿಮಗೂ ಉಚಿತ ಪ್ರತಿ ಬಂದಿದೆ. - ಸಂ]

ಸೀಟು ಸಿಕ್ಕಿತು

-ಚಂದ್ರಶೇಖರ ಎಸ್.ಪಾಟೀಲ, ಮೋರಟಗಿ

'ಬದುಕು' ಪತ್ರಿಕೆಯಿಂದ ನನ್ನ ಮಾವನ ಮಗನಿಗೆ ಅಂಗವಿಕಲರ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಸೀಟು ಸಿಕ್ಕಿದ್ದು ನಮಗೆಲ್ಲ ತುಂಬಾ ಸಂತೋಷವಾಗಿದೆ. ಇಗ ಅವನು ಮೈಸೂರಿನಲ್ಲಿ ಇರುವನು.

ಸಂಪಾದಕೀಯ

-ಗುರುಪಾದ ಪ.ಕೊಳ್ಳಿ, ರಾಮಾಪುರ

'ಸರಳ ಸತ್ಯ' ಸಂಪಾದಕೀಯ ಚೆನ್ನಾಗಿ ಮೂಡಿಬಂತು. ನಿಜಹೇಳಲು ಆಗದೇ ಇರುವವರಿಗೆ ಒಳ್ಳೆಯ ಮಾರ್ಗವನ್ನು ಸೂಚಿಸಿದೆ. ಇದರಿಂದ ಲಂಚ ತೆಗೆದುಕೊಳ್ಳುವವರು ಖಂಡಿತಾ ಹಿಂಜರಿಯುತ್ತಾರೆ. ಬದುಕು ಮೊದಲಿಗಿಂತ ಚೆನ್ನಾಗಿ ಮೂಡಿ ಬರುತ್ತಿದೆ. ಮೊದಲಿನ ಹಾಗೆ ಕ್ವಿಜ್ ಬೆನ್ನಪುಟದ ಮೇಲೆ ಜಾಹೀರಾತು ಕೂಡ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಉಪಯುಕ್ತ

-ನೆಲ್ಲಿಕಟ್ಟೆ ಎಸ್.ಸಿದ್ಧೇಶ್, ಹಿರೆಕಂದವಾಡಿ

ನನ್ನ ಮಿತ್ರ ಸೆಪ್ಟಂಬರ್ 1998, ಸಂಪುಟ 2 ಸಂಚಿಕೆ 3ರ 'ಬದುಕು' ಮಾಸಿಕ ಪತ್ರಿಕೆಯನ್ನು ನನಗೆ ಕೊಟ್ಟ. "ನಿನಗೆ ಒಂದು ಮಾರ್ಗ ಇಲ್ಲದಿದ್ದರೆ, ಒಂದನ್ನು ಹುಡುಕು. ಅದು ಕೈಗೆ ಸಿಕ್ಕದಿದ್ದರೆ ನೀನೇ ಮಾರ್ಗವೊಂದನ್ನು ನಿರ್ಮಿಸಿಕೋ" ಎಂಬ ಮಾತಿಗೆ ತಕ್ಕಂತೆ ಬಾಳಿ, ಬದುಕಿ, ದೂರಾದ ಪ್ರೊ.ಹಿರೇಮಲ್ಲೂರ ಈಶ್ವರನ್ ಅವರ ಬದುಕು ಬರಹದ ಸೂಕ್ಷ್ಮ ಪರಿಚಯ ಲೇಖನ ತುಂಬಾ ಚೆನ್ನಾಗಿದೆ.

ಮಲೆನಾಡ ಗಾಂಧಿ

-ಬಿ.ಆರ್. ಚಂದ್ರಪ್ಪ, ಬನ್ನಿಕೋಡು

ಸೆಪ್ಟಂಬರ್ ಸಂಚಿಕೆಯಲ್ಲಿ ಶಿಕ್ಷಣ ಸಚಿವ ಗೋವಿಂದಗೌಡರ ಬಗ್ಗೆ ಮೂಡಿಬಂದ ವ್ಯಕ್ತಿ ಚಿತ್ರಣ ನಮ್ಮೆಲ್ಲಾ ಶಿಕ್ಷಕ ವರ್ಗಕ್ಕೆ ಮಾರ್ಗದರ್ಶಿಯಾಗಿದೆ. ಇಂತಹ ಭ್ರಷ್ಟ ಆಡಳಿತ ವ್ಯವಸ್ಥೆಯಲ್ಲಿ ಸ್ವಚ್ಛ, ದಕ್ಷ, ಪ್ರಾಮಾಣಿಕ ಆಡಳಿತಕ್ಕಾಗಿ ಶ್ರಮಿಸುತ್ತಿರುವ ಸಚಿವ ಗೋವಿಂದಗೌಡರಿಗೆ 'ಮಲೆನಾಡ ಗಾಂಧಿ' ಎಂಬ ಬಿರುದು ಸಾರ್ಥಕವಾಗಿದೆ. ಇಂತಹ ಆದರ್ಶ ವ್ಯಕ್ತಿಗಳ ಚಿತ್ರಣವನ್ನು ಇನ್ನು ಮುಂದೆ ಪ್ರತಿ ತಿಂಗಳು ಪ್ರಕಟಿಸಬೇಕಾಗಿ ಕೋರುತ್ತೇನೆ.

ಬದುಕಿನ ಅಂಗ

-ಚಿಟ್ಟೇಗೌಡ, ಕೋಟೆಕೊಪ್ಪ

ಎಂದಿನಂತೆ ಈ ತಿಂಗಳು ಬೇರೆ ಪತ್ರಿಕೆಗಳನ್ನು ಕೊಂಡುಕೊಳ್ಳಲು ಹೋದಾಗ ಆಕರ್ಷಕ ಮುಖಪುಟ ಹೊಂದಿದ ನಿಮ್ಮ ಪತ್ರಿಕೆ ನೋಡಿ, ಅಂಗಡಿಯವನನ್ನು ವಿಚಾರಿಸಿದಾಗ ಇದು ಪ್ರಕಟಣೆಗೆ ಬಂದು ಒಂದು ವರ್ಷದ ಮೇಲಾಯಿತು ಎಂದಾಗ, ನನಗೆ ನಿಜವಾಗಿಯೂ ಆಶ್ಚರ್ಯವಾಯಿತು. ಕೊಂಡು ಓದಿದಾಗ ಅನ್ನಿಸಿತು: 'ಬಿಸಿಲ ಬದುಕು' ಇನ್ನು ಮೇಲೆ ನನ್ನ ಬದುಕಿನ ಒಂದು ಅಂಗ.

ಅರ್ಥ - ಅಪಾರ್ಥ

'ಯಾರೇ ನೀನು ಚೆಲುವೆ' **ನೂರು ಸೆಂಚುರಿ** ಹೊಡೆದಿದ್ದು ಒಂದರ್ಥದಲ್ಲಿ ಕಾಕತಾಳೀಯವೇ.
[*ಉದಯವಾಣಿ*, ಸುಚಿತ್ರಾ ವಿಭಾಗ, 4.9.98] **-ಹೆಚ್.ಬಿ.ಕಿರಣಕುಮಾರ್**, ಹುಳಿಯಾರು.

ರಾಷ್ಟ್ರವು ಸದ್ಯದ ಪರಿಸ್ಥಿತಿಯಲ್ಲಿ ಎದುರಿಸುತ್ತಿರುವ **ಹಾಜಕೀಯ,** ಆರ್ಥಿಕ ಸಂಕಷ್ಟಗಳ ಬಗ್ಗೆ ಹಾಗೂ ಅವುಗಳನ್ನು.....
[*ಸಂಯುಕ್ತ ಕರ್ನಾಟಕ*, 5.9. 1998] **- ಮೆಹಬೂಬ ಹಾಲ್ಯಾಳ**, ಹುನಗುಂದ.

ಭಾರತದ ಖ್ಯಾತ ಕ್ರಿಕೆಟ್ ಆಟಗಾರ ಸೌರವ್ ಗಂಗೂಲಿ ಅವರು 1997ರ **ಸಾವಿನ** ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿಯನ್ನು ಪಡೆಯಲಿದ್ದಾರೆ.
[*ಕನ್ನಡಪ್ರಭ*, 23.8.98] **-ಚಂದ್ರಶೇಖರ**, ಮಲ್ಲಪ್ಪನಹಳ್ಳಿ,
-ಮಯೂರ ಶಾ.ಬಿ., ಗದಗ.

ಮಾತೆತ್ತಿದರೆ **ದಂತ** ವಿಧಿಸುವ ಕಡೂರಿನ ದಂಡಾಧಿಕಾರಿ.
[*ಇನ್‌ಲ್ಯಾಂಡ್ ಪತ್ರಿಕೆ*, 2.8.98] **-ಅನಾಮಿಕ**

ಕೊಲಂಬೊಕ್ಕೆ ಕಳಿಸಲಾಗಿರುವ ಎಸ್.ಪಿ.ಜಿ. ಸಿಬ್ಬಂದಿಗೆ 1987ರಲ್ಲಿ ರಾಜೀವ್ ಗಾಂಧಿಯವರು ಉಗ್ರಗಾಮಿಗಳಿಂದ **ಹೇತೆ** ಹತರಾದರು ಎಂಬುದರ ಬಗ್ಗೆ ವಿಡಿಯೋ ಕ್ಲಿಪ್ಪಿಂಗ್ಸ್ ತೋರಿಸಲಾಗಿದೆ.
[*ಸಂಯುಕ್ತ ಕರ್ನಾಟಕ*, 27.7.98] **-ಶ್ರೀಶೈಲ**, ಮುದ್ದೇಬಿಹಾಳ

ಸ್ಥಳೀಯ ಪತ್ರಿಕೆಗಳಲ್ಲಿ, ರಾಜ್ಯ-ರಾಷ್ಟ್ರ ಮಟ್ಟದ ಪತ್ರಿಕೆಗಳಲ್ಲಿ ಇಂಥ ದೋಷಗಳನ್ನು ಹುಡುಕಿ ನಮಗೆ ಕಳಿಸಿಕೊಡಿ. ನಿಮ್ಮ ಹೆಸರಿನೊಂದಿಗೆ ಪ್ರಕಟಿಸಲಾಗುವುದು. ನೀವು ದೋಷ ಗಮನಿಸಿದ ಪತ್ರಿಕೆಯ ಅರ್ಥಾಂತರವಾದ ಭಾಗವನ್ನು ಕತ್ತರಿಸಿ ಕಳಿಸುವುದು ಅತ್ಯಗತ್ಯ. ಪತ್ರಿಕೆಯ ಹೆಸರು, ದಿನಾಂಕವೂ ಇರಬೇಕು.

-ಸಂ.



ಪೊಲೀಸ್ ಅರೆಸ್ಟ್!

ದೇಹದೊಳಗೆ ''ಆತ್ಮ'' ಅಥವಾ ''ಜೀವ'' ಬಂಧನವನ್ನು ಸದಾ ಇಷ್ಟಪಡುವ ಮಾನವ, ತಾನು ಮಾತ್ರ ''ಬಂಧನ''ದಲ್ಲಿರುವುದನ್ನು ಸಹಿಸಲಾರ. ಹುಟ್ಟಿದಾಗಿನಿಂದ ಸಾಯುವವರೆಗೂ ''ಜೀವ''ವನ್ನು ಬಂಧಿಯಾಗಿಸಿಟ್ಟುಕೊಂಡು ಬದುಕನ್ನು ಸವೆಸುವ ಮನುಷ್ಯ, ಜೀವಮಾನದುದ್ದಕ್ಕೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಒಂದಲ್ಲ ಒಂದು ರೀತಿಯ ''ಬಂಧನ''ದೊಳಗೆ ಇದ್ದುಕೊಂಡು ಆಯುಷ್ಯವನ್ನು ಕಳೆಯುವುದು ವಿಪರ್ಯಾಸದ ಸಂಗತಿ.

■ **ಕೆ. ಈಶ್ವರ ಪ್ರಸಾದ್**
ಪೊಲೀಸ್ ಇನ್‌ಸ್ಪೆಕ್ಟರ್, ಬೆಂಗಳೂರು.

ಪ್ರಾಪಂಚಿಕ ಬಂಧನಗಳಲ್ಲಿ ಸಾಮಾಜಿಕ ಬಂಧನ, ವೈಯಕ್ತಿಕ ಬಂಧನ, ವ್ಯಾವಹಾರಿಕ ಬಂಧನ, ವೃತ್ತಿಬಂಧನ ಹೀಗೆ ಹತ್ತು ಹಲವಾರು ರೀತಿಯ ಬಂಧನಗಳಿವೆ, ಜತೆಗೆ, ಈ ದೇಶದ ಸಂವಿಧಾನಕ್ಕನುಗುಣವಾಗಿ ರಚಿತವಾಗಿರುವ ಕಾನೂನು ಕಾಯ್ದೆಗಳನ್ನು ಉಲ್ಲಂಘನೆ ಮಾಡಿದಾಗ ಆಗಬಹುದಾದ ''ಶಿಕ್ಷಾರ್ಹ ಅಪರಾಧಗಳ'' ಅನ್ವಯದ ''ಬಂಧನ'' ಅತ್ಯಂತ ಪ್ರಮುಖವಾದುದು. ಸುಂದರ ಬದುಕಿನ ಅಪಸ್ವರಗಳ ಸ್ಪಂದನ ಈ ಬಂಧನ. ಈ ಪದವೇ ಕರ್ಣ ಕಠೋರ. ಬಿಡುಗಡೆ, ಸ್ವಾತಂತ್ರ್ಯ, ಸ್ವಚ್ಛಂದತೆ, ಸ್ವಾಯತ್ತತೆ ಎಷ್ಟು ಆಪ್ಯಾಯಮಾನ ಪದಗಳು!

''ಬಂಧನ''ದ ಬಗ್ಗೆ ತಿಳಿದುಕೊಳ್ಳುವಾಗ ''ಸ್ವಾತಂತ್ರ್ಯ''ದ ಬಗ್ಗೆಯೂ ತಿಳಿದುಕೊಳ್ಳುವುದು ಅತ್ಯಗತ್ಯ. ಸ್ವತಂತ್ರ ಭಾರತದ ನಾಗರಿಕರ ಮಾರ್ಗದರ್ಶಿ ಮಹಾನ್ ಭಾರತದ ಪವಿತ್ರ ಸಂವಿಧಾನ.


ಈ ಸಂವಿಧಾನದ ಆಧಾರದ ಮೇಲೆ, ಅದರಲ್ಲಿನ ಅಂಶಗಳ ಚೌಕಟ್ಟಿನಲ್ಲಿ ಮತ್ತು ಸಂವಿಧಾನಕ್ಕೆ ಪೂರಕವಾಗಿ ಸಂವಿಧಾನಕ್ಕನುಗುಣವಾಗಿ ನೂರಾರು, ದೇಶೀಯ ಮತ್ತು ಸ್ಥಳೀಯ ಕಾನೂನು ಕಾಯ್ದೆಗಳೂ ರಚಿತವಾಗಿದ್ದು ಇವುಗಳಿಂದ 'ಶಿಷ್ಟನಾಗರಿಕರ ರಕ್ಷಣೆ', ದುಷ್ಟ ನಾಗರಿಕರಿಗೆ ಶಿಕ್ಷೆ ಕ್ರಮಗಳನ್ನು ಜಾರಿಗೊಳಿಸಿ ದೇಶದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳ ಸಮತೋಲನವನ್ನು ಕಾಯ್ದುಕೊಂಡು ಎಲ್ಲೆಡೆ ಶಾಂತಿ ಮತ್ತು ಸುವ್ಯವಸ್ಥೆ ಸ್ಥಾಪಿತವಾಗಿರುವಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ.

ಸಂವಿಧಾನದ ಅನುಚ್ಛೇದ 19ರ ಅನ್ವಯ ಈ ದೇಶದ ನಾಗರಿಕರಿಗೆ ಹಲವಾರು ರೀತಿಯ ಸ್ವಾತಂತ್ರ್ಯಗಳನ್ನು ಕೊಟ್ಟಿದ್ದು, ಅವುಗಳೆಂದರೆ:

ಎ. ವಾಕ್ ಸ್ವಾತಂತ್ರ್ಯ, ಬಿ. ಶಸ್ತ್ರಾಸ್ತ್ರಗಳಿಲ್ಲದೆ ಶಾಂತಿಯುತವಾಗಿ, ಸಂಘಟಿತರಾಗುವ ಸ್ವಾತಂತ್ರ್ಯ, ಸಿ.ಸಂಘ, ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವ, ಡಿ.ಭಾರತದ ಗಡಿಯೊಳಗೆ ಎಲ್ಲೆಂದರಲ್ಲಿ ಓಡಾಡುವ, ಇ. ಭಾರತದಲ್ಲಿ ವಾಸಿಸಲು ಮತ್ತು ನೆಲೆಸಲು ಎಫ್.ಆಸ್ತಿ-ಪಾಸ್ತಿಯನ್ನು ಹೊಂದಲು ಮತ್ತು ಮಾರಾಟಮಾಡಲು, ಜಿ. ಯಾವುದೇ ವೃತ್ತಿಯನ್ನು ಮಾಡಲು, ವ್ಯಾಪಾರ ಅಥವಾ ಉದ್ಯಮವನ್ನು ಮಾಡಲು ಇರುವ ಸ್ವಾತಂತ್ರ್ಯ.

''ದೇಶದಲ್ಲಿ ಪ್ರಸ್ತುತ ಪ್ರಚಲಿತದಲ್ಲಿರುವ'' ಯಾವುದೇ ಕಾನೂನುಗಳ ಉಲ್ಲಂಘನೆಯಾಗದ ರೀತಿಯಲ್ಲಿ ಎಂಬ ನಿರ್ಬಂಧದೊಂದಿಗೆ ಸ್ವಾತಂತ್ರ್ಯವನ್ನು ನೀಡಿರುತ್ತಾರೆ. ಇವುಗಳನ್ನು "Fundamental Rights' ಎಂದು ಕೂಡ ಸಂಬೋಧಿಸಿದ್ದು, ಇವು ಭಾರತೀಯ ನಾಗರಿಕರ ಮೂಲಭೂತ ಹಕ್ಕುಗಳಾಗಿರುತ್ತದೆ. ಆರ್ಟಿಕಲ್ 20ರ ಪ್ರಕಾರ ಯಾವುದಾದರೂ ಕಾನೂನಿನ ಉಲ್ಲಂಘನೆ ಮಾಡದ ಹೊರತು ಯಾರಿಗೂ ಶಿಕ್ಷೆ ವಿಧಿಸುವಂತಿಲ್ಲ.

ಆರ್ಟಿಕಲ್ :22 (1)ರ ಅನ್ವಯ ಬಂಧನದ ಬಗ್ಗೆ ಸಕಾರಣಗಳನ್ನು ಒದಗಿಸದೇ ಯಾವುದೇ ವ್ಯಕ್ತಿಯನ್ನು ವಶದಲ್ಲಿಟ್ಟುಕೊಳ್ಳುವಂತಿಲ್ಲ, ಹಾಗೂ ಅಂತಹ ಬಂಧನದಲ್ಲಿರುವ ವ್ಯಕ್ತಿಯು ತನ್ನ ಆಯ್ಕೆಯ ವಕೀಲರೊಂದಿಗೆ ಸಮಾಲೋಚಿಸುವ



ಹಕ್ಕನ್ನು ನಿರಾಕರಿಸುವಂತಿಲ್ಲ.

ದಸ್ತಗಿರಿ ಮಾಡಲ್ಪಟ್ಟು ಬಂಧನದಲ್ಲಿರುವ ಯಾವುದೇ ವ್ಯಕ್ತಿಯನ್ನು 24 ಘಂಟೆಯ ಒಳಗೆ (ದಸ್ತಗಿರಿ ಮಾಡಿದ ಸ್ಥಳದಿಂದ ನ್ಯಾಯಾಲಯ ದವರೆಗಿನ ಪ್ರಯಾಣದ ಅವಧಿಯನ್ನು ಹೊರತು ಪಡಿಸಿ) ಹತ್ತಿರದ ನ್ಯಾಯಾಧೀಶರ ಮುಂದೆ ಹಾಜರುಪಡಿಸತಕ್ಕದ್ದು. ಈ ಅವಧಿಯನ್ನು ಮೀರಿ ನ್ಯಾಯಾಧೀಶರ ಅನುಮತಿ ಇಲ್ಲದೇ ಯಾರನ್ನೂ ವಶದಲ್ಲಿ ಇಟ್ಟುಕೊಳ್ಳುವಂತಿಲ್ಲ.

ಆರ್ಟಿಕಲ್ '51ಎ' ದಲ್ಲಿ ಈ ದೇಶದ ನಾಗರಿಕರ ಕರ್ತವ್ಯಗಳ ತಿಳಿಸುತ್ತಾ ಎಲ್ಲ ಭಾರತೀಯರು ಸಂವಿಧಾನಕ್ಕೆ ಬದ್ಧರಾಗಿ, ನಿಷ್ಠೆಯಿಂದಿದ್ದು, ಸಂವಿಧಾನದಲ್ಲಿನ ಧ್ಯೇಯ ಉದ್ದೇಶಗಳನ್ನು ಗೌರವಿಸತಕ್ಕದ್ದು, ರಾಷ್ಟ್ರಧ್ವಜ, ರಾಷ್ಟ್ರಗೀತೆಯನ್ನು ಗೌರವಿಸತಕ್ಕದ್ದು ಎಂದು ತಿಳಿಸಲಾಗಿದೆ.

ಇಷ್ಟೆಲ್ಲಾ ಸಂವಿಧಾನಾಲಾಪನೆಯ ಶೃತಿ ಯೊಳಗೆ ರಚಿತವಾಗಿರುವ ನೂರಾರು ಕಾನೂನು ಕಾಯ್ದೆಗಳಲ್ಲಿ ಅತಿ ಪ್ರಮುಖವಾದುವೆಂದರೆ:

1. ಭಾರತೀಯ ದಂಡ ಸಂಹಿತೆ

ಇದು ವಿಚಾರಣೀಯ ಮತ್ತು ಅವಿಚಾರಣೀಯ ಎರಡೂ ತರಹದ ಅಪರಾಧಗಳು ಮತ್ತು ಅದಕ್ಕೆ ವಿಧಿಸಬಹುದಾದ ಶಿಕ್ಷೆ ತಿಳಿಸುವಂತಹುದು.

2. ಭಾರತೀಯ ದಂಡ ಸಂಹಿತೆ

ಇದು ಆರೋಪ ಮತ್ತು ಆರೋಪಿಯ ಬಗ್ಗೆ ಕೈಗೊಳ್ಳಬಹುದಾದ ವಿವಿಧ ಕ್ರಮಗಳ ಬಗ್ಗೆ, ವಿಧಿಸಬಹುದಾದ ನಿರ್ಬಂಧ ಇತ್ಯಾದಿಗಳನ್ನು ತಿಳಿಸುವಂತಹುದು.

3. ಭಾರತೀಯ ಸಾಕ್ಷ್ಯ ಕಾಯ್ದೆ

ಇದು ನಡೆದಿರಬಹುದಾದ ಅಪರಾಧವನ್ನು ಸಾಬೀತುಪಡಿಸುವಲ್ಲಿ ಸಂಗ್ರಹಿಸಬೇಕಾದ ಹಲವಾರು ರೀತಿಯ ಸಾಕ್ಷ್ಯಾಧಾರಗಳು ಇವುಗಳ ಮಹತ್ವ ಇತ್ಯಾದಿಗಳನ್ನು ತಿಳಿಸುವಂತಹುದು.

ಇವುಗಳಲ್ಲದೆ ಇನ್ನೂ ನೂರಾರು ರಾಷ್ಟ್ರೀಯ ಮತ್ತು ಸ್ಥಳೀಯ ಕಾನೂನುಗಳ ರೀತ್ಯ "ಅಪರಾಧ ಮತ್ತು ಅದಕ್ಕೆ ವಿಧಿಸಬಹುದಾದ ಶಿಕ್ಷೆ"ಗಳನ್ನು ಆಯಾ ಕಾನೂನುಗಳಲ್ಲಿ ಪ್ರತ್ಯೇಕವಾಗಿ ವಿವರಿಸಲಾಗಿದೆ.

ಈ ದೇಶದ ಪ್ರಸ್ತುತ ಪ್ರಚಲಿತದಲ್ಲಿನ ಯಾವುದೇ ಕಾನೂನಿನ ಕಾಯ್ದೆಯ ಕಲಂಗಳ ಉಲ್ಲಂಘನೆಯಾದಾಗ ಅದು "ಅಪರಾಧ ವಾಗಿದ್ದು", ಉಲ್ಲಂಘಿಸಿದ ವ್ಯಕ್ತಿಯು ಅಪರಾಧ ಸಾಬೀತಾಗುವವರೆಗೂ "ಆರೋಪಿ" ಯಾಗಿದ್ದು, ಆರೋಪ ಸಾಬೀತಾದನಂತರ "ಅಪರಾಧಿ" ಎನಿಸುತ್ತಾನೆ.

ಅಪರಾಧಗಳಲ್ಲಿ ಎರಡು ರೀತಿಗಳಿದ್ದು "ವಿಚಾರಣೀಯ ಅಪರಾಧ" Cognigable offence ಮತ್ತು "ಅವಿಚಾರಣೀಯ ಅಪರಾಧ Non Cognigable offence ಎಂಬುದಾಗಿರುತ್ತೆ. ಹಾಗೂ ಈ ಅಪರಾಧಗಳಲ್ಲಿ ಕೂಡ Bailable (ಜಾಮೀನೀಯ) ಮತ್ತು Non-Bailable (ಜಾಮೀನು ಇಲ್ಲದಂತಹ) ಎಂಬ ವರ್ಗ ವಿಂಗಡಣೆಯೂ ಇರುತ್ತದೆ. ಈ ಅಪರಾಧಗಳ ವಿವರವಾದ ವಿಶ್ಲೇಷಣೆಯನ್ನು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯಲ್ಲಿನ ಷೆಡ್ಯೂಲ್ 1 ಮತ್ತು ಷೆಡ್ಯೂಲ್ 2 ರಲ್ಲಿ ತಿಳಿಸಿರುತ್ತಾರೆ.

ಪೊಲೀಸ್, ನ್ಯಾಯಾಲಯ, ವಕೀಲರು, ಜೈಲು, ಇವುಗಳಿಗೆ ಸಂಬಂಧಪಟ್ಟಂತೆ ಬಂಧನಗಳ ಪ್ರಭೇದಗಳನ್ನು ಈ ಮುಂದಿನಂತೆ ವಿಂಗಡಿಸಬಹುದಾಗಿರುತ್ತದೆ.

1. ಮುಂಜಾಗ್ರತಾ ಬಂಧನಗಳು.
2. ಜಾರಿಯಲ್ಲಿರುವ ಪ್ರತಿಬಂಧಕಾಜ್ಞೆಗಳ ಉಲ್ಲಂಘನೆಯಾದಾಗ ಮಾಡುವ ಬಂಧನಗಳು.
3. ವಿಚಾರಣೀಯ ಅಪರಾಧಗಳ ತನಿಖಾ ಸಮಯದಲ್ಲಿನ ಬಂಧನಗಳು
4. ವಿಚಾರಣಾಧೀನ ಖೈದಿಯಾಗಿ ನ್ಯಾಯಾಂಗ ಬಂಧನದಲ್ಲಿರುವುದು.
5. ನ್ಯಾಯಾಲಯದ ವಾರೆಂಟ್ ಮತ್ತು ಪ್ರೊಕ್ಲೆಮೇಷನ್ ಅನ್ವಯ ಬಂಧನ.
6. ಎಸ್.41(1), ಡಿ,ಇ,ಎಫ್,ಜಿ,ಎಚ್, ಸಿ.ಆರ್.ಪಿ.ಸಿ., ಮತ್ತು ಎಸ್42 ಸಿ.ಆರ್.ಪಿ.ಸಿ. ಅನ್ವಯ ಬಂಧನಗಳು, ಎಸ್ 43 ಸಿ.ಆರ್.ಪಿ.ಸಿ..
7. ಶಿಕ್ಷೆ ವಿಧಿಸಿದ ನಂತರ "ಜೈಲಿನಲ್ಲಿದ್ದು ಅನುಭವಿಸಬೇಕಾಗಿರುವ ನ್ಯಾಯಾಂಗ ಬಂಧನ, ಸಾದಾಸಜೆ ಅಥವಾ ಕಠಿಣ ಸಜೆ.

ಯಾವುದೇ ವ್ಯಕ್ತಿಯ "ಬಂಧನ"ವನ್ನು ಕಾರ್ಯಗತಗೊಳಿಸುವ ಮುನ್ನ ಬಂಧಿಸುವಾಗ, ಬಂಧಿಸಿದ ನಂತರದ ಕ್ರಮಗಳು ಮತ್ತು ಬಂಧಿಸುವ ಅಧಿಕಾರಿ ಅಥವಾ ಬಂಧಿಸುವ ವ್ಯಕ್ತಿಯ ಇತಿಮಿತಿಗಳೇನು ಎಂಬುದನ್ನು ತಿಳಿದುಕೊಳ್ಳುವುದು ಅತ್ಯವಶ್ಯ.

ಕಲಂ 46 ಸಿ.ಆರ್.ಪಿ.ಸಿ. ಅನ್ವಯ ಬಂಧನವನ್ನು ಜಾರಿಗೊಳಿಸುವ ಕ್ರಮವೆಂದರೆ, ಬಂಧನಕ್ಕೊಳಪಡಬೇಕಾಗಿರುವ ವ್ಯಕ್ತಿಯು ಬಂಧಿಸುವ ಅಧಿಕಾರಿ ಅಥವಾ ವ್ಯಕ್ತಿಯ

ನೀವೂ ಬಂಧಿಸಬಹುದು!

ವ್ಯಕ್ತಿಯೊಬ್ಬನನ್ನು ಬಂಧಿಸುವ ಅಧಿಕಾರ ಪೊಲೀಸರಿಗೆ ಮಾತ್ರ ಇರುತ್ತದೆ. ಎಂಬುದು ನಮ್ಮೆಲ್ಲರ ಸಾಮಾನ್ಯ ತಿಳಿವಳಿಕೆಯಾಗಿರುತ್ತದೆ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಯಾವುದೇ ನಾಗರಿಕನೂ ಈ ಅಧಿಕಾರ ಚಲಾಯಿಸಬಹುದು. ಸಿ.ಆರ್.ಪಿ.ಸಿ. 43ನೇ ಕಲಂ ಪ್ರಕಾರ ವಿಚಾರಣೀಯ ಮತ್ತು ಜಾಮೀನುರಹಿತ ಅಪರಾಧ ಮಾಡಿದ ಆರೋಪಿಯನ್ನು ಖಾಸಗಿ ವ್ಯಕ್ತಿಯು ಯಾರ ಸಮ್ಮುಖದಲ್ಲಾದರೂ ಬಂಧಿಸಿ ಮುಂದಿನ ಕ್ರಮಕ್ಕೆ ಹತ್ತಿರದ ಪೊಲೀಸ್ ಅಧಿಕಾರಿಯ ಮುಂದೆ ಹಾಜರು ಪಡಿಸಬೇಕಾಗುತ್ತದೆ.

ವಾಕ್ಸೂಚನೆ ಅಥವಾ ಕೃತಿ ಸೂಚನೆಯನ್ನು ವಿರೋಧಿಸಿ ಅವಿಧೇಯತೆಯನ್ನು ಸೂಚಿಸಿದರೆ ಬಂಧಿಸಲ್ಪಡುವ ವ್ಯಕ್ತಿಯನ್ನು ಮುಟ್ಟಿ ಅಥವಾ ಅಂತಹ ವ್ಯಕ್ತಿಯ ದೈಹಿಕ ಚಲನವಲನವನ್ನು ನಿರ್ಬಂಧಿಸಿ ಬಂಧಿಸಬಹುದಾಗಿರುತ್ತದೆ.

ಅಂತಹ ವ್ಯಕ್ತಿಯು ಬಲ ಪ್ರಯೋಗಮಾಡಿ ತನ್ನ ಬಂಧನವನ್ನು ಪ್ರತಿರೋಧಿಸಿದಲ್ಲಿ ಅಥವಾ ಬಂಧನದಿಂದ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಲ್ಲಿ, ಬಂಧನವನ್ನು ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಬಹುದಾಗಿರುತ್ತದೆ.

ಹೀಗೆ ಬಂಧಿಸುವಾಗ ಬಂಧನಕ್ಕೊಳಪಡಬೇಕಾಗಿರುವ ವ್ಯಕ್ತಿಯು ಜೀವಾವಧಿ ಶಿಕ್ಷೆ ಅಥವಾ ಮರಣ ದಂಡನೆಯಂತಹ ಅಪರಾಧಗಳಲ್ಲಿನ ಆರೋಪಿಯಲ್ಲದಿದ್ದಾಗ, ಅಂತಹ ವ್ಯಕ್ತಿಯನ್ನು ಬಂಧಿಸುವಾಗ ಆ ವ್ಯಕ್ತಿಯ ಸಾವನ್ನುಂಟು ಮಾಡುವಂತಿಲ್ಲ.

ಕಲಂ.47 ಸಿ.ಆರ್.ಪಿ.ಸಿ.(1) ಅನ್ವಯ: ಬಂಧನಕ್ಕೊಳಪಡಬೇಕಾಗಿರುವ ವ್ಯಕ್ತಿಯು ಯಾವುದೇ ಸ್ಥಳದಲ್ಲಿದ್ದರೂ ಅಂತಹ ಸ್ಥಳಕ್ಕೆ ಬಂಧಿಸಲು ಅಧಿಕಾರವಿರುವ ಅಧಿಕಾರಿ ಅಥವಾ ವ್ಯಕ್ತಿಯು ಯಾವ ವೇಳೆಯಲ್ಲಿ ಬೇಕಾದರೂ ಪ್ರವೇಶಿಸಿ ಬಂಧನವನ್ನು ಜಾರಿಗೊಳಿಸಬಹುದಾಗಿದ್ದು, ಅಂತಹ ಜಾಗದ ಒಡೆತನ ಅಥವಾ ಅದರ ಫಲಾನುಭವ ಹೊಂದಿದವರು ಬಂಧಿಸುವ ಅಧಿಕಾರಿಗೆ ಮುಕ್ತ ಅವಕಾಶವನ್ನು ಹಾಗೂ ಅಗತ್ಯವಿರುವ ಎಲ್ಲ ಸಹಕಾರವನ್ನು ಕೊಡಬೇಕು ಎಂದಿರುತ್ತದೆ.

ಹೀಗೆ ಮುಕ್ತ ಪ್ರವೇಶ ಅಥವಾ ಅವಕಾಶ ದೊರೆಯದೇ ಹೋದಲ್ಲಿ ಬಂಧಿಸಲು ಅಧಿಕಾರವಿರುವ ಅಧಿಕಾರಿ ಅಥವಾ ವ್ಯಕ್ತಿಯು ಅಂತಹ ಸ್ಥಳಕ್ಕೆ ಬಲಪ್ರಯೋಗ ಮಾಡಿ ಪ್ರವೇಶಿಸಬಹುದಾಗಿದ್ದು, ಅಂತಹ ಕಟ್ಟಡದ ಹೊರಬಾಗಿಲು, ಒಳಬಾಗಿಲು ಅಥವಾ ಕಿಟಕಿಗಳನ್ನು ಮುರಿದು ತೆಗೆದು ಒಳಪ್ರವೇಶಿಸಬಹುದಾಗಿರುತ್ತದೆ. ಅಂತಹ ಕಟ್ಟಡ ಅಥವಾ ಪ್ರದೇಶವು ಧಾರ್ಮಿಕ ಸಂಪ್ರದಾಯ ಅಥವಾ ಆಚರಣೆಯಿಂದ ''ಸಾರ್ವಜನಿಕ ಪ್ರದೇಶಗಳಲ್ಲಿ ಮುಕ್ತವಾಗಿ ಕಾಣಿಸಿಕೊಳ್ಳದೇ'' ಇರುವಂತಹ ಮಹಿಳೆಯ ಸ್ವಾಮ್ಯಕ್ಕೆ ಒಳಪಟ್ಟಿದ್ದರೆ ಅಂತಹ ಮಹಿಳೆಗೆ ಸೂಕ್ತ ತಿಳುವಳಿಕೆ ಮತ್ತು ಎಚ್ಚರಿಕೆಯನ್ನು ನೀಡಿ ನಂತರ ಒಳಪ್ರವೇಶಿಸಬಹುದಾಗಿರುತ್ತದೆ.

ಕಲಂ 49 ಸಿ.ಆರ್.ಪಿ.ಸಿ. ಅನ್ವಯ : ಹೀಗೆ ಬಂಧನಕ್ಕೊಳಪಟ್ಟ ವ್ಯಕ್ತಿಯು ತಪ್ಪಿಸಿಕೊಂಡು ಹೋಗದಂತೆ ಅಗತ್ಯವಾಗಿರುವ ಕ್ರಮವನ್ನು ಬಿಟ್ಟು, ಯಾವುದೇ ಅನಗತ್ಯ ಅಥವಾ ಹೆಚ್ಚಿನ ನಿರ್ಬಂಧಗಳಿಗೆ ಒಳಪಡಿಸಬಾರದು ಎಂದಿರುತ್ತದೆ.

ಕಲಂ 50 ಸಿ.ಆರ್.ಪಿ.ಸಿ. (1) ಅನ್ವಯ: ಬಂಧನಕ್ಕೊಳಪಟ್ಟಿರುವ ವ್ಯಕ್ತಿಗೆ, ಆತನನ್ನು ಯಾವ ಅಪರಾಧಕ್ಕಾಗಿ, ಯಾವ ಕಾರಣಕ್ಕಾಗಿ ಬಂಧಿಸಲಾಗಿದೆ ಎಂಬ ಸಂಪೂರ್ಣ ವಿವರವನ್ನು ತಕ್ಷಣವೇ ಒದಗಿಸಲೇಬೇಕು ಎಂದಿರುತ್ತದೆ.

ಅಜಾಮೀನೀಯ (ಜಾಮೀನು ಸಿಗದೇ ಇರುವಂತಹ) ಅಪರಾಧವನ್ನು ಹೊರತುಪಡಿಸಿ, ಇತರೇ ಅಪರಾಧಗಳಲ್ಲಿ ಬಂಧಿಸಲ್ಪಡುವ ವ್ಯಕ್ತಿಗೆ ''ಜಾಮೀನು ಕೊಟ್ಟಲ್ಲಿ ಬಿಡುಗಡೆ ಮಾಡಬಹುದಾಗಿರುತ್ತದೆ ಮತ್ತು ಬಂಧಿತ ವ್ಯಕ್ತಿಯ ಪರವಾಗಿ ಜಾಮೀನುದಾರರನ್ನು ವ್ಯವಸ್ಥೆ ಮಾಡಿಕೊಳ್ಳಬಹುದು'' ಎಂಬ ವಿಷಯವನ್ನು ತಿಳಿಸಲೇ ಬೇಕು ಎಂದಿರುತ್ತದೆ.

ಕಲಂ 51 ಸಿ.ಆರ್.ಪಿ.ಸಿ. ಪ್ರಕಾರ ಬಂಧನಕ್ಕೊಳಪಟ್ಟ ವ್ಯಕ್ತಿಯು, ಜಾಮೀನು ಸಿಗುವಂತಹ ಅಪರಾಧಗಳಲ್ಲಿ ಜಾಮೀನು ಕೊಡದೇ ಹೋದರೆ ಅಥವಾ ಜಾಮೀನು ಸಿಗದಂತಹ ಅಪರಾಧಗಳಲ್ಲಿ ಬಂಧಿತನಾಗಿದ್ದರೆ ಆ ವ್ಯಕ್ತಿಯನ್ನು ಸುರಕ್ಷಿತ ಬಂಧನದಲ್ಲಿಡುವ ಮುಂಚೆ ವ್ಯಕ್ತಿಯನ್ನು ಜಪ್ತುಮಾಡಿ ಅಂತಹ ವ್ಯಕ್ತಿಯ ವಶದಲ್ಲಿರುವ ವಸ್ತುಗಳನ್ನು ಪ್ರತ್ಯೇಕವಾಗಿ ತೆಗೆದಿಟ್ಟು (ಧರಿಸುವ ಅಗತ್ಯ ಉಡುಪುಗಳನ್ನು ಹೊರತುಪಡಿಸಿ) ಪಟ್ಟಿಮಾಡಿ ಬಂಧಿತ ವ್ಯಕ್ತಿಗೆ ರಶೀದಿಯನ್ನು ಅಥವಾ ಸ್ವೀಕೃತಿ ಚೀಟಿಯನ್ನು ಕೊಡಲೇ ಬೇಕಾಗಿರುತ್ತದೆ.

ಬಂಧಿತ ವ್ಯಕ್ತಿಯು ಮಹಿಳೆಯಾಗಿದ್ದು, ಇಂತಹ ಮಹಿಳಾ ಬಂದಿಯನ್ನು, ಇನ್ನೊಬ್ಬ ಮಹಿಳೆಯೇ ಜಪ್ತು ಮಾಡಬೇಕಾಗಿದ್ದು, ಹೀಗೆ ಜಪ್ತು ಮಾಡುವ ಸಂದರ್ಭದಲ್ಲಿ ಮಹಿಳಾ ಬಂದಿಯ ಮಾನಗೌರವದ ಬಗ್ಗೆ ಕಟ್ಟೆಚ್ಚರ ವಹಿಸಬೇಕಾಗುತ್ತದೆ.

ಕಲಂ 53 ಸಿ.ಆರ್.ಪಿ.ಸಿ. ಪ್ರಕಾರ ಸಾಕ್ಷ್ಯಾಧಾರಗಳ ಸಲುವಾಗಿ ಬಂಧಿತ ವ್ಯಕ್ತಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಬಹುದಾಗಿರುತ್ತದೆ. ಇಲ್ಲೂ ಕೂಡ ಮಹಿಳಾ ಬಂದಿಯನ್ನು ವೈದ್ಯರು ಪರೀಕ್ಷಿಸುವ ಸಂದರ್ಭದಲ್ಲಿ ಮಹಿಳಾ ವೈದ್ಯರು ಅಥವಾ ಮಹಿಳಾ ವೈದ್ಯರ ಉಸ್ತುವಾರಿಯಲ್ಲೆ ವೈದ್ಯಕೀಯ ತಪಾಸಣೆ ಮಾಡಬೇಕು ಎಂದಿರುತ್ತದೆ.

ಕಲಂ 54 ಸಿ.ಆರ್.ಪಿ.ಸಿ. ಪ್ರಕಾರ ಬಂಧಿತ ವ್ಯಕ್ತಿಯು ಸ್ವಇಚ್ಛೆ ಮೇರೆಗೆ ನ್ಯಾಯಾಧೀಶರನ್ನು ಕೇಳಿಕೊಂಡಾಗ ನ್ಯಾಯಾಧೀಶರ ನಿರ್ಧಾರದ ಮೇರೆಗೆ ಅಂತಹ ವ್ಯಕ್ತಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಬಹುದಾಗಿದೆ.

ಕಲಂ 57 ಸಿ.ಆರ್.ಪಿ.ಸಿ. ಅನ್ವಯ ಬಂಧನದ ಸ್ಥಳದಿಂದ ನ್ಯಾಯಾಲಯಕ್ಕೆ ಪ್ರಯಾಣಿಸುವ ಅವಧಿಯನ್ನು ಹೊರತು ಪಡಿಸಿ, 'ಬಂಧಿತ' ವ್ಯಕ್ತಿಯನ್ನು ಯಾವುದೇ ಪೊಲೀಸ್ ಅಧಿಕಾರಿಯು ''24'' ಘಂಟೆಗಳಿಗೂ ಮೀರಿ ತನ್ನ ವಶದಲ್ಲಿಟ್ಟುಕೊಳ್ಳತಕ್ಕದ್ದಲ್ಲ ಎಂಬುದಾಗಿದ್ದು, ಹಾಗೊಂದು ವೇಳೆ ತನಿಖೆಗೆ ಇನ್ನೂ ಬಂಧಿತ ವ್ಯಕ್ತಿಯ ಹಾಜರಿ ಅವಶ್ಯಕವಾಗಿದ್ದರೆ ಕಲಂ 167 ಸಿ.ಆರ್.ಪಿ.ಸಿ. ಅನ್ವಯ ''ಬಂಧಿತ'' ವ್ಯಕ್ತಿಯನ್ನು ಸಂಬಂಧ ಪಟ್ಟ ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಧೀಶರ ಆಜ್ಞೆಯನ್ನು ಪಡೆದುಕೊಂಡು ಪೊಲೀಸ್ ವಶದಲ್ಲಿಟ್ಟುಕೊಂಡು, ನ್ಯಾಯಾಲಯದಿಂದ ನಿಗದಿತವಾಗಿರುವ ಅವಧಿಯ ಒಳಗೆ ಪುನಃ ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿರುತ್ತದೆ. ಹೀಗೆ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಬಂಧಿತ ವ್ಯಕ್ತಿಯನ್ನು ''15'' ದಿನಗಳಿಗೂ ಮೀರದಂತಹ ಅವಧಿಗೆ, ಸೂಕ್ತ ವಶಕ್ಕೆ ಕೊಡಲು ನ್ಯಾಯಾಧೀಶರಿಗೆ ಅಧಿಕಾರವಿರುತ್ತದೆ. ಪೊಲೀಸ್ ವಶವನ್ನು ಹೊರತುಪಡಿಸಿ, ನ್ಯಾಯಾಂಗ ವಶಕ್ಕೆ ಕೊಡಲು 90 ದಿನಗಳ ಅವಧಿಯವರೆಗೂ (ಜೀವಾವಧಿ ಶಿಕ್ಷೆ, 10 ವರ್ಷಗಳ ಸಜೆ, ಅಥವಾ ಮರಣ ದಂಡನೆಯಂತಹ ಆರೋಪಗಳಿದ್ದರೆ) ಮತ್ತು ಇತರೆ ಅಪರಾಧಗಳಲ್ಲಿ ''60'' ದಿನಗಳವರೆಗೆ ಮಾತ್ರ ನ್ಯಾಯಾಂಗ ವಶದಲ್ಲಿಟ್ಟುಕೊಳ್ಳಬಹುದಾಗಿದ್ದು, ಈ ಅವಧಿ ಮೀರಿದ ಕೂಡಲೇ ಬಂಧಿತ ವ್ಯಕ್ತಿಯು, ಸೂಕ್ತ ಜಾಮೀನು ಒದಗಿಸಿದಲ್ಲಿ, ಬಿಡುಗಡೆಗೆ ಅರ್ಹನಾಗಿರುತ್ತಾನೆ.

ಕಲಂ 169 ಸಿ.ಆರ್.ಪಿ.ಸಿ.ಪ್ರಕಾರ ತನಿಖಾಧಿಕಾರಿಯು ವಿಚಾರಣೀಯ ಅಪರಾಧಗಳ ತನಿಖಾ ಸಮಯದಲ್ಲಿ ಸಕಾರಣ ಅನುಮಾನದ ಮೇಲೆ ಬಂಧಿಸಲ್ಪಟ್ಟ ವ್ಯಕ್ತಿಯ ಮೇಲೆ, ಸೂಕ್ತ ಸಾಕ್ಷ್ಯಾಧಾರಗಳೇನೂ ಕಂಡು ಬಂದಿಲ್ಲವಾದರೇ ಅಂತಹ ವ್ಯಕ್ತಿಯನ್ನು ವಿಚಾರಣೆಯ ನಂತರ ಜಾಮೀನಿನ ಮೇಲೆ ತನಿಖಾಧಿಕಾರಿಯೇ ಬಿಡುಗಡೆ ಮಾಡಬಹುದಾಗಿರುತ್ತದೆ.

1. ಮುಂಜಾಗ್ರತಾ ಬಂಧನ

ಇದಕ್ಕೆ ಸಂಬಂಧ ಪಟ್ಟಂತೆ ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 71ರ ಪ್ರಕಾರ ಹಾಗೂ ಸಿ.ಆರ್.ಪಿ.ಸಿ. ಕಲಂ 151ರ ಪ್ರಕಾರ, ಯಾವುದೇ ವ್ಯಕ್ತಿಯು ಯಾವುದಾದರೂ ವಿಚಾರಣೀಯ ಅಪರಾಧವನ್ನು ಮಾಡಬಹುದು ಎಂಬ ಖಚಿತ ಮಾಹಿತಿ ಇದ್ದಾಗ ಅಂತಹ ಸಂಭವನೀಯ

ಅಪರಾಧವನ್ನು ತಡೆಗಟ್ಟಲು ಅಂತಹ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು '24' ಘಂಟೆಗಳವರೆಗೂ ಬಂಧನದಲ್ಲಿಟ್ಟು ನಂತರ ಬಿಡುಗಡೆ ಮಾಡಬಹುದು. ಇನ್ನೂ ಹೆಚ್ಚಿನ ಅವಧಿಗೆ ಬಂಧನವನ್ನು ಮುಂದುವರಿಸಬೇಕಾದಲ್ಲಿ, ಬಂಧಿಸಲ್ಪಟ್ಟ ವ್ಯಕ್ತಿಯನ್ನು 24 ಘಂಟೆಯ ಒಳಗೆ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಹಾಜರುಪಡಿಸಿ ನ್ಯಾಯಾಧೀಶರಿಂದ ಸೂಕ್ತ ಆದೇಶ ಪಡೆಯಬೇಕಾಗುತ್ತದೆ.

ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 96 ಅನ್ವಯ ಸೂರ್ಯಾಸ್ತದಿಂದ ಸೂರ್ಯೋದಯದ ಒಳಗೆ ಯಾರಾದರೂ

ಎ. ಅಪಾಯಕಾರಿ ಶಸ್ತ್ರಾಸ್ತ್ರ ಹೊಂದಿ ಯಾವುದಾದರೂ ಅಪರಾಧ ಮಾಡುವ ಉದ್ದೇಶ ಹೊಂದಿದ್ದರೆ,

ಬಿ. ವೇಷ ಮರೆಸಿಕೊಂಡು ಅಥವಾ ಮುಖಮುಚ್ಚಿಕೊಂಡು ಯಾವುದಾದರೂ ಅಪರಾಧ ಮಾಡುವ ಉದ್ದೇಶ ಹೊಂದಿದ್ದರೆ,

ಸಿ. ಸೂಕ್ತ ಕಾರಣಗಳನ್ನು ಒದಗಿಸದೆ ಎಲ್ಲಾದರೂ ಮನೆ ಅಥವಾ ಕಟ್ಟಡದಲ್ಲಿದ್ದರೆ,

ಡಿ. ಗೊತ್ತಿರುವ ಕಳ್ಳನಾಗಿದ್ದು, ಯಾವುದಾದರೂ ಬೀದಿ ಅಥವಾ ಸ್ಥಳದಲ್ಲಿ ಸೂಕ್ತ ಕಾರಣವಿಲ್ಲದೇ ಅಲೆದಾಡುತ್ತಿದ್ದರೆ,

ಇ. ಮನೆ ಮುರಿಯುವ ಸಾಧನಗಳನ್ನು ಹೊಂದಿದ್ದು ಇದಕ್ಕೆ ಸೂಕ್ತ ಕಾರಣ ಕೊಡಲಾಗದಿದ್ದರೆ,

ಅಂತಹವನನ್ನು ಬಂಧಿಸಿ ಮುಂದಿನ ಸೂಕ್ತ ಕ್ರಮಕ್ಕೆ ಒಳಪಡಿಸಬಹುದಾಗಿರುತ್ತದೆ.

ಕಲಂ 41 (1) (ಬಿ) ಅನ್ವಯ ಯಾರ ವಶದಲ್ಲಾದರೂ ಮನೆ ಮುರಿಯುವ ಸಾಧನಗಳಿದ್ದು ಅನುಮಾನ ಬಂದರೆ,

ಕಲಂ 109 ಸಿ.ಆರ್.ಪಿ.ಸಿ. ಪ್ರಕಾರ ಯಾರಾದರೂ ವಿಚಾರಣೀಯ ಅಪರಾಧವನ್ನು ಮಾಡುವ ಸಂಭವವಿದ್ದು ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದಾಗ,

ಕಾಲಂ 110(ಜಿ) ಪ್ರಕಾರ ಯಾವುದಾದರೂ ವ್ಯಕ್ತಿ ಮುಕ್ತ ವಾತಾವರಣದಲ್ಲಿದ್ದು ಅವನ ಅಂತಹ ಸ್ವತಂತ್ರ ಇರುವಿಕೆಯಿಂದಲೇ ಸಾರ್ವಜನಿಕ ಶಾಂತಿ, ಸುರಕ್ಷತೆ ಹಾಗೂ ನೆಮ್ಮದಿಗೆ ಅಪಾಯಕಾರಿಯಾಗುವುದಿದ್ದರೆ,

ಅಂತಹ ವ್ಯಕ್ತಿಯನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಬಹುದು.

ಈ ಎಲ್ಲ ಮೇಲೆ ಹೇಳಿದ ಕಲಂಗಳಲ್ಲಿ ಒಬ್ಬ ವ್ಯಕ್ತಿಯು ಯಾವುದೇ ಅಪರಾಧವನ್ನು ಮಾಡದೇ ಇದ್ದರೂ ಮೇಲೆ ವಿವರಿಸಿದ ಸಂದರ್ಭಗಳಲ್ಲಿ ಬಂಧಿಸಬಹುದಾಗಿದೆ.

ನಿವೃತ್ತ ನ್ಯಾಯಾಧೀಶರ ಟಿಪ್ಪಣಿ

ವಾರೆಂಟ್ ಎಂದರೆ.......

ವಾರೆಂಟ್ (Warrant) ಎಂಬ ಇಂಗ್ಲಿಷ್ ಶಬ್ದದ ನಿಘಂಟಿನ ಅರ್ಥ ಆಜ್ಞಾಪತ್ರ, ಹುಕುಂನಾಮೆ. ಭರವಸೆ ಕೊಡು, ದೃಢವಾಗಿ ಹೇಳು ಎಂಬ ಅರ್ಥಗಳೂ ಇವೆ. ಕಾನೂನಿನಲ್ಲಿ ಆಜ್ಞಾ ಪತ್ರ, ಹುಕುಂನಾಮೆ ಎಂಬುದು ಪ್ರಚಲಿತ ಅರ್ಥ. ಈ ಶಬ್ದ ಅರೆಸ್ಟ್ (Arrest) ಎಂಬ ಇನ್ನೊಂದು ಮಾತಿನೊಂದಿಗೆ ಜನರಿಗೆ ಹೆಚ್ಚು ತಿಳಿದಿದೆ. ಅರೆಸ್ಟ್ ಎಂದರೆ ಹಿಡಿತರು ಎಂಬುದರೊಡನೆ ಸೇರಿ 'ಅರೆಸ್ಟ್ ವಾರೆಂಟ್' - ಹಿಡಿತರುವ ಆಜ್ಞಾಪತ್ರ; ಹುಕುಂನಾಮೆ ಆಗುತ್ತದೆ. ವಾರೆಂಟ್ ಹಿಡಿತರುವುದಕ್ಕೆ ಮಾತ್ರ ಮೀಸಲಲ್ಲ. ಒಂದು ಮನೆ ಅಥವಾ ಸ್ಥಳವನ್ನು ಶೋಧಿಸಲು Search-Warrantಶೋಧ ಆಜ್ಞಾಪತ್ರ, ಹುಕುಂನಾಮೆ ಇರಬಹುದು. ಅಥವಾ ಕೈವಶ ಪಡಿಸಿಕೊಳ್ಳಲು Seizure-Warrant ಕೊಡಬಹುದು. ಅಷ್ಟೇಕೆ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ನೇಮಕಾತಿ ಆಜ್ಞೆಯನ್ನು ರಾಷ್ಟ್ರಪತಿ ಕೊಟ್ಟಾಗ ಅದನ್ನು Appointment-Warrant ಎನ್ನುತ್ತಾರೆ. ಆದರೆ ಸಾಧಾರಣವಾಗಿ ಜನರಿಗೆ ಗೊತ್ತಿರುವುದು ಅರೆಸ್ಟ್-ವಾರೆಂಟ್. ಇದು ದಂಡನ್ಯಾಯಾಧೀಶರು ಇತರ ವ್ಯಕ್ತಿಗಳಿಗೆ - ಸಾಧಾರಣವಾಗಿ ಪೊಲೀಸರಿಗೆ, ವಿಶೇಷ ಸಂದರ್ಭದಲ್ಲಿ ಯಾವ ವ್ಯಕ್ತಿಗಾದರೂ ಕೊಡಬಹುದಾದ ಹುಕುಂನಾಮೆ; ಆಜ್ಞಾಪತ್ರ.

ಸಾಧಾರಣವಾಗಿ ನ್ಯಾಯಾಧೀಶರ ಆಜ್ಞಾಪತ್ರವಿಲ್ಲದೆ ಯಾರನ್ನೂ ಕೈದುಮಾಡುವಂತಿಲ್ಲ. ಆದರೆ ಅವಸರ ಸಂದರ್ಭದಲ್ಲಿ ನ್ಯಾಯಾಧೀಶರ ಆಜ್ಞಾಪತ್ರವಿಲ್ಲದೆಯೆ ಪೊಲೀಸರು ಯಾರನ್ನಾದರೂ ಕೈದು ಮಾಡುವ ಅಧಿಕಾರ ಹೊಂದಿದ್ದಾರೆ. ಆ ವ್ಯಕ್ತಿ ಮಾಡಿದ ಅಥವಾ ಮಾಡಿರಬಹುದೆಂಬ ಶಂಕೆಯ ಅಪರಾಧವನ್ನು ಅವಲಂಬಿಸಿ ಪೊಲೀಸರು, ಅಷ್ಟೇಕೆ ಖಾಸಗಿ ವ್ಯಕ್ತಿಗಳು ಅರೆಸ್ಟ್ ಮಾಡಬಹುದು. ಯಾವುದೇ ಸಂದರ್ಭದಲ್ಲಿ ಕೈದು ಮಾಡಿದ ವ್ಯಕ್ತಿಯನ್ನು 24 ತಾಸುಗಳ ಒಳಗಾಗಿ ದಂಡನ್ಯಾಯಾಧೀಶರ ಮುಂದೆ ಹಾಜರುಪಡಿಸಲೇಬೇಕು. ತಪ್ಪಿದರೆ ಅದು ಅಕ್ರಮ ಬಂಧನವೆಸಗಿದ ಅಪರಾಧವಾಗುತ್ತದೆ.

ಬಂಧಿಸುವಾಗ.........


ವಾರೆಂಟುಗಳಲ್ಲಿ ಜಾಮೀನುಸಹಿತ (Bailable) ಜಾಮೀನು ರಹಿತ (Non bailable) ಎಂದು ಎರಡು ವಿಧ. ಜಾಮೀನು ಸಹಿತ ವಾರೆಂಟ್ ಜಾರಿ ಮಾಡಲು ಬಂದ ಪೊಲೀಸ್ ಅಧಿಕಾರಿಗೆ ನ್ಯಾಯಾಲಯದ ಮುಂದೆ ಹಾಜರಾಗುವೆನೆಂದು ಮುಚ್ಚಳಿಕೆ ಬರೆದು ಕೊಟ್ಟು ಜಾಮೀನು ಪಡೆಯಬಹುದು. ಜಾಮೀನು ರಹಿತ ವಾರೆಂಟ್ ಆದರೆ ಯಾರು ವಾರೆಂಟ್ ಹೊರಡಿಸಿದ್ದಾರೆಯೊ ಆ ನ್ಯಾಯಾಧೀಶರ ಮುಂದೆ ಹಾಜರಾಗಲೇಬೇಕು. ಹಿಡಿಯಲು ಬಂದ ಅಧಿಕಾರಿ ಜಾಮೀನಿನ ಮೇಲೆ ಬಿಡಲಾರ. ನ್ಯಾಯಾಧೀಶರು ಮಾತ್ರ ಜಾಮೀನು ಕೊಡಬಹುದಾದ ಅಪರಾಧ (bailable offence) ಆಗಿದ್ದರೆ ಜಾಮೀನು ಕೊಡಬಹುದು. ಒಮ್ಮೊಮ್ಮೆ ಜಾಮೀನು ಕೊಡಲಾಗದ ಅಪರಾಧ (Non-bailable) ಆಗಿದ್ದಾಗಲೂ ನ್ಯಾಯಾಧೀಶರು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು.

ಅರೆಸ್ಟ್-ವಾರೆಂಟ್ ಜಾರಿಮಾಡಲು ಬಂದ್ದಾಗ ವ್ಯಕ್ತಿ ಅರೆಸ್ಟ್‌ವಾರೆಂಟ್ ಇದೆಯೆ ಎಂದು ಕೇಳಬಹುದು. ವಾರೆಂಟ್ ಹುಟ್ಟಬಹುದೆಂಬ ಶಂಕೆ ಇದ್ದರೆ ತಾನೇ ಸ್ವಇಚ್ಛೆಯಿಂದ ನ್ಯಾಯಾಧೀಶರ ಮುಂದೆ ಹಾಜರಾಗಬಹುದು. ಇಲ್ಲವೆ ನಿರೀಕ್ಷಣಾ ಜಾಮೀನು ಎಂದು ಪ್ರಚಲಿತವಾಗಿರುವ ಆದರೆ ಸರಿಯಾದ ಮಾತು ಮುಂಜಾಗ್ರತಾ ಜಾಮೀನು (Anticipalary bail) ಪಡೆಯಬಹುದು.

ಕೆಲವು ಅತೀತರು....

ಕೆಲವು ಅರೆಸ್ಟ್ ವಾರೆಂಟ್‌ಗಳು ವರ್ಷಗಟ್ಟಲೆ ಜಾರಿಯಾಗುವುದೇ ಇಲ್ಲ. ಯಾಕೆ? ಕೈದು ಆಗಬೇಕಾದ ವ್ಯಕ್ತಿ ತಲೆಮರೆಸಿಕೊಂಡು, ಪೊಲೀಸರ ಕಣ್ಣು ತಪ್ಪಿಸಿ ವಾರೆಂಟ್ ಜಾರಿಯಾಗದಂತೆ ಮಾಡಬಹುದು. ಅನೇಕ ಸಂದರ್ಭಗಳಲ್ಲಿ ಅರೆಸ್ಟ್ ಆಗಬೇಕಾದ ವ್ಯಕ್ತಿ ಪೊಲೀಸರನ್ನು ವಶಪಡಿಸಿಕೊಂಡು ಅರೆಸ್ಟ್ ಆಗದಂತೆ ಹೊರಗುಳಿಯುತ್ತಾರೆ. ರಾಜಕೀಯದಲ್ಲಿ ಪ್ರಬಲರಾದ ವ್ಯಕ್ತಿಗಳು ಲೋಕಕ್ಕೆ ಗೊತ್ತಿರುವಂತೆ ತಿರುಗಾಡಿಕೊಂಡಿದ್ದರೂ, ಪೊಲೀಸರು ಕಂಡೂಕಾಣದಂತೆ ಇದ್ದು ನ್ಯಾಯಾಧೀಶರ ಆಜ್ಞಾಪತ್ರವನ್ನು ಸತ್ತ ಕಾಗದವಾಗಿ ಉಳಿಯುವಂತೆ ಮಾಡುತ್ತಾರೆ. ಅದು ಅವರವರ ಸಾಮರ್ಥ್ಯ. ಅಂಥ ಸಂದರ್ಭಗಳಲ್ಲಿ ನ್ಯಾಯಾಧೀಶ ಉನ್ನತ ಪೊಲೀಸ್ ಅಧಿಕಾರಿಗಳಿಗೇ ವಾರೆಂಟ್ ಕೊಟ್ಟು ಆರೋಪಿಯನ್ನು ಹಿಡಿತರಿಸಬಹುದು.

ಕೋ. ಚೆನ್ನಬಸಪ್ಪ, ನಿವೃತ್ತ ನ್ಯಾಯಾಧೀಶರು



2. ಪ್ರತಿಬಂಧಕಾಜ್ಞೆಯ ಉಲ್ಲಂಘನೆ

ಕೆಲವು ಸಂದರ್ಭಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಾಲ್ಲೂಕು ದಂಡಾಧಿಕಾರಿ ಹಾಗೂ ಬೆಂಗಳೂರು ನಗರ ಪೊಲೀಸ್ ವ್ಯಾಪ್ತಿಯಲ್ಲಿ ಪೊಲೀಸ್ ಕಮೀಷನರ್, ಮತ್ತು ಹುಬ್ಬಳ್ಳಿ, ಧಾರವಾಡ ಹಾಗೂ ಮೈಸೂರು ಪೊಲೀಸ್ ಕಮೀಷನರ್ ಅವರು ಕಲಂ. 35. ಕೆ.ಪಿ. ಕಾಯ್ದೆ ಅನ್ವಯ ಹಾಗೂ ಕಲಂ 144 ಸಿ.ಆರ್.ಪಿ.ಸಿ. ಅನ್ವಯ ನಿರ್ದಿಷ್ಟ ಪ್ರದೇಶಕ್ಕೆ ನಿರ್ದಿಷ್ಟ ವೇಳೆ ಅಥವಾ ಅವಧಿಗೆ ಅನ್ವಯವಾಗುವಂತೆ ಸೂಕ್ತ ನಿರ್ಬಂಧಗಳನ್ನು ಅಳವಡಿಸಿ ''ಪ್ರತಿಬಂಧಕಾಜ್ಞೆ'' ಅಥವಾ ನಿಷೇಧಾಜ್ಞೆಯನ್ನು ಹೊರಡಿಸಬಹುದು, ಅಂತಹ ಪ್ರದೇಶದಲ್ಲಿನ ಸಾರ್ವಜನಿಕರು ಕಟ್ಟು ನಿಟ್ಟಾಗಿ ನಿರ್ಬಂಧಕಾಜ್ಞೆಯನ್ನು ಪಾಲಿಸಬೇಕಾಗಿರುತ್ತದೆ. ಇಂತಹ ಆಜ್ಞೆಯನ್ನು ಉಲ್ಲಂಘಿಸುವವರನ್ನು ಬಂಧಿಸಬಹುದಾಗಿದ್ದು, ನಂತರ ಬಿಡುಗಡೆ ಮಾಡಬಹುದು ಅಥವಾ ಕಲಂ. 188 ಐ.ಪಿ.ಸಿ. ಅನ್ವಯ ಮೊಕದ್ದಮೆ ಹೂಡಿ ನ್ಯಾಯಾಲಯಕ್ಕೂ ಹಾಜರು ಪಡಿಸಬಹುದು ಅಥವಾ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು.

3. ತನಿಖೆಯ ಸಮಯದಲ್ಲಿ

ವಿಚಾರಣೆಯ ಅಪರಾಧಗಳ ಮೊಕದ್ದಮೆಯಲ್ಲಿ ತನಿಖಾಧಿಕಾರಿಯು ಮೊಕದ್ದಮೆಗೆ ಸಂಬಂಧ ಪಟ್ಟ ಆರೋಪಿಯನ್ನು ಬಂಧಿಸಿ ಮುಂದಿನ ಸೂಕ್ತ ಕ್ರಮಗಳಿಗೆ ಒಳಪಡಿಸಬಹುದಾಗಿರುತ್ತದೆ.

ಕಲಂ. 156 ಸಿ.ಆರ್.ಪಿ.ಸಿ.(1) ಅನ್ವಯ ಯಾವುದೇ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಠಾಣಾಧಿಕಾರಿಯು, ನ್ಯಾಯಾಧೀಶರ ಅನುಮತಿ ಇಲ್ಲದೆಯೇ, ವಿಚಾರಣೀಯ ಅಪರಾಧದ ಬಗ್ಗೆ ತನಿಖೆ ಕೈಗೊಳ್ಳಬಹುದು ಎಂದು ಇದ್ದು, ಕಾಲಂ 157 ಸಿ.ಆರ್.ಪಿ.ಸಿ.ಯಲ್ಲಿ ಅಪರಾಧಿಯನ್ನು ಪತ್ತೆಮಾಡಿ ದಸ್ತಗಿರಿ ಮಾಡಲು ಎಲ್ಲ ಕ್ರಮಗಳನ್ನು ಕೈಗೊಳ್ಳಬಹುದು. ಜತೆಗೆ ಕಲಂ.41(1)ಸಿ.ಆರ್.ಪಿ.ಸಿ. ಪ್ರಕಾರ ಯಾವುದಾದರೂ ವ್ಯಕ್ತಿಯು ವಿಚಾರಣೆಯ ಅಪರಾಧದಲ್ಲಿ ಆರೋಪಿಯಾಗಿ ಭಾಗಿಯಾಗಿದ್ದರೆ ಅಥವಾ ಅಂತಹ ಮೊಕದ್ದಮೆಯ ದೂರಿನಲ್ಲಿ ಆರೋಪಿಯಾಗಿದ್ದರೆ, ಅಂತಹ ವ್ಯಕ್ತಿಯನ್ನು ಬಂಧಿಸಿ ಮುಂದಿನ ಸೂಕ್ತ ಕ್ರಮಕೈಗೊಳ್ಳಬಹುದು. ಸಿ.ಆರ್.ಪಿ.ಸಿ.ಯಲ್ಲಿನ ಷೆಡ್ಯೂಲ್ 1 ಮತ್ತು 2ರಲ್ಲಿರುವಂತೆ ಅಪರಾಧವು ಜಾಮೀನೀಯ ಅಥವಾ ಜಾಮೀನುರಹಿತ ಇವುಗಳ ಆಧಾರದ ಮೇಲೆ ತನಿಖಾಧಿಕಾರಿಯೇ ಜಾಮೀನಿನ ಮೇಲೆ ಬಿಡುಗಡೆ ಮಾಡುವುದು ಅಥವಾ ಸಂಬಂಧಪಟ್ಟ ನ್ಯಾಯಾಲಯದಲ್ಲಿ ವ್ಯಕ್ತಿಯನ್ನು ಹಾಜರುಪಡಿಸುವುದು ಮಾಡಬೇಕಾಗಿರುತ್ತದೆ.

ಸಿ.ಆರ್.ಪಿ.ಸಿ.ಯಲ್ಲಿ ಜಾಮೀನಿನ ಕಲಂಗಳಾದ 436, 437, 438 ಇದ್ದು ಕಲಂ 436ರ ಅನ್ವಯ ಜಾಮೀನೀಯ ಅಪರಾಧಗಳಲ್ಲಿ ಬಂಧಿತ ವ್ಯಕ್ತಿಯು, ಸೂಕ್ತ ಜಾಮೀನು ನೀಡಿದಲ್ಲಿ, ತನಿಖಾಧಿಕಾರಿ ಅಥವಾ ನ್ಯಾಯಾಲಯವು ಅಂತಹ ಬಂಧಿತ ವ್ಯಕ್ತಿಯನ್ನು ಬಿಡುಗಡೆ ಮಾಡಬಹುದಾಗಿರುತ್ತದೆ.

437 ಸಿ.ಆರ್.ಪಿ.ಸಿ. ಅನ್ವಯ ಜಾಮೀನು ರಹಿತ ಅಪರಾಧಗಳಲ್ಲಿನ ಬಂಧಿತ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕಾಗಿದ್ದು, ನ್ಯಾಯಾಧೀಶರು ಸೂಕ್ತ ನಿರ್ಧಾರ ಕೈಗೊಳ್ಳಬಹುದಾಗಿರುತ್ತದೆ.

438. ಸಿ.ಆರ್.ಪಿ.ಸಿ. ಪ್ರಕಾರ ಯಾವುದೇ ವ್ಯಕ್ತಿಯು, ಯಾವುದಾದರೂ ಮೊಕದ್ದಮೆಯಲ್ಲಿ ತನ್ನನ್ನು ಬಂಧಿಸಬಹುದು ಎಂದು ಅನುಮಾನ ಬಂದರೆ ಅಂತಹ ಸಕಾರಣಗಳಿದ್ದರೆ ಅಂತಹ ವ್ಯಕ್ತಿಯು ನ್ಯಾಯಾಲಯದಿಂದ ''ನಿರೀಕ್ಷಣಾ ಜಾಮೀನನ್ನು'' ಪಡೆಯಬಹುದಾಗಿರುತ್ತದೆ.

4. ವಿಚಾರಣಾಧೀನ ಖೈದಿ

ಯಾವುದೇ ಮೊಕದ್ದಮೆಯಲ್ಲಿನ ದೋಷಾರೋಪಣೆಯನ್ನು ಎದುರಿಸುತ್ತಿರುವ ಬಂಧಿತ ವ್ಯಕ್ತಿಯು, ಹಲವಾರು ಕಾರಣಗಳಿಂದ ಜಾಮೀನು ದೊರೆಯದೇ ಹೋದಲ್ಲಿ, ಮೊಕದ್ದಮೆಯ ನ್ಯಾಯಾಂಗ ವಿಚಾರಣೆಯಾಗುವವರೆಗೂ ಅಥವಾ ಜಾಮೀನು ದೊರೆಯುವವರೆಗೂ ನ್ಯಾಯಾಂಗ ಬಂಧನದಲ್ಲಿರಬೇಕಾಗುತ್ತದೆ. ಇದಕ್ಕೆ ಸಂಬಂಧ ಪಟ್ಟಂತೆ ಸಿ.ಆರ್.ಪಿ.ಸಿ.. ಕಲಂ 266. 267. 268, 269. 270, 271 ಇವುಗಳಲ್ಲಿ ಸೂಕ್ತ ಕ್ರಮಗಳನ್ನು ತಿಳಿಸಿರುತ್ತಾರೆ. ನ್ಯಾಯಾಲಯದಲ್ಲಿ ವಿಚಾರಣೆಯ ತಾರೀಖಿನಂದು ''ಬಂಧಿತ ಆರೋಪಿಯನ್ನು'' ನ್ಯಾಯಾಲಯಕ್ಕೆ ಹಾಜರು ಪಡಿಸಿ ಪುನಃ ವಾಪಸ್ ನ್ಯಾಯಾಂಗ ಬಂಧನ ಅಂದರೆ ಜೈಲಿನಲ್ಲಿರಿಸಬೇಕಾಗಿರುತ್ತದೆ. ಇಂತಹ ಸಮಯದಲ್ಲಿ ಆರೋಪಿಗೆ ಆರೋಗ್ಯ ಸರಿ ಇಲ್ಲದೆ ಖಾಯಿಲೆ ಆದಾಗ ನ್ಯಾಯಾಧೀಶರ ಅನುಮತಿ ಪಡೆದು ವಿಚಾರಣಾಧೀನ ಆರೋಪಿಯನ್ನು ಚಿಕಿತ್ಸೆಗಾಗಿ ನಿಯೋಜಿತ ಆಸ್ಪತ್ರೆಗೆ ಸೇರಿಸಬಹುದಾಗಿದ್ದು, ಬಂಧಿತ ಆರೋಪಿಯನ್ನು ಕಾಯಲು ಸೂಕ್ತ ಬೆಂಗಾವಲು ಪೊಲೀಸ್‌ನ್ನು ನೇಮಿಸಬಹುದಾಗಿರುತ್ತದೆ.

5. ನ್ಯಾಯಾಲಯದ ವಾರೆಂಟ್

ನ್ಯಾಯಾಂಗ ವಿಚಾರಣೆಯನ್ನು ಎದುರಿಸುತ್ತಿರುವ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಆರೋಪಿಗಳು, ವಿಚಾರಣೆಯಲ್ಲಿ ಅಗತ್ಯವಾಗಿರುವ ಸಾಕ್ಷಿದಾರರು ನ್ಯಾಯಾಲಯದ ಸಮನ್ಸ್‌ಗೆ ಹಾಜರಾಗದೇ ತಪ್ಪಿಸಿಕೊಂಡಲ್ಲಿ ಅಂತಹ ವ್ಯಕ್ತಿಗಳ ಹಾಜರಿಯನ್ನು ಕಡ್ಡಾಯಗೊಳಿಸಲು ನ್ಯಾಯಾಧೀಶರು ವಾರೆಂಟ್ ಹೊರಡಿಸಬಹುದಾಗಿದ್ದು, ಸಿ.ಆರ್.ಪಿ.ಸಿ. ಕಲಂ, 70, 71, 72, 73, 74, 75, 76, 77, 78, 79, 80, 81 ಇವುಗಳ ಅನ್ವಯ ವಿವಿಧ ರೀತಿಯ ವಾರೆಂಟ್‌ಗಳು ಮತ್ತು ಜಾರಿಕ್ರಮಗಳು ಉಲ್ಲೇಖಿತವಾಗಿರುತ್ತವೆ. ಇಂತಹ ವಾರೆಂಟ್‌ಗಳನ್ನು ಜಾರಿಗೊಳಿಸಲು, ನ್ಯಾಯಾಧೀಶರು ಸ್ಥಳೀಯ ಪೊಲೀಸರು ಅಥವಾ ಇನ್ನಾವುದೇ ಪೊಲೀಸರನ್ನು ಅಥವಾ ಯಾವುದೇ ಖಾಸಗಿ ವ್ಯಕ್ತಿಯನ್ನು ಸಹ ನೇಮಿಸಬಹುದಾಗಿರುತ್ತದೆ. ಹೀಗೆ ವಾರೆಂಟ್ ಅನ್ವಯ ಬಂಧಿಸಲ್ಪಟ್ಟ ವ್ಯಕ್ತಿಯನ್ನು ವಾರೆಂಟ್‌ನಲ್ಲಿ ನಮೂದಿಸಿರುವ ನಿಯಮಗಳಿಗೆ ಕೂಡಲೇ ಒಳಪಡಿಸಬೇಕಾಗಿರುತ್ತದೆ.

ಇದಲ್ಲದೇ ಸಿ.ಆರ್.ಪಿ.ಸಿ. ಕಲಂ 82, 83, 84, 85ರ ಪ್ರಕಾರ ನ್ಯಾಯಾಲಯವು ''ಘೋಷಿತ ಅಪರಾಧಿ'' Procliamed offendor" ಬಗ್ಗೆ ಆಜ್ಞೆಯನ್ನು ಹೊರಡಿಸಬಹುದಾಗಿದ್ದು, ಅಂತಹ ಆರೋಪಿಯ ಚರಾಸ್ತಿ ಅಥವಾ ಸ್ಥಿರಾಸ್ತಿಯನ್ನು ವಶಪಡಿಸಿಕೊಳ್ಳಲು ಆಜ್ಞೆಯನ್ನು ನ್ಯಾಯಾಲಯವು ಹೊರಡಿಸಬಹುದಾಗಿರುತ್ತದೆ.

ಕಲಂ 89 ಸಿ.ಆರ್.ಪಿ.ಸಿ. ಅನ್ವಯ ಯಾವುದಾದರೂ ವ್ಯಕ್ತಿಯನ್ನು ಸಿ.ಆರ್.ಪಿ.ಸಿ. ಅನ್ವಯ ನ್ಯಾಯಾಲಯದ ನಿರ್ಬಂಧಗಳಿಗೊಳಪಡಿಸಿದ್ದು, ಆ ವ್ಯಕ್ತಿಯು ಅಂತಹ ನಿರ್ಬಂಧಗಳನ್ನು ಉಲ್ಲಂಘಿಸಿದರೆ, ಆ ವ್ಯಕ್ತಿಯನ್ನು ಬಂಧಿಸಲು 'ವಾರೆಂಟ್' ಹೊರಡಿಸಬಹುದಾಗಿರುತ್ತದೆ.

6. ಇತರ ಕಾರಣಗಳು

ಕಲಂ41(1)(ಡಿ),(ಇ)(ಎಫ್)(ಜಿ)(ಎಚ್)(ಐ)ಗಳ ಅನ್ವಯ ಬಂಧನ: ಯಾವುದೇ ವ್ಯಕ್ತಿಯ ವಶದಲ್ಲಿ, ಸಕಾರಣ ಅನುಮಾನಗಳಿಗೆ ಎಡೆಮಾಡಿಕೊಡುವಂತಹ ''ಕಳುವು ಮಾಲು'' ಇದ್ದರೆ (ಕಲಂ 98 ಕೆ.ಪಿ. ಕಾಯ್ದೆಯಲ್ಲೂ ಇದೇ

ಅಂಶಗಳ ಉಲ್ಲೇಖವಿರುತ್ತದೆ.)

ಯಾವುದೇ ಕರ್ತವ್ಯನಿರತ ಪೊಲೀಸ್ ಅಧಿಕಾರಿಯ ಕರ್ತವ್ಯಗಳಿಗೆ ಯಾರಾದರೂ ಅಡ್ಡಿ ಅಡಚಣೆ ಉಂಟುಮಾಡಿದರೆ ಅಥವಾ ಕ್ರಮಬದ್ಧ ವಶದಿಂದ ತಪ್ಪಿಸಿ ಕೊಳ್ಳಲು ಪ್ರಯತ್ನಿಸಿದರೆ ಅಥವಾ ತಪ್ಪಿಸಿಕೊಂಡರೆ, ಕೇಂದ್ರ ಸರಕಾರದ ಸೇನೆಯಲ್ಲಿನ 'ಪರಿತ್ಯಕ್ತ ಆಸಾಮಿ' (Deserter) ಆಗಿದ್ದರೆ, ಅಥವಾ ಭಾರತದ ಗಡಿಯಾಚೆ ಯಾವುದಾದರೂ ಅಪರಾಧದಲ್ಲಿ ಭಾಗಿಯಾಗಿರುವ ಬಗ್ಗೆ ಖಚಿತ ಮಾಹಿತಿ ಇದ್ದರೆ, ಅಥವಾ ಶಿಕ್ಷೆ ಅನುಭವಿಸಿ ಬಿಡುಗಡೆಯಾದ ವ್ಯಕ್ತಿಯು ಕಲಂ 356 (5) ಸಿ.ಆರ್.ಪಿ.ಸಿ. ನಿಮಯವನ್ನು ಉಲ್ಲಂಘಿಸಿ ವಾಸಸ್ಥಳದ ವಿಳಾಸ ಇತ್ಯಾದಿಯನ್ನು ನ್ಯಾಯಾಲಯದ ಅನುಮತಿ ಇಲ್ಲದೇ ಬದಲಾಯಿಸಿದರೆ, ಬೇರೊಬ್ಬ ಪೊಲೀಸ್ ಅಧಿಕಾರಿಯಿಂದ ಲಿಖಿತ ಮನವಿ ಇದ್ದರೆ ಅಂತಹ ವ್ಯಕ್ತಿಯನ್ನು ಬಂಧಿಸಿ, ಮುಂದಿನ ಸೂಕ್ತ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ಕಲಂ 42 ಸಿ.ಆರ್.ಪಿ.ಸಿ. ಪ್ರಕಾರ ಪೊಲೀಸ್ ಅಧಿಕಾರಿಯ ಸಮ್ಮುಖದಲ್ಲಿ ಯಾರಾದರೂ ಅವಿಚಾರಣೆಯ ಅಪರಾಧವನ್ನು ಮಾಡಿದರೆ ಅಥವಾ ಅಂತಹ ಅಪರಾಧದಲ್ಲಿ ಭಾಗಿಯಾಗಿರುವ ಆರೋಪಿಯಾಗಿದ್ದೂ ವ್ಯಕ್ತಿಯು ಹೆಸರು ವಿಳಾಸವನ್ನು ಕೊಡಲು ನಿರಾಕರಿಸಿದರೆ, ಅಥವಾ ಕೊಟ್ಟಿರುವ ಹೆಸರು ವಿಳಾಸವು ಸುಳ್ಳು, ತಪ್ಪು ಎಂಬ ಅನುಮಾನ ಬರುವಂತಿದ್ದರೆ ಅಂತಹ ವ್ಯಕ್ತಿಯನ್ನು ಬಂಧಿಸಿ, ಬಂಧಿತ ವ್ಯಕ್ತಿಯ ಸರಿಯಾದ ಹೆಸರು ವಿಳಾಸವನ್ನು ಪಡೆಯಬಹುದಾಗಿರುತ್ತದೆ. ಬಂಧಿಸಿದ 24 ಘಂಟೆಯ ಒಳಗೆ ಅಂತಹ ವ್ಯಕ್ತಿಯ ಸರಿಯಾದ ಹೆಸರು ವಿಳಾಸವನ್ನು ಖಚಿತಪಡಿಸಿ ಕೊಳ್ಳಲು ಆಗದೇ ಹೋದಲ್ಲಿ ಆತನನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ ಸೂಕ್ತ ಆದೇಶ ಪಡೆದುಕೊಳ್ಳಬೇಕಾಗಿರುತ್ತದೆ.

ಕಲಂ 44 ಸಿ.ಆರ್.ಪಿ.ಸಿ. ಅನ್ವಯ ನ್ಯಾಯಾಧೀಶರ ಸಮ್ಮುಖದಲ್ಲಿ ಏನಾದರೂ ಅಪರಾಧ ಸಂಭವಿಸಿದಲ್ಲಿ ಅಂತಹ ವ್ಯಕ್ತಿಯನ್ನು ನ್ಯಾಯಾಧೀಶರೇ ಬಂಧಿಸಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳಬಹುದು ಅಥವಾ ಬೇರೆ ಯಾರಿಗಾದರೂ ಕ್ರಮಕೈಗೊಳ್ಳುವಂತೆ ಆದೇಶಿಸಬಹುದು.

7. ಶಿಕ್ಷಾ ಬಂಧನ

ನ್ಯಾಯಾಂಗ ವಿಚಾರಣೆಯಲ್ಲಿ ಬಂಧಿತ ಆರೋಪಿಯ ಮೇಲಿನ ದೋಷಾರೋಪಣೆಯು ಸಾಕ್ಷ್ಯಾಧಾರಗಳಿಂದ ಸಾಬೀತುಪಟ್ಟಾಗ ನ್ಯಾಯಾಧೀಶರು ದೋಷಾರೋಪಣೆಪಟ್ಟಿಯಲ್ಲಿ ವಿವಿಧ ಕಾನೂನು ಕಾಯ್ದೆಗಳ ಕಲಂಗಳ ಅನ್ವಯ, ಸಾದಾಸಜೆ, ಕಠಿಣ ಸಜೆಗಳನ್ನು ನಿಗದಿತ ಅವಧಿಗೆ ವಿಧಿಸಬಹುದಾಗಿದ್ದು, ಕೆಲವೊಮ್ಮೆ 10 ವರ್ಷಗಳ ಸಜೆ, ಜೀವಾವಧಿ ಸಜೆ ಮತ್ತು ಘರಣ ದಂಡನೆಯನ್ನು ವಿಧಿಸಬಹುದಾಗಿದ್ದು, ಹೀಗೆ ಶಿಕ್ಷೆಗೆ ಒಳಪಡಿಸಿದ ಅವಧಿಯನ್ನು ಅಪರಾಧಿಯು ಜೈಲಿನಲ್ಲಿ ಕಳೆಯಬೇಕಾಗಿರುತ್ತದೆ.


ಸಂವಿಧಾನದತ್ತ ಸ್ವಾತಂತ್ರ್ಯವು ಎಲ್ಲ ನಾಗರಿಕರಿಗೂ ಮೂಲಭೂತ ಹಕ್ಕು ಆಗಿದ್ದು ಯಾವುದೇ ವ್ಯಕ್ತಿಯನ್ನು ಕಾನೂನಿನ ಉಲ್ಲಂಘನೆ ಯಾಗದ ಹೊರತು ಬಂಧಿಸುವಂತಿಲ್ಲ.

ಕಲಂ 339 ಮತ್ತು 341 ಐ.ಪಿ.ಸಿ. ಅನ್ವಯ ಯಾರಾದರೂ ತನ್ನ ಸ್ವಇಚ್ಛೆಯಿಂದ ಇನ್ನಾವುದೋ ವ್ಯಕ್ತಿಯನ್ನು ಯಾವುದಾದರೂ ದಿಕ್ಕಿನೆಡೆಗೆ ಹೋಗುವುದನ್ನು ತಡೆದರೆ ಅದನ್ನು ''ಉದ್ದೇಶಪೂರ್ವಕ ತಪ್ಪು ತಡೆ'' ಎಂದು ಪರಿಗಣಿಸಬಹುದು. ಹಾಗೆಯೇ ಕಲಂ 340, 342 ಐ.ಪಿ.ಸಿ. ಅನ್ವಯ ಯಾರಾದರೂ ಯಾವುದೇ ವ್ಯಕ್ತಿಯನ್ನು ಒಂದು ಪರಿಧಿಯಿಂದ ಆಚೆಗೆ ಹೋಗದಂತೆ ನಿರ್ಬಂಧಿಸಿದರೆ ''ಅದು ಅಕ್ರಮ ಬಂಧನ'' ಎಂದು ಪರಿಗಣಿಸಲ್ಪಟ್ಟು, ಅಕ್ರಮ ತಡೆ ಮತ್ತು ಬಂಧನ ಇವೆರಡೂ ಕೂಡ ಶಿಕ್ಷಾರ್ಹ ವಿಚಾರಣೆಯ ಅಪರಾಧಗಳಾಗಿರುತ್ತದೆ. ಕಲಂ 343, 344, 345, 346, 347, 348, ಐ.ಪಿ.ಸಿ.ಗಳಲ್ಲಿ ''ಅಕ್ರಮ ಬಂಧನದ ಹಲವಾರು ಪ್ರಭೇದಗಳು'' ಮತ್ತು ಅದಕ್ಕೆ ವಿಧಿಸಬಹುದಾದ ಶಿಕ್ಷೆಗಳನ್ನು ಉಲ್ಲೇಖಿಸಿರುತ್ತಾರೆ.

ಮಕ್ಕಳು, ಅಂದರೆ ಗಂಡುಮಗುವಾದರೆ 16 ವರ್ಷ ತುಂಬುವವರೆಗೂ, ಹೆಣ್ಣುಮಗುವಾದರೆ 18 ವರ್ಷ ತುಂಬುವವರೆಗೂ, ಯಾವುದಾದರೂ ಶಿಕ್ಷಾರ್ಹ ಅಪರಾಧವನ್ನು ಮಾಡಿದಲ್ಲಿ ಇವರನ್ನು 'ಬಾಲಾಪರಾಧಿಗಳು' ಎಂದು ಪರಿಗಣಿಸಿದ್ದು, ಇವರ ಬಂಧನ, ಬಂಧನದ ನಂತರ ಕ್ರಮ, ವಿಚಾರಣೆ ಇವುಗಳ ಬಗ್ಗೆ ಪ್ರತ್ಯೇಕ ಕಾಯ್ದೆ ಕ್ರಮಗಳು ಜಾರಿಯಲ್ಲಿರುತ್ತದೆ. ನ್ಯಾಯಾಂಗ ವಿಚಾರಣೆಗೆ ಸಹ ಪ್ರತ್ಯೇಕ ವಿಶೇಷ ನ್ಯಾಯಾಲಯಗಳಿದ್ದು ಹಲವಾರು ಮಾನವೀಯ ಮತ್ತು ಸುಧಾರಣಾ ಕ್ರಮಗಳ ಮೇಲೆ ಅವಲಂಬಿತವಾಗಿರುತ್ತದೆ.

''ಬಂಧನ''ದ ಬಗ್ಗೆ ಹಲವಾರು ವಿಷಯಗಳನ್ನು ಅರಿತುಕೊಂಡು ಸದಾ ಎಚ್ಚರದಿಂದಿದ್ದು ಅನಿರ್ಬಂಧಿತ ಸ್ವಾತಂತ್ರ್ಯವನ್ನು ಅನುಭವಿಸುತ್ತ ಅನುರಾಗದ ಬಂಧಗಳನ್ನು ಮಾತ್ರವೇ ರೂಢಿಸಿಕೊಳ್ಳೋಣ.

■



ನಮ್ಮ ಪೊಲೀಸರು ಏಕೆ ಹೀಗೆ?

■ ಮಾಧವ ಐತಾಳ್

☆ ಮಾರ್ಚ್ 31, 1997 ಕುಖ್ಯಾತ ದರೋಡೆಕೋರನೊಬ್ಬನನ್ನು ಕೊಂದರೆ ಸಿಗಬಹುದಾದ ಬಡ್ತಿ ಹಾಗೂ ಹಿಡಿಯಲೇಬೇಕು ಎಂಬ ಮೇಲಾಧಿಕಾರಿಗಳ ಒತ್ತಡದಿಂದಾಗಿ ಅಸಿಸ್ಟೆಂಟ್ ಕಮೀಷನರ್ ಎಸ್.ಎಸ್.ರಥೀ ನೇತೃತ್ವದ 15 ಜನರ ಪೋಲಿಸ್ ತಂಡವು ದೆಹಲಿಯ ಇಬ್ಬರು ವ್ಯಾಪಾರಿಗಳನ್ನು ಹಾಡುಹಗಲೇ ಗುಂಡಿಟ್ಟು ಕೊಂದಿತು.

☆ ತಮಗಾದ ನಷ್ಟವನ್ನು ಸರ್ಕಾರ ತುಂಬಿಕೊಡಬೇಕೆಂದು ಬಾಗೂರು ನವಿಲೆ ಸುರಂಗದಿಂದ ಸಂತ್ರಸ್ತರಾದ ರೈತರು ಶಾಂತಿಯುತ ಚಳವಳಿ ನಡೆಸಿದರು. ಮುಷ್ಕರ ಮುಗಿದ ನಂತರ ವಿನಾಕಾರಣ ಜನರ ಮೇಲೆ ಎರಗಿದ ಪೋಲಿಸರು ರೈತರನ್ನು ಬಡಿದುಹಾಕಿದರು.

☆ 'ನನಗೆ ಬೇಕಾದ್ದು ಫಲಿತಾಂಶ. 10 ಜನರನ್ನು ಕೊಂದ ದುಷ್ಕರ್ಮಿಯೊಬ್ಬನನ್ನು ನೀವು ಕೊಂದರೆ, ಜನ ನಿಮ್ಮನ್ನು ಹೊಗಳುತ್ತಾರೆ' ಉತ್ತರಪ್ರದೇಶದ ಮುಖ್ಯಮಂತ್ರಿ ಕಲ್ಯಾಣ್‌ಸಿಂಗ್, ಪೋಲಿಸರಿಗೆ ನೀಡಿದ ಆದೇಶ.

☆ ಅಕ್ಟೋಬರ್ 17, 1996. ದೆಹಲಿಯ ಪೋಲಿಸ್ ಕಾನ್‌ಸ್ಟೆಬಲ್ ಅರ್ಜುನ್‌ಸಿಂಗ್ ಇಲಾಖೆಯಲ್ಲಿ ತನಗಾಗುತ್ತಿರುವ ಅನ್ಯಾಯ, ಸಿಗದ ಬಡ್ತಿ, ತನ್ನ ಶ್ರಮದ ಫಲವೆಲ್ಲ ಮೇಲಾಧಿಕಾರಿಗಳಿಗೆ ಸಿಗುತ್ತಿರುವುದನ್ನು ಕಂಡು ಹತಾಶನಾಗಿ ಆತ್ಮಹತ್ಯೆ ಮಾಡಿಕೊಂಡು ಸತ್ತ.

ಇಷ್ಟೆಲ್ಲ ಬಿಡಿ ಬಿಡಿ ಪ್ರಕರಣಗಳನ್ನು ಬಂಧಿಸುವ ಬಲವಾದ ಕಾರಣ ವೊಂದಿದೆ. ಅದುವೇ ನಮ್ಮ ಅಸಮರ್ಪಕ ಪೊಲೀಸ್ ವ್ಯವಸ್ಥೆ.

ಕರ್ನಾಟಕದ ಪೋಲಿಸ್ ವ್ಯವಸ್ಥೆ

ನವೆಂಬರ್ 1, 1956 ರಲ್ಲಿ ಕರ್ನಾಟಕ ರಾಜ್ಯ ಉದಯವಾದ ನಂತರ ಏಪ್ರಿಲ್2, 1965 ರಲ್ಲಿ ಕರ್ನಾಟಕ ಪೋಲಿಸ್ ಕಾಯಿದೆ ಜಾರಿಗೆ ಬಂದಿತು. 1956ರಲ್ಲಿ 3 ವಲಯಗಳಲ್ಲಿ ಇದ್ದ ಪೋಲಿಸರ ಸಂಖ್ಯೆ 24,885. ವಾರ್ಷಿಕ ಆಯವ್ಯಯ 3.26 ಕೋಟಿ ರೂ. ನಂತರ ಇಲಾಖೆ ಬೆಳೆಯುತ್ತಾ ಹೋಯಿತು. ಇಂದು 112 ಉಪವಿಭಾಗಗಳು, 228 ವೃತ್ತಗಳು, 791 ಪೋಲಿಸ್ ಠಾಣೆಗಳು ಹಾಗು 297 ಪೋಲಿಸ್ ಔಟ್‌ಪೋಸ್ಟ್‌ಗಳಿರುವ ಇಲಾಖೆಯ ಸಿಬ್ಬಂದಿ ಸಂಖ್ಯೆ 65,845 ಕ್ಕೆ ಏರಿದ್ದು, ವಾರ್ಷಿಕ ಆಯವ್ಯಯ ರೂ. 590.14 ಕೋಟಿ ಇದೆ.

1956-98ರ ಅವಧಿಯಲ್ಲಿ ಕರ್ನಾಟಕದ ಜನಸಂಖ್ಯೆ ಅಗಾಧವಾಗಿ ಏರಿದೆ. ಆದರೆ ಪೋಲಿಸರ ಸಂಖ್ಯೆ ಅದೇ ರೀತಿ ಹೆಚ್ಚಾಗಿಲ್ಲ. 100 ಚದರ ಕಿ.ಮೀ.ಗೆ 29.5 ಪೋಲಿಸರಿದ್ದು, 1000 ಜನರಿಗೆ ಕೇವಲ 1.2 ರಷ್ಟು ಪೋಲಿಸರಿದ್ದಾರೆ. 2.5 ಕೋಟಿ ಹೆಣ್ಣುಮಕ್ಕಳಿಗೆ ಇರುವುದು ಕೇವಲ 1,331 ಮಹಿಳಾ ಪೋಲಿಸರು.

ಕ್ರಿ.ಶ. 2000ದ ಹೊತ್ತಿಗೆ ಕರ್ನಾಟಕಕ್ಕೆ ಕನಿಷ್ಟ ಎಂದರೆ 2000 ಪೋಲಿಸ್ ಠಾಣೆಗಳು, 400 ವೃತ್ತಗಳು, 300 ಉಪವಿಭಾಗಗಳು ಬೇಕು. ಬೆಂಗಳೂರಿಗೆ 8 ವಿಭಾಗ, 24 ಉಪವಿಭಾಗ, 120 ಪೋಲಿಸ್ ಠಾಣೆಗಳು ಹಾಗೂ 2500 ಸಂಚಾರಿ ಪೋಲಿಸರು ಬೇಕಾಗುತ್ತಾರೆ.

ಪೋಲಿಸರ ಸಂಖ್ಯೆ ಬೇಕಿರುವಷ್ಟಿಲ್ಲ, ನಿಜ. ಆದರೆ ಅಪರಾಧಗಳ ಸಂಖ್ಯೆ ತೀವ್ರವಾಗಿ ಏರುತ್ತಿದೆ. 1997ರಲ್ಲಿ 6,224 ಮಹಿಳೆಯರ ಮೇಲಿನ ಹಲ್ಲೆ ಪ್ರಕರಣಗಳು, 1252 ದಲಿತರ ಮೇಲಿನ ಹಲ್ಲೆ ಪ್ರಕರಣಗಳು, 8731 ರಸ್ತೆ ಅಪಘಾತಗಳಲ್ಲಿ 701ಸಾವು, 1689 ಕೊಲೆ, 290 ಡಕಾಯಿತಿ ನಡೆದಿದ್ದರೆ, ಸರಗಳ್ಳತನ ದಿನನಿತ್ಯದ ಪ್ರಸಂಗವಾಗಿ ಬಿಟ್ಟಿದೆ. ಲಾಕ್‌ಅಪ್ ಮರಣಗಳು ಹೆಚ್ಚುತ್ತಿವೆ.

ಭಾರತ ಸರ್ಕಾರದ ಗೃಹಖಾತೆಯ ಸರ್ವೇಕ್ಷಣೆ ಪ್ರಕಾರ ವ್ಯವಸ್ಥಿತ ಹಿಂಸೆ, ಕೋಮು ಗಲಭೆ, ಭಯೋತ್ಪಾದಕತೆ -ಜಾತಿ ಜಗಳಗಳು ಇನ್ನಷ್ಟು ಹೆಚ್ಚುತ್ತಿವೆ, ಹೊಸ ಪ್ರದೇಶಗಳಿಗೂ ಹಬ್ಬುತ್ತಿವೆ. ಯೋಜನಾ ಆಯೋಗಕ್ಕೆ 1951-92ರ ಅವಧಿಯಲ್ಲಿ ನಡೆದ ಅಪರಾಧಗಳ ಬಗ್ಗೆ ನೀಡಿರುವ ವರದಿ ಪ್ರಕಾರ ಕ್ರಿ.ಶ. 2000ದ ಹೊತ್ತಿಗೆ ನಡೆಯಬಹುದಾದ 20 ಲಕ್ಷ ಪ್ರಕರಣಗಳಲ್ಲಿ ವ್ಯವಸ್ಥಿತ ಹಿಂಸೆಯ ಪಾಲು ಶೇ. 15.3 ರಷ್ಟಿರುತ್ತದೆ. ಇದನ್ನು ತಡೆಯುವುದು ಪೋಲಿಸರಿಂದ ಖಂಡಿತಾ ಅಸಾಧ್ಯ.

ಪೋಲಿಸರ ಬಗ್ಗೆ ಸಾಮಾನ್ಯ ಜನರ ಅಭಿಪ್ರಾಯ ತೀರಾ ಕೆಟ್ಟದ್ದಾಗಿದೆ. ಸಭ್ಯ ಮನುಷ್ಯನೊಬ್ಬ ಪೋಲಿಸ್ ಠಾಣೆಗೆ ದೂರು ಕೊಡಲು ಹೋಗುವುದೇ ಕಷ್ಟ ಎನ್ನುವ ಸ್ಥಿತಿ ಇದೆ. ಅಪರಾಧ ಶೋಧನೆಗಾಗಿ ವೈಜ್ಞಾನಿಕ ತಂತ್ರಗಳ ಬಳಕೆ ಇಲ್ಲವೆ ಇಲ್ಲ ಎನ್ನುವಷ್ಟು ಕಡಿಮೆ ಇದೆ. ಲಂಚ, ಅನಗತ್ಯ ಹಿಂಸೆ ಇಡೀ ಪೋಲಿಸ್ ವ್ಯವಸ್ಥೆಯನ್ನು ಕಾಡುತ್ತಿದೆ. ಆಯಕಟ್ಟಿನ ಸ್ಥಳಗಳ ಪೋಲಿಸ್ ಠಾಣೆಗೆ ಹೋಗಲು ಸಬ್ ಇನ್ಸ್‌ಪೆಕ್ಟರ್‌ಗಳು ಹಣದ ಥೈಲಿಯನ್ನು ಒಪ್ಪಿಸುತ್ತಾರೆ. ಪೋಲಿಸ್ ಪೇದೆಯೊಬ್ಬ ಸಂಜೆಯ ತನ್ನ ಡ್ಯೂಟಿ ಮುಗಿಯುವ ಮೊದಲು ತರಕಾರಿ ಮಾರುವವರನ್ನು ಬಿಡದಂತೆ ಮಾರ್ಕೆಟ್ ಪ್ರದೇಶದಲ್ಲಿ 'ಎತ್ತು-ಎತ್ತು' ಅನ್ನುತ್ತಾ ಪುಡಿಗಾಸು ಕೀಳುವುದನ್ನು ನೀವೆಲ್ಲ ನೋಡಿರುತ್ತೀರಿ, ಅಸಹ್ಯ ಪಟ್ಟಿರುತ್ತೀರಿ.

ಪೋಲಿಸ್ ವ್ಯವಸ್ಥೆಯು ತಲೆಯಿಂದ ಬುಡದ ತನಕ ಭ್ರಷ್ಟಾಚಾರದಲ್ಲಿ ತುಂಬಿಹೋಗಿದೆ. ಆಳುವ ಪಕ್ಷದ ಮರ್ಜಿ ಹಿಡಿಯುವುದು ಪೋಲಿಸರ ಚಾಳಿಯಾಗಿದೆ. 'ಅದು ಅಗತ್ಯ' ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಸಾಮಾನ್ಯ ಪೋಲಿಸರ ಮೇಲಿನ ಕೆಲಸದ ಒತ್ತಡ ತುಂಬಾ ಹೆಚ್ಚಿದ್ದು, ಆತ ಬಿಡುವಿಲ್ಲದಂತೆ 18 ಘಂಟೆ, ಅವಶ್ಯಕತೆ ಇದ್ದಾಗ ನಿರಂತರವಾಗಿ 2-3ದಿನ ಕರ್ತವ್ಯ ನಿರ್ವಹಿಸ ಬೇಕಾದ ಪ್ರಸಂಗಗಳು ಬರುತ್ತವೆ. ನ್ಯಾಷನಲ್ ಕ್ರೈಮ್ಸ್ ರೆಕಾರ್ಡ್‌ಬ್ಯೂರೋ ಪೋಲಿಸರ ಮೇಲೆ ಕ್ರಿಮಿನಲ್ ಕೇಸ್‌ಗಳು ಹೆಚ್ಚುತ್ತಿರುವುದನ್ನು ದಾಖಲಿಸಿದೆ. ಪೋಲಿಸರ ಕಾನೂನು ಬಾಹಿರ ಕೆಲಸಗಳು ಹೆಚ್ಚುತ್ತಿವೆ.

ಪೋಲಿಸರು ಬ್ರಿಟಿಷ್ ವಸಾಹತುಶಾಹಿ ಮನಸ್ಥಿತಿಯಿಂದ ಇನ್ನೂ ಹೊರಬಂದಿಲ್ಲ ಎಂದು ಎಲ್ಲರೂ ದೂರುತ್ತಾರೆ. ನಿಮ್ಹಾನ್ಸ್‌ನ ಅಧ್ಯಯನ ವೊಂದರ ಪ್ರಕಾರ ಬೆಂಗಳೂರಿನ ಶೇ. 37 ರಷ್ಟು ಹಾಗೂ ದೆಹಲಿಯ ಶೇ. 50 ಕ್ಕೂ ಹೆಚ್ಚುಮಂದಿ ಪೋಲಿಸರು ಮಾನಸಿಕ ಅಸ್ವಸ್ಥತೆಯಿಂದ ಬಳಲು ತ್ತಿದ್ದಾರೆ. ಜನರು ಪೋಲಿಸರನ್ನು ಕ್ರಿಮಿಗಳಂತೆ ಭಯ ಹಾಗೂ ಭಕ್ತಿಯಿಂದ ಕಾಣುತ್ತಾರೆ. ಇದರಿಂದ ಕೀಳರಿಮೆ ಬೆಳೆಸಿಕೊಂಡ ಪೋಲಿಸರು ಅನಗತ್ಯ ಹಿಂಸೆ ಬಳಸುತ್ತಾರೆ. ಅಭದ್ರತೆ ಹಾಗೂ ತಪ್ಪಿಗೆ ತಮ್ಮನ್ನು ಹೊಣೆ ಮಾಡುತ್ತಾರೆ ಎನ್ನುವ ಭೀತಿ ಸಾಮಾನ್ಯ ಪೋಲಿಸರಲ್ಲಿ ತುಂಬಾ ಇದೆ. ಚಲನಚಿತ್ರವೊಂದರಲ್ಲಿ ಪೋಲಿಸನೊಬ್ಬನನ್ನು ಚಿತ್ರಿಸುವ ರೀತಿ ನೋಡಿ. ಅಲ್ಲಿ ಆತ

ಜೋಕರ್‌ನಂತೆ, ಅತೀ ಭ್ರಷ್ಟನಂತೆ ಬದುಕುತ್ತಿರುತ್ತಾನೆ. ಮಾಧ್ಯಮಗಳಿಂದ ಪ್ರಭಾವಿತರಾದ ಜನ ನಿಜ ಜೀವನಕ್ಕೂ ಅದನ್ನೇ ಅನ್ವಯಿಸುತ್ತಾರೆ. ಪೋಲಿಸರ ಮಕ್ಕಳು (ಉನ್ನತ ಅಧಿಕಾರಿಗಳ ಮಕ್ಕಳಿಗೆ ಇದು ಅನ್ವಯಿಸುವುದಿಲ್ಲ) ಹಾಸ್ಯಕ್ಕೊಳಗಾಗುವುದೂ ಹೆಚ್ಚು. ಇದೆಲ್ಲದರ ಜೊತೆಗೆ ಕೆಲಸದ ಒತ್ತಡವೂ ಸೇರಿದರೆ ಆತ ಯಾವ ಕ್ಷಣದಲ್ಲಾದರೂ ಸ್ಫೋಟಿಸುವ ಸ್ಥಿತಿಗೆ ಬರುತ್ತಾನೆ. ಪೋಲಿಸರ ಸಂಖ್ಯೆ ಹೆಚ್ಚಿದೆ, ಆದರೆ ಮೂಲಭೂತ ಸೌಕರ್ಯಗಳು ಹೆಚ್ಚಿಲ್ಲ. ಬೆಂಗಳೂರಿನ ಕಮೀಷನರ್ ಕಛೇರಿಯ ಆವರಣದಲ್ಲಿ ಸೂಕ್ತ ಶೌಚಗೃಹಗಳಿಲ್ಲ, ಊಟದ ವ್ಯವಸ್ಥೆ ಇಲ್ಲ. ಪೋಲಿಸರ ಕೆಲಸದ ವ್ಯಾಪ್ತಿ ಹೆಚ್ಚುತ್ತಿದೆ. ವೈಟ್ ಕಾಲರ್ ಅಪರಾಧಗಳು ಹೆಚ್ಚುತ್ತಿವೆ. ಇದಕ್ಕಾಗಿ ಬೇಕಾಗಿರುವ ವೈಜ್ಞಾನಿಕ ತರಬೇತಿ ಅವರಿಗೆ ಸಿಗುತ್ತಿಲ್ಲ. ಅಪರಾಧ ಶೋಧನೆಯ ಒತ್ತಡ ಆತನ ಮೇಲಿರುತ್ತದೆ. ಆಗ ಆತ ಕೈಗೆ ಸಿಕ್ಕಿದವನ ಹೆಣ ಎತ್ತುತ್ತಾನೆ. ಸಿಬ್ಬಂದಿಗಳ ವೈಯಕ್ತಿಕ ಸಮಸ್ಯೆಗಳಾದ ವಸತಿ ಸಮಸ್ಯೆ, ವರ್ಗಾವಣೆ, ಆರೋಗ್ಯ, ರಕ್ಷಣಾ ವ್ಯವಸ್ಥೆಗಳಲ್ಲಿನ ದೋಷದಿಂದಾಗಿ ಪೋಲಿಸರ ಮೇಲಿನ ಒತ್ತಡ ಹೆಚ್ಚುತ್ತದೆ. ದಾಖಲಾಗುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು ಕಾನ್‌ಸ್ಟೇಬಲ್, ಮುಖ್ಯ ಕಾನ್‌ಸ್ಟೇಬಲ್ ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳು ಯಾವುದೇ ಸಮಯದಲ್ಲಿ 60 ಪ್ರಕರಣಗಳನ್ನು ವಿಚಾರಿಸಬೇಕಾದ ಪರಿಸ್ಥಿತಿ ಇದೆ.

ಕಾನ್‌ಸ್ಟೇಬಲ್‌ಗಳ ಪ್ರಾರಂಭಿಕ ಸಂಬಳ ರೂ. 950 ಇದ್ದು, ಅವರಿಗೆ ಸಿಗುತ್ತಿರುವ ವಸತಿ ಭತ್ಯೆ ರೂ. 150! ಕಡಿಮೆ ಬಾಡಿಗೆಯ ಇಲ್ಲವೇ ಸೌಲಭ್ಯರಹಿತ ಮನೆಗಳಲ್ಲಿ ಪೋಲಿಸರು ವಾಸಿಸಬೇಕಾದ ಪರಿಸ್ಥಿತಿ ಇದೆ. ಮೊದಲು ಪೋಲಿಸರಿಗೆ ಪೋಲಿಸ್ ವಸತಿಗಳಲ್ಲಿ ಕನಿಷ್ಠ ಕೊಠಡಿಯೊಂದು ಸಿಗುತ್ತಿತ್ತು. ಆದರೆ ಇಂದು ಮುಂಬೈನಂತಹ ನಗರಗಳಲ್ಲಿ ಸ್ಲಂಗಳಲ್ಲಿ ಹಾಗೂ ನೆಂಟರ ಮನೆಗಳಲ್ಲಿ ವಾಸಿಸುತ್ತಿರುವ ಪೇದೆಗಳ ಸಂಖ್ಯೆ ತುಂಬಾ ಇದೆ. ಗಳಿಸಿದ್ದಕ್ಕಿಂತ ಹೆಚ್ಚು ವೆಚ್ಚ ಮಾಡಬೇಕಾಗಿ ಬರುವುದರಿಂದ ಅವರು ಬೇರೆ ಆದಾಯ ಮೂಲವನ್ನು ಹುಡುಕಬೇಕಾಗಿದೆ. ಲಂಚ, ಹಫ್ತಾ, ರೋಲ್‌ಕಾಲ್ ಇವೆಲ್ಲ ಬೇರೆ ಆದಾಯ ಮೂಲಗಳಾಗಿವೆ.

ಪೇದೆ ಕುಟುಂಬದ ಜೊತೆಗೆ ಇದ್ದಲ್ಲಿ, ಅದರ ಒತ್ತಾಸೆಯಿಂದಾಗಿ ಆತನ ಮೇಲಿನ ಒತ್ತಡ ಸ್ವಲ್ಪವಾದರೂ ಕಡಿಮೆ ಆಗುತ್ತಿತ್ತು. ದೆಹಲಿಯ ಶೇ. 52ರಷ್ಟು ಪೋಲಿಸರು ತಮ್ಮ ಕುಟುಂಬಗಳ ಜೊತೆಯಲ್ಲಿ ವಾಸಿಸುತ್ತಿಲ್ಲ. ಕಾರಣ ವಸತಿ ಸೌಲಭ್ಯದ ಅಲಭ್ಯತೆ. ಶೇ. 98ರಷ್ಟು ಪೋಲಿಸರು

ಪೊಲೀಸ್ ವ್ಯವಸ್ಥೆಯ ದೋಷಗಳು ಮತ್ತು ಪರಿಹಾರಗಳು

ಸ್ವಾತಂತ್ರ್ಯಾ ನಂತರ ಪೋಲೀಸ್ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಸರ್ಕಾರವು 1979ರಲ್ಲಿ ರಾಷ್ಟ್ರೀಯ ಪೊಲೀಸ್ ಆಯೋಗವೊಂದನ್ನು ನೇಮಿಸಿತು. ಆಯೋಗದ ವರದಿಯ ಪ್ರಕಾರ ಪೋಲಿಸ್ ವ್ಯವಸ್ಥೆಯಲ್ಲಿನ ದೋಷಗಳು:

- ನಿಯಂತ್ರಣ ವ್ಯವಸ್ಥೆಯಲ್ಲಿನ ಅಸ್ತವ್ಯಸ್ತತೆಯಿಂದಾಗಿ ಕೆಳಹಂತದ ಪೋಲಿಸರಲ್ಲಿ ಶಿಸ್ತು ಕಡಿಮೆಯಾಗಿದೆ. ಮೊಕದ್ದಮೆಗಳನ್ನು ಸ್ವೀಕರಿಸುವಲ್ಲಿ ನಿರ್ಲಕ್ಷ್ಯವಲ್ಲದೆ, ಪತ್ತೆಕಾರ್ಯದ ಗುಣಮಟ್ಟ ಇಳಿದಿದೆ. ಸಾರ್ವಜನಿಕರಿಂದ ಬರುವ ದೂರುಗಳ ಸಂಖ್ಯೆ ಏರಿದೆ.
- ಪೋಲಿಸ್ ಪಡೆಯ ಮುಖ್ಯಸ್ಥರಾಗಿ ಸಂದೇಹಾಸ್ಪದ ವ್ಯಕ್ತಿತ್ವವುಳ್ಳ ಪೋಲಿಸ್ ಅಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತಿದೆ.
- ಅಪರಾಧ ಕುರಿತು ಅಂಕಿ ಸಂಖ್ಯೆಗೆ ಹೆಚ್ಚು ಒತ್ತು ನೀಡುತ್ತಿರುವುದರಿಂದ, ಪೋಲಿಸರು ದೂರುಗಳನ್ನು ನೋಂದಾಯಿಸಿಕೊಳ್ಳುತ್ತಿಲ್ಲ. ಪೋಲಿಸರು ಪ್ರಭಾವಶಾಲಿಗಳ ಬಾಲಂಗೋಚಿಗಳು ಎಂದು ಜನ ದೂರುತ್ತಿದ್ದಾರೆ.
- ಶಿಕ್ಷಿಸುವ ವ್ಯವಸ್ಥೆ ವಿಫಲವಾಗಿರುವುದರಿಂದ, ಅಸಂಖ್ಯಾತ ಪ್ರಕರಣಗಳು ವಿಚಾರಣೆಯಾಗದೆ ಉಳಿದಿವೆ. ತತ್‌ಕ್ಷಣ ನ್ಯಾಯ ದೊರಕಿಸಿಕೊಳ್ಳಲು ಜನ ಕಾನೂನನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ.


ಈ ವರದಿಯು ನ್ಯಾಯಾಂಗ ಹಾಗೂ ಕಾರ್ಯಾಂಗ ಎರಡನ್ನೂ ಪೋಲಿಸ್ ವ್ಯವಸ್ಥೆಯಲ್ಲಿನ ಗೊಂದಲಗಳಿಗೆ ಕಾರಣ ಎಂದು ಹೇಳಿದೆ. ವರದಿ ಪ್ರಕಟವಾದ ನಂತರ ಕೇಂದ್ರದಲ್ಲಿ ಅನೇಕ ಸರ್ಕಾರಗಳು ಬಂದು ಹೋದವು. ಏಪ್ರಿಲ್ 3, 1997ರಲ್ಲಿ ಗೃಹಮಂತ್ರಿ ಇಂದ್ರಜಿತ್ ಗುಪ್ತಾ ಲೋಕಸಭೆಯಲ್ಲಿ ಪೋಲಿಸ್ ವ್ಯವಸ್ಥೆಯ ಸುಧಾರಣೆಗೆ ಕೆಲವು ಕ್ರಮಗಳನ್ನು ಸೂಚಿಸಿದರು:

- ಪೋಲಿಸರ ಕೆಲಸವನ್ನು ಗಮನಿಸಲು, ಕಾರ್ಯನೀತಿಯ ಗೊತ್ತುಗುರಿಯನ್ನು ರೂಪಿಸಲು, ಸೂಪರಿಂಟೆಂಡೆಂಟ್ ಹಾಗೂ ಅದಕ್ಕಿಂತ ಮೇಲ್ದರ್ಜೆಯ ಅಧಿಕಾರಿಗಳ ಮೇಲೆ ದೂರು ಸಲ್ಲಿಸಲು ಶಾಸನಬದ್ಧ ರಕ್ಷಣಾ ಆಯೋಗವನ್ನು ರಾಜ್ಯಸರ್ಕಾರಗಳು ನೇಮಿಸಬೇಕು.
- ಕೇಂದ್ರ ಲೋಕಸೇವಾ ಆಯೋಗದ ಛೇರ್ಮನ್ ನೇತೃತ್ವದ ಸಮಿತಿ ಸಿದ್ಧಪಡಿಸಿದ ಐಪಿಎಸ್ ಅಧಿಕಾರಿಗಳ ಪಟ್ಟಿಯಿಂದ ರಾಜ್ಯಗಳು ಪೋಲಿಸ್ ಮುಖ್ಯಸ್ಥರನ್ನು ನೇಮಕ ಮಾಡಬೇಕು. ಸಮಿತಿ ಸೂಚಿಸಿದ 3 ಜನರಲ್ಲಿ ಅರ್ಹತೆ, ಜೇಷ್ಠತೆಯನ್ನು ಆಧರಿಸಿ ಒಬ್ಬರನ್ನು ರಾಜ್ಯದ ಮುಖ್ಯಮಂತ್ರಿ ಪೋಲಿಸ್ ಮುಖ್ಯಸ್ಥರನ್ನಾಗಿ ನೇಮಕ ಮಾಡಬೇಕು. ಪೋಲಿಸ್ ಮುಖ್ಯಸ್ಥನ ಅಧಿಕಾರಾವಧಿ ನಿಗದಿತ ಕಾಲಾವಧಿಯದಾಗಿರಬೇಕು. ಆತನನ್ನು ತೆಗೆದು ಹಾಕುವ ಮೊದಲು ನಿರ್ದಿಷ್ಟ ನಿಯಮಗಳನ್ನು ಅನುಸರಿಸಬೇಕು. ಆತನನ್ನು ಬೇಕಾಬಿಟ್ಟಿ ಕಿತ್ತೆಸೆಯುವಂತಿಲ್ಲ.
- ಸಹಾಯಕ ಸಬ್ ಇನ್ಸ್‌ಪೆಕ್ಟರ್‌ಗಳ ಸಂಖ್ಯೆಯನ್ನು ಕ್ರಮವಾಗಿ ಹೆಚ್ಚಿಸಿ ಈಗಿರುವ ಕಾನ್‌ಸ್ಟೇಬಲ್ ಆಧಾರಿತ ವ್ಯವಸ್ಥೆಯನ್ನು ಕ್ರಮೇಣ ಅಧಿಕಾರಿ ಆಧಾರಿತ ವ್ಯವಸ್ಥೆಯನ್ನಾಗಿ ಬದಲಾಯಿಸಬೇಕು. ಇದರಿಂದಾಗಿ ಅಧಿಕಾರಿಗಳಿಗೆ ಬೇಗ ಬಡ್ತಿ ಸಿಗುವ ಸಾಧ್ಯತೆ ಇದೆ.

ಇಷ್ಟನ್ನು ಸದನದಲ್ಲಿ ಹೇಳಿದ ಗುಪ್ತಾ ಮುಂದುವರಿಸಿ ಹೇಳಿದ್ದು -ಪೋಲಿಸ್ ವ್ಯವಸ್ಥೆಯಲ್ಲಿ ರಾಜಕಾರಣಿಗಳು ಹಸ್ತಕ್ಷೇಪ ಮಾಡಬಾರದು. ಚಿಲ್ಲರೆ ಕಾರಣಗಳಿಗಾಗಿ ಪುಢಾರಿ ರಾಜಕಾರಣಿಗಳ ಅನಾರೋಗ್ಯಕರ ಹಸ್ತಕ್ಷೇಪದಿಂದಾಗಿ ಪೋಲಿಸ್ ವ್ಯವಸ್ಥೆ ಹದಗೆಟ್ಟಿದೆ. ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗಳನ್ನು ತರುವಲ್ಲಿ ರಾಜಕಾರಣಿಗಳು ವಿಫಲರಾದರೆ, ನ್ಯಾಯಾಂಗ ಮಧ್ಯಪ್ರವೇಶಿಸಿ ಬದಲಾವಣೆಗಳನ್ನು ರಾಜಕಾರಣಿಗಳ ಗಂಟಲಿನಲ್ಲಿ ತುರುಕುತ್ತದೆ. ಗುಪ್ತಾ ಇದನ್ನು ಹೇಳಿ 1 ವರ್ಷಕ್ಕೂ ಹೆಚ್ಚು ಕಾಲ ಸಂದಿದೆ. ಆದರೆ ಒಂದೇ ಒಂದು ಸಣ್ಣ ಬದಲಾವಣೆ ಆಗಿಲ್ಲ. ಆದರೆ ಈಗ ಇಬ್ಬರು ಪೋಲಿಸ್ ಅಧಿಕಾರಿಗಳು 'ಕೇಂದ್ರ ಸರ್ಕಾರ ರಾಷ್ಟ್ರೀಯ ಪೋಲಿಸ್ ಆಯೋಗದ ಶಿಫಾರಸ್ಸುಗಳನ್ನು ಇನ್ನೂ ಏಕೆ ಜಾರಿಗೆ ತಂದಿಲ್ಲ' ಎಂದು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದ ಕಟಕಟೆ ಹತ್ತಿದ್ದಾರೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸುಧಾರಣೆ ಅಪೇಕ್ಷಿಸುತ್ತಿರುವವರನ್ನು ಬೆಂಬಲಿಸುತ್ತಿದೆ.

ನ್ಯಾಯಾಲಯ ಒಂದು ವೇಳೆ ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿ ಆದೇಶ ನೀಡಿದರೆ, ಸಮವಸ್ತ್ರದ ಕಮಟು ವಾಸನೆ ಹೋಗಿ ಸ್ವಲ್ಪವಾದರೂ ಸುಗಂಧದ ತಂಪು ಗಾಳಿ ಬೀಸುತ್ತದೆ.

ಮಾನವ ಹಕ್ಕು ಆಯೋಗಕ್ಕೆ ಇನ್ನಷ್ಟು ಅಧಿಕಾರ ಕೊಡಬೇಕು.
- ವಿ.ಆರ್. ಕೃಷ್ಣ ಅಯ್ಯರ್



ಮಾನವ ಹಕ್ಕು ಆಯೋಗಕ್ಕೆ ಕಚ್ಚಲು ಹಲ್ಲುಗಳಿಲ್ಲ. ಅದು ಹಕ್ಕು ಉಲ್ಲಂಘನೆ ಘಟನೆ ಕುರಿತು ತನ್ನ ಆಘಾತವನ್ನು ವ್ಯಕ್ತಪಡಿಸಬಹುದು ಮತ್ತು ಶಿಕ್ಷೆ ವಿಧಿಸಲು ಹೇಳಬಹುದು, ಆದರೆ ಅದಕ್ಕೆ ಶಿಕ್ಷಿಸುವ ಅಧಿಕಾರವಿಲ್ಲ. ಆಯೋಗದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರು ಮತ್ತು ಅನೇಕ ಸಂಸ್ಥೆಗಳ ಮುಖ್ಯಸ್ಥರಿದ್ದರೂ ಅದಕ್ಕೆ ಯಾವುದೇ ಅಧಿಕಾರ ವಿಲ್ಲ. ಹಕ್ಕುಗಳ ಉಲ್ಲಂಘನೆ ಕುರಿತು ತನಿಖೆ ನಡೆಸಲು ಅದು ಬಹುಕಾಲ ತೆಗೆದುಕೊಳ್ಳುತ್ತದೆ. ಆಯೋಗಕ್ಕೆ ಅದರದ್ದೇ ಆದ ಶೋಧನಾ ತಂಡವೊಂದರ ಅಗತ್ಯವಿದೆ.

ಮಾನವ ಹಕ್ಕು ಆಯೋಗವನ್ನು ಭಾರತದಲ್ಲಿ ರಚಿಸಿದ್ದು ಅಮೆರಿಕಾದ ಶ್ವೇತಭವನದಿಂದ ಬಂದ ಒತ್ತಡದಿಂದ. ತಮಿಳುನಾಡು ಸರ್ಕಾರ ರಾಜ್ಯ ಆಯೋಗ ರಚಿಸಿದ್ದರೆ, ಕೇರಳ ಸರ್ಕಾರವು ರಚನೆಗೆ ಎಲ್ಲ ಸಿದ್ಧತೆ ನಡೆಸಿದೆ. ಕರ್ನಾಟಕದಲ್ಲಿ ಅಂತಹ ಯಾವುದೇ ಪ್ರಯತ್ನ ನಡೆದಿಲ್ಲ. ಕರ್ನಾಟಕವು ಬೇರೆಡೆಯ ಕಾನೂನುಗಳಲ್ಲಿನ ದೋಷವನ್ನು ಸರಿಪಡಿಸಿ, ಆಯೋಗವನ್ನು ನಂಬಿಕೆಗೆ ಅರ್ಹವಾಗುವಂತೆ ಮಾಡಬಹುದು.

ಕರ್ನಾಟಕ ಸರ್ಕಾರವು ಎಲ್ಲ ಜಿಲ್ಲೆಗಳಲ್ಲೂ ಮಾನವ ಹಕ್ಕು ನ್ಯಾಯಾಲಯಗಳನ್ನಲ್ಲದೆ, ಸಂಚಾರಿ ನ್ಯಾಯಾಲಯವನ್ನು ರಚಿಸಬೇಕು. ಪೊಲೀಸರಿಗೆ ನ್ಯಾಷನಲ್ ಲಾ ಸ್ಕೂಲ್‌ನಲ್ಲಿ ವಿಶೇಷ ತರಬೇತಿ ನೀಡಬೇಕು. ಮಾನವಹಕ್ಕು ಆಯೋಗದಲ್ಲಿ ಮಾನವ ಹಕ್ಕುಗಳಿಗಾಗಿ ಹೋರಾಡುತ್ತಿರುವ ಕಾರ್ಯಕರ್ತರಿರಬೇಕು. ಜೈಲುಗಳಲ್ಲಿ ಕೈದಿಗಳಿಗೆ ನೀಡುವ ಶಿಕ್ಷೆಗಳು ಅಮಾನುಷ. ಮಾನವ ಹಕ್ಕುಗಳ ಉಲ್ಲಂಘನೆಯನ್ನು ನಾವು ತಡೆಯದಿದ್ದಲ್ಲಿ, ಮತ್ತೆ ಶಿಲಾಯುಗಕ್ಕೆ ಹೋಗುತ್ತೇವೆ.

ಇಲಾಖೆ ಅಥವಾ ಹಿರಿಯ ಅಧಿಕಾರಿಗಳು ತಮ್ಮ ಕಷ್ಟ ಕಾಲದಲ್ಲಿ ನೆರವಾಗುವುದಿಲ್ಲ ಎಂದು ದೂರುತ್ತಾರೆ. ''ಆತನ ಮೇಲಿರುವ ಈ ಎಲ್ಲ ಒತ್ತಡಗಳಿಂದಾಗಿ ಆತ ಸಿಡುಕನಾಗುತ್ತಾನೆ. ಅಪರಾಧಿಯಲ್ಲದೆ, ತನ್ನ ಕುಟುಂಬವೂ ಆತನ ಸಿಟ್ಟಿಗೆ ತುತ್ತಾಗುತ್ತದೆ'' ಎನ್ನುತ್ತಾರೆ ಕಿರಣ್ ಬೇಡಿ.

ನಿಮ್ಹಾನ್ಸ್ ಅಧ್ಯಯನದ ಪ್ರಕಾರ ಬೇರೆಲ್ಲ ಉದ್ಯೋಗಗಳಿಗೆ ಹೋಲಿಸಿದರೆ, ಪೊಲೀಸ್ ಉದ್ಯೋಗ ಹೆಚ್ಚು ಒತ್ತಡವನ್ನು ಹೇರುವಂತ ಹದ್ದು. ಈ ಒತ್ತಡದಿಂದಾಗಿ ಕೆಲಸದ ಸಾಮರ್ಥ್ಯ ಕಡಿಮೆಯಾಗುತ್ತದೆ. ಮಾನಸಿಕ ಅಭದ್ರತೆಯಲ್ಲದೆ ಬೇಸರ, ಆತಂಕ ಉಂಟಾಗುತ್ತದೆ. ತಲೆನೋವು ಹಾಗೂ ಹೊಟ್ಟೆ ಹುಣ್ಣು ಅವರಿಗೆ ತಗಲುವ ಸಹಜ ಕಾಯಿಲೆಗಳು. ನಗರಗಳಲ್ಲಿನ ವಾತಾವರಣ ಮಾಲಿನ್ಯದಿಂದಾಗಿ ಶ್ವಾಸಕೋಶದ ತೊಂದರೆಗಳು ಹೆಚ್ಚುತ್ತಿವೆ. ಇದಕ್ಕೆ ಹೆಚ್ಚಾಗಿ ತುತ್ತಾಗುವವರು ಸಂಚಾರಿ ಪೊಲೀಸರು. ಪೊಲೀಸರಲ್ಲಿ ಶೇ.5 ರಷ್ಟು ಮಂದಿ ಮದ್ಯ ಇಲ್ಲವೇ ಮಾದಕ ವಸ್ತುಗಳ ವ್ಯಸನಿಗಳಾಗಿದ್ದಾರೆ. ಇದು ಪ್ರಶ್ನಾವಳಿಗೆ ಪೊಲೀಸರು ನೀಡಿದ ಉತ್ತರಗಳಿಂದ ಸಿಕ್ಕ ಮಾಹಿತಿ. ಕುಡಿತವನ್ನು ಸಮಾಜವು ರೋಗವೆಂದು ಗಣಿಸುವುದರಿಂದ ಅದನ್ನು ಮುಚ್ಚಿಡುವ ಸಾಧ್ಯತೆ ಹೆಚ್ಚು. ಮಾದಕ ವಸ್ತು ಇಲ್ಲವೇ ಮದ್ಯ ಸೇವಿಸುವ ಪೊಲೀಸರ ಪ್ರಮಾಣ ಶೇ. 5 ಕ್ಕಿಂತ ಜಾಸ್ತಿ ಇದೆ. ಆತ್ಮಹತ್ಯೆ ಮನಸ್ಥಿತಿ ಅವರಲ್ಲಿ ಹೆಚ್ಚುತ್ತಿದೆ.

ಆಯ್ಕೆಯಲ್ಲಿನ ದೋಷಗಳು

ಇಂದಿನ ಪೊಲೀಸ್ ವ್ಯವಸ್ಥೆಯ ಮೂಲ ದೇಶೀ ಜನರನ್ನು ಹತೋಟಿಯಲ್ಲಿಡಲು ವಸಾಹತುಶಾಹಿಗಳು ರೂಪಿಸಿದ ವ್ಯವಸ್ಥೆ. ಸ್ವಾತಂತ್ರ್ಯಾ



'ಜವಾಬ್ದಾರಿಯುತ ಹಾಗೂ ಸ್ಪಂದಿಸಬಲ್ಲ ಪೊಲೀಸ್‌ಬಲಕ್ಕೆ ಪರ್ಯಾಯಗಳಿಲ್ಲ. ಪೊಲೀಸರಿಗೆ ಆತ್ಮ ವಿಶ್ವಾಸ ತುಂಬಿದಲ್ಲಿ, ಅವರು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬಲ್ಲರು.'


- ಕುಲದೀಪ್ ನಯ್ಯರ್

⇨

''ಆತನ ಮೇಲಿರುವ ಈ ಎಲ್ಲ ಒತ್ತಡಗಳಿಂದಾಗಿ ಆತ ಸಿಡುಕನಾಗುತ್ತಾನೆ. ಅಪರಾಧಿಯಲ್ಲದೆ, ತನ್ನ ಕುಟುಂಬವೂ ಆತನ ಸಿಟ್ಟಿಗೆ ತುತ್ತಾಗುತ್ತದೆ''


- ಕಿರಣ್‌ಬೇಡಿ

⇦



ಎಲ್ಲ ಪೋಲಿಸ್ ಅಧಿಕಾರಿಗಳು ಭ್ರಷ್ಟರಲ್ಲ

- ಕಾರ್ತಿಕೇಯನ್



ರಾಜಕಾರಣಿಗಳು ಪೋಲಿಸ್ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡಬಾರದು. ಮಾನವ ಹಕ್ಕು ಆಯೋಗದ ಅಧ್ಯಯನಗಳ ಪ್ರಕಾರ- ರಾಜಕೀಯ ಹಸ್ತಕ್ಷೇಪದಿಂದಾಗಿ ಪೋಲಿಸರು ಕಾರ್ಯನಿರ್ವಹಿಸುವುದೇ ಕಷ್ಟವಾಗಿಬಿಟ್ಟಿದೆ. ರಾಜ್ಯವೊಂದರಲ್ಲಿ ಪೋಲಿಸ್ ಸೂಪರಿಂಟೆಂಡೆಂಟ್ ಅನ್ನು 3 ತಿಂಗಳಿಗೊಮ್ಮೆ ಬದಲಿಸಲಾಗಿದೆ. ಪೋಲಿಸ್ ಅಧಿಕಾರಿಗಳಿಗೆ ನಿಶ್ಚಿತ ಅವಧಿಯವರೆಗೆ ಸ್ಥಳವೊಂದರಲ್ಲಿ ಕಾರ್ಯನಿರ್ವಹಿಸಲು ಬಿಟ್ಟರೆ, ಅವರು ತಮ್ಮ ಕೆಲಸವನ್ನು ಸೂಕ್ತವಾಗಿ, ನಿಷ್ಪಕ್ಷಪಾತವಾಗಿ ನಿರ್ವಹಿಸಬಲ್ಲರು. 1980ರ ರಾಷ್ಟ್ರೀಯ ಪೋಲಿಸ್ ಆಯೋಗದ ಶಿಫಾರಸ್ಸುಗಳು ಇಂದಿಗೂ ಜಾರಿಯಾಗಿಲ್ಲ. 1997ರ ಕಾರ್ಯಾಚರಣೆಯಲ್ಲಿ 1400 ಪೋಲಿಸರು ಸತ್ತಿದ್ದಾರೆ.

ಪೋಲಿಸ್ ವ್ಯವಸ್ಥೆಯಲ್ಲಿ ದೋಷಗಳಿವೆ. ಆದರೆ ಎಲ್ಲ ಪೋಲಿಸರೂ ಭ್ರಷ್ಟರಲ್ಲ. ಕಾನೂನು ಸಮ್ಮತವಲ್ಲದ, ರಾಜಕೀಯ ಹಿತಾಸಕ್ತಿಗಾಗಿ ಕೆಲಸ ಮಾಡುವ ಅತ್ಯುತ್ಸಾಹದಲ್ಲಿ ತಪ್ಪು ಮಾಡುವ ಅಧಿಕಾರಿಗಳನ್ನು ಶಿಕ್ಷಿಸಬೇಕು. ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿ ಹತ್ತಾರು ವರ್ಷಗಳಿಂದ ಇತ್ಯರ್ಥವಾಗದೆ ಬಿದ್ದಿವೆ. ಪ್ರಸ್ತುತ ಕ್ರಿಮಿನಲ್ ನ್ಯಾಯ ವ್ಯವಸ್ಥೆ ತೀವ್ರ ಒತ್ತಡದಲ್ಲಿದೆ. ಶಿಕ್ಷೆ ವಿಧಿಸುವಲ್ಲಿ ಆಗುವ ವಿಳಂಬ ಹಾಗೂ ಕಾನೂನಿನಲ್ಲಿನ ದೋಷಗಳಿಂದಾಗಿ ಪೋಲಿಸರು ಸಮರ್ಥವಾಗಿ ಕಾರ್ಯನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ. ಸರಿಯಾದ ಕೆಲಸಕ್ಕೆ ವ್ಯಕ್ತಿಯನ್ನು ಆಯ್ದು, ಆತನ ಮೇಲೆ ರಾಜಕೀಯ ಒತ್ತಡ ಹೇರದಿದ್ದರೆ, ಆತ ಸೂಕ್ತವಾಗಿ ಕಾರ್ಯನಿರ್ವಹಿಸಬಲ್ಲ.

ನಂತರ ದೇಶಕ್ಕೆ ಹೊಸ ಪೋಲಿಸ್ ವ್ಯವಸ್ಥೆಯನ್ನು ರೂಪಿಸಬೇಕಾದ ಅಗತ್ಯವಿತ್ತು. ಆದರೆ ಇಂದಿನ ವ್ಯವಸ್ಥೆ ಹಳೆಯ ವ್ಯವಸ್ಥೆಗಿಂತ ಕಠೋರವಾಗಿದೆ. ಆಳುವವರ ಕೈಗೂಸಾಗಿ ಇನ್ನಷ್ಟು ಶೋಷಣೆಗೆ ಕಾರಣವಾಗಿದೆ. ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಬೇರೆ ದಾರಿಯಿದ್ದಲ್ಲಿ ಯಾವ ನಾಗರೀಕನೂ ಪೋಲಿಸರ ಬಳಿ ಹೋಗಲಾರ. ಬಡವನೊಬ್ಬ ಪೋಲಿಸರನ್ನು ಸಮೀಪಿಸುವುದಿರಲಿ ಆತನ ಗಮನಕ್ಕೆ ತಾನು ಬರದಿದ್ದರೆ ಸಾಕು ಎನ್ನುತ್ತಾನೆ.

20 ವರ್ಷಗಳ ಹಿಂದೆ ಪೋಲಿಸ್ ವ್ಯವಸ್ಥೆಯ ದುಸ್ಥಿತಿಗೆ ಕಾರಣವೇನು ಎಂಬುದನ್ನು ಅಧ್ಯಯನ ಮಾಡಲು ರಾಷ್ಟ್ರೀಯ ಪೋಲಿಸ್ ಆಯೋಗವನ್ನು ನೇಮಿಸಲಾಗಿತ್ತು. ಅದರ ವರದಿಯನ್ನು ಜಾರಿಗೆ ತಂದಿದ್ದರೆ, ಪರಿಸ್ಥಿತಿ ಸ್ವಲ್ಪವಾದರೂ ಸುಧಾರಿಸುತ್ತಿತ್ತು. ದೇಶದ ಎಲ್ಲ ರಾಜ್ಯಗಳಿಂದ ಬಂದ ವರದಿಗಳನ್ನು ಸೇರಿಸಿ ಆಯೋಗ ನೀಡಿದ್ದ ವರದಿ ಅದ್ಭುತವಾಗಿತ್ತು. ಅದು ಇಂದಿಗೂ ದೂಳು ತಿನ್ನುತ್ತಾ, ಯಾರೂ ಕೇಳುವವರಿಲ್ಲದೆ ಬಿದ್ದಿದೆ.

ಪೋಲಿಸರ ಆಯ್ಕೆಯ ಸಮಯದಲ್ಲಿ ನಡೆಯುವ ಲಂಚ, ಶಿಫಾರಸ್ಸುಗಳಿಂದ ಹದ ತಪ್ಪುವಿಕೆ ಪ್ರಾರಂಭವಾಗುತ್ತದೆ. ರಾಜಕಾರಣಿಗಳ ಸಮೀಪವರ್ತಿಗಳಿಗೆ ಮೇಲ್ಬಡ್ತಿ ದೊರೆಯುತ್ತಿದೆ. ಇಂದಿಗೂ ಇಲಾಖೆಯಲ್ಲಿ ಒಂದೇ ಒಂದು ಬಡ್ತಿ ಸಿಗದ 20-25 ವರ್ಷ ಸೇವಾವಧಿ ಮುಗಿಸಿದ ಕಾನ್‌ಸ್ಟೇಬಲ್‌ಗಳಿದ್ದಾರೆ. ಹೊಸಬನೊಬ್ಬ ಇಲಾಖೆಗೆ ಸೇರಿದ ಕೆಲವೇ ವರ್ಷಗಳಲ್ಲಿ ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುತ್ತಾನೆ. ವ್ಯವಸ್ಥೆಯ ಅಂಗವಾಗುತ್ತಾನೆ. ಹೊಂದಿಕೊಳ್ಳದಾತ ಶಿಕ್ಷೆ ಎಂದು ಪದೇಪದೇ ವರ್ಗಾವಣೆಗೆ ತುತ್ತಾಗುತ್ತಾನೆ. ಕಡಿಮೆ ಸಂಬಳ, ವಸತಿ ಹೀನತೆ, ಅಪಘಾತ ಜೀವನಷ್ಟದ ವಿರುದ್ಧ ಸುರಕ್ಷತೆಯ ಅಭಾವ, ಒತ್ತಡ, ಅಪರಾಧ ಶೋಧನೆಯಲ್ಲಿ ವಿಜ್ಞಾನದ ಬಳಕೆಯಿಲ್ಲದಿರುವಿಕೆ, ಯಶಸ್ಸು ಸಿಗದೆ ಅಭದ್ರತೆ ಇದೆಲ್ಲದರಿಂದಾಗಿ ಸಾಮಾನ್ಯ ಪೋಲಿಸನೊಬ್ಬ 'ಗಾಡ್‌ಫಾದರ್' ಇಲ್ಲದಿದ್ದರೆ ಸಮಸ್ಯೆಗಳಿಂದ ಹೊರಬರುವುದು ಸಾಧ್ಯವೇ ಇಲ್ಲ.

ಪೋಲಿಸರ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವಕ್ಕಾಗಿ ಧರ್ಮವೀರ ಆಯೋಗವು 'ರಾಜ್ಯ ಸಂರಕ್ಷಣಾ ಆಯೋಗ'ದ ಸ್ಥಾಪನೆ ಮಾಡಬೇಕೆಂದು ಒತ್ತಾಯಿಸಿತ್ತು. ಸರ್ಕಾರವು ಅನೇಕ ಕಾರಣಗಳಿಂದಾಗಿ ಆ ಸಲಹೆಯನ್ನು ಒಪ್ಪಲಿಲ್ಲ. ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ವರ್ಷವೊಂದಕ್ಕೆ ಬರುವ ಹಕ್ಕು ಉಲ್ಲಂಘನಾ ದೂರುಗಳಲ್ಲಿ ಮುಕ್ಕಾಲು ಭಾಗ ಪೋಲಿಸರಿಗೆ ಸಂಬಂಧಿಸಿರುತ್ತವೆ. ಎಲ್ಲ ರಾಜ್ಯಗಳೂ ರಾಜ್ಯ ಮಾನವ ಹಕ್ಕು ಸಂರಕ್ಷಣಾ ಆಯೋಗವನ್ನು ಸ್ಥಾಪಿಸಬೇಕೆಂದು ಒತ್ತಾಯವಿದ್ದರೂ ಅನೇಕ ರಾಜ್ಯಗಳು ಅದನ್ನು ಮನ್ನಿಸಿಲ್ಲ. ಇದಕ್ಕೆ ಮುಖ್ಯ ಕಾರಣ ಉನ್ನತ ಅಧಿಕಾರಿಗಳಿಗೆ ಹಾಗೂ ರಾಜಕಾರಣಿಗಳಿಗೆ ಹಕ್ಕು ರಕ್ಷಣೆಯ ಬಗ್ಗೆ ಇರುವ ನಿಷ್ಕಾಳಜಿ. ಎಲ್ಲಿಯ ತನಕ ಪೋಲಿಸರು ರಾಜಕೀಯ ಪ್ರಭಾವದಿಂದ ಮುಕ್ತರಾಗುವುದಿಲ್ಲವೋ, ಅಲ್ಲಿಯ ತನಕ ಪೋಲಿಸ್ ವ್ಯವಸ್ಥೆ ಸುಧಾರಿಸುವುದು ಸಾಧ್ಯವಿಲ್ಲ. ಇದನ್ನೇ ಕುಲದೀಪ್ ನಯ್ಯರ್ ಹೇಳುತ್ತಾರೆ 'ಜವಾಬ್ದಾರಿಯುತ ಹಾಗೂ ಸ್ಪಂದಿಸಬಲ್ಲ ಪೋಲಿಸ್‌ಬಲಕ್ಕೆ ಪರ್ಯಾಯಗಳಿಲ್ಲ. ಪೋಲಿಸರಿಗೆ ಆತ್ಮ ವಿಶ್ವಾಸ ತುಂಬಿದಲ್ಲಿ, ಅವರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬಲ್ಲರು.'

ಹಿಂದಿನ ಗೃಹಮಂತ್ರಿ ಇಂದ್ರಜಿತ್ ಗುಪ್ತಾ ಪೋಲಿಸ್ ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಎಲ್ಲ ರಾಜ್ಯಗಳಿಗೂ ಪತ್ರ ಬರೆದಿದ್ದರು. ಯಾರೂ ಉತ್ತರಿಸುವ ತೊಂದರೆ ತೆಗೆದುಕೊಳ್ಳಲಿಲ್ಲ. ಇದರಿಂದ ರಾಜಕಾರಣಿಗಳಿಗೆ ಸಾರ್ವಜನಿಕ ಕಾಳಜಿ ಎಷ್ಟಿದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಕ್ರಿಮಿನಲ್ ದಾಖಲೆ ಇರುವ 150ಕ್ಕೂ ಹೆಚ್ಚು ಜನ ಇಂದು ಸಂಸತ್ ಸದಸ್ಯರಾಗಿದ್ದಾರೆ. ಇಂತಹವರು ದಕ್ಷ ಪೋಲಿಸ್ ವ್ಯವಸ್ಥೆ ಇದ್ದಲ್ಲಿ ಕಂಬಿ ಎಣಿಸುತ್ತಿದ್ದರು.

ಪ್ರಭಾವೀ ಮಧ್ಯಮವರ್ಗದ ಜನ ಪೋಲಿಸ್ ಸುಧಾರಣೆಗಾಗಿ ದನಿ ಎತ್ತಬೇಕು. ಹೊಸಿಲಿನಲ್ಲಿ ನಿಂತಿರುವ ತೋಳ ಯಾವುದೇ ಕ್ಷಣದಲ್ಲಿ ನಿಮ್ಮ ಮೇಲೆ ಎರಗಬಹುದು. ನಮ್ಮ ರಕ್ಷಣೆಗೆಂದು ಸೃಷ್ಟಿಯಾದದ್ದು ನಮ್ಮನ್ನೇ ನುಂಗಬಹುದು. ರಾಜಕಾರಣಿಗಳು ಜನರಿಗೆ ಬದ್ಧರು. ಅವರ ಮೇಲೆ ಸುಧಾರಣೆಗಾಗಿ ಒತ್ತಡ ಹೇರದಿದ್ದಲ್ಲಿ, ಪೋಲಿಸ್ ವ್ಯವಸ್ಥೆ ಇನ್ನಷ್ಟು ಹದಗೆಡುತ್ತದೆ.

ಅದಕ್ಕಿಂತ ಮೊದಲು ನೀವೆಲ್ಲ ಈ ಬಗ್ಗೆ ಮಾತನಾಡಬೇಕು.

■

ನೇರ ಮಾರಾಟ ಜಾಲ
ಇನ್ನೊಂದು ಆದಾಯದ ಮೂಲ

ಭಾರತದಲ್ಲಿ ಇದೀಗ ತಾನೇ ಡೈರೆಕ್ಟ್ ಮಾರ್ಕೆಟಿಂಗ್ ಅಲೆ ಎದ್ದಿದೆ. ಮೇಲ್ನೋಟಕ್ಕೆ 'ಮನಿ ಚೈನ್' ಥರ ಎನಿಸಿದರೂ ನೇರ ಮಾರಾಟ ಜಾಲ ಒಂದು ಸಾಚಾ ಮಾರಾಟ ಪದ್ಧತಿ. 'ಮನಿ ಚೈನ್' ತರಹ ಟ್ರ್ಯಾಪ್ ಅಲ್ಲ. ಈ ಮಾರಾಟ ತಂತ್ರದ ತತ್ವವಿಷ್ಟೇ "ನೀವು ನಮ್ಮ ಗ್ರಾಹಕರಾಗಿ. ನಿಮ್ಮ ಮಿತ್ರರನ್ನೂ ನಮ್ಮ ಗ್ರಾಹಕರನ್ನಾಗಿ ಮಾಡಿ."

ನೀವು ಖಂಡಿತ ಬೆರಗಾಗುತ್ತೀರಿ.

ಶಫಾಲಿ ನಿಗಮ್ ಎಂಬ ಮಹಿಳೆ ಪ್ರತಿ ತಿಂಗಳು ಸುಮಾರು 1 ಲಕ್ಷ ರೂಪಾಯಿ ಆದಾಯ ಗಳಿಸುತ್ತಾಳೆ. ಗಂಡನನ್ನು 'ಗೋಲ್ಡ್ ಕಾನ್ಫರೆನ್ಸ್' ಗಾಗಿ ಸಿಂಗಾಪುರಕ್ಕೆ ಕರೆದೊಯ್ಯುತ್ತಾಳೆ. ಊರಲ್ಲಿ ಓಡಾಡುವುದು ಏರ್ ಕಂಡೀಶನ್ಡ್ ಕಾರಿನಲ್ಲಿ. ಎರಡೇ ವರ್ಷದ ಮೊದಲು ಆಕೆ ದೆಹಲಿಯ ಒಂದು ಸರಕಾರಿ ಶಾಲೆಯಲ್ಲಿ ಮಾಮೂಲಿ ಶಿಕ್ಷಕಿಯಾಗಿದ್ದಳು!

ಆಕೆ ಲಾಟರಿ ಹೊಡೆದು ಏಕಾಏಕಿ ಶ್ರೀಮಂತೆಯಾಗಲಿಲ್ಲ ಅಥವಾ ಮಾಡಬಾರದ ಕೆಲಸದಲ್ಲಿ ತೊಡಗಿ ಅಸಹ್ಯದ ಹಣ ಗಳಿಸಲಿಲ್ಲ. ಸ್ವಲ್ಪ ಬುದ್ಧಿವಂತಿಕೆ ಉಪಯೋಗಿಸಿ ನಿಷ್ಠೆಯಿಂದ ಕೆಲಸ ಮಾಡಿದಳು, ಅಷ್ಟೇ. ಆಕೆ ಹಾಕಿದ ಕೇವಲ 600 ರೂಪಾಯಿ ಬಂಡವಾಳ ಇಂದು ತಿಂಗಳಿಗೆ ಲಕ್ಷ ರೂಪಾಯಿ ಬಡ್ಡಿ ಗಳಿಸುತ್ತಿದೆ!

ಇದ್ಯಾವುದಪ್ಪ ಈ ಬಡ್ಡಿ ವ್ಯವಹಾರ ಎಂದು ಅನುಮಾನಾಸ್ಪದವಾಗಿ ನೋಡುತ್ತಿದ್ದೀರಾ? ಖಂಡಿತ ಇದು ಕಳ್ಳ ವ್ಯವಹಾರವಲ್ಲ, ಸೀದಾಸಾದಾ ಪಾರ್ಟ್‌ಟೈಂ ಜಾಬ್! ಬಿಡುವಿನ ವೇಳೆ ವ್ಯಾಪಾರ! ಡೈರೆಕ್ಟ್ ಮಾರ್ಕೆಟಿಂಗ್.

ಇದೀಗ ಭಾರತದಲ್ಲಿ 'ಡೈರೆಕ್ಟ್ ಮಾರ್ಕೆಟಿಂಗ್' ಟ್ರೆಂಡ್ ಆರಂಭವಾಗಿದೆ. ವರ್ಷಕ್ಕೆ ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸುವ ವಿದೇಶಿ ಕಂಪನಿಗಳು ದೇಶದಲ್ಲಿ ಈ ಹೊಸ ಅಲೆ ಎಬ್ಬಿಸಿವೆ. ಬಿಡುವಿನ ವೇಳೆಯಲ್ಲಿ ಒಂದಷ್ಟು ಹಣ ಸಂಪಾದಿಸಲು ಇಚ್ಛಿಸುವವರು ಹಾಗೂ ನಿರುದ್ಯೋಗಿಗಳು ಈ ಕಂಪನಿಗಳ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದಾರೆ.

ಆಮ್‌ವೇ, ಓರಿಫ್ಲೇಮ್, ಟೂಪರ್‌ವೇರ್, ಏವನ್ ಅಂಥ ಕಂಪನಿಗಳಲ್ಲಿ ಪ್ರಮುಖವಾದವು. ಶಫಾಲಿ ನಿಗಮ್, ಓರಿಫ್ಲೇಮ್ ಕಂಪನಿಯ ಏಜೆಂಟ್. ಹಾಗೆಂದು ಆಕೆ ಕಂಪನಿಯ ಉದ್ಯೋಗಿಯಲ್ಲ. ನಿಗದಿತ ಅವಧಿಯವರೆಗೆ ಕೆಲಸ ಮಾಡಬೇಕಾಗಿಲ್ಲ. ತನ್ನ ಬಿಡುವಿನ ವೇಳೆಯಲ್ಲಿ ಮನಸ್ಸಿದ್ದರೆ... ಕಂಪನಿಯ ಉತ್ಪನ್ನಗಳನ್ನು ಹಂಚಿಕೆ ಮಾಡಬಹುದು.

ಆಕೆಯಷ್ಟೇ ಏನು, ಅರ್ಚನಾ ನಿಗಮ್ ಎಂಬ ಆಕೆಯ ಸಂಬಂಧಿ ಶಫಾಲಿಗಿಂತ ದೊಡ್ಡ ಏಜೆಂಟ್. ತಿಂಗಳಿಗೆ 2.5 ಲಕ್ಷ ರೂಪಾಯಿ ಗಳಿಸುತ್ತಾಳೆ. ವರ್ಷಕ್ಕೆ ಎರಡು ಬಾರಿ ಆಕೆಗೆ ಗಂಡನೊಂದಿಗೆ ವಿದೇಶ ಪ್ರವಾಸ ಯೋಗ.

ಇವರಿಬ್ಬರೇ ಅಲ್ಲ, ಇಂದು ದೇಶದ ಎಲ್ಲಾ ಮಹಾನಗರಗಳಲ್ಲೂ ಇಂಥ ನೇರ ಮಾರಾಟ ಜಾಲದ ಏಜೆಂಟ್‌ಗಳು ಇದ್ದಾರೆ. ರಾಜ್ಯದಲ್ಲಿ ಈಗ ತಾನೆ ಈ ಅಲೆ ಹರಡುತ್ತಿದೆ. ನಿಮ್ಮ ಊರಿಗೂ ವಿಸ್ತರಿಸುತ್ತಿದೆ.

ಈ ನೇರ ಮಾರಾಟ ಜಾಲದ ಕಂಪನಿಗಳು ಎಂದರೆ ಸಣ್ಣ ಪುಟ್ಟ ಕಂಪನಿಗಳು ಎಂದು ಕೊಳ್ಳಬೇಡಿ. ಟೋಪಿ ಕಂಪನಿ, ಬ್ಲೇಡ್ ಕಂಪನಿ ಎಂದು ಅಂಡರ್ ಎಸ್ಟಿಮೇಟ್ ಮಾಡಬೇಡಿ.

'ಆಮ್‌ವೇ' 7 ಬಿಲಿಯನ್ ಅಮೆರಿಕನ್ ಡಾಲರ್ ವಾರ್ಷಿಕ ವಹಿವಾಟು ನಡೆಸುವ ದೈತ್ಯಕಂಪನಿ. ಈ ವರ್ಷ ಮೇ ತಿಂಗಳಲ್ಲಿ ಭಾರತಕ್ಕೆ ಕಾಲಿಟ್ಟ ಈ ಕಂಪನಿಗೆ ದೇಶದಲ್ಲಿ ಈಗಾಗಲೇ 30 ಸಾವಿರ ವಿತರಕರು ಸಿಕ್ಕಿದ್ದಾರೆ. ಕಂಪನಿಯ ಅಂದಾಜು ನಿಜವಾದರೆ ಮುಂದಿನ ವರ್ಷದೊಳಗೆ ಈ ಸಂಖ್ಯೆ 3 ಲಕ್ಷಕ್ಕೆ ಏರುತ್ತದೆ. ಆ ಪ್ರಮಾಣದಲ್ಲಿ ಕಂಪನಿ ಬೆಳೆಯುತ್ತಿದೆ.

ಹಾಗೆಂದು ಆಮ್‌ವೇಯೇ ಭಾರತಕ್ಕೆ ಮೊದಲು ಬಂದ ಡೈರೆಕ್ಟ್ ಸೆಲ್ಲಿಂಗ್ ಕಂಪನಿಯಲ್ಲ. ಓರಿಫ್ಲೇಮ್, ಟೂಪರ್‌ವೇರ್ ಹಾಗೂ ಏವನ್‌ಗಳು ಕಳೆದ ವರ್ಷವೇ ಭಾರತದಲ್ಲಿ ತಳವೂರಿದ್ದವು. ಆದರೆ ಆಮ್‌ವೇ ಈ ಎಲ್ಲ ಕಂಪನಿಗಳಿಗಿಂತ ದೊಡ್ಡ ಕಂಪನಿಯಾದ್ದರಿಂದ ಹಾಗೂ ವ್ಯಾಪಕ ಪ್ರಚಾರ ಕೈಗೊಂಡಿದ್ದರಿಂದ ಅಪಾರ ಏಜೆಂಟರನ್ನು ಸೆಳೆದುಕೊಳ್ಳುತ್ತಿದೆ.

ಏನಿದು ಡೈರೆಕ್ಟ್ ಮಾರ್ಕೆಟಿಂಗ್?

ಇದೊಂದು ಮಾರಾಟ ತಂತ್ರ. ಸಾಮಾನ್ಯವಾಗಿ ಕಂಪನಿಗಳು ಉತ್ಪಾದಿಸಿದ ಉತ್ಪನ್ನಗಳು ಗ್ರಾಹಕರನ್ನು ತಲುಪುವುದು ಹೇಗೆ? ಮಧ್ಯವರ್ತಿ ವ್ಯಾಪಾರಸ್ಥರ ಮೂಲಕ ತಾನೇ? ಡೈರೆಕ್ಟ್ ಮಾರ್ಕೆಟಿಂಗ್ ಕಂಪನಿಗಳು ಈ ಮಧ್ಯವರ್ತಿ ವ್ಯಾಪಾರಸ್ಥರನ್ನು ಕೈಬಿಟ್ಟು ನೇರವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ತಲುಪಿಸುತ್ತವೆ. ನೇರ ಮಾರಾಟ ಜಾಲವನ್ನು ಸ್ಥಾಪಿಸುತ್ತವೆ. ಇದರಿಂದ ಮಧ್ಯವರ್ತಿಗಳ ಕಮೀಷನ್‌ನಿಂದ ಗ್ರಾಹಕರೂ ಪಾರು, ಕಂಪನಿಯೂ ಬಚಾವ್.

ಈ ಕಂಪನಿಗಳು ನೇರವಾಗಿ ಹೇಗೆ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸುತ್ತವೆ?

ಇದೊಂದು ಕುತೂಹಲಕರ ವಿಷಯ. ಒಂದೊಂದು ಕಂಪನಿ ಒಂದೊಂದು ಜಾಣತನವನ್ನು ಉಪಯೋಗಿಸುತ್ತದೆ. ಈ ಕೆಳಗೆ ಅಂಥ ಕೆಲವು ಉದಾಹರಣೆಗಳಿವೆ, ಗಮನಿಸಿ.

ಆಮ್‌ವೇ ತಂತ್ರ

ಆಮ್‌ವೇ ತನ್ನ ಪ್ರತಿ ಗ್ರಾಹಕರನ್ನು ಒಬ್ಬೊಬ್ಬ ಏಜೆಂಟ್ ಆಗಿ ಬೆಳೆಸುತ್ತದೆ. ಪ್ರತಿ ಗ್ರಾಹಕ ಇನ್ನೊಂದಿಷ್ಟು ಗ್ರಾಹಕರನ್ನು ಒದಗಿಸುತ್ತಾನೆ. ಆ ಗ್ರಾಹಕರು ಮತ್ತಷ್ಟು ಗ್ರಾಹಕರನ್ನು ಒದಗಿಸುತ್ತಾರೆ. ಅವರು ಮತ್ತಷ್ಟು ಮತ್ತಷ್ಟು ಮತ್ತಷ್ಟು ಗ್ರಾಹಕರನ್ನು ಕಂಪನಿಗೆ ಪರಿಚಯಿಸುತ್ತಾರೆ. ಹೀಗೆ ಗ್ರಾಹಕರ ಸಾಮ್ರಾಜ್ಯ ಬೆಳೆಯುತ್ತದೆ. ಹೊಸ ಗ್ರಾಹಕರನ್ನು ಪರಿಚಯಿಸಿದ್ದಕ್ಕೆ ಪ್ರತಿ ಗ್ರಾಹಕರಿಗೆ ಕಮೀಷನ್ ದೊರೆಯುತ್ತದೆ. ಯಾವ ಪ್ರಮಾಣದಲ್ಲಿ ಎನ್ನುವುದಕ್ಕೆ ಶಫಾಲಿ ನಿಗಮ್‌ನಂಥವರು ಉದಾಹರಣೆ. ಇದು ಬಿಡುವಿನ ವೇಳೆ ಉಳ್ಳವರಿಗೆ ಹಾಗೂ ನಿರುದ್ಯೋಗಿಗಳಿಗೆ ಉತ್ತಮ ಸೈಡ್ ಬಿಸಿನೆಸ್. ಆರಂಭಿಕ ಬಂಡವಾಳ ಹೂಡಿಕೆ 4200 ರೂಪಾಯಿ.

ಟೂಪರ್ ವೇರ್ ತಂತ್ರ

ಟೂಪರ್ ವೇರ್ ಕಂಪನಿ ಪ್ಲಾಸ್ಟಿಕ್ ಡಬ್ಬ, ಕಂಟೇನರ್ ಮುಂತಾದವನ್ನು ಉತ್ಪಾದಿಸುತ್ತದೆ. ಇದು ಮಹಿಳಾ ಗ್ರಾಹಕರ ನೇರ ಬಂಡವಾಳ

ಮಾರಾಟ ಜಾಲವನ್ನು ಸೃಷ್ಟಿಸುತ್ತದೆ. ಇದರ ಮಾರಾಟ ತಂತ್ರವನ್ನು 'ಪಾರ್ಟಿ ಪ್ಲಾನ್' ಎನ್ನುತ್ತಾರೆ.

ಕಂಪನಿಯ ಉತ್ಪನ್ನಗಳಿಗೆ ಗ್ರಾಹಕರನ್ನು ಒದಗಿಸಲು ಒಪ್ಪಿಕೊಳ್ಳುವ ಮಹಿಳೆ ತನ್ನ ಮನೆಯಲ್ಲಿ ಒಂದು ಪಾರ್ಟಿ ಏರ್ಪಡಿಸುತ್ತಾಳೆ. ಅಲ್ಲಿ ಟೂಪರ್‌ವೇರ್ ಕಂಪನಿಯ ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತದೆ. ಸ್ಥಳದಲ್ಲೇ ಅವುಗಳಿಗೆ ಆರ್ಡರನ್ನು ಪಡೆಯಲಾಗುತ್ತದೆ. ನಂತರ ಆ ಗ್ರಾಹಕರಲ್ಲಿ ಆಸಕ್ತಿ ಇರುವವರು ಅದೇ ರೀತಿಯ 'ಪಾರ್ಟಿ ಪ್ಲಾನ್' ಮೂಲಕ ಹೊಸ ಗ್ರಾಹಕರನ್ನು ಪರಿಚಯಿಸಬಹುದು. ಆಕರ್ಷಕ ಕಮೀಷನ್ ದೊರೆಯುತ್ತದೆ.

ಇದೇ 'ಪಾರ್ಟಿ ಪ್ಲಾನ್' ಉಪಯೋಗಿಸಿ ಬೆಂಗಳೂರಿನ ಸುತ್ತಮುತ್ತಲಿನ ರೆಸಾರ್ಟ್ ಕಂಪನಿಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಆದರೆ ಇವುಗಳದ್ದು ಡೈರೆಕ್ಟ್ ಮಾರ್ಕೆಟಿಂಗ್ ಅಲ್ಲ. ಇನ್ನೊಂದು ರೀತಿಯ ವ್ಯವಸ್ಥಿತ ಮಾರಾಟ ಜಾಲ.

ಓರಿಫ್ಲೇಮ್ ತಂತ್ರ

ಓರಿಫ್ಲೇಮ್ ಸ್ವೀಡನ್ನಿನ ಒಂದು ಕಂಪನಿ. ವರ್ಷಕ್ಕೆ 600 ಮಿಲಿಯನ್ ಅಮೆರಿಕನ್ ಡಾಲರ್‌ನಷ್ಟು ಬೃಹತ್ ವ್ಯವಹಾರ ನಡೆಸುತ್ತದೆ.

ಆಸಕ್ತ ಮಹಿಳೆಯರು ಆರಂಭಿಕವಾಗಿ 900 ರೂ. ನೀಡಿ ಏಜೆನ್ಸಿ ಪಡೆಯಬೇಕು. ಇವರಿಗೆ ಕಂಪನಿ ತರಬೇತಿ ನೀಡುತ್ತದೆ. ಇವರು ತಮ್ಮ ಸ್ನೇಹಿತೆಯರನ್ನು ಹೊಸ ಏಜೆಂಟರನ್ನಾಗಿ ಮಾಡಿದರೆ ಶೇ 25 ರಷ್ಟು ಕಮೀಷನ್. ಈ ಕಂಪನಿಯ ಏಜೆನ್ಸಿಯಿಂದಲೇ ಶಫಾಲಿ ಇಂದು ಲಕ್ಷಾಂತರ ರೂ. ಗಳಿಸುತ್ತಿರುವುದು.

ಒಟ್ಟೋ ಶೈಲಿ

ನೇರ ಮಾರ್ಕೆಟಿಂಗ್‌ನಲ್ಲಿ 'ಒಟ್ಟೋ' ಕಂಪನಿಯದು ಕ್ಯಾಟಲಾಗ್ ಶೈಲಿ.

ಒಂದು ವರ್ಣರಂಜಿತ ಪುಸ್ತಕದಲ್ಲಿ ವಿವಿಧ ಉತ್ಪನ್ನಗಳ ಚಿತ್ರ, ಬೆಲೆ, ವಿಶೇಷತೆಯನ್ನು ಮುದ್ರಿಸಲಾಗಿರುತ್ತದೆ. ಅವಕ್ಕೆಲ್ಲ ಒಂದೊಂದು ಕೋಡ್ ನಂಬರ್ ಇರುತ್ತದೆ.

ಸಮೀಪದ ಒಟ್ಟೋ ಏಜೆಂಟರು ಅಥವಾ ಸ್ವತಃ ಕಂಪನಿಗೆ ಆರ್ಡರ್ ಫಾರಂ ಹಾಗೂ ಡಿಡಿ ಕಳಿಸಿದರೆ ಬಯಸಿದ ವಸ್ತು ಮನೆ ಬಾಗಿಲಿಗೆ ಬರುತ್ತದೆ.

ಈ ವರ್ಣರಂಜಿತ ಕ್ಯಾಟಲಾಗ್‌ಗಳನ್ನು ಕಂಪನಿಯಿಂದ 50 ಅಥವಾ 100 ರೂಪಾಯಿ ನೀಡಿ ಪಡೆಯಬಹುದು.

ಏವನ್ ತಂತ್ರ

ಅಮೆರಿಕದ ಈ ಕಂಪನಿ ವಾರ್ಷಿಕ 5 ಬಿಲಿಯನ್ ಡಾಲರ್ ವ್ಯವಹಾರ ನಡೆಸುತ್ತದೆ. ಸೌಂದರ್ಯ ಪ್ರಸಾದನಗಳು ಕಂಪನಿಯ ಉತ್ಪನ್ನಗಳು.

ಆಸಕ್ತ ಮಹಿಳೆಯರು 375 ರೂ. ನೀಡಿ ಕಂಪನಿಯ ಗ್ರಾಹಕರಾಗಬೇಕು.

ಅವರಿಗೆ ಕಂಪನಿ 375 ರೂ. ಬೆಲೆಯ ಸೌಂದರ್ಯ ಪ್ರಸಾದನಗಳನ್ನು ಕಳಿಸಿಕೊಡುತ್ತದೆ. ಜೊತೆಗೆ ತರಬೇತಿ ನೀಡಿ ಸೌಂದರ್ಯ ಸಲಹೆಗಾರ್ತಿಯರನ್ನಾಗಿ ಮಾಡುತ್ತದೆ. ಈ ಸೌಂದರ್ಯ ಸಲಹೆಗಾರ್ತಿಯರು ತಮ್ಮ ಜೊತೆಗಾರ್ತಿಯರಿಗೆ ಕಂಪನಿಯ ಉತ್ಪನ್ನಗಳನ್ನು ಮಾರುತ್ತಾರೆ. ಇದಕ್ಕೆ ಕಮೀಷನ್ ಮತ್ತು ಬೋನಸ್ ದೊರೆಯುತ್ತದೆ. ನಂತರ ಇವರು ಪರಿಚಯಿಸಿದ ಹೊಸ ಗ್ರಾಹಕರೂ ಸೌಂದರ್ಯ ಸಲಹೆಗಾರ್ತಿಯರಾಗಿ ಬಿಡುವಿನ ವೇಳೆಯ ವ್ಯಾಪಾರ ಮಾಡಬಹುದು.

ಮನಿ ಚೈನ್ ಅಲ್ಲ

ಈ ವ್ಯವಹಾರ ನೋಡಿದರೆ ಹಿಂದೆಂದೋ ನೀವು ಟ್ರ್ಯಾಪ್ ಆಗಿ ಹಣ ಕಳೆದುಕೊಂಡ 'ಮನಿಚೈನ್' ನೆನಪಾಗಬಹುದು. ಈ ನೇರ ಮಾರಾಟ ಜಾಲ ಅದೇ ಚೈನ್ ಪದ್ಧತಿಯಲ್ಲಿ ವಿಸ್ತಾರ ಹೊಂದಿದರೂ ಮನಿ ಸರ್ಕ್ಯುಲೇಷನ್ ಸ್ಕೀಮಿನ ಹಾಗೆ ಬೋಗಸ್ ಅಲ್ಲ.

ಮನಿ ಚೈನ್ ನಿಮಗೆ ಗೊತ್ತಿರಬಹುದು. ಅಲ್ಲಿ ಆರಂಭಿಕವಾಗಿ ಎಷ್ಟೋ ಹಣ ತುಂಬಬೇಕು. ಉದಾಹರಣೆ : 1000 ಅಂದುಕೊಳ್ಳೋಣ. ಆಗ ಆತನಿಗೆ 3 ಫಾರಂ ಬರುತ್ತದೆ. ಅವುಗಳನ್ನು ಆತ ಇನ್ನೂ ಮೂವರಿಗೆ ತಲಾ 1000ದಂತೆ ಮಾರಿ 2000 ರೂಪಾಯಿಯನ್ನು ಕಂಪನಿಗೆ ಕಳಿಸಬೇಕು. ಆ ಮೂವರು ಸಹ ಅದೇ ರೀತಿ ತಲಾ ಇನ್ನೂ ಮೂವರಿಗೆ ಮಾರಬೇಕು. ಹೀಗೆ ಚೈನ್ ಮುಂದುವರಿಯುತ್ತದೆ. ಚೈನ್ ಮುಂದುವರಿದಂತೆಲ್ಲ ಫಾರಂನಲ್ಲಿ ಹಳಬರ ಹೆಸರು ಮೇಲೆ ಏರುತ್ತಾ ಹೋಗುತ್ತದೆ. ಹೆಸರು ಮೇಲಕ್ಕೆ ಏರಿದಂತೆ ಸಾವಿರ, ಲಕ್ಷಗಟ್ಟಲೇ ಹಣ ಬರುತ್ತಾ ಹೋಗುತ್ತದೆ.

ಆದರೆ ಈ ಚೈನಿಗೆ ಸಿಕ್ಕಿ ನಷ್ಟ ಹೊಂದಿದವರೇ ಅಧಿಕ. ಏಕೆಂದರೆ ಇಲ್ಲಿ ಆರಂಭಿಕವಾಗಿ ಹೂಡುವ 1000 ರೂಪಾಯಿಗೆ ಪ್ರತಿಫಲವಾಗಿ ಏನೂ ದೊರೆಯುವುದಿಲ್ಲ. ಆದ್ದರಿಂದ ಬಂದ 3 ಫಾರಂಗಳನ್ನು ಮಾರಲು ಸಾಧ್ಯವಾಗಲಿಲ್ಲ ಎಂದಾದರೆ ಮೊದಲು ಹೂಡಿದ 1000 ರೂ. ನಷ್ಟವೇ ತಾನೇ?

ಆದರೆ, ಡೈರೆಕ್ಟ್ ಮಾರ್ಕೆಟಿಂಗ್ ಅಂದರೆ ಹಾಗಲ್ಲ. ಇಲ್ಲಿ ಆರಂಭಿಕವಾಗಿ ನೀಡುವ ಮೊತ್ತಕ್ಕೆ ಸಮನಾದ ಸರಕು ಗ್ರಾಹಕನ ಕೈಗೆ ಬಂದು ಬಿಡುತ್ತದೆ. ನಂತರ ಹೊಸ ಗ್ರಾಹಕನನ್ನು ಪರಿಚಯಿಸಿದ್ದಕ್ಕೆ ಬರುವುದು ಕಮೀಷನ್. ಅಂದರೆ ಒಂದು ವೇಳೆ ಹೊಸ ಗ್ರಾಹಕರನ್ನು ಪರಿಚಯಿಸಲು ಸಾಧ್ಯವಾಗಲಿಲ್ಲ ಎಂದರೂ ಗ್ರಾಹಕನಿಗೆ ನಷ್ಟವೇನೂ ಆಗುವುದಿಲ್ಲ. ಏಕೆಂದರೆ ಆತ ನೀಡಿದ ಹಣಕ್ಕೆ ಆಗಲೇ ಸಮ ಮೊತ್ತದ ಸರಕು ಆತನ ಕೈಗೆ ಬಂದಿರುತ್ತದೆ ತಾನೇ?

ಈ ನೇರ ಮಾರಾಟ ಜಾಲದ ಪ್ರಾಮಾಣಿಕ ತತ್ವ ಇಷ್ಟೇ -

''ನೀವು ನಮ್ಮ ಗ್ರಾಹಕರಾಗಿ

ನಿಮ್ಮ ಮಿತ್ರರನ್ನು ನಮ್ಮ ಗ್ರಾಹಕರನ್ನಾಗಿ ಮಾಡಿ''.

ಇದಕ್ಕೆ ನಿಮಗೆ ಕಮೀಷನ್ ನೀಡುತ್ತೇವೆ. ಎಂಬುದು ಆಕರ್ಷಣೆ.

ಹೇಳಿ ವ್ಯವಹಾರ ಸಾಚಾ ಅಲ್ಲವೇ? ಗ್ರಾಹಕರಿಗೆ ಲಾಭವಲ್ಲವೇ?

'ಬಿಸಿಲ' ಬದುಕು ಹೆಗ್ಗಳಿಕೆ

ಭಾರತದಲ್ಲಿ ಇದೀಗ ತಾನೆ ಆರಂಭವಾದ ನೇರ ಮಾರಾಟ ಯೋಜನೆಯನ್ನು ಈ ನಿಮ್ಮ 'ಬಿಸಿಲ ಬದುಕು' ಪತ್ರಿಕೆ ಕೂಡ ಅನುಷ್ಠಾನಕ್ಕೆ ತರುತ್ತಿದೆ. ಇದರಿಂದ ಖಂಡಿತ ನಿಮಗೂ ಲಾಭ. ಪತ್ರಿಕೆಗೂ ಲಾಭ. ಈ ಪರಸ್ಪರ ಲಾಭದಾಯಕ ಯೋಜನೆಯನ್ನು ಅಳವಡಿಸುತ್ತಿರುವ ಪ್ರಥಮ ಪತ್ರಿಕೆ ಎಂಬ ಹೆಗ್ಗಳಿಕೆ 'ಬಿಸಿಲ ಬದುಕು' ಪತ್ರಿಕೆಯದು. ಯಶಸ್ವಿಗೊಳಿಸುವ ಹೊಣೆ ನಿಮ್ಮದು. ವಿವರಗಳಿಗೆ ಇನ್ನೊಂದು ಬಾಕ್ಸ್ ನೋಡಿ.

ಇಂಗ್ಲೀಷ್ ಪತ್ರಿಕೆಗಳು ತಮ್ಮ ಚಂದಾದಾರರಿಗೆ ಅನೇಕ ಆಕರ್ಷಕ ಬಹುಮಾನಗಳನ್ನು ನೀಡುತ್ತಿವೆ. (ಆದರೆ ಕನ್ನಡದಲ್ಲಿ ಅಂಥ ಪ್ರಯತ್ನ ಕಡಿಮೆ.) ಔಟ್‌ಲುಕ್ ತನ್ನ ಹೊಸ ಚಂದಾದಾರರಿಗೆ ಬ್ಯಾಟರಿ, ಕ್ಯಾಮರಾ, ಇಲೆಕ್ಟ್ರಿಕ್ ಶೇವಿಂಗ್ ಸೆಟ್ ನೀಡಿದರೆ, ಇಂಡಿಯಾ ಟುಡೆ ಪತ್ರಿಕೆ ಕ್ಯಾಶ್ ಡಿಸ್ಕೌಂಟ್ ನೀಡುತ್ತಿದೆ. ಡೈರಿಯಂತಹ ಪ್ರೋತ್ಸಾಹಕ ಉಡುಗೊರೆ ನೀಡುವ ಪತ್ರಿಕೆಗಳೂ ಅನೇಕ ಇವೆ. ರೀಡರ್ಸ್ ಡೈಜೆಸ್ಟ್ ಅಂತಹ ಒಂದು ಪತ್ರಿಕೆ.

ಈ ಯೋಜನೆಗಳಿಂದ ಪತ್ರಿಕೆ ಹಾಗೂ ಓದುಗರ ನಡುವೆ ನೇರ ವ್ಯಾಪಾರ ನಡೆಯುತ್ತದೆ. ಇದು ಪತ್ರಿಕೆಗೂ ಲಾಭ. ಓದುಗರಿಗೂ ಲಾಭ. ಹೌದೋ ಅಲ್ಲವೋ ಯೋಚಿಸಿ.

ಅದಕ್ಕೆ ಬಿಡುವಿನ ಕಾಲ ಉಪಯೋಗಿಸಿಕೊಂಡು ಸೈಡ್ ಬಿಸಿನೆಸ್ ರೀತಿಯಲ್ಲಿ ಈ ನೇರ ಮಾರಾಟ ಜಾಲಕ್ಕೆ ಸೇರಿಕೊಳ್ಳಲು ಮಧ್ಯಮ ವರ್ಗದ ಜನರು ಆಸಕ್ತಿ ತೋರಿಸುತ್ತಿದ್ದಾರೆ.

ಇಂಥ ವ್ಯವಹಾರದಲ್ಲಿ ನಿಮಗೆ ಆಸಕ್ತಿ ಇದ್ದರೆ ಎರಡು ಎಚ್ಚರಿಕೆ:

1. ನೀವು ಮಾರಾಟ ಮಾಡಲಿಚ್ಛಿಸುವ ಕಂಪನಿಯ ಸಾಚಾತನದ ಬಗ್ಗೆ ನಿಮಗೆ ಖಾತ್ರಿ ಇರಲಿ.
2. ಒತ್ತಾಯ ಪೂರ್ವಕವಾಗಿ ಯಾರನ್ನಾದರೂ ಈ ಮಾರಾಟ ಜಾಲಕ್ಕೆ ಸೇರಿಸದಿರಿ. ಇದರಿಂದ ನಿಮ್ಮ ಸ್ನೇಹವೂ ಹಾಳಾದೀತು. ಜೊತೆಗೆ ಬರುವ ಲಾಭವೂ ಕಡಿಮೆ ಆದೀತು.

■ ಕೆ.ಬಿ. ಮೋಹನ ಕುಮಾರ್

ದೀಪಾವಳಿಯ ವಿಶೇಷ ಬೋನಸ್!
ಬಿಸಿಲ ಬದುಕು ಓದುಗರಿಗೆ ಮಾತ್ರ!

ಪ್ರಿಯ ಓದುಗರೆ,

ನಿಮಗಿದೋ ಒಂದು ಬೋನಸ್ ನೀಡುತ್ತಿದ್ದೇವೆ. ವಿಶೇಷ ಚಂದಾದಾರಿಕೆ ಯೋಜನೆಯ ರೂಪದಲ್ಲಿ ನೀವೂ ಇದನ್ನು ಇಷ್ಟಪಡುತ್ತೀರಿ.

ಈವರೆಗೆ ಇಂಥ ಚಂದಾದಾರಿಕೆ ಯೋಜನೆಗಳು ವಿದೇಶಗಳಲ್ಲಿ ಹಾಗೂ ಇಂಗ್ಲಿಷ್ ಪತ್ರಿಕೆಗಳಲ್ಲಿ ಮಾತ್ರ ಲಭ್ಯವಿತ್ತು. ಈಗ ಕನ್ನಡ ಪತ್ರಿಕಾಭಿಮಾನಿಗಳಿಗೂ ಇಂಥದೊಂದು ಆಕರ್ಷಕ ಯೋಜನೆಯನ್ನು ಸಮರ್ಪಿಸಲು ನಮಗೆ ಹೆಮ್ಮೆ ಎನಿಸುತ್ತಿದೆ.

ಮೊಟ್ಟ ಮೊದಲು ನೀವು ಮಾಡಬೇಕಾದ್ದೆಂದರೆ, ''ಇದೊಂದು ಮನಿ ಸರ್ಕ್ಯೂಲೇಷನ್ ಸ್ಕೀಮ್'' ಎಂಬ ಅಭಿಪ್ರಾಯವನ್ನು ತೊಡೆದುಹಾಕುವುದು.

ಇದೊಂದು ಹೊಸ ವ್ಯಾಪಾರ ಪದ್ಧತಿ, ಕಾರ್ಪೋರೇಟ್ ಯೋಜನೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಇದೇನೂ ಪತ್ರಿಕೆಗೆ ನೇರವಾಗಿ ಹಣ ತಂದು ಕೊಡುವ ಯೋಜನೆಯಲ್ಲ; ಹೊಣೆಗಾರಿಕೆ ಹೆಚ್ಚಿಸುವ ವ್ಯವಹಾರ. ನಮ್ಮ ಪತ್ರಿಕೆಯ ಚಂದಾದಾರರ ಸಂಖ್ಯೆ ಹೆಚ್ಚಾಗಲಿ ಎಂಬುದಷ್ಟೇ ನಮ್ಮ ಉದ್ದೇಶ. ಆದರೆ, ನಿಮಗೆ ಖಂಡಿತ ಲಾಭವಿದೆ. ನೇರವಾಗಿ ಹಣವನ್ನೂ ತಂದು ಕೊಡುತ್ತದೆ!

ನಮ್ಮ ಬೇಡಿಕೆ: ನೀವು ನಮ್ಮ ಪತ್ರಿಕೆಗೆ 5 ವರ್ಷಗಳ ಅವಧಿಗೆ ಚಂದಾದಾರರಾಗಬೇಕು. ಹಾಗೂ ನಿಮ್ಮ ಜೊತೆ ಮೂರು ಜನ ನಿಮ್ಮ ಮಿತ್ರರನ್ನು ಚಂದಾದಾರರನ್ನಾಗಿ ಮಾಡಬೇಕು. ಇಷ್ಟೇ ನಮ್ಮ ಬೇಡಿಕೆ, ಇನ್ನೇನೂ ಇಲ್ಲ.

ನಿಮಗೇನು ಲಾಭ? ಐದು ವರ್ಷಗಳ ಚಂದಾ ಮೊತ್ತ 600 ರೂ. ಬದಲು ಕೇವಲ 200 ರೂ.ಗೆ 5 ವರ್ಷಗಳ ಚಂದಾದಾರಿಕೆ. ಅಂದರೆ 400 ರೂ. ಉಳಿತಾಯ. ಶೇ.67 ರಷ್ಟು ಲಾಭ! ಮುಂದೆಂದಾದರೂ ಪತ್ರಿಕೆಯ ಬೆಲೆ ಹೆಚ್ಚಾದರೂ ನಿಮ್ಮ ಮೇಲೆ ಪರಿಣಾಮವಿಲ್ಲ. ನಿಮ್ಮ ವಿಳಾಸಕ್ಕೆ ನಿಯಮಿತವಾಗಿ ಅಂಚೆ ಮೂಲಕ 60 ತಿಂಗಳ ಕಾಲ 'ಬದುಕು' ಬರುತ್ತದೆ.

ಎರಡನೆಯ ಲಾಭವೆಂದರೆ ನಿಮಗೆ ಧನಾಗಮ! ನೀವು ಪರಿಚಯಿಸುವ ಹೊಸ ಚಂದಾದಾರರ ಸರಣಿ ನಿರಂತರವಾಗಿ ಮುಂದುವರಿದಂತೆಲ್ಲ ನಿಮಗೆ ನಾವು ಗೌರವ ಪೂರ್ವಕವಾಗಿ ಕಮೀಷನ್ ನೀಡುತ್ತೇವೆ. 10 ಹಂತಗಳವರೆಗೆ ದೊರೆಯುವ ನಿಮ್ಮ ಒಟ್ಟು ಕಮೀಷನ್ ಎಷ್ಟು ಗೊತ್ತೇ? ರೂ. 10,23,312 (ಹತ್ತು ಲಕ್ಷ ಇಪ್ಪತ್ತಮೂರು ಸಾವಿರದ ಮುನ್ನೂರ ಹನ್ನೆರಡು ರೂಪಾಯಿ).

ಯೋಜನೆ ವಿವರ :

1. ಮೊದಲು ನೀವು 500 ರೂ. ಕೊಟ್ಟು 5 ವರ್ಷಗಳ ಚಂದಾದಾರರಾಗಬೇಕು.
2. ನೀವು ನಿಮ್ಮ 3 ಮಿತ್ರರನ್ನು ಚಂದಾದಾರರನ್ನಾಗಿ ಮಾಡಲು ನಿಮಗೆ 3 ಚಂದಾ ಫಾರಂಗಳನ್ನು ಕಳಿಸುತ್ತೇವೆ. .
3. ಸಂಗ್ರಹವಾಗುವ 1500 ರೂ.ಗಳಲ್ಲಿ 300 ರೂ.ಗಳನ್ನು ನೀವೇ ಇಟ್ಟುಕೊಳ್ಳಿ, ಅದು ನಿಮ್ಮ ಕಮೀಷನ್ನಿನ ಮೊದಲ ಕಂತು. ಅಂದರೆ ನಿಮಗೆ ಕೇವಲ 200 ರೂ.ಗಳಲ್ಲಿ 5 ವರ್ಷದ ಚಂದಾದಾರಿಕೆ ದೊರೆತಂತಾಯಿತು.
4. ನಿಮ್ಮ ಮಿತ್ರರು ಅದೇ ರೀತಿ ತಲಾ 3 ಚಂದಾದಾರರನ್ನು ಮಾಡುತ್ತಾರೆ. ಆ ಚಂದಾದಾರರು ಮತ್ತೆ ತಲಾ ಮೂರರಂತೆ ಹೊಸ ಚಂದಾದಾರರನ್ನು ಮಾಡುತ್ತಾರೆ. ಹೀಗೇ ಚಂದಾದಾರರ ಸರಪಣಿ ಮುಂದುವರಿಯುತ್ತದೆ. 10 ಹಂತಗಳವರೆಗೆ ನಿಮಗೆ ಕಮೀಷನ್ ದೊರೆಯುತ್ತದೆ.

ಚಂದಾದಾರರ ಸರಪಳಿ ನಿಲ್ಲದಂತೇ ಮುಂದುವರಿಸುವುದು ಹೊಸ ಚಂದಾದಾರರ ಜವಾಬ್ದಾರಿ.

ಅಷ್ಟೇ... ಸಿಂಪಲ್.

ವಿವರಗಳಿಗೆ ಪತ್ರಿಕೆಯ ವಿಳಾಸವನ್ನು ಸಂಪರ್ಕಿಸಿ.

ಸೈಡ್ ಬಿಸಿನೆಸ್: ಇದು ನಿರುದ್ಯೋಗಿಗಳಿಗೆ ಹಾಗೂ ಪತ್ರಿಕಾ ಏಜೆಂಟರಿಗೆ ಒಂದು ಉತ್ತಮ ಅವಕಾಶವಾದರೆ ಇತರರಿಗೆ ಇನ್ನೊಂದು ಆದಾಯ ಮೂಲವೂ ಹೌದು.

ದಯವಿಟ್ಟು ಗಮನಿಸಿ: ನೀವು ಮೂರು ಜನ ಹೊಸ ಚಂದಾದಾರನ್ನು ಪರಿಚಯಿಸುವುದು ಕಡ್ಡಾಯವಲ್ಲ.

ನೀವಷ್ಟೇ ಚಂದಾದಾರರಾಗಿ ಸುಮ್ಮನಿದ್ದುಬಿಡಬಹುದು. ಕಮೀಷನ್ ತರುವ ಸರಣಿಯಲ್ಲಿ ಭಾಗವಹಿಸುವ ಆಸಕ್ತಿ ಇದ್ದರೆ ಮಾತ್ರ ನೀವು 3 ಚಂದಾದಾರನ್ನು ಪರಿಚಯಿಸಿ.

ಈ ಯೋಜನೆಯಲ್ಲಿ ಎರಡೇ ಸಾಧ್ಯತೆಗಳಿರುವುದು. ಒಂದು, ಸರಣಿ ಮುಂದುವರಿಯುವುದು; ಎರಡು, ಸರಣಿ ಕಡಿದುಹೋಗುವುದು. ಸರಣಿ ಮುಂದುವರಿದರೆ, ಪತ್ರಿಕೆಯೊಂದಿಗೆ ನಿಮಗೆ ಕಮೀಷನ್ ಬರುತ್ತಿರುತ್ತದೆ. ಸರಣಿ ಕಡಿದರೆ ನಿಮಗೆ ನಷ್ಟವೇನೂ ಇಲ್ಲ; ನಿಮಗೆ 5 ವರ್ಷ ಪತ್ರಿಕೆ ಬರುತ್ತದೆ.

ಈ ಯೋಜನೆಯಲ್ಲಿ ಸೇರಿಸಲು ಯಾರನ್ನೂ ಒತ್ತಾಯಿಸಬೇಡಿ. ಯೋಜನೆಯ ಲಾಭದ ಬಗ್ಗೆ ಮನವರಿಕೆಯಾದವರನ್ನಷ್ಟೇ ಚಂದಾದಾರರನ್ನಾಗಿಸಿ. ಈ ಬಗ್ಗೆ ಅಪರಿಚಿತರನ್ನು ಸಂಪರ್ಕಿಸಿ ಕೊರೆಯಬೇಡಿ.

ಬನ್ನಿ.... ನೀವೂ ಗಳಿಸಿ. ನಮ್ಮನ್ನೂ ಬೆಳೆಸಿ.

■ ವ್ಯವಸ್ಥಾಪಕ

ವೈವಾಹಿಕ- ವರ್ಗೀಕೃತ ಜಾಹೀರಾತು

ವೈವಾಹಿಕ

BRIDE WANTED

Lecturer, 33 years, Vishwakarma Vegetarian with M.Tech qualifications requires a suitable bride with BE/MSc qualification

Apply Box No.0001
C/o Ankura Prakashana
P.B.No. 7951
Basaveshwaranagar
Bangalore -560 079

ಪತ್ರಿಕೆ

ಮೈಸೂರು ಓದುಗರ ಗಮನಕ್ಕೆ
'ಬದುಕು' ಮಾಸಪತ್ರಿಕೆ
ಮೈಸೂರಿನ 'ತರಂಗ' ಕಚೇರಿಯಲ್ಲಿ ಸಿಗುತ್ತದೆ. ನಿಮ್ಮ ಮನೆಗೆ ಪತ್ರಿಕೆ ಹಾಕುವ ಹುಡುಗನಿಗೆ ಹೇಳಿ ಅಥವಾ ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಿ.

ಕೆ.ಜಿ. ಕುಮಾರ್
ಸುಬ್ರಹ್ಮಣ್ಯೇಶ್ವರ ಟೆಂಪಲ್ ಬಿಲ್ಡಿಂಗ್
ಟೌನ್‌ಹಾಲ್ ಹಿಂಭಾಗ
ಮೈಸೂರು -570 001.
ಫೋನ್ : 431202/430008

ಜಾಹೀರಾತು - ಮುದ್ರಣ

CHANDAN GRAPHICS
Designers, Advertisers
Photographers & Screen Printers

21, Ist Floor, "Ankush Arcade'
Station Road,HUBLI-580 020

Phone:0836 365786
Res:364486

ಸೆಕ್ಯುರಿಟಿ ಸರ್ವಿಸ್

VISHWANATH KULKARNI

PROMPT SECURITY SERVICES
'Renuka' Building, 8th Cross, 12th Scheme, Bhagya Nagar
Belgaum-590 006
Ph.: (0831) 482865

Murughendra Nilaya
Michigan Compound
Saptapur, Dharwad-580 007
Ph: (0836) 742062

ಬೇಕಾಗಿದ್ದಾರೆ

Require Medical Representative for all major towns of Karnataka i.e., Haveri, Hospet, Harapanahalli, Bagalkot, Bijapur, Jamakhandi, Gangavathi, Bellary, Gulbarga, Bidar, Koppal, Chitradurga, Davanagere, Hubli, Belgaum, Basavakalyan, Gadag, Raichur etc.
The Candidate should be D.Pharma/ B.Pharma or any Graduate between 21 to 25 years age.
Remuneration will be comparable to the best in the industry. Please apply within 7 days to the following address.

Sales Manager
LOTUS LABORATORIES
7-6/9, J.S.N. Colony, Street No.8,
HABSIGUDA, HYDERABAD - 500 007.

ಹೋಟೆಲ್

ಗ್ರಾಹಕರಿಗೆ ದೀಪಾವಳಿ
ಶುಭಾಶಯಗಳು

NEW SHANTHI SAGAR
Vegetarian Restaurant

704, Modi Hospital Road
Rajajinagar
Bangalore-560086
Ph.:3495453/3493898

ಪತ್ರಿಕೆ

ಬಾಗಲಕೋಟೆಯಲ್ಲಿ
'ಬಿಸಿಲ ಬದುಕು' ಮನೆಗೆ ತರಿಸಬೇಕೆ?
'ಬದುಕು' ಗೆ ಜಾಹೀರಾತು ನೀಡಬೇಕೆ?

ಸಂಪರ್ಕಿಸಿ:
ಸಿದ್ಧರಾಜ್ ಎಂ. ಕೆಂಧೂಳಿ
ಎಂ.ಎ., ಬಿ.ಎಡ್.
ಪ್ರತಿನಿಧಿ
ಮ.ನಂ. 3/429, ಜೈನ ಪೇಟ,
ಬಾಗಲಕೋಟ- 587 101.

ತರಬೇತಿ

KAKADE
CAREER ACADEMY
IAS, KAS, MBA, BANKING AND PERSONALITY DEVELOPMENT PROGRAMMES

'VIHARA', 7TH CROSS, KALYANA NAGAR, DHARWAD - 580 007

RES: #A5, VISHWAS APPARTMENT
9TH CROSS, KALYANA NAGAR
DHARWAD-7

PH.:0836-46709(O)Mobile:9844054709

ಕಾಂಟ್ರಾಕ್ಟರ್

ದೀಪಾವಳಿ ಶುಭಾಶಯ

H.M.T. SWAMY B.E.

MAHARUDRA CONSTRUCTIONS
CIVIL CONTRACTORS

H.NO. 8-B, 18TH WARD, NEHRU COLONY, BELLARY -583 101
Hello:08392-71012

We also supply
Aggrigates, Sand, Cement
Concrete Blocks etc

ಕಂಪ್ಯೂಟರ್

P. SRIRAM BHAT

RAM INFORMATION INC.
32/2, IIFloor, 5th Main
Road Circle, Chamarajpet
Bangalore-560 018

E-Mail :Sneha @giasbga.vsnl.net.in
Ph: 6613866
Pager : 9628815488

ಡೀಲರ್

K.P. RAVINDRA KUMAR, B.E.,(Civil)
Managing Partner

R.S. MARKETING COMPANY

Dealers in:
BPL Telecom Products
EPABX System, CASIO Phones

First Floor, Ediga Hostel Complex
Double Road, Bellary-583 101
Phone: off.:76959
Res.:6252

ಕೊರಿಯರ್

ದಸರಾ ಹಬ್ಬದ ಶುಭಾಶಯಗಳು

SHRIPAD

SHAH COURIER
Office : R.No.6, Ist Floor
Prashant Bhavan
Post Circle
RANEBENNUR-581 115

Telefax:67925

ಎಲೆಕ್ಟ್ರಿಕಲ್

ಗ್ರಾಹಕರಿಗೆ ದೀಪಾವಳಿ ಹಾಗು
ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು

ಶ್ರೀ ವೀರಭದ್ರೇಶ್ವರ
ಇಲೆಕ್ಟ್ರಿಕಲ್ ವರ್ಕ್ಸ್, ಮೆಡ್ಲೇರಿ ರೋಡ್
ರಾಣೇಬೆನ್ನೂರು - 581 115

ಎ.ಸಿ. ಮೋಟಾರ್ಸ್ ಹಾಗು
ಸಬ್‌ಮರ್ಸಿಬಲ್ ಪಂಪ್ಸ್ ರಿಪೇರಿ
ಮಾಡಿಕೊಡುತ್ತೇವೆ.

ಶುಭಾಶಯ

With best compliments from

SRI NIKETAN STATIONERY
Specialised in Technical Goods

No.7, Raj Rajeswari School
Complex, P.B.Road
RANEBENNUR -581 115

ಶುಭಾಶಯ

With Best Compliments from

GONDKAR RADIO ENGG, CO.,
M.G. ROAD, RANEBENNUR-581 115

AUTHORISED DEALERS FOR
SAMSUNG, ONIDA PHILIPS WHIRLPOOL
ALLWYN CROWN TV AHUJA

Ph:66264(S)
67063(R)

ಕಿರಾಣಿ

With Best Compliments from

SUNIL PRAVISION STORES
NO.1, HIREMATH COMPLEX
MEDLERI ROAD
RANEBENNUR -581 115
PH.: 68304

We have Home delivery service

ಶುಭಾಶಯ

With Best Compliments from

C.R. VENKATARAMANA
B.E. (Mech) M.Tech (HPE);(Ph.D);MISTE

Assistant Professor
Department of Mechanical Engineering
S.T.J.Institute of Technology
RANEBENNUR - 581 115
Ph.:(STD08373) Off:66343, Res:68455

ಔಷಧಿ

WISH YOU SPEEDY RECOVERY

ಹಿರೇಮಠ ಮೆಡಿಕಲ್ಸ್
ರಾಣೇಬೆನ್ನೂರ
✆:08373-68321, 69735

Please do not substitute

ನೀವು ಜಾಹೀರಾತು ನೀಡಿ

ವೈವಾಹಿಕ

ನೀವು ನಿಮ್ಮ ಅಭಿರುಚಿಗೆ ತಕ್ಕ ಅನುರೂಪದ ವರ ಅಥವಾ ವಧುವಿಗೆ ಹುಡುಕಾಟ ನಡೆಸಿದ್ದೀರಾ? ನಿಮ್ಮ ಮಗ ಅಥವಾ ಮಗಳಿಗೆ ಸರಿಹೊಂದುವ, ನಿಮ್ಮ ಮನೆತನದ ಘನತೆಗೆ ತಕ್ಕ ಸಂಬಂಧಕ್ಕಾಗಿ ಕಾತರಿಸಿದ್ದೀರಾ?

ಹಾಗಾದರೆ 'ಬದುಕು' ಮಾಸಪತ್ರಿಕೆಯಲ್ಲಿ ಪ್ರಾರಂಭಿಸುತ್ತಿರುವ ವೈವಾಹಿಕ-ವರ್ಗೀಕೃತ ಜಾಹೀರಾತು ಅಂಕಣವನ್ನು ಸದುಪಯೋಗಪಡಿಸಿಕೊಳ್ಳಿರಿ. ಸಭ್ಯ-ಸಜ್ಜನ ಓದುಗರ ವಲಯದಲ್ಲಿ ಜನಪ್ರಿಯವಾಗಿರುವ 'ಬದುಕು' ವೈವಾಹಿಕ ಸಂಪರ್ಕಕ್ಕೆ ಪರಿಣಾಮಕಾರಿ ಸೇತುವೆಯಾಗಲಿದೆ.


ವರ್ಗೀಕೃತ

ವ್ಯಾಪಾರಿಗಳು, ಉದ್ಯಮಿಗಳು, ಶಾಲೆಕಾಲೇಜಿನವರು ತಮ್ಮ ವಸ್ತುಗಳ ಬಗ್ಗೆ, ಸೇವೆಗಳ ಬಗ್ಗೆ ವರ್ಗೀಕೃತ ಜಾಹೀರಾತು ನೀಡಬಹುದು. ಅತ್ಯಂತ ವಿಶಿಷ್ಟ ಓದುಗ ವರ್ಗವನ್ನು ಸೃಷ್ಟಿಸಿಕೊಂಡಿರುವ 'ಬದುಕು' ಮಾಸ ಪತ್ರಿಕೆ ನಿಮ್ಮ ಜಾಹೀರಾತಿಗೆ ನಿರೀಕ್ಷಿತ ಪ್ರತಿಕ್ರಿಯೆ ತರುವುದು ಗ್ಯಾರಂಟಿ. ಉದ್ಯೋಗಿಗಳನ್ನು ಹುಡುಕುತ್ತಿರುವ ಉದ್ಯಮಿಗಳು ಹಾಗೂ ನೌಕರಿಗಾಗಿ ಕಾತರಿಸಿರುವ ನಿರುದ್ಯೋಗಿಗಳ ಸಂಪರ್ಕಕ್ಕೆ ಈ ಅಂಕಣ ಪರಿಣಾಮಕಾರಿ ಮಾಧ್ಯಮ. ಮದುವೆ, ಹುಟ್ಟುಹಬ್ಬ, ವಿದೇಶ ಪ್ರಯಾಣ, ಇತ್ಯಾದಿ ಸಂದರ್ಭಗಳಲ್ಲಿ ನಿಮ್ಮ ಆಪ್ತರಿಗೆ ಅಭಿನಂದನೆ ಹೇಳಲೂ ಇಲ್ಲಿ ಅವಕಾಶವಿದೆ.

ಜಾಹೀರಾತಿನ ಅರ್ಜಿ ನಮೂನೆಗಾಗಿ ಇದೇ ಸಂಚಿಕೆಯ ಮುಖಪುಟದ ಹಿಂಬಂದಿ ಪುಟವನ್ನು ನೋಡಿ.

ನಾನೂ ಟೋಪಿ ಹಾಕಿಕೊಂಡೆ!

ನೀವು ಬುದ್ಧಿವಂತರೆ? ಹಾಗಾದರೆ ನನ್ನ ಪ್ರಶ್ನೆಗೆ ಉತ್ತರ ಹೇಳಿ. ಬಾಲ್ಡಿಗಳು ಬುದ್ಧಿವಂತರೋ? ಬಾಂಡ್ಲಿಗಳು ಬುದ್ಧಿವಂತರೋ?



ನೀವು ಬುದ್ಧಿವಂತರೆ?

ಹಾಗಾದರೆ, ನನ್ನ ಪ್ರಶ್ನೆಗೆ ಉತ್ತರ ಹೇಳಿ, ಬಾಲ್ಡಿಗಳು ಬುದ್ಧಿವಂತರೋ? ಬಾಂಡ್ಲಿಗಳು ಬುದ್ಧಿವಂತರೋ?

ಅರ್ಥವಾಗಲಿಲ್ವೆ?

ಬಾಲ್ಡಿಗಳೆಂದರೆ ತಲೆಯಲ್ಲಿ ಅಷ್ಟಿಷ್ಟು ಕೂದಲಿದ್ದವರು. ಬಾಂಡ್ಲಿಗಳೆಂದರೆ ಮಿರುಗುಟ್ಟುವ ತಲೆಯವರು; ಒಂದು ಕೂದಲೂ ಹೆಸರಿಗೆ ಸಿಕ್ಕದು.

ನನ್ನ ಅಭಿಪ್ರಾಯದಲ್ಲಿ ಈ ಬಾಂಡ್ಲಿಗಳು ಅಥವಾ ಟಿವಿಯಲ್ಲಿ ಬರುವ ಮಿರಿಂಡಾ ಮ್ಯಾನ್‌ಗಳು ಬುದ್ಧಿವಂತರಷ್ಟೇ ಅಲ್ಲ, ಸುಂದರಾಂಗರೂ ಹೌದು. ನಮ್ಮ ಸಿನಿಮಾದ ಫೈಟರ್ ಶೆಟ್ಟಿಯವರನ್ನು ನೋಡಿ. ಸೂಟು, ಬೂಟು, ಪೈಜಾಮಾ, ಜುಬ್ಬ ಎಲ್ಲಾ ವೇಷಕ್ಕೂ ಒಪ್ಪಿಗೆಯಾಗುತ್ತಾರೆ. ಯಾರೂ ಅವರಿಗೆ ಹೇರ್‌ಸ್ಟೈಲ್ ಬಗ್ಗೆ ಸೂಚನೆ ಕೊಡಲು ಹೋಗುವುದಿಲ್ಲ.

ಆದರೆ ನನ್ನಂತಹ ಬಾಲ್ಡಿಗಳಿಗೆ? ದೇವರೇ ದಿಕ್ಕು. ಅರ್ಧ ಬಂಜರು ಅರ್ಧ ಬೆಳೆಯಿರುವ ಶಿರೋ ಕ್ಷೇತ್ರ. ಪೂರ್ತಿ ಬಂಜರೆಂದು ಹಾಗೇ ಬಿಡುವ ಹಾಗಿಲ್ಲ. ಅರ್ಧ ಬೆಳೆಗೆ ಮುತುವರ್ಜಿ ಮಾಡೋಹಾಗಿಲ್ಲ. ಬಂದವರದೆಲ್ಲಾ ಒಂದೊಂದು ಸಲಹೆ. ನಮಗೆ ದಿಕ್ಕು ತೋರದ ಸ್ಥಿತಿ: ಅದಕ್ಕೇ ಹೇಳಿದ್ದು; ಬಾಂಡ್ಲಿಗಳು ಬುದ್ಧಿವಂತರಷ್ಟೇ ಅಲ್ಲ, ಅದೃಷ್ಟವಂತರು.

ಇಷ್ಟೆಲ್ಲಾ ಯಾಕೆ ಹೇಳಿದೆನೆಂದರೆ, ನನ್ನಂತಹ ಬಾಲ್ಡಿಗಳು ಎಂತೆಂತಹ ಅನಾಹುತಕ್ಕೆ ತಲೆ ಕೊಡುತ್ತಾರೆಂಬ ಚಿಂತೆ ನನ್ನನ್ನು ಆಗಾಗ ಕಾಡುತ್ತದೆ. ಕೆಲವರು ಆಡುವ ಮಾತು ಹೇಗೆ ಭರ್ಜಿಯಂತೆ ಚುಚ್ಚುವುದೆಂದರೆ, ಹಾಳಾದ ಬ್ರಹ್ಮ ಯಾಕಾದರೂ ಬುರುಡೆ ಕೊಟ್ಟನೋ, ಯಾಕೆ ಬುರುಡೆಯಲ್ಲಿ ಅರ್ಧ ಬೆಳೆ ಬೆಳೆದನೋ? ಎಂಬಷ್ಟು ಕೋಪ.

ಒಮ್ಮೆ, ನನ್ನ ಮಾಮೂಲಿ ಸೆಲೂನಿನವನಿಗೆ ತಲೆ ಕೊಟ್ಟು ಕೂತಿದ್ದೆ. ಧಡಬಡಿಸಿ ಬಂದ ಹಿಪ್ಪಿತಲೆ ಕುರುಚಲು ಗಡ್ಡದ ಒಬ್ಬ ಇಣುಕಿದ.

'ಇನ್ನೂ ಲೇಟಾ ಅರ್ಜೆಂಟ್ ಹೋಗಬೇಕು'

'ಶೇವಿಂಗಾ? ಕಟಿಂಗಾ?

'ಎರಡೂ'

'ಹಾಗಾದ್ರೆ ಕೂತ್ಕೊಳ್ಳಿ ಸಾರ್' ಎಂದ ಸೆಲೂನಿನವ. ಕರಡಿ ತಲೆ ನನ್ನ ಕಡೆ ನೋಡಿತು.

'ನಮ್ಮ ಹುಡ್ಗ ನಿಮ್ಗೆ ಶೇವಿಂಗ್ ಮಾಡೋದ್ರೊಳಗೇ ಇವ್ರ ಕಟಿಂಗ್ ಮುಗ್ದೋಗಿರತ್ತೆ' ಕಿಸಕ್ಕನೆ ನಕ್ಕ ಯಜಮಾನ.

ಆ ಹೋತದ ಗಡ್ಡಕ್ಕಿಂತಾ ಕಡೆಯೇ ನನ್ನ ತಲೆ?

ಅಂದೇ ದೇವರಿಗೆ ಅಡ್ಡ ಬಿದ್ದು ಬೇಡಿದ್ದೆ.

'ನಾನೇನಯ್ಯಾ ನಿನಗೆ ಅನ್ಯಾಯ ಮಾಡಿದ್ದು? ಮುಂದಿನ ಜನ್ಮ ಕೊಡುವಾಗಲಾದ್ರೂ, ತಲೇ ತುಂಬಾ ನಾಟೀ ಮಾಡೇ ಕಳ್ಸು. ಇಲ್ದಿದ್ರೆ ಒಂದು ಹೋತದ ಹೊಟ್ಟೇಲ್ಲಾದ್ರೂ ಹಾಕು'

ನನ್ನ ಬಾಲ್ಡಿ ತಲೆಯೇ ನನ್ನ ವೀಕ್ ಪಾಯಿಂಟೆಂದು ಎಲ್ಲರಿಗೂ ಹೇಗೆ ಗೊತ್ತಾಯ್ತೋ? ಅಂದಿನಿಂದ ನನ್ನನ್ನು ಬ್ಲಾಕ್ ಮೇಲ್ ಮಾಡಹತ್ತಿದರು.

'ಚೋಟು, ಗ್ರೀನ್ ಬೆಲ್ಟ್ ಅಂತಾರಲ್ಲೋ ಅದೇನೋ?'

ಒಂದು ದಿನ ನಾನು ಆಫೀಸಿನಿಂದ ಬರುವ ವೇಳೆಗೇ ಚೋಟು, ಬಂಗಾರಿ ಅದೇ ನನ್ನ ವಂಶದ ಒಂದು ತಿಲಕ, ಒಂದು ರತ್ನ ಮಾತಾಡುತ್ತಿದ್ದವು.

'ಅದೆಲ್ಲಾ ತುಂಬಾ ದೊಡ್ಡ ವಿಷ್ಯ ಕಣೆ. ನಿಂಗೆ ಅರ್ಥವಾಗಲ್ಲ'

'ಇರ್ಲಿ ಹೇಳೋ ನಂಗೆ ಅರ್ಥವಾಗೋ ಹಾಗೆ, ಪ್ಲೀಸ್'

'ನಮಗೆ ಆಮ್ಲಜನಕಕ್ಕಾಗಿ ಗಿಡ ಮರಗಳು ಬೇಕು ಅಲ್ವಾ? ಆದ್ರೆ ಈ ಬೆಂಗಳೂರಲ್ಲಿ ಮನೆ ಕಟ್ಟೋಕೇ ಜಾಗವಿಲ್ಲ. ಇನ್ನು ಗಿಡ ಬೆಳ್ಸೋದೆಲ್ಲಿ? ಅದಕ್ಕೆ ವಿಜ್ಞಾನಿಗಳು ನಗರದ ಸುತ್ತಾ ನಿರ್ದಿಷ್ಟ ಜಾಗದಲ್ಲಿ ಗಿಡ, ಮರ ಬೆಳ್ಸೋಕೆ ಹೇಳ್ತಾರೆ. ಅದೇ ಗ್ರೀನ್ ಬೆಲ್ಟು, ಎಕ್ಸಾಂಪಲ್ ಪಪ್ಪಾನ ತಲೆ. ಎಲ್ಲಾ ಬಂಜರು ಬಿದ್ದಿದೆ. ದೂರ್ದಿಂದ ಅದು ತಲೇನೇ ಗ್ಯಾರಂಟಿ ಎನ್ನೋದಿಕ್ಕೆ ಆ ಕಿವಿಯಿಂದ, ಈ ಕಿವಿವರ್ಗೆ ಪಟ್ಟೇ ತರ ಕೂದ್ಲು ಇದ್ಯಲ್ಲಾ, ಅದನ್ನ ಬೇಕಾದ್ರೆ ಜ್ಞಾಪ್ಕವಿಟ್ಕೋ, ಆದ್ರೆ ಇದು ಗ್ರೀನ್ ಬೆಲ್ಟಲ್ಲ. ಬ್ಲಾಕ್ ಬೆಲ್ಟು.'

'ಹೋಗೋಲೋ, ಪಪ್ಪನ ತಲೆ ಬ್ಲಾಕಂತೆ, ಅದು ಗ್ರೇಬೆಲ್ಟು'

ಮುಂಡೇವು, ಕಿಲಕಿಲ ನಕ್ಕವು. ನನ್ನ ಮಂಡೆಯಲ್ಲಿ ಬೆಂಕಿ ಬಿದ್ದಂತಾಯ್ತು. ಬಂದ ಕೋಪಕ್ಕೆ ಬುರುಡೆ ಮೇಲಿದ್ದ ಬೆವರೆಲ್ಲಾ ಆವಿಯಾಗಿತ್ತು.

ನನ್ನ ಬಾಲ್ಡೀ ಬುರುಡೆ ಬಗ್ಗೆ ನನಗೆ ತೀರಾ ಅಸಹ್ಯ, ಕೋಪ ಬಂದದ್ದು ದೀಪಾವಳಿಯಂದು.

ಅಂದು ಬೆಳಿಗ್ಗೆಯೇ ಎಣ್ಣೆ ಹಚ್ಚಿಕೊಂಡು ಸ್ನಾನಕ್ಕೆ ಸಿದ್ಧವಾಗಿದ್ದೆ. ವರ್ಷಕ್ಕೊಂದು



ನನ್ನ ಬಾಲ್ಡೀ ಬುರುಡೆ ಬಗ್ಗೆ ನನಗೆ ತೀರಾ ಅಸಹ್ಯ, ಕೋಪ ಬಂದದ್ದು ದೀಪಾವಳಿಯಂದು.

ಸ್ನಾನಕ್ಕೆ ಸಿದ್ಧವಾಗಿದ್ದೆ. ವರ್ಷಕ್ಕೊಂದು ಬಾರಿಯಾದರೂ ಮೈಯನ್ನು ಓವರಾಯಿಲ್ ಮಾಡಬೇಡವೇ? ಎಲ್ಲಕ್ಕಿಂತ ಹೆಚ್ಚು ಜಯಳ ಕೈಯಿಂದ ಸ್ನಾನ, ವರ್ಷಕ್ಕೊಂದು ಬಾರಿಯೇ ಅವಳು ನನಗೆ ಎಣ್ಣೆ ಸ್ನಾನ ಮಾಡಿಸೋದು.

ಬಚ್ಚಲು ಮನೆಯಲ್ಲಿ ಹಬೆಯಾಡುವ ನೀರು, ಸೀಗೇಕಾಯಿ ಸಿದ್ಧ. 'ಸುಮ್ಮನೇ ಕೂತ್ಕೋಬಾರ್ದೆ? ಅದೇನದು ರುಬ್ಬುಗುಂಡು ತರ ಬಳ ಬಳ ತಲೆ ಯಾಡ್ಸೋದು' ತಲೆ ಉಜ್ಜುತ್ತಿದ್ದ ಜಯ ಟಪ್ಪನೆ ಬುರುಡೆಗೆ ಕುಟ್ಟಿದ್ದಳು. 'ಆಹಾ, ಎಂತಹ ಮಧುರ ಅನುಭವ? ಅನುಭವಿಸಿಯೇ ತೀರಬೇಕು'.

ಹಬ್ಬಕ್ಕೆ ಬಂದವರು ನನ್ನ ನಾದಿನಿ, ಷಡ್ಡಕ, ಅವರ ಮಗಳು ಪಿಂಕಿ. ಪಿಂಕಿಯೋ, ಅವರಪ್ಪ ಹೇಳುವಂತೆ, ರಾಮಾಯಣ ಯುದ್ಧದಲ್ಲಿ ರಾಮನಿಂದ ಮುಕ್ತಿ ನಿರಾಕರಿಸಿದ ಒಂದು ಕಪಿಯ ಆತ್ಮವಂತೆ. ಆಹಾ! ಎಂತಹ ಹೋಲಿಕೆ?

'ಇವರೇ ನೋಡು ಮರಿ, ನಿನ್ನ ಚಿಕ್ಕಪ್ಪ' ನನ್ನ ಷಡ್ಡಕ ಮಗಳಿಗೆ ನನ್ನ ಪರಿಚಯ ಮಾಡಿಸಿದ.

'ಅಮ್ಮಾ, ನೀನು ಆಗಾಗ ಹೇಳ್ತೀಯಲ್ಲಾ, ಇವ್ರು ಬಾಲ್ಡಿ ಚಿಕ್ಕಪ್ಪಾನೋ, ಕಡ್ಡಿಚಿಕ್ಕಪ್ಪಾನೋ?' ಪಿಂಕಿ ಬಾಯಿ ಬಿಟ್ಟಳು.

ಅರ್ಥವಾಗಿತ್ತು, ನಾನು ಬಾಲ್ಡಿ, ನನ್ನ ಇನ್ನೊಬ್ಬ ಷಡ್ಡಕ ತೆಳ್ಳಗಿದ್ದರಿಂದ ಕಡ್ಡಿ. ಎಂತಾ ಅನ್ವರ್ಥ ನಾಮವಯ್ಯಾ ನಮ್ಮ ಸಂಬಂಧಿಕರು ನಮಗೆ ಕೊಡುವುದು?

ನನ್ನ ಬಾಲ್ಡಿತನದ ಬಗ್ಗೆ ಕೋಪ ಬರ ಹತ್ತಿತ್ತು. ಕನ್ಯೆಯರಿಗೆ ಕೋಪ ಬಂದಾಗ ಕೆನ್ನೆ ಕೆಂಪಾಗುವುದಿಲ್ಲವೇ? ಬೇಕಾದರೆ ನಾಚಿಕೆಯೆನ್ನಿ ಸ್ವಾಮಿ, ನನ್ನದೇನೂ ಅಭ್ಯಂತರವಿಲ್ಲ. ಹಂಗೇ ನನಗೆ ನಾಚಿಕೆ, ಕೋಪ ಬಂದಾಗ ರಂಗಾಗುತ್ತಿದ್ದುದು ನನ್ನ ಬಾಲ್ಡಿ ತಲೆ. ದೊಡ್ಡ ದೊಡ್ಡ ಟ್ರಕ್ಕುಗಳ ಮುಂದೆ ಕೆಂಪು ಬಾವುಟ ಹಾಕೊಲ್ವೆ? - ಅಪಾಯದ ಸಂಕೇತ. ಹಾಗೇ ನನ್ನ ರಂಗಾದ ಬಾಲ್ಡೀ ತಲೆ ಮನೆಯಲ್ಲಿ.

ಆಗಾಗ ಚೋಟು 'ಪಪ್ಪಾ ಟೋಪಿ ಹಾಕ್ಕೋ' ಅಂತಿದ್ದ. ಅವನ ಭಾಷೇಲಿ ಟೋಪಿಯೆಂದರೆ 'ವಿಗ್.' ನಾನು ಸುತಾರಂ ಒಪ್ಪಿರಲಿಲ್ಲ. ಆದರೆ ಅದೇನು ಗ್ರಹಚಾರವೋ, ಒಂದು ದಿನ ನನ್ನ ಬಾಲ್ಡೀ ತಲೆ ಬಿಸಿಯಾಗಿ ಬುದ್ಧಿಯನ್ನು ಸುಟ್ಟು ಹಾಕಿತ್ತು.

ಬಂಗಾರಿ - ಒಮ್ಮೆ ನಾನು ಮನೆಯಲ್ಲಿದ್ದಾಗಲೇ, ಚೋಟುವನ್ನು ವ್ಯಾಕರಣಕ್ಕೆ ಸಂಬಂಧಿಸಿದಂತೆ ಒಂದು ಪ್ರಶ್ನೆ ಕೇಳಿದಳು.

'ಚೋಟು, ಒಂದೇ ವಸ್ತುವಿಗೆ ಸಂಬಂಧಿಸಿದಂತೆ, ಮೂರು ಕಾಲಗಳಿಗೂ ಒಂದೊಂದೇ ಶಬ್ದ ಬರುವಂತೆ ಹೇಳಿಕೊಡೋ'.

ಚೋಟು ಸಿಡಿಸಿದ.

'ಬರ್ಕೊಳ್ಳೇ. ಸಕೇಶ, ಚಾರುಕೇಶ, ನಿಷ್ಕೇಶ'

'ಸರಿಯಾಗಿ ಬಿಡಿಸಿ ಹೇಳೋ, ಉದಾಹರಣೆ ಸಹಿತ'


'ನೋಡೇ, ಇದು ಪಪ್ಪಂದೇ ಉದಾಹರಣೆ. ಕೂದಲಿಗೆ ಸಂಬಂಧಿಸಿದುದು. ಸಕೇಶ - ಭೂತಕಾಲ-ಈ ಹಿಂದೆ ಪಪ್ಪಾನ ತಲೆಯಲ್ಲಿ ಕೂದಲಿತ್ತು. ಚಾರುಕೇಶ- ವರ್ತಮಾನ ಕಾಲ - ಈಗ (ಚಾರಂದ್ರೆ-ನಾಲ್ಕು) ನಾಲ್ಕೇ ನಾಕು ಕೂದ್ಲಿದೆ. ನಿಷ್ಕೇಶ - ಭವಿಷ್ಯತ್ ಕಾಲ - ಪಪ್ಪ ಉದುರಿದ ಕೂದಲಿನ ಯೋಚ್ನೆ ಮಾಡಿ, ಮಾಡಿ ಪೂರ್ತಿ ಬೋಡಾಗುವುದು'.

ಮಹಾ ಮಹಾ ವ್ಯಾಕರಣ ಗ್ರಂಥ ಬರೆದ ಕೇಶಿರಾಜ, ಭಟ್ಟಾಕಳಂಕರೂ ನಾಚುವಂತಹ ಘನ ಘೋರ ವ್ಯಾಕರಣ!

ಅಂದೇ ನಿಶ್ಚಯಿಸಿದೆ, ಟೋಪಿ-ಯಾ-ವಿಗ್ ಹಾಕಲು. ಮರುದಿನ ಹೊಸ ವಸ್ತು ಖರೀದಿಸಿ ಯಾಯ್ತು. ನೂರಾರು ಟೋಪಿ ಹುಡುಕಿ, ತೆಗೆದು, ಇಟ್ಟು, ಕನ್ನಡಿ ಮುಂದೆ ನಿಲ್ಲಿಸಿ ತಿರುಗಿಸಿ, ಮೂರು ಜನ - ಜಯ, ಚೋಟು, ಬಂಗಾರಿ- ಮೂರು ಮೂರು ದಿಕ್ಕಿಗೆ ಹಿಡಿದು ತಿರುಗಿಸಿ, ವಿವಿಧ ಭಾವ ಭಂಗಿಯಲ್ಲಿ ನೋಡಿ, ನಕ್ಕು ಆನಂದಿಸಿ - ಒಂದು ಟೋಪಿ ಆಯ್ಕೆ ಮಾಡಿ ಹಾಕಿದರು.

ಮುಂದಿನದು ಒಂದು ಬಾಲ್ಡಾಯಣವೆ. ಈ ಬಾಲ್ಡಿ ಬುರುಡೆ ಕೊಟ್ಟವನನ್ನು ವಾಚಾಮ ಗೋಚರ ಬಯ್ದೆ. ಆದರೇನು? ನಾನು ಮಾಡಿದ ಕರ್ಮ. ಸುಟ್ಟು ಬೂದಿಯಾದ ಬುದ್ಧಿ.

ಟೋಪಿಯೇನೋ ಬಹಳಾ ಚೆನ್ನಿತ್ತು. ನನ್ನ ವಯಸ್ಸು ಏಕಾಏಕಿ ಹತ್ತು ವರ್ಷ ಕಡಿಮೆ ಮಾಡಿದೆ ಎಂದು ನನ್ನ ಮಿತ್ರ ಪರಮ ಹೇಳಿದ ಮೇಲೆ ನಂಬಿದೆ. ಕರ್ಣನ ಕವಚದಂತೆ ಟೋಪಿ ನನ್ನ ತಲೆ ಮೇಲೆ ಬಂದು ಹತ್ತು ಹದಿನೈದು ದಿನವಾಗಿರಬಹುದು.



'ಮಮ್ಮೀ, ಏನೋ ನಾತ ಬರ್‍ತಿದೆ'.

ಒಂದು ಸಂಜೆ ಟಿ.ವಿ. ನೋಡುತ್ತಿದ್ದಾಗ ಚೋಟು ನಾಯಿಯಂತೆ ಮೂಗು ಮಾಡಿದ.

ಜಯ ಅಡುಗೆ ಮನೆಗೆ ಓಡಿದಳು- ಏನಾದರೂ ಸೀದು ಹೋಯ್ತೊ ಎಂದು ನೋಡಲು. ಅಂದು ತಂದ ಸೆಂಟು ಚೆಲ್ಲಿಹೋಯ್ತೆ ಎಂದು ನೋಡಲು ಬಂಗಾರಿ, ನಾನು ಸೇದಿ ಬಿಸಾಡಿದ ಸಿಗರೇಟು ಹಾಸಿಗೆಯನ್ನು ಸುಟ್ಟಿತೇ ಎಂದು ನೋಡಲು ಚೋಟು ಓಡಿದರು.

ಅಂತಹದೇನಿಲ್ಲ. ಮತ್ತೆ ಬಂದವರಿಗೆ ಅದೇ ವಾಸನೆ.

'ಹೌದೋ ಚೋಟು, ವಾಸ್ನೆಗೆ ಹೊಟ್ಟೆ ತೊಳಸತ್ತೆ' ಜಯ ಹೇಳಿದಳು.

'ಯಾವ್ದೋ ಹೆಗ್ಗಣ ಸತ್ತ ವಾಸ್ನೆ' ಬಂಗಾರಿ ಮೂಗು ಮುಚ್ಚಿದಳು.

'ಹಾಲಲ್ಲೇ ಏನೋ ಸತ್ತಿರಬೇಕು' ಜಯ ಮಾತಿಗೆ ಹೂಗುಟ್ಟಿ ಹುಡುಕಾಟ ಪ್ರಾರಂಭವಾಯ್ತು.

ಒಬ್ಬೊಬ್ಬರೂ ಒಂದೊಂದು ವಸ್ತುವನ್ನು ಆಚೀಚೆ ಸರಿಸಿ ಹುಡುಕಿದರು. ಹತ್ತಿರ ಬಂದ ಚೋಟು ಕಿರುಚಿದ.

'ಅಯ್ಯಯ್ಯೋ, ಪಪ್ಪಾನ ತಲೆಯಿಂದ್ಲೇ ವಾಸ್ನೆ'

ನನ್ನ ಸುತ್ತಾ ನಿಂತು ತಲೆ ಮೂಸಿ ವಾಕರಿಸಿದರು. ನನ್ನ ತಲೆ ಕೊಳೆತು ನಾರುತ್ತಿತ್ತಂತೆ? ಆದದ್ದಿಷ್ಟು, ಕಳೆದ ಹದಿನೈದು ದಿನದಿಂದ ವಿಗ್ ಬಿಚ್ಚಿರಲಿಲ್ಲ. ಬಾಲ್ಡಿ ತಲೆ ಬೆವತೂ, ಬೆವತೂ, ವಿಗ್ಗಿಗೆ ಅಂಟಿಕೊಂಡು ರಟ್ಟಂತಾಗಿ, ಹೆಗ್ಗಣ ಸತ್ತ ವಾಸನೆಗೆ ತಿರುಗಿತ್ತು.

'ಶುದ್ಧ ಕೊಳಕು ಮನುಷ್ಯ' ಜಯ ಮೂತಿ ತಿವಿದಿದ್ದಳು. ಅಂದಿನಿಂದ ವಾರಕ್ಕೆರಡು ಬಾರಿ ನನ್ನ ತಲೆಗೆ I mean ವಿಗ್ಗಿಗೆ ಕಂಪಲ್ಸರಿ ಸ್ನಾನ, ಜಯಳ ಕೈಯಲ್ಲಿ.

ಹತ್ತು ಹದಿನೈದು ದಿನ ಕಳೆದಿರಬಹುದು. ಒಂದು ದಿನ ರಣ ಬೇಸಿಗೆಯಲ್ಲಿ ಆಫೀಸಿನಿಂದ ಮನೆಗೆ ಬಂದವನಿಗೆ, ಏನೋ ತುರಿಕೆ. ಅತೀ ಬೆವರಿಗೆ ಇರಬೇಕೆಂದು ಟೋಪಿ ತೆಗೆದು ಹಾಯೆನಿಸುವಷ್ಟು ಕೆರೆದೆ. ಒಂದೆರಡು ದಿನ ಆಫೀಸಿನಿಂದ ಬಂದ ತಕ್ಷಣ ತುರಿಸಿಕೊಳ್ಳಬೇಕೆನಿಸುತ್ತಿತ್ತು. ತುರಿಸಿಕೊಂಡೆ.

ಮುಂದೆ ಒಂದು ವಾರ ಟೋಪಿ ಹಾಕಿಕೊಂಡರೆ ಭಯಂಕರ ಉರಿ. ಆಫೀಸಿನಲ್ಲೂ ಸಹಿಸಲಾಗಲಿಲ್ಲ.

'ಏನೋ ಗುಳ್ಳೆಗಳು' ಜಯ ಹೇಳಿ ಯಾವುದೋ ಮುಲಾಮು ಹಚ್ಚಿದಳು. ಒಂದು ದಿನ ಸುಮ್ಮನಿತ್ತು. ಮರು ದಿನ ಹುಚ್ಚು ಹಿಡಿಯುವಷ್ಟು ಕಡಿತ. ಕೆರೆದೆ. ವಾರದೊಳಗೆ ಇಡೀ ತಲೆಯೆಲ್ಲಾ ಹಬ್ಬಿತ್ತು.

ಗಾಬರಿಗೊಂಡು ಕನ್ನಡಿ ಮುಂದೆ ನಿಂತೆ. ಯಾವುದು ಜರ್ಮನ್ ಶೆಫರ್ಡ್ ನಾಯಿಯಂತೆ



ನುಣುಪಾಗಿ ಮಿಂಚುತ್ತಿತ್ತೋ, ಆ ಬಾಲ್ಡಿ ಬುರುಡೆ, ಮೈಯ್ಯೆಲ್ಲಾ ಕಜ್ಜಿ ಹತ್ತಿದ ಬೀದಿ ನಾಯಿಯಂತೆ ಕಂಡಿತು. ತಲೆ ತುಂಬಾ ಕೆಂಪು, ಬೂದು ಮಿಶ್ರಿತ ಕಾಸಗಲದ ಮಚ್ಚೆಗಳು. ಹುಚ್ಚು ಹಿಡಿದಂತಾಯ್ತು.

'ಇದು ಫಂಗಲ್ ಇನ್‌ಫೆಕ್ಷನ್ ಇರಬಹುದು'

'ಇದು ಸ್ಕಿನ್ ಅಲರ್ಜಿ'

'ಇದು ಖಂಡಿತಾ ಎಕ್ಸಿಮಾನೇ'

'ಯಾವುದಕ್ಕೂ ತಲೆ ಕೆಡಿಸಿಕೊಳ್ಳಬೇಡಿ. ಆಫ್ಟರ್ ಆಲ್ ಇದು ರಿಂಗ್ ವರ್ಮ್'

ಒಬ್ಬೊಬ್ಬ ಚರ್ಮ ರೋಗ ತಜ್ಞರೂ ಒಂದೊಂದು ಹೆಸರಿಟ್ಟರು. 'ಅಯ್ಯೋ ಶಿವನೇ' ಒಂದೇ ಖಾಯಿಲೆಗೆ ನಾನು ಸುಸ್ತು. ಇವುಗಳಲ್ಲಿ ಯಾವುದು ನನಗಿದೆ? ಹಲುಬಿದೆ. ಪ್ರತಿಯೊಬ್ಬರೂ ಕೊಟ್ಟ ಮುಲಾಮು ಹಚ್ಚಿ, ಮಾತ್ರೆ ನುಂಗಿದೆ. ಒಂದಂಗುಲವೂ ಜರುಗಲಿಲ್ಲ.

ಆಫೀಸಿಗೆ ರಜಾ ಗುಮಕಿ ಮನೆಯಲ್ಲೇ ಕೂರುವಂತಾಯ್ತು. ಜಯ, ಚೋಟು, ಬಂಗಾರಿಗೆ ಒಂಥರಾ ಅನುಕಂಪ.

ನನ್ನ ತಲೆ ಪೂರಾ ಕೆಟ್ಟಿದ್ದು ಪರಮನಿಂದ. ಚಾಂಡಾಲ ಒಂದು ದಿನ ಬಂದವನೇ ತಲೆಯನ್ನು ನೋಡಿ.

'ಅಯ್ಯಯ್ಯೋ, ಗುರುವೇ ಇದು ಆನೆಕಜ್ಜಿ. ಎಲ್ಲರಿಗೂ ಹರಡತ್ತೆ' ಎಂದವನೇ ದೂರ ಹೋದ. ಅಂದಿನಿಂದ ಮನೆಯಲ್ಲಿ ಒಬ್ಬಂಟಿಯಾದೆ. ಯಾರೂ ನನ್ನ ಸಹವಾಸ ಮಾಡಲಿಲ್ಲ. ಪರಮ ಕೊಟ್ಟ ಶಿಕ್ಷೆ: ಏಕಾಂತ ವಾಸ. ದೇವರೇ ಎಂದು ಮೊರೆಯಿಟ್ಟೆ. ತಲೆ ಪರಚಿಕೊಳ್ಳಲು ಆಗದಲ್ಲ.

ಕೊನೇ ನಿರ್ಧಾರ. ಒಬ್ಬ ವಯಸ್ಸಾದ ಚರ್ಮರೋಗ ತಜ್ಞರಿಗೆ ತೋರಿಸಿದೆ. ಸಾವಧಾನವಾಗಿ ವಿಚಾರಿಸಿ ಹೇಳಿದರು.

'ಬಹುಶಃ ಇದು ಡಿಟರ್‌ಜೆಂಟ್ ಅಲರ್ಜಿಯಿರಬಹುದು'

'ಇರಬಹುದು ಡಾಕ್ಟ್ರೇ, ಇವರ ವಿಗ್ಗು ಕ್ಲೀನಾಗಿರಲೀಂತ ಡಿಟರ್ಜೆಂಟ್ ಸೋಪಾಕಿ ತೊಳೀತಿದ್ದೆ' ದೊಡ್ಡ ಬಂಗಾರಿ ಬಾಯಿಬಿಟ್ಟರು.

ಬಟ್ಟೇ ಸೋಪು! ನನ್ನ ತಲೆಗೆ!

ಹುರ್ರಾsss! ಕೊನೆಗೂ ಕಾರಣ ಸಿಕ್ಕಿತ್ತು.

ಮುಂದೆ ಒಂದು ತಿಂಗಳಲ್ಲಿ ನನ್ನ ಬಾಲ್ಡಿ ಮೊದಲಿನಂತಾಯ್ತು - ಮಾತ್ರೆ ಮುಲಾಮಿನಿಂದ.

ಈಗ ನನ್ನ ಟೋಪಿ I mean ವಿಗ್ಗು ಕನ್ನಡಿ ಪಕ್ಕದ ಮೊಳೆಯಲ್ಲಿ ನೇತಾಡ್ತಾಯಿದೆ. ಹಾಕಿಕೊಂಡರೆ ವಾಸನೆ, ತೊಳೆದರೆ ಅಲರ್ಜಿ.

ನನ್ನ ರೇಗಿಸಲು, ಅಲ್ಲ ಬ್ಲಾಕ್‌ಮೇಲ್ ಮಾಡಲು ಚೋಟು ಹೊಸಾ ಪದ್ಯ ಕಟ್ಟಿದ್ದ.

'ದುಡ್ಡು ಹೋಯ್ತು, ಟೋಪಿ ಬಂತು, ಡುಂ, ಡುಂ.

ಟೋಪಿ ಹೋಯ್ತು, ಕಜ್ಜಿ ಬಂತು, ಡುಂ, ಡುಂ.'

ದವಡೆ ಭದ್ರವಾಗಿದೆ. ಈಗೀಗ ಕೋಪ ಬಂದರೆ ಅದನ್ನೇ ಕಟಕಟ ಮಾಡುತ್ತೇನೆ. ಬಾಲ್ಡಿ ಬುರುಡೆಯ ಗೋಜಿಗೇ ಹೋಗುವುದಿಲ್ಲ.


ಈಗ ಹೇಳಿ, ಬುದ್ಧಿವಂತರು ಯಾರು?

ಬಾಲ್ಡಿಗಳೋ? ಬಾಂಡ್ಲಿಗಳೋ?

■ **ಡಾ.ಎಚ್.ಎಸ್. ವೆಂಕಟೇಶ್**

ಕ್ವಿಜ್ - 15 ಬಹುಮಾನ ವಿಜೇತರು

ಪ್ರಥಮ ಬಹುಮಾನ
ರೂ. 500-00



ಟಿ.ಬಸವರಾಜ್ ಉದಗೀರ
ನಂ.215/ಎ, ಚಿಕ್ಕಬೊಮ್ಮಸಂದ್ರ,
ಜಿ.ಕೆ.ವಿ.ಕೆ. ಪೋಸ್ಟ್,
ಯಲಹಂಕ, ಉತ್ತರ ತಾಲೂಕು
ಬೆಂಗಳೂರು - 560 065

ದ್ವಿತೀಯ ಬಹುಮಾನ
ರೂ. 200-00

ಡಿ.ಸಿ. ಉಮೇಶ್
ಲ್ಯಾಬ್ ಅಸಿಸ್ಟೆಂಟ್, ಕೆಮಿಸ್ಟ್ರಿ ವಿಭಾಗ,
ಎಸ್.ಟಿ.ಜೆ. ಇಂಜಿನಿಯರಿಂಗ್ ಕಾಲೇಜು
ರಾಣೇಬೆನ್ನೂರು - 581 115

ಸಮಾಧಾನಕರ ಬಹುಮಾನ
ತಲಾ ರೂ. 100/-

ಎಸ್. ಸಿದ್ಧರಾಜು
s/o ಸಿದ್ಧರಾಮಯ್ಯ, ನಂ, 29/20,
ಶ್ರೀ ರಾಮಮಂದಿರ ಬೀದಿ,
ಎಲೆಕೇರಿ, ಚನ್ನಪಟ್ಟಣ ತಾಲೂಕು
ಬೆಂಗಳೂರು ಜಿಲ್ಲೆ - 571 501.

ವಿಶ್ವನಾಥ್ ಮೇಣ್ಣುಮನೆ
c/o ಜಿ.ಟಿ. ಕಂಪನಿ,
ಡಿ.ಟಿ. ರೋಡ್, ಪಿ.ಬಿ.ನಂ.7,
ಯಲ್ಲಾಪುರ (ಉತ್ತರ ಕನ್ನಡ) 581 359.

ವಿನೋದ ವೀ.ನಾಯಕ
ಬೂದಿಹಾಳ (ಎಸ್.ಜಿ.)
ತಾ : ಬೀಳಗಿ
ಜ : ಬಾಗಲಕೋಟ - 587 117

ಕ್ವಿಜ್ - 15ರ ಸರಿಯುತ್ತರ

1. ಮಾಲಿಕಯ್ಯ ಗುತ್ತೇದಾರ್
2. ಹೊಯ್ಸಳ
3. ಕೊಡಗು
4. ಶ್ರೀನಾಥ್
5. ಆಂಧ್ರಪ್ರದೇಶ

ಸೂಚನೆಗಳು

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್ ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿಕೊಳ್ಳಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15-10-1998**

ಕ್ವಿಜ್ - 16

1. ಹೈದರಾಬಾದ್ ಕರ್ನಾಟಕ ಸುವರ್ಣ ಸ್ವಾತಂತ್ರ್ಯವನ್ನು ಎಂದು ಆಚರಿಸಲಾಯಿತು ?

   ....

2. 'ಬದುಕು' ಮಾಸಿಕದ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಡಾ.ಸಿ.ಆರ್.ಚಂದ್ರಶೇಖರ್ ಅವರ ಲೇಖನದ ಶೀರ್ಷಿಕೆ ಏನು?

   ....

3. 'ಮನೆತನ' ಟಿ.ವಿ. ಧಾರಾವಾಹಿಯ ನಿರ್ದೇಶಕರ ಹೆಸರೇನು ?

   ....

4. ರಾಜಕಾರಣಿ ಬಿ.ಎಸ್.ಯಡಿಯೂರಪ್ಪ ಯಾವ ಪಕ್ಷಕ್ಕೆ ಸೇರಿದವರು ?

   ....

5. 1992ರ ವಿಶ್ವಕಪ್ನ್ನು ಯಾವ ದೇಶದ ಕ್ರಿಕೆಟ್ ತಂಡ ಗೆದ್ದಿತ್ತು ?

   ....

ಹೆಸರು..
ವಿಳಾಸ..
....
....
ಪಿನ್ ಕೋಡ್.................................. ದೂರವಾಣಿ...............................
ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು,** ಅಂಚೆ ಪೆಟ್ಟಿಗೆ 7951, ಬಸವೇಶ್ವರ ನಗರ, ಬೆಂಗಳೂರು-79.

ನಿಮ್ಮ ಹಲ್ಲು : ನಿಮಗೆಷ್ಟು ಗೊತ್ತು ?

■ ಡಾ. ಅರವಿಂದ ಡಿ.ಎಸ್., ಬಿ.ಡಿ.ಎಸ್., ದಂತವೈದ್ಯರು,
ವಿಶ್ವರಿ ದಂತ ಚಿಕಿತ್ಸಾಲಯ, 168/ಎ ಅನುಗ್ರಹ ಮಹಡಿ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು.

ಹಲ್ಲು ಎಂದರೇನು ?


ಹಲ್ಲು ಎಂದರೆ ಮಾನವನು ಆಹಾರವನ್ನು ಜಗಿಯಲು ಉಪಯೋಗಿಸುವ ಬಾಯಲ್ಲಿರುವ ಒಂದು ಅಂಗ. ಇದರಲ್ಲಿ ಅನೇಕ ತರಹದ ಖನಿಜಗಳಿವೆ. ಉದಾಹರಣೆಗಾಗಿ ಕ್ಯಾಲ್ಸಿಯಮ್, ಪೊಟ್ಯಾಸಿಯಮ್, ಮಾಗ್ನೇಶಿಯಂ. ಹಲ್ಲು ಶಕ್ತಿಯಲ್ಲಿ ಮೊಳೆಗಿಂತ ಗಟ್ಟಿ. ಇದು ಜಗಿಯುವ ಯಂತ್ರವೇ ಸರಿ.

ಬಾಲ್ಯದಲ್ಲಿ ಸುಮಾರು 6 ತಿಂಗಳಿಂದ 2 ½ ವರ್ಷದವರಿಗೆ 20 ಹಲ್ಲುಗಳು ಹುಟ್ಟಿಕೊಳ್ಳುತ್ತವೆ. 6 ವರ್ಷದಿಂದ 18 ವರ್ಷದೊಳಗೆ 32 ಹಲ್ಲುಗಳಿರುತ್ತವೆ. ಇದರಲ್ಲಿ ಎರಡು ಹಲ್ಲುಗಳು ಜಾಸ್ತಿ ಅಥವಾ ಕಡಿಮೆ ಆಗಬಹುದು. ಸುಮಾರು ಹನ್ನೆರಡು ವರ್ಷಕ್ಕೆ, ಬಾಯಲ್ಲಿ ಬೆಳೆದಿರುವ 25 ಹಲ್ಲುಗಳು ಹಾಗೂ ಬೆಳೆಯದೆ ಇರುವ ಹಲ್ಲು ಸಸಿಗಳು ಸುಮಾರು 27 ಇರುತ್ತವೆ. ಕೊನೆಯ ನಾಲ್ಕು ದವಡೆಯ ಹಲ್ಲುಗಳು ಬುದ್ಧಿ ಹಲ್ಲುಗಳು. ಇವು ಸುಮಾರು 18 ವರ್ಷದಿಂದ 45 ವರ್ಷದೊಳಗೆ ಬರಬಹುದು, ಬರದೆ ಇರಬಹುದು. ಸಾಮಾನ್ಯವಾಗಿ ಶೇಕಡ 25 ರಷ್ಟು ಹಲ್ಲುಗಳು ಸರಿಯಾದ ಸ್ಥಾನದಲ್ಲಿರುವುದಿಲ್ಲ; ಬೇಕಾಬಿಟ್ಟಿಯಾಗಿ ಹುಟ್ಟಿಕೊಂಡಿರುತ್ತವೆ. ಇಂತಹ ಹಲ್ಲುಗಳನ್ನು ಮುನ್ನೆಚ್ಚರಿಕೆಯಾಗಿ ತೆಗೆಯಿಸಿಕೊಳ್ಳುವುದು ಅತ್ಯವಶ್ಯಕ.

ಹಲ್ಲುಗಳ ಪ್ರಾಮುಖ್ಯ

ಹಲ್ಲಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದರಿಂದ ಮಾನವ ತನ್ನ ಸಂಪೂರ್ಣ ಆರೋಗ್ಯವನ್ನು ಕಾಪಾಡಿಕೊಳ್ಳಬಲ್ಲ. ಹಲ್ಲುಗಳು ಆರೋಗ್ಯವಾಗಿ ಇರುವುದರಿಂದ ಆತ ರುಚಿರುಚಿಯಾದ ಗಟ್ಟಿಮುಟ್ಟಾದ ಆಹಾರವನ್ನು ತಿನ್ನಬಹುದು. ಮನುಷ್ಯ ಜೀವಿಸಲಿಕ್ಕೆ ಚೆನ್ನಾಗಿ ತಿನ್ನಬೇಕು ಹಾಗೂ ದುಡಿಯಬೇಕು. ಇದು ಒಂದರ ಮೇಲೊಂದು ಅವಲಂಬಿತವಾಗಿದೆ. ಹಾಗೆಯೇ ದಂತಗಳು ಒಬ್ಬ ವ್ಯಕ್ತಿಯ ಸೌಂದರ್ಯ ಹಾಗೂ ವ್ಯಕ್ತಿತ್ವಕ್ಕೆ ಕಾರಣವಾಗಿರುತ್ತವೆ. ಅಚ್ಚುಕಟ್ಟಾಗಿ ದಾಳಿಂಬೆ ಬೀಜದಂತೆ ಅಥವಾ ಮುತ್ತಿನ ಸರದಂತೆ ಜೋಡಿಸಿದ ಹಲ್ಲುಗಳು ವ್ಯಕ್ತಿಯ ಸೌಂದರ್ಯವನ್ನು ದ್ವಿಗುಣಪಡಿಸುತ್ತದೆ. ನವೀನ ಚಿಕಿತ್ಸೆಯಿಂದ ಎಂಥ ಹಾಳಾದ ಹಲ್ಲುಗಳನ್ನು ಸಹ ಉಳಿಸಿಕೊಳ್ಳಬಹುದು ಅಥವಾ ಸಿಕ್ಕಾಪಟ್ಟೆ ವಕ್ರದಂತ (ಹಲ್ಲುಬ್ಬು) ಇರುವವರು ಸಹ 13 ರಿಂದ 18 ವರ್ಷದ ಇತಿಮಿತಿಯೊಳಗೆ ಸರಿಪಡಿಸುವುದರಿಂದ ಅನಾವಶ್ಯಕವಾದ ಮಾನಸಿಕ ಹಿಂಸೆಯಿಂದ ಪಾರಾಗ

ಹಲ್ಲಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದರಿಂದ ಮಾನವ ತನ್ನ ಸಂಪೂರ್ಣ ಆರೋಗ್ಯವನ್ನು ಕಾಪಾಡಿಕೊಳ್ಳಬಲ್ಲ.



ಹಲ್ಲು ರೋಗ ತಡೆಯಲು ಹಲವು ಕ್ರಮಗಳು

- ಹಲ್ಲಿನ ಅಥವಾ ವಸಡಿನ ರೋಗ ಬಂದ ಮೇಲೆ ಯಾತನೆ ಅನುಭವಿಸುವುದಕ್ಕಿಂತ ರೋಗ ಬರದಂತೆ ಎಚ್ಚರಿಕೆ ವಹಿಸಬೇಕು (Prevention is better than cure).
- ದಿನಕ್ಕೆ ಎರಡು ಸಲ, ಬೆಳಿಗ್ಗೆ ಹಾಗೂ ರಾತ್ರಿ ಊಟ ಆದ ನಂತರ ವೈಜ್ಞಾನಿಕವಾಗಿ ಹಲ್ಲು ಉಜ್ಜಬೇಕು.
- ವರ್ಷಕ್ಕೊಮ್ಮೆಯಾದರೂ ದಂತವೈದ್ಯರಿಂದ ಹಲ್ಲುಗಳನ್ನು ಶುಚಿಮಾಡಿಸಿಕೊಳ್ಳಬೇಕು. ಪಾಚಿಯನ್ನು ಶುಚಿಮಾಡಿಕೊಳ್ಳುವುದರಿಂದ ವಸಡಿನ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಹೀಗೆ ಶುಚಿಮಾಡಿಕೊಳ್ಳುವುದರಿಂದ ಹಲ್ಲು ಸಡಿಲವಾಗುತ್ತವೆಂಬ ಮೂಢನಂಬಿಕೆಯಿದೆ. ಇದು ಶೇಕಡಾ ನೂರಕ್ಕೆ ನೂರು ತಪ್ಪು.
- ಹಲ್ಲುಗಳನ್ನು ಪ್ರತಿ ಸಲ ಉಜ್ಜಿದ ಮೇಲೆ ಚೆನ್ನಾಗಿ ವಸಡನ್ನು ಉಜ್ಜಿಕೊಳ್ಳಬೇಕು. ಇದರಿಂದ ಹಲ್ಲಿಗೆ ಚೆನ್ನಾಗಿ ರಕ್ತಸಂಚಾರ ಉಂಟಾಗಿ ಅವುಗಳ ಆರೋಗ್ಯ ವೃದ್ಧಿಸುತ್ತದೆ.
- ವಿಶೇಷ ರೀತಿಯ ಸ್ವಯಂ ಶುಚಿ ಮಾಡುವಿಕೆ ವಿಧಾನದಿಂದ ನಾವೇ ಶುಚಿಮಾಡಿಕೊಳ್ಳಬಹುದು. ರೇಷ್ಮೆಯ ದಾರದಿಂದ ಹಲ್ಲುಗಳ ಮಧ್ಯೆ ಸಿಕ್ಕಿಹಾಕಿಕೊಂಡ ಆಹಾರದ ಕಣಗಳನ್ನು ಶುಚಿಮಾಡುವ ಈ ವೈಜ್ಞಾನಿಕ ವಿಧಾನವನ್ನು ಹಲ್ಲುಗಳು ತುಂಬಾ ಅಂತರ ವಿರುವವರು ತಪ್ಪದೇ ಅನುಸರಿಸಬೇಕು.
- ದಯವಿಟ್ಟು ಮದ್ಯಪಾನ ಬಿಟ್ಟುಬಿಡಿ. ಇದರಿಂದ ಹಲ್ಲು ವಯಸ್ಸಿಗೆ ಮೊದಲೇ ಅಲ್ಲಾಡುತ್ತವೆ. ಎಲೆ ಅಡಿಕೆ ಮತ್ತು ಹೊಗೆಸೊಪ್ಪನ್ನು ಸುಮಾರು 10-15 ವರ್ಷ ಅಗಿದರೆ ಬಾಯಿಯ ಅರ್ಬುದ ಕಾಯಿಲೆ ಆಗುತ್ತದೆ. ಆದ್ದರಿಂದ ಎಲೆ ಅಡಿಕೆ, ಪಾನ್‌ಪರಾಗ್ ಅಗಿಯುವುದನ್ನು ಬಿಟ್ಟುಬಿಡಬೇಕು. ಒಂದು ವೇಳೆ ಅರ್ಬುದ ಕಾಯಿಲೆ ಕಾಣಿಸಿಕೊಂಡರೆ ಕಿದ್ವಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳಬಹುದು.
- ತಿಂಡಿ ಹಾಗೂ ಊಟಗಳ ಮಧ್ಯೆ ಸಿಹಿಪದಾರ್ಥ ತಿನ್ನುವುದನ್ನು ಕಡಿಮೆ ಮಾಡಬೇಕು. ಸಿಹಿಪದಾರ್ಥವನ್ನು ತಿಂದ ಮೇಲೆ ಬಾಯಿಯನ್ನು ಶುಚಿಯಾಗಿ ತೊಳೆದುಕೊಳ್ಳಬೇಕು. ಇದರಿಂದ ರೋಗಾಣುಗಳ ಸಂಖ್ಯೆ ಕಡಿಮೆಯಾಗಿ ಉಂಟಾಗಬಹುದಾದ ರೋಗವನ್ನು ತಡೆಯಬಹುದು.

ಬಹುದು. ಸಂಪೂರ್ಣ ದಂತಾರೋಗ್ಯ ಹೊಂದುವುದು ಅತ್ಯವಶ್ಯ. ಇದು ಹಲ್ಲು ಇರುವವರ ಪಾಡಾದರೆ, ಸುಮಾರು 50 ರಿಂದ 60 ವರ್ಷದ ವೃದ್ಧರಿಗೆ ಒಂದಿಲ್ಲ ಒಂದು ಕಾರಣದಿಂದ 75 % ಹಲ್ಲುಗಳು ಹಾಳಾಗಿಹೋಗುತ್ತವೆ. ಅವರು ಉಳಿದ ಹಲ್ಲುಗಳನ್ನು ತೆಗೆಯಿಸಿ ಹಲ್ಲಿನ ಪಂಕ್ತಿಯನ್ನು ಹಾಕಿಸಿಕೊಳ್ಳಬೇಕು. ಯಾವುದೇ ಹಲ್ಲು ಸ್ವಲ್ಪ ಹಾಳಾದಾಗ (ರೋಗಗ್ರಸ್ತ) ಸರಿಯಾದ ಚಿಕಿತ್ಸೆಯನ್ನು ಪಡೆದಿದ್ದೇ ಆದರೆ, ಕೊನೆಯವರಿಗೆ ಯಾವುದೇ ತರಹದ ಹಲ್ಲಿನ ರೋಗದಿಂದ ನರಳುವ ಅವಸ್ಥೆ ಆಗುವುದಿಲ್ಲ.

ಹಲ್ಲಿನ ರೋಗಗಳು

ಬಾಯಿ ರೋಗಗಳಲ್ಲಿ ಹಲ್ಲುರೋಗ, ವಸಡು ರೋಗ ಎಂದು ಎರಡು ವಿಧ. ಹಲ್ಲಿಗೆ ತಂತಾನೇ ಯಾವುದೇ ತರಹದ ರೋಗ ಬರುವುದಿಲ್ಲ. ಯಾವಾಗ ಬಾಯಲ್ಲಿ ಹಲ್ಲಿನ ಮೇಲೆ ಆಹಾರ ಶೇಖರಣೆ ಆಗುತ್ತದೆಯೋ ಆಗ ರೋಗಾಣುಗಳು ಹುಟ್ಟಿಕೊಳ್ಳತ್ತವೆ; ಹಲ್ಲಿನ ದಂತಕ್ಷಯ ಪ್ರಾರಂಭವಾಗುತ್ತದೆ.


ದಂತಕ್ಷಯ

ಇದು ಹಲ್ಲಿನ ಮೇಲ್ಕೆ ಕಪ್ಪು, ಹಳದಿ, ನೀಲಿ ಚುಕ್ಕೆಯ ಹಾಗೆ ಕಾಣಿಸಿಕೊಳ್ಳುತ್ತದೆ. ಹೊರ ಕವಚದ ದಂತಕ್ಷಯಕ್ಕೆ ತುತ್ತಾದಾಗ ಯಾವುದೇ ತರಹದ ನೋವು ಇರುವುದಿಲ್ಲ. ಒಳಕವಚದಲ್ಲಿ ದಂತಕ್ಷಯ ಇರುವಾಗಲೂ ಯಾವ ತರಹದ ನೋವು ಕಾಣಸುವುದಿಲ್ಲ. ಯಾವಾಗ ದಂತಕ್ಷಯ ಮೂರನೆಯ ಪದರನ್ನು ತಲುಪುತ್ತದೆಯೊ ಆಗ ಹಲ್ಲು ನೋವು ಶುರುವಾಗುತ್ತದೆ. ಹಲ್ಲು ನೋವು ಶುರುವಾದಾಗ ಸರಿಯಾದ ಮಾತ್ರೆ ಸೇವಿಸದಿದ್ದರೆ ಆ ಹಲ್ಲಿನ ಬೇರಿನ ಕೆಳಗೆ ಗಡ್ಡೆ ಕಟ್ಟಿ ತೊಂದರೆಯಾಗುತ್ತದೆ. ಹೀಗಾದ ಹಲ್ಲನ್ನು ತೆಗೆಯಿಸಿಕೊಳ್ಳಬೇಕಾಗುತ್ತದೆ. ಸೂಕ್ತ ವೇಳೆಗೆ ದಂತವೈದ್ಯರನ್ನು ಕಂಡು ಬೇರಿನ ಕಾಲುವೆಯ ಚಿಕಿತ್ಸೆಯನ್ನು ಮಾಡಿಸಿಕೊಂಡು ಹಲ್ಲನ್ನು ಉಳಿಸಿಕೊಳ್ಳಬಹುದು. ಒಂದು ವೇಳೆ ಹುಳುಕಾದ ಹಲ್ಲನ್ನೇ ಸುಮಾರು ವರ್ಷ ಮಾತ್ರ ತಿಂದು ಹಾಗೇಯೆ ಬಿಟ್ಟರೆ ಮೂಳೆ ಅರ್ಬುದ ಕಾಯಿಲೆ ಆಗುತ್ತದೆ.

ರೋಗ ನಿವಾರಣೆ

ಕ್ಷಯವನ್ನು ಆದಷ್ಟು ಬೇಗನೆ ಕಂಡುಹಿಡಿದು ಹಲ್ಲಿಗೆ ಗಾರೆಯನ್ನು ಅಥವಾ ಬೆಳ್ಳಿಯನ್ನು ತುಂಬಿಸಿಕೊಳ್ಳಬೇಕು. ಇದರಿಂದ ದಂತಕ್ಷಯ ವನ್ನು ನಿರ್ಮೂಲನ ಮಾಡಿ ಸುಮಾರು 10 ರಿಂದ 15 ವರ್ಷ ಹಲ್ಲನ್ನು ಚೆನ್ನಾಗಿ ಇಟ್ಟು ಕೊಳ್ಳಬಹುದು. ಹಾಗೂ ಹಲ್ಲಿನ ಬೇರಿನ ಕಾಲುವೆಯ ಚಿಕಿತ್ಸೆಯನ್ನು (Root canal treatment) ಮಾಡಿಸಿಕೊಳ್ಳುವುದರಿಂದ ಹಲ್ಲು ನಿರ್ಜೀವವಾದರೂ, ಅದು ಮಾಡಬೇಕಾದ ಕೆಲಸ ವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ಒಂದು ವೇಳೆ ಯಾವುದೇ ತರಹದ ವಸಡಿನ ತೊಂದರೆಯಿದ್ದರೆ ವಸಡಿನ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಬಹುದು.



ಹಲ್ಲುಗಳು ಒಬ್ಬ ವ್ಯಕ್ತಿಯ ಸೌಂದರ್ಯ ಹಾಗೂ ವ್ಯಕ್ತಿತ್ವಕ್ಕೆ ಕಾರಣವಾಗಿರುತ್ತವೆ.

ವಕ್ರದಂತ (ಹಲ್ಲುಬ್ಬು)

ವಕ್ರದಂತ ಅಥವಾ ಹಲ್ಲುಬ್ಬು ವಿಶೇಷವಾಗಿ ಅನುವಂಶೀಯವಾಗಿ ಬರುವ ಸಮಸ್ಯೆ. ತಂದೆ, ತಾಯಿ ಅಥವಾ ಅಜ್ಜ ಅಜ್ಜಿ ಯಾರಿಗಾದರೂ ವಕ್ರದಂತ ಇದ್ದರೆ ಮಗ, ಮೊಮ್ಮಕ್ಕಳಿಗೆ ಬರುತ್ತದೆ.

ಇದಕ್ಕೆ ಇನ್ನೊಂದು ಕಾರಣ, ಮಕ್ಕಳು ಸುಮಾರು 6 ರಿಂದ 8ನೆಯ ವರ್ಷದಲ್ಲಿ ಹೆಬ್ಬೆರಳು ಚೀಪುವುದು. ಮೇಲ್ದವಡೆ ಹಾಗೂ ಕೆಳದವಡೆ ಗಾತ್ರದಲ್ಲಿ ವ್ಯತ್ಯಾಸವಿದ್ದರೆ ಹಲ್ಲುಬ್ಬು ಕಾಣಿಸಿಕೊಳ್ಳುವುದು.

ಮೇಲ್ದವಡೆ ಹಾಗೂ ಕೆಳದವಡೆ ಜೋಡಣೆ ಯಲ್ಲಿ ಹೆಚ್ಚು ಕಡಿಮೆ ಆದರೂ ಹಲ್ಲುಬ್ಬು ಕಾಣಿಸಬಹುದು. ವಿಕಾರವಾಗಿ ಕಾಣುವ ವಕ್ರ ದಂತಗಳಿಂದ ಅನಾನುಕೂಲಗಳು ಹಲವಾರು. ಮೊದಲನೆಯದಾಗಿ ಇವು ಒಬ್ಬ ವ್ಯಕ್ತಿಯ ಸೌಂದರ್ಯಕ್ಕೆ ಹಾಗೂ ವ್ಯಕ್ತಿತ್ವಕ್ಕೆ ಮಾರಕ ವಾಗುತ್ತವೆ.

- ವಕ್ರದಂತದಿಂದ ಸರಿಯಾಗಿ ಹಲ್ಲುಗಳನ್ನು ಉಜ್ಜಲು ಆಗುವುದಿಲ್ಲ. ಇದರಿಂದ ದಂತಕ್ಷಯ ಕಾಣಿಸಬಹುದು.
- ಸಮಾಜದ ಜನರು ಹಲ್ಲುಬ್ಬು ಇರುವವರನ್ನು ಮೃಗಾಲಯದ ಪ್ರಾಣಿಯಂತೆ ನೋಡುತ್ತಾರೆ.
- ಇಂಥವರ ಮದುವೆ ತುಂಬಾ ಕಷ್ಟ.
- ಪ್ರತಿಭೆಗೆ ತಕ್ಕ ಉನ್ನತ ಹುದ್ದೆ ವಕ್ರದಂತದಿಂದಲೇ ತಪ್ಪಬಹುದು.
- ಅನಾವಶ್ಯಕವಾದ ಮಾನಸಿಕ ಬಾಧೆ ಕಾಡುತ್ತದೆ.

ವಕ್ರದಂತ ಚಿಕಿತ್ಸೆ

ವಕ್ರದಂತ ಅಥವಾ ಹಲ್ಲುಬ್ಬುನ್ನು ಬೇಗನೆ ಪತ್ತೆ ಮಾಡಿದರೆ ಸರಿಪಡಿಸಬಹುದು. ಸುಮಾರು 13 ರಿಂದ 18 ವರ್ಷದ ಇತಿಮಿತಿಯೊಳಗೆ ಇದ್ದರೆ ಚಿಕಿತ್ಸೆಯನ್ನು ಮಾಡಬಹುದು. ಯಾವುದೇ ತರಹದ ಹಲ್ಲುಬ್ಬು ಸರಿಪಡಿಸಲು ಮೇಲ್‌ದವಡೆ ಯಲ್ಲಿ 2 ಕೆಳದವಡೆಯಲ್ಲಿ 2 ಹಲ್ಲುಗಳನ್ನು ತೆಗೆಯ ಬೇಕಾಗುವುದು. ಇದರಿಂದ ಸುಮಾರು 1 ಸೆಂ.ಮೀ ಹಲ್ಲನ್ನು ತಳ್ಳಬಹುದು.

ಹಾಕಿ ತೆಗೆಯುವ ಕಂಬಿಯ ಪಟ್ಟಿಯನ್ನು ಸುಮಾರು 10 ರಿಂದ 12 ತಿಂಗಳು ಧರಿಸಬಹುದು. 6 ರಿಂದ 8 ತಿಂಗಳು ತೆಗೆಯಲಾರದ ಪಟ್ಟಿ ಹಾಕುವ ವಿಧಾನವೂ ಇದೆ. ಮೂಳೆಗಳ ವ್ಯತ್ಯಾಸವನ್ನು ದವಡೆಯ ಮುಖದ ಶಸ್ತ್ರಚಿಕಿತ್ಸೆಯ ಮೂಲಕ

ಸರಿಪಡಿಸಲು ಸಾಧ್ಯ.

ಆಧುನಿಕ ಚಿಕಿತ್ಸಾ ಕ್ರಮಗಳು

ಬೇರಿನ ಕಾಲುವೆಯ ಚಿಕಿತ್ಸೆ (Root canal treatment) ಯನ್ನು ಮಾಡಿಸಿದಾಗ ಸುಮಾರು 10 ರಿಂದ 15 ವರ್ಷ ಹಲ್ಲು ತನ್ನ ಕೆಲಸವನ್ನು ಯಾವುದೇ ತೊಂದರೆಯಿಲ್ಲದೆ ಮಾಡುತ್ತದೆ.

ವಸಡಿನ ಶಸ್ತ್ರಚಿಕಿತ್ಸೆ (Periodental surgery) ಯನ್ನು ಮಾಡಿಸಿಕೊಂಡಾಗ ಹಲ್ಲಿನ ಕೆಳಭಾಗದಲ್ಲಿರುವ ದುರ್ಮಾಂಸ (Guanulation Tissue) ಶುಚಿಯಾಗುವುದರಿಂದ ಹಲ್ಲು ಭದ್ರವಾಗುವುದು.

ಯಾವುದೇ ಅಪಘಾತದಲ್ಲಿ ಮುಖದ ಮೂಳೆಗಳು ಮುರಿದು ವ್ಯಕ್ತಿಯು ವಿಕಾರವಾದಾಗ ದವಡೆಯ ಮುಖದ ಶಸ್ತ್ರಚಿಕಿತ್ಸೆಯಿಂದ ಮೊದಲಿನಂತೆ ಸುಂದರವಾಗಿ ಕಾಣುವಂತೆ ಸರಿಪಡಿಸಬಹುದು.

ಸೌಂದರ್ಯಕ್ಕೋಸ್ಕರವಾಗಿಯೇ (Cosmetic Dentistry) ದಂತ ಚಿಕಿತ್ಸೆ ಇದೆ. ಇದರಿಂದ ಮುಖದ, ಮೂಗಿನ, ದವಡೆಯ ಹಲವಾರು ವಿಕಾರಗಳನ್ನು ಸರಿಪಡಿಸಬಹುದು.

ದಂತ ವಕ್ರತೆಯನ್ನು ಅನೇಕ ಹೊಸಹೊಸ ವಿಧಾನಗಳಿಂದ ಸರಿಪಡಿಸಬಹುದು.

ಕೃತಕ ಹಲ್ಲಿನ ಮಾದರಿ

ಕೃತಕ ಹಲ್ಲುಗಳನ್ನು ಕೆಳಗೆ ಹೇಳಿದಂತೆ ಜೋಡಿಸಬಹುದು.

- ಹಾಕಿ ತೆಗೆಯುವ ಹಲ್ಲುಗಳು - Removable Partial Denture
- ತೆಗೆಯಲಾಗದ ಹಲ್ಲುಗಳು - Fixed partial Denture
- ಮೂಳೆಯಲ್ಲಿಯೇ ಜೋಡಿಸಿದ ಹಲ್ಲುಗಳು Implanted Teeth.

ಈ ತರಹದ ಚಿಕಿತ್ಸೆ ತುಂಬಾ ದುಬಾರಿ. ಆಧುನಿಕವಾಗಿ ಮೂಳೆಯಲ್ಲಿ ಟೈಟಾನಿಯಂ ಮೂಳೆಗಳ ಮೂಲಕ ದಂತಪಂಕ್ತಿಯನ್ನು ಜೋಡಿಸಬಹುದು. ಇದು ಶಾಶ್ವತ.

ವಿಶೇಷ ಸೂಚನೆ :

ಬಾಯಿಯಲ್ಲಿಯೇ ಆಗಲಿ, ಮುಖದಲ್ಲಿಯೇ ಆಗಲಿ, ಗದ್ದದಲ್ಲಿಯೇ ಆಗಲಿ. ಸುಮಾರು 6 ತಿಂಗಳಿಂದ 9 ತಿಂಗಳುವರೆಗೆ ಗಡ್ಡೆ, ಹುಣ್ಣು ಆಗಿದ್ದರೆ, ಅದು ನೋವು ಕೊಟ್ಟರೂ ಕೊಡದೆ ಇದ್ದರೂ ಇದನ್ನು ನಿರ್ಲಕ್ಷಿಸದೆ ತಕ್ಷಣ ದಂತ ವೈದ್ಯರಿಗೆ ತೋರಿಸಿ ಗುಣಪಡಿಸಿಕೊಳ್ಳಬೇಕು. ಇದು ಸಾಮಾನ್ಯವಾಗಿ ಬಾಯಿ ಅರ್ಬುದದ ಲಕ್ಷಣ. ■

ತಂದೆ ತಾಯಿಗಳ ವರ್ತನೆ ಮಕ್ಕಳ ಮೇಲೆ ಪರಿಣಾಮ

"ಏ, ಮಹೇಶಾ ಏನೋ ಸ್ಕೂಲಿಗೆ ಹೋಗೋಲ್ವ ಇವತ್ತು" -ಇದು ರಾಜು ತನ್ನ ಮಗನನ್ನು ಎಬ್ಬಿಸುವ ರೀತಿ.

ಇದು ಒಂದು ರೀತಿಯಾದರೆ, ರಾಮುವಿನ ಮನೆಯಲ್ಲಿ ಇನ್ನೊಂದು ರೀತಿ. "ರವೀ, ಏಳಮ್ಮ ಚಿನ್ನ ನನ್ನ ರಾಜ ಏಳೋ ಬೆಡ್ ಕಾಫಿ ಕುಡ್ದು ಮುಖ ತೊಳ್ಕೊ ಏಳಮ್ಮ" ಮುಖ ತೊಳೆದು ಕಾಫಿ ಕುಡಿಯಬೇಕೆ, ಕಾಫಿ ಕುಡಿದು ಮುಖ ತೊಳೆಯಬೇಕೆ? ಮಕ್ಕಳನ್ನು ಅಂಕೆಯಲ್ಲಿಡಬೇಕು ಆದರೆ ರಾಜುವಿನ ತರಹ ಕಣ್ಣು ಬಿಡುವುದಕ್ಕೆ ಮುಂಚೆಯೇ 'ಸ್ಕೂಲು' ಎನ್ನುವುದು, ರಾಮುವಿನ ತರಹ ಅತಿ ಮುದ್ದು ಮಾಡುವುದು ತಪ್ಪು. ರಾಜುವಿನ ತರಹ ಮಾಡಿದರೆ ಮಕ್ಕಳಿಗೆ ಸ್ಕೂಲಿನ ಮೇಲೆ ಮಮತೆ ಹುಟ್ಟುವುದರ ಬದಲು ಭಯ ಹುಟ್ಟುತ್ತದೆ. 'ಶಾಲೆ' ಎನ್ನುವುದು ಮಕ್ಕಳಿಗೆ ಮನೆ ಇದ್ದ ಹಾಗೆ. ಅಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಬುದ್ಧಿ ಹೇಳಿಕೊಡಬೇಕೇ ವಿನಾ 'ಶಾಲೆ' ಎಂಬುದು ಒಂದು ಭಯಂಕರ ಸ್ಥಳ ಎಂದು ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತಬಾರದು. ಆದರೆ ರಾಮುವಿನ ಮನೆಯಲ್ಲಿ ಮಗ ರವಿ ಒಬ್ಬನೇ ಆದ ಕಾರಣ ಅತೀ ಮುದ್ದು. ಬೆಳಿಗ್ಗೆ ಎದ್ದಾಗಿನಿಂದ ಚಿನ್ನ, ರನ್ನ ಎಂಬುದಾಗಿ ಕರೆದು ರವಿ ಶಾಲೆಗೆ ಹೋಗುವುದೇ ಲೇಟಾಗಿತ್ತ ಅಲ್ಲಿ ಉಪಾಧ್ಯಾಯಿನಿಯ ಕೈಯಲ್ಲಿ ಹೊಡೆತ. ಸರಿ ಮನೆಗೆ ಅಮ್ಮನಿಗೆ ಸುದ್ದಿ ಬಂದು ಆಕೆ ಉಪಾಧ್ಯಾಯಿನಿಯ ಕುಲ, ಗೋತ್ರಗಳನ್ನು ಉದ್ಧರಿಸುತ್ತಾಳೆ. ಉಪಾಧ್ಯಾಯಿನಿ ಹೊಡೆದದ್ದರಿಂದ ಮನಸ್ಸಿನಲ್ಲೇ ಅವಳ ಮೇಲೆ ಹಲ್ಲು ಕಡಿಯುತ್ತಿದ್ದ ರವಿಗೆ ಈಗ ಮತ್ತಷ್ಟು ಪುಷ್ಟಿ ಕೊಟ್ಟಂತಾಯಿತು.

ಬೆಳೆಯುವ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಇದು. ಸಾಮಾನ್ಯವಾಗಿ ಬೆಳೆಯುವ ಮಕ್ಕಳಿಗೆ ಎಲ್ಲವನ್ನೂ ಅರಿಯುವ ಕುತೂಹಲ. ಹಾಗಾಗಿ ಸುಮ್ಮನೆ ಅವರನ್ನು ಬಯ್ಯುವುದು ಹೊಡೆಯುವುದರಲ್ಲಿ ಅರ್ಥವಿಲ್ಲ. ಅವರಿಗೆ ಸ್ವತಂತ್ರವಾಗಿ ಬೆಳೆಯಬಲ್ಲ ಒಂದು ಪರಿಸರ ಅಗತ್ಯ.

ಶಶಿಕಲಾ ಈಗ ಒಂಬತ್ತನೆಯ ತರಗತಿ ಓದುತ್ತಿದ್ದಾಳೆ. ಇಂಗ್ಲಿಷ್ ಮೀಡಿಯಂಗೆ ಹೊಸದಾಗಿ ಸೇರಿರುವ ಅವಳಿಗೆ ಎಲ್ಲ ಸಬ್ಜೆಕ್ಟ್ ಕಷ್ಟವಾಗಿ ಕಾಣುವುದು ಸಹಜ. ಕಷ್ಟಪಟ್ಟು ಅರ್ಥಮಾಡಿ ಕೊಂಡು ಓದಿ ಈ ಸಲ ಹಾಗೂ ಹೀಗೂ ಸೆಕೆಂಡ್ ಕ್ಲಾಸ್ ಬಂದಿದ್ದಳು. ಶಾಲೆಗೆ ಹೋಗುವ ಮೊದಲು ತನ್ನ ತಂದೆಯ ಮುಂದೆ ತನ್ನ ಟೆಸ್ಟಿನ ರಿಪೋರ್ಟ್ ಹಿಡಿದಳು. "ಏನೆ ಇದು ಶಶಿ, ಸೆಕೆಂಡ್ ಕ್ಲಾಸ್ ಬಂದಿದೀಯ, ನಾಚಿಕೆ ಆಗೋಲ್ಲ ನಿಂಗೆ ಸೈನ್ ಹಾಕೋಲ್ಲ ಹೋಗು." ಎಲ್ಲಿಗೆ ಹೋಗುವುದು? ಹೀಗೆ ಗದರುವ ಬದಲು "ನೋಡಮ್ಮ ಮುಂದಿನ ಸಲ ಇನ್ನೂ ಚೆನ್ನಾಗಿ ಮಾರ್ಕ್ಸ್ ತೆಗೀಬೇಕು. ಎಷ್ಟು ಪಿಕಪ್ ಆಗಿದೀಯ-ಕನ್ನಡ ಮೀಡಿಯಂನಿಂದ ಇಂಗ್ಲಿಷ್ ಮೀಡಿಯಂಗೆ ಬಂದು. ಕೀಪಿಟ್ ಅಪ್" ಎಂದು ಹೇಳಿದಿದ್ದರೆ, ಆ ಬೆಳೆಯುವ ಮನಸ್ಸಿಗೆ ಒಂದು ಶಕ್ತಿ ಬರುತ್ತಿತ್ತು. ಇಲ್ಲದಿದ್ದರೆ "ನಾವು ಎಷ್ಟು ಓದಿದರೂ ಇಷ್ಟೇ" ಎಂಬ ಭಾವನೆ ಬರುತ್ತದೆ.

ಒಟ್ಟಿನಲ್ಲಿ ಮಕ್ಕಳನ್ನು ಅತಿ ಮುದ್ದೂ ಮಾಡಬಾರದು ಅತೀ ನಿರ್ಲಕ್ಷ್ಯವೂ ಮಾಡಬಾರದು. ಒಂದು ಗಿಡ ನಳನಳಿಸುತ್ತ ಬೆಳೆಯಬೇಕಾದರೆ ಅದಕ್ಕೆ ಬೇಕಾದ ನೀರು, ಗೊಬ್ಬರ, ಬೆಳಕು, ಗಾಳಿ ಎಲ್ಲವೂ ಹೇಗೆ ಮುಖ್ಯವೋ ಹಾಗೆಯೇ ಬೆಳೆಯುವ ಮಕ್ಕಳಿಗೆ ಒಳ್ಳೆಯ ಮಾತು, ಒಳ್ಳೆಯ ವಾತಾವರಣ, ಒಳ್ಳೆಯ ಪರಿಸರ, ಒಳ್ಳೆಯ ಶಿಕ್ಷಣ ಬಹಳ ಮುಖ್ಯ. ನೀವೇನನ್ನುತ್ತೀರಿ ತಂದೆ ತಾಯಿಗಳೇ?

■ ಸಿ.ಎಸ್.ಭಾರತಿ




ಋತುಮಾನ

(ಕವನ ಸಂಕಲನ)

ಲೇ: **ಡಿ.ರಾಮನ ಮಲಿ**
ಪ್ರ: ವಿವೇಕ ಪ್ರಕಾಶನ
ತಂಬ್ರಹಳ್ಳಿ (ಅಂಚೆ),
ಹಗರಿಬೊಮ್ಮನಹಳ್ಳಿ ತಾಲ್ಲೂಕು,
ಬಳ್ಳಾರಿ ಜಿಲ್ಲೆ.
ಮುದ್ರಣ: 1998,
ಪುಟ: 48, ಬೆಲೆ: ರೂ. 25/-

ಲೋಕೋಪಯೋಗಿ ಇಲಾಖೆಯ ಉದ್ಯೋಗಿಯಾಗಿರುವ ರಾಮನ ಮಲಿ ನಾನು ಬಹಳ ವರ್ಷಗಳಿಂದ ಬಲ್ಲ ಸೌಜನ್ಯದ ಮಿತ್ರ. ಈ ಕಡೆ ಮುಗುಳ್ನಗೆಗೆ ಹೆಸರಾಗಿರುವ ಈತ ಅನೇಕ ರೀತಿಯ ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ತೊಡಗಿ ಕೊಂಡಿರುವ ನನ್ನಷ್ಟೆ ಎತ್ತರದ ಮನುಷ್ಯ. ಈ ದೂದಕುಲ ಸಂಜಾತನ ಈ ಸಂಕಲನದ ಕವಿತೆಗಳಲ್ಲಿ ಒಣ ಜಾಣತನವಾಗಲೀ, ಟ್ರಿಕ್ಕುಗಳಾಗಲೀ ಇಲ್ಲದಿರಬಹುದು. ಆದರೆ ಮೇಲ್ವರ್ಗದ ಅವಕೃಪೆಗೊಳಗಾದ ಇತಿಹಾಸವನ್ನು ಅರ್ಥಮಾಡಿಕೊಂಡು ಬರೆದಿರುವ ಕವಿತೆಯ ನಮೂನೆಗಳನ್ನು ಇಲ್ಲಿ ಕಾಣಬಹುದು. ಉತ್ತಮ ಭವಿಷ್ಯವಿರುವ ಈ ಗೆಳೆಯ ಸತತ ಸಾಧನೆಯಿಂದ ನಮ್ಮನ್ನು ನಿಮ್ಮನ್ನು ಮೂಗು ಮೇಲೆ ಬೆರಳಿಡಿಸಬಹುದು.

■ **ಕುಂವೀ**



ಶ್ರೀನಿವಾಸ ಉಡುಪರ ಸಮಗ್ರ ಬರಹ ಮಾಹಿತಿ

ಲೇ: **ಡಾ. ಜಿ.ಎ. ಕಲ್ಲಾಪುರ,** ಎಂ.ಎ., ಪಿಹೆಚ್.ಡಿ
: **ಶ್ರೀ. ಹೆಚ್.ಎ.ನಾಗರಾಜನ್**
ಪ್ರ: ಹೇಮಂತ ಸಾಹಿತ್ಯ
972, ಸಿ. 4ನೇ 'ಇ' ಬ್ಲಾಕ್, ರಾಜಾಜಿನಗರ,
ಬೆಂಗಳೂರು - 560 010.
ಮುದ್ರಣ: 1998, ಪುಟ: XVI+116,
ಬೆಲೆ: ರೂ. 50/-

ಶ್ರೀನಿವಾಸಉಡುಪರು ಕಳೆದ 35 ವರ್ಷಗಳಿಂದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆಯುತ್ತಾ ಬಂದಿದ್ದಾರೆ. ಈಗಾಗಲೇ ಪ್ರಕಟವಾಗಿರುವ ಕವನ, ಕಥಾ ಸಂಕಲನಗಳ, ಕಾದಂಬರಿಗಳೆಲ್ಲವೂ ಖಾಲಿಯಾಗಿದ್ದು, ಪುನರ್ ಮುದ್ರಣಕ್ಕಾಗಿ ಕಾಯುತ್ತಿವೆ. ಇವರ ಬರವಣಿಗೆಗಳಲ್ಲಿ ಕಥೆ, ಸಣ್ಣ ಕಥೆ, ಮಕ್ಕಳ ಕಥೆ, ಕಾದಂಬರಿ, ಕವನ, ಚಿಂತನ, ನಾಟಕಗಳ ಒಂದು ಗುಂಪಿನ ಸಾಹಿತ್ಯ ಸೃಷ್ಟಿಯಾದರೆ, ವಿವಿಧ ವ್ಯಕ್ತಿಗಳ ಪರಿಚಯಾತ್ಮಕ ಲೇಖನಗಳು, ಐತಿಹಾಸಿಕ ಲೇಖನಗಳು, ಕ್ಷೇತ್ರ ಪರಿಚಯ ಲೇಖನಗಳು, ಜಾನಪದ ಲೇಖನಗಳು, ಸಾಮಾಜಿಕ, ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಲೇಖನಗಳು, ಮತ್ತೊಂದು ಗುಂಪಿನ ಬರಹಗಳಾಗಿವೆ. ಇಲ್ಲಿ ಅವುಗಳೆನೆಲ್ಲಾ ಸಾಧ್ಯವಾದಷ್ಟು ಸಂಗ್ರಹಿಸಲಾಗಿದೆ.

■ **ಡಾ. ಜಿ.ಎ. ಕಲ್ಲಾಪುರ**



ನೀತಿ ಕಥೆಗಳು ಮತ್ತು ಮನೋವಿಕಾಸ

(ಜ್ಞಾನಾರ್ಥಿಗಳು ಮತ್ತು ವಿದ್ಯಾರ್ಥಿಗಳಿಗೊಂದು ಜ್ಞಾನ ಗವಾಕ್ಷಿ)

ಲೇ: **ಚಿ. ಧೃ. ಹರೀಶ್,** ಬಿ.ಇ.
ಪ್ರ: ಎನ್.ಕೆ. ಪ್ರಕಾಶನ
1007, 10ನೇ ಮೈನ್, 1ನೇ ಬ್ಲಾಕ್,
3ನೇ ಸ್ಟೇಜ್, ಬಸವೇಶ್ವರನಗರ,
ಬೆಂಗಳೂರು - 560 079.
ಮುದ್ರಣ: 1998
ಪುಟ: VI+85, ಬೆಲೆ: ರೂ. 25/-

ಜ್ಞಾನವಿಲ್ಲದ ಮಾನವ ಪಶುಸಮಾನ. ಜ್ಞಾನವೆಂದರೆ ಹಣ ಗಳಿಸಲು ಮಾರ್ಗ ತೋರಿಸುವ ಜ್ಞಾನವೊಂದೇ ಅಲ್ಲ, ವಿಜ್ಞಾನವೊಂದೇ ಅಲ್ಲ, ಆತ್ಮ ಜ್ಞಾನವಿಲ್ಲದ, ಮಾನವೀಯತೆಯನ್ನು ಕಲಿಸದ ಏಕೈಕ ಜ್ಞಾನ, ಬ್ರೇಕ್ ಇಲ್ಲದ ಕಾರಿನಂತೆ ಅಪಾಯಕಾರಿ. ಯಾವ ಕ್ಷಣದಲ್ಲೂ ನಾವು ಅಪಾಯಕ್ಕೀಡಾಗಬಹುದು. ಸ್ವಾರ್ಥ ತುಂಬಿದ ಈ ಜಗತ್ತಿನಲ್ಲಿ ಮಾನವೀಯತೆ, ಪಾರಮಾರ್ಥಿಕ ಜ್ಞಾನ, ವಿಶ್ವಭ್ರಾತೃತ್ವ, ತ್ಯಾಗ, ಸತ್ಯಸಂಧತೆ, ನಿರಾಡಂಬರ, ಶುದ್ಧಜೀವನ, ಅಹಿಂಸೆ, ಪರಸಹಿಷ್ಣುತೆ, ನಿಸ್ವಾರ್ಥ ಭಾವನೆ, ಬದುಕು ಬದುಕಲು ಬಿಡು, ಈ ಪದಗಳೆಲ್ಲ ತಮ್ಮ ಅರ್ಥ ಕಳೆದುಕೊಂಡು, ಭೋಗವೇ ಜೀವನವೆಂದಾಗಿದೆ.

ಈ ಮೇಲಿನ ಪದಗಳ ಅರ್ಥವನ್ನು, ಅವುಗಳ ಪ್ರಾಮುಖ್ಯತೆಯನ್ನು ನಾವು ನಮ್ಮ ಮಕ್ಕಳಿಗೆ ಕಲಿಸದೆ ಹೋದರೆ, ಆತ್ಮ ಜ್ಞಾನವನ್ನು ನಾವವರಿಗೆ ಕೆಲಮಟ್ಟಿಗಾದರೂ ನೀಡದೇ ಹೋದರೆ, ಮುಂದೆ ಈ ವಿಚಾರಗಳು ಸಂಪೂರ್ಣ ಮಾಯವಾಗಿ, ಮಾನವ ಸ್ವಾರ್ಥದ ಸಾಕಾರಮೂರ್ತಿಯಾದಾನು. ಇದನ್ನು ತಪ್ಪಿಸೋಣ. ಕೆಲಮಟ್ಟಿಗಾದರೂ ಜಾಗೃತರಾಗೋಣ.

■ **ಚಿಕ್ಕಮಗಳೂರು ಧ್ರುವ ಹರೀಶ್**

ಕರ್ಮಯೋಗಿ

(ಶ್ರೀ ಚರಬಸವ ತಾತನವರ ಜೀವನ ಕಥಾಮೃತ)
ಲೇ: **ಶ್ರೀ.ಜಿ.ಎಸ್. ಬಸವರಾಜ ಶಾಸ್ತ್ರಿ**
ಪ್ರ: ಮಳಿಮಠ ಯಾದಗಿರಿ ಮೇನ್ ರೋಡ್,
ಪೋಸ್ಟ್ - ಯಾದಗಿರಿ, ಕಲ್ಬುರ್ಗಿ ತಾಲ್ಲೂಕು.
ಮುದ್ರಣ: 1998
ಪುಟ: XIX +74, ಬೆಲೆ: ರೂ. 25/-

ಇನ್ನೂರು ವರ್ಷಗಳ ಹಿಂದೆ ಕಲಬುರ್ಗಿ ಜಿಲ್ಲೆಯ ಸಗರ ನಾಡಿನಲ್ಲಿ ಅವತರಿಸಿದ ಮಹಾ ಪುರುಷರಲ್ಲೊಬ್ಬರಾದ ತಮ್ಮ ಅಘಟಿತ ಘಟನಾ ಸಾಮರ್ಥ್ಯದಿಂದ ಮಹತ್ತರ ಪವಾಡಗಳನ್ನು ಗೈದಮಹಿಮಾ ಶಾಲಿಗಳು. ಮಹಾತಪಸ್ವಿಗಳು, ಭಕ್ತೊದ್ಧಾರಕರು, ಆದ ಇವರು ಜನಾಂಗದಲ್ಲಿ ಧರ್ಮಾಚರಣೆಯು ನಷ್ಟವಾಗಿ ಅವರ ಜೀವನವು ಸಂಕಷ್ಟಕ್ಕೊಳಗಾಗಿರುವ ಸಮಯದಲ್ಲಿ ಅವರನ್ನು ಹಿಡಿದೆತ್ತಿ ಅವರಬಾಳನು ಬೆಳಗಿಸಿ ಜನ ಜೀವನ ವನ್ನು ಸನ್ಮಾರ್ಗಕ್ಕೆ ಹಚ್ಚಿ ಮುಕ್ತರನ್ನಾಗಿಮಾಡಿ ಪರಮಾತ್ಮನವತಾರಿಗಳಾಗಿ ಮೆರೆದಿರುತ್ತಾರೆ.

■ **ವೇ.ಪಂ.ವಿರೂಪಾಕ್ಷಶಾಸ್ತ್ರಿಗಳು**

ನಾವು ಗೆಲುವೆವು

(ಕವನ ಸಂಕಲನ)
ಲೇ: **ಡಾ.ಐ.ಎ.ಲೋಕಾಪುರ**
ಪ್ರ: ಪ್ರಗತಿಪರ ಬರಹಗಾರರ ಒಕ್ಕೂಟ,
ಹರಿಹರ, ಜಿಲ್ಲೆ ದಾವಣಗೆರೆ, ಕರ್ನಾಟಕ
ಮುದ್ರಣ: ಜೂನ್ 1998,
ಪುಟ: VIII +53, ಬೆಲೆ: ರೂ. 25/-

ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳ ನಂತರ ವಿಚಾರಗಳು, ವಿಚಾರಗಳ ಅಭಿವ್ಯಕ್ತಿಗಳು ಪುನಃ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿವೆ. ರಾಜಕೀಯ ಅಸ್ಥಿರತೆ ನಮ್ಮನ್ನು ಕಾಡುತ್ತಿದೆ. ಸಾಮಾಜಿಕ ಅಂತರ ಗಳು ಹೊಸ ಹೊಸ ನಮೂನೆಗಳನ್ನು ಪಡೆಯು ತ್ತಿವೆ. ಆರ್ಥಿಕ ಭದ್ರತೆ, ಅಭದ್ರತೆಗಳು ಎಲ್ಲಿಂದ ಲೋ ನಿಯಂತ್ರಣಗೊಳ್ಳುತ್ತಿವೆ. ಭ್ರಷ್ಟಾಚಾರ ಬಹಿರಂಗ-ಅಂತರಂಗವನ್ನು ವ್ಯಾಪಿಸಿಕೊಂಡು ವ್ಯಕ್ತಿತ್ವ ನಿರಸಕ್ಕೆ ಕಾರಣವಾಗಿದೆ. ಪ್ರಗತಿಶೀಲ ಆಶಾ ವಾದಿಗಳೂ ಒಂದು ಕ್ಷಣ ಸ್ತಂಭೀಭೂತರಾಗುವ ಕಾಲ ಒದಗಿದೆ. ಅಂತಹ ನಿರಾಶೆಯ ಆಳದಲ್ಲೂ ಆಶೆಯನ್ನು ಕಾಣುವ ಕವಿ ಮನಸ್ಸುಗಳು ಪ್ರಸ್ತುತ 'ನಾವು ಗೆಲುವೆವು' ಕವನ ಸಂಕಲನದಲ್ಲಿ ಕಾಣಸಿಗುತ್ತವೆ.

■ **ಡಾ.ಎಂ.ಜಿ. ಈಶ್ವರಪ್ಪ**

ಬುದ್ಧ ಮತ್ತು ಅವನ ಧಮ್ಮ

ಲೇ: ಮೂಲ: **ಡಾ.ಬಿ.ಆರ್. ಅಂಬೇಡ್ಕರ್,**
ಅನುವಾದ : **ಎಸ್.ಕೆ. ನಾಗರಾಜ್**
ಪ್ರ: ವಿಮೋಚನಾ ಪ್ರಕಾಶನ
ವಿಮೋಚನಾ ದೇವದಾಸಿ ಪುನರ್ವಸತಿ ಸಂಘ,
ಅಥಣಿ - 591 304. ಜಿ. ಬೆಳಗಾಂವ
ಮುದ್ರಣ: 1997,
ಪುಟ: XXIV +596
ಬೆಲೆ: ರೂ. 125/-

ಡಾ.ಬಿ.ಆರ್. ಅಂಬೇಡ್ಕರ್ ಅವರು ತುಳಿತಕ್ಕೆ ಒಳಗಾದ ದಲಿತ ಜನಾಂಗದ ಏಳ್ಗೆಯ ಜತೆ ರಾಜಕೀಯ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗಿದ್ದು, ಅವರಿಗೊಂದು ಸಮಸ್ಯೆ ಎದು ರಾಗಿತ್ತು. ಹಿಂದೂ ಧರ್ಮದ ಕಂದಾಚಾರಗಳಿಂದ ಹೇಸಿಕೊಂಡ ಅವರು ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳ ಈಶ್ವರೀವಾದವನ್ನು ಒಪ್ಪದೇ ಕೊನೆಗೆ ನಿರೀಶ್ವರೀವಾದದ ಬೌದ್ಧ ಧರ್ಮವನ್ನು ಆಯ್ಕೆ ಮಾಡಬೇಕಾಯಿತು. ಆದಾಗಲೇ ಅವರು ಬೌದ್ಧ ಧರ್ಮದ ತಿರುಳನ್ನೆಲ್ಲ ಅರಗಿಸಿಕೊಂಡಿದ್ದು ಅದರ ಪ್ರತಿ ಫಲವೇ 'ಬುದ್ಧ ಮತ್ತು ಅವನ ಧಮ್ಮ' ದಂಥ ಮಹತ್ವದ ಕೃತಿ ಹೊರಬರಲು ಕಾರಣವಾಯಿತು.

ಗೌತಮ ಬುದ್ಧನ ಬದುಕಿನ ಜತೆ, ಆತನ ತ್ಯಾಗ ಜೀವನ, ಜನಸಾಮಾನ್ಯರ ಬಗೆಗಿದ್ದ ಕಳಕಳಿ, ಶೋಷಿತರ ಬದುಕು ಹಸನಾಗುವ ಬಗೆಗಿನ ಆತನ ಆಶಯಗಳು, ನಿಜವಾದ ಧರ್ಮದ ತಿರುಳು, ಸಾಂಘಿಕ ಬದುಕಿನ ಮಹತ್ವ - ಹೀಗೆ ಅಖಂಡ ಮಾನವತೆಯ ಕಾಳಜಿಯಿಂದ ಒಂದು ವಿನೂತನ ರೀತಿಯಲ್ಲಿ ಡಾ.ಅಂಬೇಡ್ಕರ್ ಅವರು ಈ ಕೃತಿಯನ್ನು ರಚಿಸಿದ್ದಾರೆ.

ಈ ಕೃತಿಯನ್ನು ಕನ್ನಡಕ್ಕೆ ತಂದ ಶ್ರೀ. ಎಸ್.ಕೆ.ನಾಗರಾಜು ಅವರ ಪರಿಶ್ರಮವಂತೂ ಅದ್ಭುತವಾದದ್ದು. ಶಾರೀರಿಕ ತೊಂದರೆಯಿಂದ ಬಳಲುತ್ತ, ತಾಲೂಕು 'ಕಚೇರಿಯಲ್ಲಿ ಗುಮಾಸ್ತ ರಾಗಿ ಸೇವೆ ಸಲ್ಲಿಸುತ್ತ, ತಮ್ಮ ದಿನನಿತ್ಯದ ಕಷ್ಟಕಾರ್ಪಣ್ಯಗಳಲ್ಲಿಯೇ ತುಂಬಾ ಶ್ರದ್ಧೆಯಿಂದ ಅನುವಾದಿಸಿದ್ದಾರೆ. ಕನ್ನಡ ಭಾಷೆಯನ್ನು ಚೆನ್ನಾಗಿ ದುಡಿಸಿಕೊಂಡು, ಮೂಲ ಕೃತಿಗೆ ಅನ್ಯಾಯ ವಾಗದಂತೆ ಸಮರ್ಥವಾಗಿ ಅನುವಾದಿಸಿದ್ದು, ಅವರ ಶ್ರಮ ಸಾರ್ಥಕವೆಂದೇ ಹೇಳಬಹುದು.

■ **ದು.ನಿಂ. ಬೆಳಗಲಿ**

ಸಂವೇದನೆ

■ ಎಂ. ಎಸ್. ಮೂರ್ತಿ

'ವಿನ್ಯಾಸ', ನಂ. 132, 1ನೇ ಮಹಡಿ ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು-4

ಹಸಿರು ಕಂಡ ಯುವಕ

ಹೇಗಾದರೂ ಮಾಡಿ ತನ್ನ ಮಗನನ್ನು 'ಇಂಜಿನಿಯರ್' ಮಾಡಲೇಬೇಕೆಂಬ ಹಠದಿಂದ ತನ್ನ ಜಮೀನನ್ನು ಮಾರಿ ಮಗನನ್ನು ಬೆಂಗಳೂರಿನ ಕಾಲೇಜಿಗೆ ಸೇರಿಸಿದ್ದ ಹಿರೇಗೌಡ. ಬೆಂಗಳೂರಿನಲ್ಲಿ ಕಾಲೇಜು ಸೇರಿದ ಮಗ ಹಾಗೂ ಹೀಗೂ ವಿದ್ಯಾಭ್ಯಾಸ ಮುಗಿಸಿ ವಿದ್ಯಾವಂತ ನಿರುದ್ಯೋಗಿಯಾಗಿ ಕಾಲ ಕಳೆಯುತ್ತಿದ್ದ. ಗ್ರಾಮೀಣ ಬದುಕಿನ ಶ್ರಮ ಮೈಗೂಡಿಸಿಕೊಂಡಿಲ್ಲದ, ನಗರ ಜೀವನದ ನಾಜೂಕಿಗೆ ಹೊಂದಿಕೊಳ್ಳದ, ತನ್ನ ಬದುಕಿಗೆ ಬೇಕಾಗುವಷ್ಟು ಕೂಡ ಗಳಿಸಲಾಗದೆ ಸೋತಿದ್ದ ಮಗನ ಬಗ್ಗೆ ಚಿಂತಿಸುತ್ತಲೇ ಕೊನೆಯುಸಿರೆಳೆದಿದ್ದ ಹಿರೇಗೌಡ.

ಐದಾರು ವರ್ಷಗಳ ಅವಧಿಯಲ್ಲೇ ಇಷ್ಟೆಲ್ಲಾ ಅವಾಂತರವಾದುದಕ್ಕೆ ಕಾರಣ ಏನಿರಬಹುದೆಂದು ಹಿರೇಗೌಡನ ತಮ್ಮ ಕಿರೇಗೌಡ ಯೋಚಿಸುತ್ತಿದ್ದ. ಅಣ್ಣನ ಆಡಂಬರದ ಬದುಕಿನ ವ್ಯಾಮೋಹವೋ ಅಥವಾ ಅವನ ಮಗನ ಬೇಜವಾಬ್ದಾರಿಯೋ ಯಾವುದೂ ತಿಳಿಯದೆ ಗೊಂದಲಗೊಂಡಿದ್ದ ಕಿರೇಗೌಡ. ಈ ಬಗ್ಗೆ ಯೋಚಿಸಲೂ ಮುಖ್ಯ ಕಾರಣ ಕಿರಿಗೌಡನಿಗೂ ಅಂಥದೇ ಒಂದು ಪ್ರಮುಖ ನಿರ್ಧಾರ ಕೈಗೊಳ್ಳುವ ಸಂದರ್ಭ ಒದಗಿತ್ತು. ತನ್ನ ಅಣ್ಣ ತನ್ನ ಮಗನನ್ನು ಡಾಕ್ಟರ್ ಅಥವಾ ಇಂಜಿನಿಯರ್‌ನನ್ನಾಗಿ ಮಾಡಬೇಕೆಂಬ ಆಕಾಂಕ್ಷೆಯಿಂದ ತನ್ನ ಜೀವನಾಧಾರವಾಗಿದ್ದ ಜಮೀನನ್ನೇ ಮಾರುವ ದೊಡ್ಡ ನಿರ್ಧಾರದ ಬಗ್ಗೆ ಕಿರೇಗೌಡನಿಗೆ ಆತಂಕವಾಗಿತ್ತು. ಆದರೂ ಮಾತನಾಡದೇ ಸುಮ್ಮನಾಗಿದ್ದ. ಆದರೆ, ಈಗ ತನ್ನ ಮಗ ಬೆಳೆದು ಒಂದು ಹಂತದ ಓದು ಮುಗಿಸಿದ್ದಾನೆ. ಮುಂದಿನ ಓದಿಗೆ ಬೆಂಗಳೂರಿಗೆ ಕಳಿಸಬೇಕು. ಹಲವು ಲಕ್ಷಗಳೇ ಅದಕ್ಕಾಗಿ ಮುಡಿಪಿಡಬೇಕು. ಇಷ್ಟೊಂದು ಹಣ ಎಲ್ಲಿಂದ ತರುವುದು? ಈ ಬಗ್ಗೆ ಏನೂ ನಿರ್ಧಾರಗೊಳ್ಳದೇ ತಳಮಳಗೊಂಡಿದ್ದ ಕಿರೇಗೌಡ.

ಕೊನೆಗೆ ಒಂದು ನಿರ್ಧಾರಕ್ಕೆ ಬಂದು ತನ್ನ ಮಗ ಕೃಷ್ಣೆಗೌಡನನ್ನೇ ಕೇಳಿ ನಿರ್ಧರಿಸುವ ಎಂದುಕೊಂಡು ತನ್ನ ಮಗನನ್ನು "ನೋಡು ಕೃಷ್ಣ ಇಷ್ಟು ಹಣ ನನ್ನಲ್ಲಿ ಇಲ್ಲ. ಅದಕ್ಕಾಗಿ ಈ ಜಮೀನನ್ನು ಮಾರಬೇಕು. ಆದರೆ, ಈಗಾಗಲೇ ನಿನ್ನ ದೊಡ್ಡಪ್ಪನ ಮಗನ ಕಥೆ ನಿನಗೆ ಗೊತ್ತಿದೆ. ನೀನು ಮಾಡುವ ಡಿಗ್ರಿ ನಮಗಲ್ಲದಿದ್ದರೂ ನಿನ್ನ ಬದುಕನ್ನಾದರೂ ಶ್ರೀಮಂತಗೊಳಿಸದಿದ್ದರೆ ಅಂಥ ಓದು ಯಾಕೆ? ಇದು ನನ್ನ ಅಭಿಪ್ರಾಯ. ಯೋಚಿಸು; ಇದರ ಮೇಲೆ ನೀನು ಓದಲೇಬೇಕೆಂದರೆ ಹೇಗಾದರೂ ಮಾಡಿ ಹಣ ಒದಗಿಸುತ್ತೇನೆ. ಗಟ್ಟಿ ಮನಸ್ಸು ಮಾಡಿ ಓದು ಮುಂದುವರಿಸು." ಎಂದು ತನ್ನ ಮಾತು ಮುಗಿಸಿದ.



ಅಪ್ಪನ ಮಾತನ್ನೆಲ್ಲಾ ಕೇಳಿದ ಕೃಷ್ಣೇಗೌಡ ಕೂಡಲೇ ಹೇಳಿದ. "ನಮ್ಮ ಜಮೀನು ಮಾರಿ ನಾನು ಓದುವುದು ಬೇಕಾಗಿಲ್ಲ. ನಾನು ಇದುವರೆಗೂ ಬೆಳೆಸಿದ ಮರಗಿಡಗಳನ್ನು ಕಳಕೊಂಡು ಬೇರೆ ಏನನ್ನು ತಾನೇ ಪಡೆಯಬಹುದು. ಈ ಬಗ್ಗೆ ಬೇರೆ ಮಾತು ಬೇಡ, ನಾನು ಬೇರೆ ಏನನ್ನಾದರೂ ಮಾಡುತ್ತೇನೆ" ಎಂದು ಹೇಳಿ ಹೊರ ನಡೆದ ಮಗನನ್ನು ಕಿರೇಗೌಡ ಹೆಮ್ಮೆ ಮತ್ತು ವಿಷಾದದಿಂದ ನೋಡುತ್ತಿದ್ದ. ತನ್ನ ಮಗ ಚಿಕ್ಕಂದಿನಿಂದಲೂ ಯಾವುದಕ್ಕೂ ಹಠ ಮಾಡಿದವನಲ್ಲ. ಅವನ ಶಾಲೆ ಮುಗಿದ ನಂತರದ ಸಮಯವೆಲ್ಲ ಜಮೀನಿನಲ್ಲೇ ಕಳೆಯುತ್ತಿದ್ದ. ಅನೇಕ ಗಿಡಗಳನ್ನೂ ಪ್ರೀತಿಯಿಂದ ನೆಟ್ಟು ಬೆಳೆಸಿದ್ದ. ಈಗ ಅವು ಬೆಳೆದು ಮರಗಳಾಗಿವೆ. ಈಗಲೂ ಕಾಲೇಜು ಮುಗಿದ ನಂತರ ಅವುಗಳನ್ನೆಲ್ಲಾ ಒಮ್ಮೆ ನೋಡದೆ, ತೋಟ, ಗದ್ದೆಗಳ ಕೆಲಸ ಮಾಡದೆ ಉಣ್ಣುತ್ತಿರಲಿಲ್ಲ. ಇಂತಹ ಒಬ್ಬನೇ ಮಗನ ಬಗ್ಗೆ ಊರಿನವರೆಲ್ಲಾ ಕಿರೇಗೌಡನ ಮುಂದೆ ಹೊಗಳುತ್ತಿದ್ದರೆ ಗೌಡ ಸಿರಿಬಂದಂತೆ ಹಿಗ್ಗುತ್ತಿದ್ದ.


ಒಂದು ದಿನ ಗೌಡ ತನ್ನ ಮಗನನ್ನು ಕರೆದು, ಕಾಲೇಜು ಸೀಟು ಕೊಡಿಸುವ ವ್ಯವಹಾರ ಗೊತ್ತಿದ್ದ ಅವರ ಸಂಬಂಧಿಯೊಬ್ಬರನ್ನು ಕರೆದು ತರುವಂತೆ ಹೇಳಿದ. ಕೃಷ್ಣನಿಗೆ ಅರ್ಥವಾಗದೆ ಅಪ್ಪನನ್ನು ಕೇಳಿದ್ದಕ್ಕೆ ಗೌಡ, "ಹೇಗೊ ಮಾಡಿ ಎರಡು ಲಕ್ಷ ಸಿದ್ಧಮಾಡಿದ್ದೇನೆ, ಕಾಲೇಜು ಸೇರಿಬಿಟ್ಟರೆ ಆಗಾಗ ಸ್ವಲ್ಪ ಹಣ ಹೊಂದಿಸಿ ನಿನ್ನನ್ನು 'ಇಂಜಿನಿಯರ್' ಮಾಡಿಬಿಡಬಹುದು" ಎಂದ. ಅಪ್ಪನ ಮಾತಿಗೆ ಏನು ಹೇಳಬೇಕೆಂದು ತೋರದೆ

ಸೀಟು ಕೊಡಿಸುವ ಅವನ ಸಂಬಂಧಿಯನ್ನು ಕರೆತಂದ. ಇವರಿಬ್ಬರ ಮಾತು ಮುಗಿದ ನಂತರ ಕಿರೇಗೌಡ ಸಪ್ಪೆಯಾಗಿದ್ದ. ತೋಟದಿಂದ ಬಂದ ಮಗ ಅಪ್ಪನನ್ನು ಕಂಡು ಈ ಬಗ್ಗೆ ವಿಚಾರಿಸಿದಕ್ಕೆ ತಿಳಿದದ್ದು - ಇಡೀ ಇಂಜಿನಿಯರಿಂಗ್ ಮುಗಿಸಲು ನಾಲ್ಕೈದು ಲಕ್ಷವೇ ಬೇಕಾಗಬಹುದು, ಅಷ್ಟು ಹಣವಿಲ್ಲದೆ ಏನೂ ಆಗುವುದಿಲ್ಲ ಎಂದುಬಿಟ್ಟರಂತೆ. ಇದರಿಂದ ತಂದೆಗೆ ದುಃಖವಾಗಿದ್ದನ್ನು ಗಮನಿಸಿದ ಕೃಷ್ಣೇಗೌಡ ಇನ್ನೊಂದು ತಿಂಗಳಲ್ಲಿ ತನ್ನ ಸ್ನೇಹಿತರನ್ನು ಭೇಟಿ ಮಾಡಿ ನಿರ್ಧಾರಕ್ಕೆ ಬರುತ್ತೇನೆಂದು ಬೆಂಗಳೂರಿಗೆ ಹೊರಟ.

ಅನಂತರ ಬೆಂಗಳೂರಿಗೆ ಬಂದ ಕೃಷ್ಣೇಗೌಡ ಅನೇಕರನ್ನು ಭೇಟಿಯಾಗಿ ತನ್ನ ಸಮಸ್ಯೆ ಬಗ್ಗೆ ವಿಚಾರಿಸುತ್ತಾನೆ. ಯಾವುದೇ ಆಶಾದಾಯಕ ಉತ್ತರ ದೊರೆಯದೆ ಹತಾಶನಾಗಿ ಒಂದು ದಿನ ಅಂತಿಮ ನಿರ್ಧಾರ ಮಾಡುತ್ತಾನೆ. ಬೆಂಗಳೂರಿನಲ್ಲಿದ್ದುಕೊಂಡೇ ಇಲ್ಲಿನ ಸ್ಥಿತಿಯ ಬಗ್ಗೆ ಯೋಚಿಸುತ್ತಾನೆ. ಇಲ್ಲಿನ ಜನರು ಪ್ರತಿಯೊಂದು ವಿದ್ಯೆಯನ್ನು ವೃತ್ತಿಗಾಗಿಯೇ ಕಲಿಯುತ್ತಾರೆ. ಹಾಗೇ ಕಲಿತ ವಿದ್ಯೆಯಿಂದ ಅವರಿಗೆಲ್ಲಾ ತೃಪ್ತಿಯಾಗಿದೆಯಂತಾಗಲಿ, ಗುರಿಮುಟ್ಟಿದ ಸಂತಸವಾಗಲಿ ಇಲ್ಲ. ತಾವು ಕಲಿತ ವಿದ್ಯೆ, ಪಡೆದ ಡಿಗ್ರಿಗಳನ್ನು ಉಪಯೋಗಿಸಿ ಹೇಗೆ ಎಲ್ಲಿ ಯಾವ ಉದ್ಯೋಗ ಪಡೆಯಬಹುದು, ಹೇಗೆ ಪರಾವಲಂಬಿಗಳಾಗಬಹುದು, ಎಷ್ಟು ಹಣ ಬರಬಹುದು ಇತ್ಯಾದಿಗಳೇ ಅವರ ಜೀವನದ ಗುರಿಯಂತಿತ್ತು. ಒಂದು ಉದ್ಯೋಗಕ್ಕೆ ಸೇರಿ ತಮ್ಮ ಜೀವನವನ್ನು ನಿಷ್ಕ್ರಿಯ ಗೊಳಿಸಿಕೊಂಡವರು ಕೆಲವರು. ಇನ್ನು ಕೆಲವರು ವರ್ಷದಿಂದ ವರ್ಷ ಕಂಪನಿಯಿಂದ ಕಂಪನಿಗೆ ಹಾರುತ್ತಲೇ ಜೀವನ ಕಳೆದಿರುತ್ತಾರೆ. ತಮ್ಮ ಎಚ್ಚರದ ಬದುಕಿನ 16 ಗಂಟೆಗಳಲ್ಲಿ 12 ಗಂಟೆಗಳನ್ನು ಹಣಕ್ಕಾಗಿಯೇ ಮೀಸಲಿಟ್ಟು ಕೆಲವೇ ಗಂಟೆಗಳಲ್ಲಿ ಗಡಿಬಿಡಿಯಲ್ಲಿ ತಮ್ಮ ಸ್ವಂತ ಬದುಕನ್ನು ಮುಗಿಸುತ್ತಾರೆ. ಆತಂಕಗಳ ಮುಖ ಹೊತ್ತ ಇಂತಹ ಜನರೇ ಇಡೀ ನಗರ ತುಂಬಿಕೊಂಡಂತೆ ಕೃಷ್ಣೇಗೌಡನಿಗೆ ಅನಿಸುತ್ತದೆ.

ಇಂತಹ ವಾತಾವರಣದಲ್ಲಿ ಹೇಗಾದರೂ 'ಗೆಲ್ಲುವುದು' ಮಾತ್ರ ಮುಖ್ಯ ಎನ್ನುವವರು ಮಾತ್ರ ಬದುಕಲು ಸಾಧ್ಯ; ಸೋಲು, ಗೆಲುವು ಇಲ್ಲದ ಪ್ರೀತಿಯ ಬದುಕನ್ನು ಮಾತ್ರ ನಿರೀಕ್ಷಿಸುವವರಿಗೆ ಖಂಡಿತಾ ಬದುಕಲು ಸಾಧ್ಯವಿಲ್ಲ ಎಂದು ನಿರ್ಧರಿಸಿ, ಅಪ್ಪನಿಂದ ಎರಡು ಲಕ್ಷ ಹಣ ತಂದು ಬೆಂಗಳೂರಿನ ಸಮೀಪ ಎರಡು ಎಕರೆ ಜಮೀನನ್ನು ಕೊಂಡು ಮೊದಲೇ ಕಲಿತಿದ್ದ ವಿದ್ಯೆಯನ್ನು ಅಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸುತ್ತಾನೆ ಕೃಷ್ಣೇಗೌಡ.

ಕಾಲೇಜಿಗೆ 'ಡೋನೇಷನ್' ಕೊಡಬೇಕಿದ್ದ



ಹಣದಲ್ಲಿ ಜಮೀನುಕೊಂಡು, ಉಳಿದ ಸ್ವಲ್ಪ ಹಣದಲ್ಲಿ ಸಣ್ಣ ಪ್ರಮಾಣದಲ್ಲಿ ಕೃಷಿ ಪ್ರಾರಂಭಿಸುತ್ತಾನೆ. ಕಾಲೇಜಿಗೆ ಹೋಗುವಂತೆ ಮುಂಜಾನೆ 8 ಗಂಟೆಗೆ ತೋಟಕ್ಕೆ ಬಂದರೆ ಸಂಜೆವರೆಗೂ ದುಡಿಮೆ. ದಿನ, ತಿಂಗಳು ವರ್ಷ ಕಳೆದಂತೆ ಕೃಷಿ ಉತ್ಪನ್ನ ಹೆಚ್ಚಾಗತೊಡಗಿತು. ತಾನು ಬೆಳೆದ ಹಣ್ಣು, ತರಕಾರಿಗಳನ್ನು ಸಿಟಿಗೆ ತಂದು ನೇರವಾಗಿ ಬಳಕೆದಾರರಿಗೆ ಮಾರುತ್ತಿದ್ದ. ಫಸಲು ಹೆಚ್ಚಾದಂತೆ ಕೃಷ್ಣೇಗೌಡನ ವರ್ಚಸ್ಸು ಹೆಚ್ಚಾಯಿತು. ತೆಂಗು ಹೂಬಿಡಲು ಪ್ರಾರಂಭಿಸಿ 5 ವರ್ಷದ ಹತ್ತಿರಕ್ಕೆ ಫಸಲು ಪ್ರಾರಂಭವಾಯಿತು. ಕೃಷ್ಣೇಗೌಡ ಬುದ್ಧಿವಂತ, ಸಾಹಸಿ, ಶ್ರಮಜೀವಿ. ಹಾಗಾಗಿ ಹಿಡಿದ ಹಠ ಬಿಡದೆ ಗುರಿ ತಲುಪಿದ್ದ. ತನ್ನ ಬಾಲ್ಯದ ಕೃಷಿಯ ಅನುಭವಕ್ಕೆ ಇಂದಿನ ಹೊಸ ತಂತ್ರಗಳನ್ನೂ ಬಳಸಿ ಪ್ರಮುಖ ತೋಟಗಾರರ ಸಾಲಿನಲ್ಲಿ ನಿಂತಿದ್ದ.

ದೂರದ ಊರಿನಲ್ಲಿ ಇದಾವುದನ್ನೂ ತಿಳಿಯದ ಕಿರೇಗೌಡ ಆತಂಕದಿಂದಲೇ ಮಗನ ದಾರಿ ಕಾಯುತ್ತಿದ್ದ. ಒಂದು ದಿನ ತನ್ನ ತಂದೆ ತಾಯಿಯನ್ನು ಕಾರಿನಲ್ಲಿ ಕರೆದುಕೊಂಡು ತನ್ನ ಸಾಧನೆಯನ್ನು ತೋರಿಸಲು ಬಂದಿದ್ದ ಕೃಷ್ಣೇಗೌಡ. ಸಂಭ್ರಮ, ಪ್ರೀತಿಯಿಂದ ಶ್ರಮಪಟ್ಟು ಬೆಳೆಸಿದ ತೋಟವನ್ನು ತೋರುತ್ತಿದ್ದ ಮಗನನ್ನು ಕಿರೇಗೌಡ ಮತ್ತು ಅವನ ಹೆಂಡತಿ ಹೆಮ್ಮೆಯಿಂದ ನೋಡುತ್ತಿದ್ದರು. ಮಗ ಬೆಳೆದ ಎಳೆ ನೀರನ್ನು ಕುಡಿಯುವಾಗ ಗೌಡ ಆನಂದದಿಂದ ಕಣ್ಣಲ್ಲಿ ನೀರು ತಂದುಕೊಂಡು 'ಚೆನ್ನಾಗಿರು ಮಗ' ಎಂದಷ್ಟೇ ಹೇಳಿದ.

ಇದೊಂದು ವಾಸ್ತವಕ್ಕೆ ತರಬಹುದಾದ ಕನಸಿನ ಕಥೆ.

ಬೆಂಗಳೂರಿನಲ್ಲಿ ಈಚೆಗೆ ಹಣ್ಣು, ತರಕಾರಿಗಳ ಬೆಲೆ ಹೆಚ್ಚಾಗಿದೆ ಎಂದು ಪತ್ರಿಕೆಗಳಿಂದ ಹಿಡಿದು, ಸಾಮಾನ್ಯ ಜನರವರೆಗೂ ಚರ್ಚಿಸುತ್ತಿದ್ದಾರೆ. ಇಷ್ಟು ಮಳೆಯಾದರೂ ಬೆಳೆಯಿಲ್ಲ ಎಂದರೆ ಕಾರಣವಾದರೂ ಏನು? ಮಳೆಯೊಂದು ಇದ್ದರೆ ಸಾಕೇ, ಭೂಮಿ ಬೇಡವೆ? ಎಲ್ಲಿದೆ ಭೂಮಿ ?

ಈ ಪ್ರಶ್ನೆಗೆ ರೆಸಾರ್ಟ್, ಅಪಾರ್ಟ್‌ಮೆಂಟುಗಳಿಗೆ ಕೃಷಿ ಭೂಮಿ ಮಾರಾಟಮಾಡಿ ಹಣವನ್ನು ಜೂಜಾಡಿ ಕಳೆದ ರೈತರು, ಭೂಮಿಯಿದ್ದರೂ ಪೊಳ್ಳು ಕಾರಣ ನೀಡಿ ಅಲೆಯುತ್ತಿರುವ ಸೋಮಾರಿಗಳು ಉತ್ತರಿಸಬೇಕು.

ಹತ್ತು ವರ್ಷಗಳ ಹಿಂದೆ ಕೃಷ್ಣೇಗೌಡನಂತಹವರು ಹೆಚ್ಚಾಗಿದ್ದಿದ್ದರೆ? ಈವತ್ತು ಹಣ್ಣು, ತರಕಾರಿಗಳ ಬೆಲೆಯ ಬಗ್ಗೆ ನಾವು ತಲೆಕೆಡಿಸಿಕೊಳ್ಳುವಂತಿರಲಿಲ್ಲ. ಹಾಗೆಂದು ಹತಾಶರಾಗಬೇಕಿಲ್ಲ, ಇನ್ನೂ ಕಾಲ ಮಿಂಚಿಲ್ಲ. ಈಗಲೇ ಕೃಷ್ಣೇಗೌಡನಂತಹ ಯುವಕರು ಎಚ್ಚೆತ್ತರೆ ಮುಂದಿನ ದಿನಗಳಲ್ಲಿ ಹಸಿರು ಕಾಣಬಹುದು. ಇಲ್ಲವಾದಲ್ಲಿ ನಿರುದ್ಯೋಗಿ ಪದವೀಧರರನ್ನು ಸಾಕಲು ಒಂದು ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಬೇಕಾಗಬಹುದು.

ಆಯ್ಕೆ ನಮ್ಮದು. ■

$ 'ಡಾಲರ್' ಚಕ್ರಾಧಿಪತ್ಯಕ್ಕೆ 'ಯುರೊ' ಲಗ್ಗೆ ?

ಯುರೊ ಆಗಮನಕ್ಕೆ ಭಾರತ ಸಜ್ಜಾಗಿದೆಯೇ? ಯಥಾ ಪ್ರಕಾರ ಭಾರತ ಕುಂಬಕರ್ಣ ನಿದ್ದೆಯಿಂದ ಎಚ್ಚೆತ್ತಿಲ್ಲ. ವಿಮಾನಯಾನ, ಮಾಹಿತಿ ತಂತ್ರಜ್ಞಾನ, ಆಮದು-ರಫ್ತು, ಬ್ಯಾಂಕಿಂಗ್ ಹಲವಾರು ವಲಯಗಳಲ್ಲಿ ಮಹತ್ವದ ಪಾತ್ರವಹಿಸಬಲ್ಲ 'ಯುರೊ'ದ ಲಾಭವನ್ನು ಭಾರತ ಬಾಚಿಕೊಳ್ಳುವುದು ಯಾವಾಗ ?

ಇವತ್ತಿನವರೆಗೂ ನಮ್ಮಲ್ಲಿ ರೂಪಾಯಿ ಬಿಟ್ಟರೆ ಅತಿಹೆಚ್ಚು ಚಲಾವಣೆಯಲ್ಲಿರುವ ಪ್ರಬಲವಾಗಿರುವ ಆರ್ಥಿಕ ಮೌಲ್ಯದ ಅಳತೆಗೋಲಾಗಿರುವ ಕರೆನ್ಸಿ 'ಡಾಲರ್'.

ನಮ್ಮ ದೇಶದಲ್ಲಷ್ಟೇ ಅಲ್ಲ. ಇದುವರೆಗೂ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲೂ ಆಯಾ ದೇಶದ ಕರೆನ್ಸಿ ನಂತರದ ಸ್ಥಾನ ಡಾಲರ್‌ಗೆ ಮೀಸಲು. ಆದರೆ ಇನ್ನು ಮುಂದೆ ಹಾಗಲ್ಲ.

ಡಾಲರ್, ಪೌಂಡ್, ಯೆನ್, ರೂಬಲ್ ಇತ್ಯಾದಿ ಕರೆನ್ಸಿಗಳು ಗೊತ್ತು. 'ಯುರೊ' ಗೊತ್ತಾ? ಗೊತ್ತಿಲ್ಲ. ಯಾಕೆಂದರೆ ಅದಿನ್ನೂ ಚಲಾವಣೆಗೆ ಬಂದಿಲ್ಲ. ಇದು ಬರೇ ಚಲಾವಣೆಗೆ ಬರುವುದಿಲ್ಲ. ಡಾಲರ್‌ಗೆ ಸ್ಪರ್ಧಿಯಾಗಿ, ಪರ್ಯಾಯವಾಗಿ ಬರಲಿದೆ.

ಮಹತ್ವ ಏಕೆ?

ವಿಶ್ವದಾದ್ಯಂತ ಡಾಲರ್ ಸಾರ್ವಭೌಮತ್ವಕ್ಕಿರುವ ಮುಖ್ಯ ಕಾರಣವೇ ಅಮೆರಿಕದ ಬಲಿಷ್ಠ ಆರ್ಥಿಕತೆ, ಮುಕ್ತ ಮಾರುಕಟ್ಟೆ ನೀತಿ. ಆಮದು, ರಫ್ತುಗಳ ಸರಳೀಕರಣ. ಜಗತ್ತಿನ ಯಾವ ರಾಷ್ಟ್ರವೇ ಆದರೂ ಅಮೆರಿಕದೊಂದಿಗೆ ಕೊಡು-ಕೊಳ್ಳುವ ವ್ಯವಹಾರ ನಡೆಸಿದಾಗ ಇಡುವಲೆಕ್ಕ ಡಾಲರ್‌ನಲ್ಲಿ ತಾನೆ? ಆದರೆ ಅಮೆರಿಕದೊಂದಿಗಿನ ವ್ಯವಹಾರವೇ ಕಡಿಮೆಯಾದರೆ, ಡಾಲರ್‌ನ ಕೊಡು-ಕೊಳ್ಳುವಿಕೆ ಇಲ್ಲದೇನೆ ವಹಿವಾಟು ಸಾಧ್ಯವಾಗುವುದಾದರೆ; ಇಂತಹ ಒಂದು ಆಲೋಚನೆಯೇ 'ಯುರೊ' ಕರೆನ್ಸಿ ಉದಯಕ್ಕೆ ನಾಂದಿ.

ಕೇಂದ್ರ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಸಾರ್ಕ್ ವ್ಯಾಪಾರ ಮೇಳದಲ್ಲಿ ಮಾತನಾಡುತ್ತ ''ಡಾಲರ್ ಆಳ್ವಿಕೆ ಅಂತ್ಯಗೊಳ್ಳಬೇಕೆಂದು ಬಯಸುವ ರಾಷ್ಟ್ರಗಳು ಒಂದಾಗಿ 'ಪ್ರತಿ ವ್ಯಾಪಾರ' ಪದ್ಧತಿಗೆ ಮುಂದಾಗಬೇಕು'' ಎಂದರು. ಐರೋಪ್ಯ ದೇಶಗಳ ಸಮುದಾಯ 1993ರಷ್ಟು ಹಿಂದೆಯೇ, ಹೀಗೆ ಸಂಕಲ್ಪಿಸಿತ್ತು. ಈ ಸಂಕಲ್ಪವೇ 'ಯುರೊ' ಅಸ್ತಿತ್ವದ ಮೂಲ.

ಜನವರಿ ಒಂದರಿಂದ

ಯುರೋಪಿನ ಹನ್ನೊಂದು ರಾಷ್ಟ್ರಗಳಿಗೂ ಅನ್ವಯವಾಗುವ ಕರೆನ್ಸಿಯೇ 'ದಿ ಯುರೊ'.

ರಾಜಕೀಯ, ಆರ್ಥಿಕ ಅವಲಂಬನೆಗಳಿರದಿದ್ದರೂ ವಹಿವಾಟಿಗೆ ಪೂರಕವಾಗಲಿರುವ ಒಗ್ಗಟ್ಟನ್ನು ಪ್ರತಿನಿಧಿಸುವ ಈ ಸಮಾನ ಕರೆನ್ಸಿ ಹೊಂದಿದ ರಾಷ್ಟ್ರಗಳ ಒಕ್ಕೂಟ 'ಯುರೋಪಿಯನ್ ಯೂನಿಯನ್' ಆಯಿತು. ಸದ್ಯ ಯುರೋಪಿಯನ್ ಯೂನಿಯನ್‌ನಲ್ಲಿ 11 ಸದಸ್ಯ ರಾಷ್ಟ್ರಗಳಿವೆ. ಈ ಸಂಖ್ಯೆ ಇನ್ನೂ ಹೆಚ್ಚುವ ನಿರೀಕ್ಷೆ ಇದೆ.

ಬರುವ ಜನವರಿ ಒಂದರಿಂದ ಅಖಾಡಕ್ಕಿಳಿಯುವ 'ಯುರೊ' ಹನ್ನೊಂದು ರಾಷ್ಟ್ರಗಳ ಅಧಿಕೃತ ಕರೆನ್ಸಿ. ಈಗ ಅಲ್ಲಿರುವ ಕರೆನ್ಸಿ ಇದ್ದಕ್ಕಿದ್ದಂತೆ ಕಾಗದದ ತುಣುಕುಗಳಾಗುವುದಿಲ್ಲ. ಹಾಗಾಗಿಯೇ ಹಂತ ಹಂತವಾಗಿ 'ಯುರೊ' ಅಳವಡಿಕೆ ನಡೆಯಲಿದೆ. 2002ನೇ ಇಸವಿಯ ಮೊದಲ ದಿನ ಮಾತ್ರ ಐರೋಪ್ಯ ರಾಷ್ಟ್ರಗಳ ಬಹಳಷ್ಟು ಕರೆನ್ಸಿಗಳು ಇತಿಹಾಸ ಸೇರಿಬಿಡುತ್ತವೆ. ಪ್ರದರ್ಶನಕ್ಕೆ, ಸಂಗ್ರಹಕಾರರಿಗೆ ಉಪಯೋಗಕ್ಕೆ ಬರುತ್ತವೆ.

ಜಾಗತಿಕ ಲಾಭ

ಯುರೊಪಿನ ಕೆಲವು ರಾಷ್ಟ್ರಗಳ ಆರ್ಥಿಕತೆ ಅಮೆರಿಕಕ್ಕಿಂತ ಬಲಿಷ್ಠ. ಉತ್ತಮ ವಿದೇಶಿ ವಿನಿಮಯ; ಆಮದು ರಫ್ತುಗಳಿದ್ದರೂ ಅವು ಚಿಕ್ಕವು. ಅಮೆರಿಕದಷ್ಟು ದೈತ್ಯವಾಗಿಲ್ಲ. ಆದರೆ ಆ ಚಿಕ್ಕರಾಷ್ಟ್ರಗಳೆಲ್ಲ ಒಂದಾಗಿ ನಿಂತರೆ ? ಡಾಲರ್, ಮಣಿಸುವುದು ಯಾವ ಲೆಕ್ಕ. ಈಗ 'ಯುರೊ' ಆ ಎಲ್ಲ ರಾಷ್ಟ್ರಗಳ ಪ್ರತಿನಿಧಿ.

'ಯುರೊ' ಆಗಮನದಿಂದ ಅಮೆರಿಕದ ನಂತರದ ಬಲಿಷ್ಠ ಆರ್ಥಿಕ ಶಕ್ತಿಯ ಉದಯವಾದಂತಾಗುತ್ತದೆ. ಐರೋಪ್ಯ ರಾಷ್ಟ್ರಗಳೊಂದಿಗಿನ ವ್ಯಾಪಾರ ವಹಿವಾಟು ವೃದ್ಧಿಯಾಗುತ್ತದೆ. ಸಾಲದ ಲೆಕ್ಕ ಯುರೊನಲ್ಲೂ ಇಡಬಹುದು !

ಭೌಗೋಳಿಕ ಚೌಕಟ್ಟನ್ನು ಮೀರಿ ಆರ್ಥಿಕವಾಗಿ ಒಂದಾಗುವ ಮೂಲಕ ವಹಿವಾಟು ಸುಗಮ.. ವಿಶ್ವದ ಕಂಪನಿ ವಲಯಕ್ಕೆ, ಉದ್ಯಮಕ್ಕೆ ಹೊಸ ಸ್ವರೂಪ ಸಿಗುವ ನಿರೀಕ್ಷೆ. ಎಲ್ಲಕ್ಕಿಂತ ಹೆಚ್ಚಾಗಿ ಹೊಸ ಆರ್ಥಿಕ ಶಕ್ತಿಯ ಸಂಘಟನೆಗೆ ಮಾದರಿ.

ಭಾರತಕ್ಕೇನು?

ಯುರೊ ಆಗಮನಕ್ಕೆ ಭಾರತ ಸಜ್ಜಾಗಿದೆಯೇ? ಯಥಾ ಪ್ರಕಾರ ಭಾರತ ಕುಂಬಕರ್ಣ ನಿದ್ದೆಯಿಂದ ಎಚ್ಚೆತ್ತಿಲ್ಲ.

ಇನ್ನು ಕೇವಲ ಮೂರು ತಿಂಗಳಲ್ಲಿ ಬರುವ ಪ್ರಬಲ ಕರೆನ್ಸಿ 'ಯುರೊ'ದ ವಿನಿಮಯ ದರ, ಚಲಾವಣೆ ರೀತಿ ಸಾಮಾನ್ಯರಿಂದ ತುಂಬಾ ದೂರದಲ್ಲಿದೆ. ಆದರೆ ವಿಮಾನಯಾನ, ಮಾಹಿತಿ ತಂತ್ರಜ್ಞಾನ, ಆಮದು-ರಫ್ತು, ಬ್ಯಾಂಕಿಂಗ್ ಹಲವಾರು ವಲಯಗಳಲ್ಲಿ ಮಹತ್ವದ ಪಾತ್ರವಹಿಸಬಲ್ಲ 'ಯುರೊ'ದ ಲಾಭವನ್ನು ಭಾರತ ಬಾಚಿಕೊಳ್ಳುವುದು ಯಾವಾಗ ?

ಈಗ ಐರೋಪ್ಯ ಸಮುದಾಯಕ್ಕೆ ಭಾರತದ ರಫ್ತು ಪ್ರಮಾಣ ಕೇವಲ ಶೇ 0.5. ಆದರೆ 'ಯುರೊ'ದಿಂದಾಗಿ ಹೊಸ ಮಾರುಕಟ್ಟೆ ಅನ್ವೇಷಣೆ ಸಾಧ್ಯ.

ಬಂಡವಾಳ ಪೇಟೆಯಲ್ಲಿ ವಿದೇಶಿ ಹೂಡಿಕೆಯಲ್ಲಿ ಡಾಲರ್ ಮುಂಚೂಣಿಯಲ್ಲಿತ್ತು. ಆದರೀಗ 'ಯುರೊ' ಆ ಸ್ಥಾನ ಆಕ್ರಮಿಸಬಹುದು. ಆಕ್ರಮಿಸಬೇಕು. ಅಂತಹ ಒಂದು ಚಾಲನೆಗಾಗಿ ಭಾರತ ಕಾದಿದೆ.

ಯುರೊ ಕರೆನ್ಸಿಯ ಅಳವಡಿಕೆಯಿಂದಾಗಿ ಕಂಪ್ಯೂಟರ್‌ನಲ್ಲಿ ಅಕೌಂಟ್, ಬಿಲ್ಲಿಂಗ್, ಕಂಪನಿ ವ್ಯವಹಾರಗಳೆಲ್ಲ ಬದಲಾಗಬೇಕು. ವೈಟುಕೆ ಸಮಸ್ಯೆಯಂತಹ ವಿಪುಲ ಉದ್ಯೋಗಾವಕಾಶದ ಸಂದರ್ಭ ಐರೋಪ್ಯ ರಾಷ್ಟ್ರಗಳಲ್ಲೂ ಸೃಷ್ಟಿಯಾಗಲಿದೆ. ಕಂಪ್ಯೂಟರ್ ಕ್ಷೇತ್ರಕ್ಕಿರುವ ಅವಕಾಶದ ಹೆಬ್ಬಾಗಿಲು ಇನ್ನಷ್ಟು ವಿಸ್ತಾರಗೊಳ್ಳಲಿದೆ.

ಎರಡು ಮಹಾಯುದ್ಧಗಳನ್ನು ಕಂಡ ಯುರೋಪ್ ಈಗ ತನ್ನನ್ನು ತಾನೆ ಬಲಿಷ್ಠಗೊಳಿಸಿಕೊಳ್ಳುತ್ತಿದೆ. ಪರಸ್ಪರ ಆರ್ಥಿಕ ಸಂಘಟನೆಯ ಅಗತ್ಯ. ಹೊಸ ಶಕ್ತಿಯಾಗಿ ನಿಲ್ಲುವ ಛಲ ತೋರಿದೆ. ಈ ಅರಿವು ಏಷ್ಯಾದ ರಾಷ್ಟ್ರಗಳಿಗೆ ಬರುವುದು ಯಾವಾಗ ?

ದಕ್ಷಿಣ ಏಷ್ಯಾ ರಾಷ್ಟ್ರಗಳು ತಮ್ಮ ತಮ್ಮಲ್ಲೇ ಮುಕ್ತ ವ್ಯಾಪಾರ ವಹಿವಾಟಿಗೆ ಒಪ್ಪಂದ ಮಾಡಿಕೊಳ್ಳಲು ಕೂಡಾ ಒಮ್ಮತ ತೋರಲಿಲ್ಲ ! ಒಂದೇ ಕರೆನ್ಸಿಯನ್ನು, ದೇಶವನ್ನು ಪ್ರತಿನಿಧಿಸಬಲ್ಲ ಆರ್ಥಿಕ ಕುರುಹನ್ನು ಹನ್ನೊಂದು ರಾಷ್ಟ್ರಗಳು ತಮ್ಮದೆಂದು ಒಪ್ಪಿಕೊಳ್ಳುತ್ತಿವೆ !

■ ಸುಧಾ ಶರ್ಮಾ

ಗಣಿತದ ಆಟ ಆಡುವ ಈ ಎಳೆಯ ಸ್ವತಃ 'ಜೀರೋ'



ಆರೂವರೆ ವರ್ಷಗಳ ಹುಡುಗನ ಸ್ವಭಾವ ಹೇಗಿರುತ್ತದೆ? ಇದು ಸುಲಭವಾಗಿ ಊಹಿಸಬಹುದಾದ ವಿಷಯ. ಕಥೆಗಾಗಿ ಅಜ್ಜ-ಅಜ್ಜಿಯರನ್ನು, ಆಟಿಕೆಗಳಿಗಾಗಿ ತಂದೆಯನ್ನು, ತಿಂಡಿ-ತಿನಿಸುಗಳಿಗಾಗಿ ತಾಯಿಯನ್ನು ಕಾಡುವ ವಯಸ್ಸದು. ಮನಬಂದಂತೆ ಆಟಗಳಲ್ಲಿ ಲೀನವಾಗಿ, ತಂದೆ-ತಾಯಿಗಳು 'ನೀವು ಕಂಡಿರಾ? ನೀವು ಕಂಡಿರಾ?' ಎಂದು ದೈನ್ಯದಿಂದ ಬೇರೆಯವರನ್ನು ಪ್ರಶ್ನಿಸುವಂತೆ ಮಾಡುವ ಕಾಲವದು.

ಆದರೆ ಇಲ್ಲಿ ನಾನು ಪ್ರಸ್ತಾಪಿಸಬಯಸುವ ಎಳೆಯ ಸಾಗರ್ ಇಂಥ ವರ್ಗಕ್ಕೆ ಸೇರಿದವನಲ್ಲ. ಆತನ ಸಮವಯಸ್ಕರು ತಿಂದು-ತೇಗಿ ಗೋಲಿ-ಗುಂಡು, ಚಿಣ್ಣಿ-ದಾಂಡು ಆಡಿ ಬಸವಳಿದು ಮಲಗಿ-ಆನಂದಿಸುತ್ತಿದ್ದರೆ, ಈತ ತನ್ನಜ್ಜ (ನಾರಾಯಣ ರಾಮಚಂದ್ರ ಪಾಟೀಲ್)ನನ್ನು ವಿಶ್ರಾಂತಿ ಪಡೆಯಲೂ ಬಿಡದೆ ಲೆಕ್ಕದಾಟ ಆಡಿಸಲು ಪೀಡಿಸುತ್ತಿರುತ್ತಾನೆ!.

1992ರ ಮಾರ್ಚ್‌ನಲ್ಲಿ ಜನಿಸಿದ ಸಾಗರನದು ಅಂಕಿಗಳ ಬಗೆಗೆ ತೀರದ ದಾಹ. ಅಜ್ಜನ ಗಮನಕ್ಕೆ ಇದು ಬಂದುದು ಆತ ನಾಲ್ಕು ವರ್ಷದವನಿದ್ದಾಗಲೇ. ತಮ್ಮ ಊರ ಮನೆಯಂಗಳದಲ್ಲಿಯೇ ಸಮಾಧಿಸ್ಥರಾದ ಶ್ರೀ ಯೋಗಾನಂದ ಮಹಾರಾಜರ ಬೇರಾರಿಗೂ ದೊರಕದ ಆಶೀರ್ವಾದ ಮೊಮ್ಮಗನಲ್ಲಿ ಸಾಕಾರಗೊಂಡಂತೆ ಅವರಿಗೆ ಭಾಸ. ಅಂಕ ಗಣಿತದಲ್ಲಿ ಸಾಗರನ ಅದಮ್ಯ ಆಸಕ್ತಿ, ಆತನ ತೀಕ್ಷ್ಣ ಗ್ರಹಣ ಶಕ್ತಿ ಅವರಿಗೆ ಆಶ್ಚರ್ಯ ಹುಟ್ಟಿಸಿದೆ. ಸಾಗರನ ತಂದೆ (ಅಜಿತ್ ಪಾಟೀಲ್) ಮತ್ತು ತಾಯಿ (ಸುನೀತಾ ಪಾಟೀಲ್) ಇಬ್ಬರೂ ಪದವೀಧರರಾಗಿದ್ದರೂ ಅವರಿಬ್ಬರಲ್ಲೂ ಕಾಣದ ಹುಟ್ಟು ಪ್ರತಿಭೆ ಒಂದು ತಲೆಮಾರನ್ನೇ ಜಿಗಿದು ಈಗ ಸಾಗರನಲ್ಲಿ ಒಡೆದುತೋರಿದೆ.

ಬಾಲಕನ ತಂದೆಯ ತಂದೆ, 67 ವರ್ಷದ ನಾರಾಯಣ ಪಾಟೀಲ್, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಲೆಕ್ಕ ಪರಿಶೋಧನಾ ವಿಭಾಗದಲ್ಲಿ ನಿವೃತ್ತ ಉಪ ನಿಯಂತ್ರಕರು. ಗಣಿತವನ್ನು ಅಪಾರವಾಗಿ ಪ್ರೀತಿಸುವ ಅವರು ಪ್ರತಿಭಾವಂತ ವಾಣಿಜ್ಯ ಪದವೀಧರರು. ಅಂತೆಯೇ, ಆತನ ತಾಯಿಯ ತಂದೆ, ಅಂಚೆ ಕಚೇರಿಯ ನಿವೃತ್ತ ಅಧಿಕಾರಿ ಬಾಲಚಂದ್ರರಾಯರಿಗೂ ಸಹ ಗಣಿತವೆಂದರೆ ಪಂಚಪ್ರಾಣ.

ಅಜ್ಜನ ಕಣ್ಣಾರೈಕೆಯಲ್ಲಿ ಬೆಳೆಯುತ್ತಾ ಬೆಳಗುತ್ತಿರುವ ಸಾಗರ್ ಈಗ ಮನೆಯ ಹತ್ತಿರದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಒಂದನೇ 'ಕ್ಲಾಸಿನ' ವಿದ್ಯಾರ್ಥಿ.

ಈತನೊಡನೆಯ ಮುಖಾಮುಖಿಯಲ್ಲಿ ಪಟಪಟನೆ ಬಾಯಿ ಲೆಕ್ಕ ಮಾಡಿದ; ನಾಲ್ಕು ಸ್ಥಾನಗಳ ಸಂಖ್ಯೆಗೆ ಮೂರು ಸ್ಥಾನಗಳ ಸಂಖ್ಯೆಯಿಂದ ಗುಣಿಸಿ ಉತ್ತರಿಸಿದ; 'ಕ್ವಿಂಟಲ್' ಬೆಲೆಯಾಧರಿಸಿ 'ಕೇಜಿ'ಗೆ ಕೊಡಬೇಕಾದ ಹಣದ ಬಗೆಗೆ ತಿಳಿಸಿದ; ಸರಾಸರಿ ತೆಗೆದ; ಅಪೂರ್ಣಾಂಕಗಳ ಪಟ್ಟಿ ಮಾಡಿದ; 'ಮಿಲಿಯನ್', 'ಬಿಲಿಯನ್', 'ಟ್ರಿಲಿಯನ್'ಗಳ ಅರ್ಥ ವಿವರಿಸಿದ; ವರ್ಗಮೂಲ, ವರ್ಗ, ಕೂಡುವುದು, ಕಳೆಯುವುದು, ಭಾಗಾಕಾರ ಎಲ್ಲವನ್ನೂ ಚಿಟಿಕೆಯಲ್ಲಿ ಪೂರೈಸಿದ ; ಎಷ್ಟು ತಪ್ಪಿಸಿ, ತಪ್ಪಿಸಿ ಕೇಳಿದರೂ 2ರಿಂದ 20ರ ವರೆಗಿನ ಮಗ್ಗಿಗಳನ್ನು ಸರಿಯಾಗಿಯೇ ಒಪ್ಪಿಸಿದ.

ಕಳೆದ ಮೂರು ತಿಂಗಳುಗಳಿಂದಷ್ಟೇ ಶಾಲೆಯಲ್ಲಿ ಕನ್ನಡ ಭಾಷೆಯ ಅಭ್ಯಾಸ ಪ್ರಾರಂಭವಾಗಿದೆ. ಆದರೂ ನನ್ನಲ್ಲಿದ್ದ ಯಾವುದೋ ಕನ್ನಡ ದಿನಪತ್ರಿಕೆಯನ್ನು, ಆಗಸ್ಟ್ ತಿಂಗಳ 'ಬಿಸಿಲ ಬದುಕನ್ನು ಕೈಯಲ್ಲಿಟ್ಟಾಗ ತಡಬಡಿಸದೆ ಓದಿದ. ಇಂಗ್ಲಿಷ್ ದಿನಪತ್ರಿಕೆಯನ್ನು ಓದಿದ. ಈತನ ಪ್ರಿಯ ವಿಷಯಗಳು: ಗಣಿತ, ಇಂಗ್ಲೀಷ್, ಕನ್ನಡ - ಈ ಕ್ರಮದಲ್ಲಿ ಕನ್ನಡ 'ಬೋರಿಂಗ್', ಅದಕ್ಕೆ 'ಡೋಂಟ್ ವಾಂಟ್' ಎಂದ.

ಪ್ರತಿದಿನ ದೂರದರ್ಶನದಲ್ಲಿ 'ಡಿಸ್ಕವರಿ ಚಾನೆಲ್' 'ಕಾರ್ಟೂನ್ ನೆಟ್‌ವರ್ಕ್' ಮತ್ತು 'ಹಾರರ್ ಶೋ' ನೋಡುತ್ತಾನಂತೆ!

ಈ ದೈನಂದಿನ ಚಟುವಟಿಕೆಗಳ ಕಾರಣ ಈತನ ಸಾಮಾನ್ಯ ಜ್ಞಾನದ ಮಟ್ಟ ಈ ಎಳವೆಯಲ್ಲಿಯೇ ಹರಿತವಾಗಿದೆ. ವಿವಿಧ ದೇಶಗಳ ರಾಜಧಾನಿಗಳು, ಭಾರತದ ರಾಜಧಾನಿ ಮತ್ತು ಪ್ರಧಾನ ಮಂತ್ರಿ, ಕರ್ನಾಟಕದ ಮುಖ್ಯಮಂತ್ರಿ ಹೆಸರುಗಳನ್ನು ನಿರಾಯಾಸವಾಗಿ ಹೇಳಿದ. ಸಾಗರನ ಬಯಕೆ ಕ್ರಿಕೆಟ್‌ನಲ್ಲಿ 'ಸ್ಪಿನ್ ಬೌಲರ್' ಆಗುವುದು!

ಪುಟ್ಟ ಬಾಲಕನ ಸಂದರ್ಶನ ಪೂರ್ತಿಗೊಳಿಸಿ ಮನೆಗೆ ಮರಳಿದಾಗ ಸುಗಂಧಯುಕ್ತ ಶುದ್ಧ ಸುಳಿಗಾಳಿಯನ್ನುಸುರಾಡಿದ ಅನುಭವ. ಆದರೂ ಕೆಲವು ಪ್ರಶ್ನೆಗಳು ಕಾಡಿದವು.

ಶಾಲೆಯವರು ಈ ವಿದ್ಯಾರ್ಥಿಗಾಗಿ ಖಾಸಗಿಯಾಗಿ ಒಂದು ಪುಷ್ಪಾಹಾರ ನೀಡಿದುದನ್ನು ಬಿಟ್ಟು ಮತ್ತೇನನ್ನೂ ಮಾಡಿಲ್ಲ! 'ಮೊಳಕೆಯಲ್ಲೇ ಕಾಣತೊಡಗಿದ ಬೆಳೆಯಸಿರಿ' ಕಣ್ಣು ಕುಕ್ಕುವಂತೆ ಬೆಳೆಯುವ ಅವಕಾಶ ವಂಚಿತವಾಗುತ್ತಿರುವುದು ಸಂಕಟವುಂಟು ಮಾಡಿತು. 'ಜ್ಞಾನದ ಬಲದಿಂದ ಅಜ್ಞಾನದ, ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡೆಂದ' ಆ ಪುಣ್ಯಜೀವಿ 'ಅಣ್ಣ'. ಅಂಥದಕ್ಕೆ ಅನುವು ಮಾಡಬಹುದಾದ ಇಂಥ ಪ್ರತಿಭೆಗಳಿಗೆ ವಿಪುಲ ಸದಾವಕಾಶಗಳನ್ನು ಸೃಷ್ಟಿಸುವ ಇಚ್ಛಾಶಕ್ತಿ, ಮನಸ್ಸು, ಪುರಸೊತ್ತು ಸುತ್ತಲಿನ ಸಾಮಾಜಿಕ ಸೇವಾ ಸಂಸ್ಥೆಗಳಿಗಿದೆಯೇ?

ಇಷ್ಟೆಲ್ಲಾ ಸಾಧಿಸಿದ ಸಾಗರ್, ಆ ಸಾಧನೆ ತನಗೇನೂ ಸಂಬಂಧಿಸಿಲ್ಲದಿರುವಂತೆ, 'ಅಹಂ'ನ ಲವಲೇಶವೂ ಇಲ್ಲದಂತಿದ್ದುದನ್ನು ಕಂಡು ಗಾಂಧೀಜಿ ಹೇಳಿದ "One should try to reduce oneself to a zero" ನೆನಪಾಗಿ ಎದೆ ತುಂಬಿ ಬಂದಿತು.

■ ಡಾ. ಟಿ.ಕೆ.ತಾಪಸ್

ಶೇಂಗಾ ಚಕ್ಕಿ

ಬೇಕಾಗುವ ಸಾಮಗ್ರಿಗಳು :

ಶೇಂಗಾ ಕಾಳು 1/2 ಕೆ.ಜಿ., ಸಕ್ಕರೆ 1/8 ಕೆ.ಜಿ., 2 ಚಮಚ ತುಪ್ಪ.

ಮಾಡುವ ವಿಧಾನ :

ಮೊದಲು ಶೇಂಗಾ ಕಾಳನ್ನು ಚೆನ್ನಾಗಿ ಹುರಿದು ಸಿಪ್ಪೆ ತೆಗೆಯಬೇಕು. ನಂತರ ಕಾಳುಗಳನ್ನು ಮಿಕ್ಸಿಯಲ್ಲಿ ಹಾಕಿ ಒಂದು ನಿಮಿಷ ತಿರುಗಿಸಿ, ಸ್ವಲ್ಪ ದಪ್ಪ ಪುಡಿ ಮಾಡಬೇಕು. ಒಂದು ತಾಟಿಗೆ ತುಪ್ಪ ಹಚ್ಚಿ ಇಟ್ಟು ಕೊಳ್ಳಬೇಕು. ನಂತರ ದಪ್ಪ ತಳದ ಪಾತ್ರೆಯಲ್ಲಿ 2 ಚಮಚ ತುಪ್ಪ ಹಾಕಿ. ಅದು ಬಿಸಿಯಾದ ನಂತರ (ಹೊಗೆಯಾಡಬಾರದು) ಸಕ್ಕರೆ ಹಾಕಿ ಚಮಚದಿಂದ ತಿರುಗಿಸುತ್ತಿರಬೇಕು. (ಪಾಕಕ್ಕೆ ತುಪ್ಪ ಕಡಿಮೆ ಅನಿಸಿದರೆ ನಂತರ ಒಂದು ಚಮಚ ತುಪ್ಪ ಸೇರಿಸಬಹುದು) ಪಾಕ ತಿಳಿಕಂದು ಬಣ್ಣ ಬಂದ ತಕ್ಷಣವೇ ಪುಡಿ ಮಾಡಿಟ್ಟ ಶೇಂಗಾ ಹಾಕಿ ಬೇಗ ಬೇಗನೆ ತಿರುಗಿಸಿ, ತುಪ್ಪ ಹಚ್ಚಿಟ್ಟ ತಾಟಿಗೆ ಹಾಕಿ ಬಡಿದು ತಕ್ಷಣ ಪೀಸ್ ಮಾಡಬೇಕು.

– **ಸರ್ವಮಂಗಳಾ**, ಬೆಳಗಾಂ.

ಪುರಿ ಉಂಡೆ

ಬೇಕಾಗುವ ಸಾಮಗ್ರಿ :

ಅರ್ಧ ಕೆ.ಜಿ. ಮೈದಾಹಿಟ್ಟು, 1/4 ಕೆ.ಜಿ. ಚಿರೋಟಿ ರವೆ, ಅರ್ಧ ಕೆ.ಜಿ. ಬೀಸಿದ ಸಕ್ಕರೆ ಪುಡಿ, 200 ಗ್ರಾಂ ತುಪ್ಪ, 50 ಗ್ರಾಂ ಏಲಕ್ಕಿ ಪುಡಿ ಮತ್ತು ಕರಿಯಲು ಎಣ್ಣೆ.

ಮಾಡುವ ವಿಧಾನ :



ಮೊದಲು ಮೈದಾಹಿಟ್ಟು ಜರಡಿ ಹಿಡಿದುಕೊಂಡು ಅದರಲ್ಲಿ ರವೆ ಮತ್ತು ಸ್ವಲ್ಪ ಕಾಸಿದ ಎಣ್ಣೆಯನ್ನು (ತುಪ್ಪವನ್ನು) ಹಾಕಿ ಸ್ವಲ್ಪ ನೀರಿನೊಂದಿಗೆ ಹಿಟ್ಟನ್ನು ಗಟ್ಟಿಯಾಗಿ ನಾದಬೇಕು. ನಂತರ ಅರ್ಧಗಂಟೆಯ ನಂತರ ಪುರಿಯನ್ನು ತೆಳ್ಳಗೆ ಲಟ್ಟಿಸಬೇಕು. ಕಾದ ಎಣ್ಣೆಯಲ್ಲಿ ಪುರಿಯನ್ನು ಕೆಂಪಗೆ ಕರಿಯಬೇಕು. ಪುರಿಯು ಆರಿದ ನಂತರ ಮಿಕ್ಸರ್‌ನಲ್ಲಿ ಹಾಕಿ ಪುಡಿಯನ್ನು ಮಾಡಿಕೊಳ್ಳಬೇಕು. ಇದರಲ್ಲಿ ತುಪ್ಪ ಮತ್ತು ಪುಡಿ ಮಾಡಿದ ಸಕ್ಕರೆ, ಏಲಕ್ಕಿ ಪುಡಿಯನ್ನು ಹಾಕಿ ಕೈಯಿಂದ ಚೆನ್ನಾಗಿ ತಿಕ್ಕಬೇಕು. ನಂತರ ಉಂಡೆಗಳನ್ನು ಕಟ್ಟಬೇಕು. ತಿನ್ನಲು ತುಂಬಾ ರುಚಿಯಾಗಿರುತ್ತದೆ.

– **ಹೇಮಾ ಪಾಟೀಲ್**, ಯಾದಗಿರ

ಗೆಣಸಿನ ಹಲ್ವ

ಬೇಕಾಗುವ ಸಾಮಗ್ರಿಗಳು :

ಸಿಹಿಗೆಣಸು 1/2 ಕೆ.ಜಿ, ಅಚ್ಚು ಬೆಲ್ಲ 1/2 ಕೆ.ಜಿ., ತೆಂಗಿನ ತುರಿ ಒಂದು ಹಿಡಿ, ತುಪ್ಪ 2 ಟೇಬಲ್ ಸ್ಪೂನ್, ಏಲಕ್ಕಿ 4.

ಮಾಡುವ ವಿಧಾನ :

ಮೊದಲು ಗೆಣಸನ್ನು ಚೆನ್ನಾಗಿ ತೊಳೆದು ಸಿಪ್ಪೆ ಸಹಿತ ಕುಕ್ಕರಿನಲ್ಲಿ ಬೇಯಿಸಿ. ನಂತರ ಸಿಪ್ಪೆ ತೆಗೆದು ಪುಡಿ ಮಾಡಿಟ್ಟುಕೊಳ್ಳಿ. ಒಲೆಯ ಮೇಲೆ ಬಾಣಲೆ ಇಟ್ಟು ಅದರಲ್ಲಿ ಗೆಣಸಿನ ಪುಡಿ, ಬೆಲ್ಲ, ತುಪ್ಪ, ಏಲಕ್ಕಿಯನ್ನು ಹಾಕಿ, ಸಣ್ಣ ಉರಿಯಲ್ಲಿ 10-15 ನಿಮಿಷ ಕೆದಕಿ ಕೆಳಗಿಳಿಸಿ, ಆರಿದ ನಂತರ ತಿಂದರೆ ಬಹಳ ರುಚಿಯಾಗಿರುವುದು.

– **ಸರಸ್ವತಿ**, ಬೆಂಗಳೂರು.

ಬೆಳವಲ ನಾಡಿನ ತಂಬಿಟ್ಟು

ಬೇಕಾಗುವ ಸಾಮಗ್ರಿಗಳು :

ನವಣಕ್ಕಿ, ಬೆಲ್ಲ, ಒಣ ಕೊಬ್ಬರಿ, ಯಾಲಕ್ಕಿ, ಒಣ ಶುಂಠಿ, ಹೊಸ ಮಡಿಕೆ (ಗಡಿಗೆ).

ಮಾಡುವ ವಿಧಾನ :

ನವಣಕ್ಕಿಯನ್ನು ಚೆನ್ನಾಗಿ ತೊಳೆಯಬೇಕು. ಅದನ್ನು ನೆರಳಿನಲ್ಲಿ ಒಣಗಿಸಬೇಕು, ಒರಳಿನಲ್ಲಿ ಚೆನ್ನಾಗಿ ಕುಟ್ಟಿ ಹಿಟ್ಟನ್ನು ತಯಾರಿಸಬೇಕು. ಗ್ರೈಂಡರ್‌ನಲ್ಲಿ ಸಹ ಮಾಡಬಹುದು. ಹಿಟ್ಟು



ಮುಷ್ಟಿಯಲ್ಲಿ ಹಿಡಿದರೆ ಉಂಡಿ ತರಹ ಮೆತ್ತಗಿರಬೇಕು. ಇದನ್ನು ತೆಳುವಾದ ಬಟ್ಟೆಯಿಂದ ಸೋಸಬೇಕು. ಸೋಸಿದ ಹಿಟ್ಟನ್ನು ಹಸಿ ಬೆಲ್ಲದಲ್ಲಿ ಕಲೆಸಬೇಕು. ಪುಡಿ ಮಾಡಿದ ಯಾಲಕ್ಕಿ ಶುಂಠಿಯನ್ನು ಕಲೆಸಿ, ಮಡಿಕೆ (ಗಡಿಗೆ)ಯಲ್ಲಿ ಹಾಕಿ ಒಳ್ಳೆಯ ಬಟ್ಟೆಯಿಂದ ಬಾಯಿ ಕಟ್ಟಿ. ಇದನ್ನು ಮೂರು ನಾಲ್ಕು ದಿನ ಹಾಗೆ ಬಿಟ್ಟು ಆಮೇಲೆ ತೆಗೆದು ಒಣ ಕೊಬ್ಬರಿ, ತುಪ್ಪದ ಜೊತೆ ತಿನ್ನಬೇಕು. ಇದು ಮಳೆಗಾಲದಲ್ಲಿ ತಿಂದರೆ ಆರೋಗ್ಯಕ್ಕೆ ಒಳ್ಳೆಯದು. ಇದನ್ನು ತಿಂಗಳಗಟ್ಟಲೆ ಇಟ್ಟರೂ ಕೆಡುವುದಿಲ್ಲ.

– **ಸುಶೀಲಾ ಎಸ್. ಕುಲಕರ್ಣಿ**, ಬೆಳಗಾವಿ.

ಕರಿಬೇವಿನ ಚಟ್ನಿ

ಬೇಕಾಗುವ ಸಾಮಗ್ರಿಗಳು :



1 ಕಟ್ಟು ಕರಿಬೇವಿನ ಸೊಪ್ಪು, 50 ಗ್ರಾಂ ಗಸಗಸೆ, 2 ಗಡ್ಡೆ ಬೆಳ್ಳುಳ್ಳಿ, 1 ಈರುಳ್ಳಿ, ರುಚಿಗೆ ತಕ್ಕಷ್ಟು ಉಪ್ಪು, ಖಾರದ ಪುಡಿ ಮತ್ತು ಹುಣಸೆ ಹಣ್ಣು.

ಮಾಡುವ ವಿಧಾನ :

ಕರಿಬೇವು ಮತ್ತು ಗಸಗಸೆ ಬೆಚ್ಚಗೆ ಮಾಡಿಕೊಂಡು ಅದರ ಜೊತೆಗೆ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಒಟ್ಟಿಗೆ ಸೇರಿಸಿ ಕುಟ್ಟಿ ಪುಡಿಮಾಡಿರಿ. ಹುಣಸೆ ಹಣ್ಣಿನ ಜೊತೆಗೆ ರುಚಿಗೆ ತಕ್ಕಷ್ಟು ಉಪ್ಪು ಖಾರ ಹಾಕಿ. ಈ ಚಟ್ನಿ ಬಹಳ ರುಚಿಯಾಗಿರುತ್ತದೆ.

– **ಎಸ್. ಫಕ್ರಸಾಭಿ**, ಕೋಲಾರ.

ಹೆಸರು ಕಾಳಿನ ಮೊಳಕೆ ಹಾಗೂ ಅಲಸಂದೆ ಕಾಳಿನ ಕಟ್‌ಲೆಟ್

ಬೇಕಾಗುವ ಪದಾರ್ಥಗಳು :

ಹೆಸರು ಕಾಳಿನ ಮೊಳಕೆ 1 ಕಪ್, ಮೊಳಕೆ ಬಂದ ಅಲಸಂದೆ 2 ಕಪ್, 3 ತುಂಡು ಬ್ರೆಡ್, 8 ಹಸಿ ಮೆಣಸಿನಕಾಯಿ, 1 ಚಕ್ಕೆ ಗರಂಮಸಾಲ, 4 ಚಮಚ ಎಣ್ಣೆ, ಉಪ್ಪು, ಶುಂಠಿ, ಕೊತ್ತಂಬರಿ ಸೊಪ್ಪು.

ಮಾಡುವ ವಿಧಾನ :



ಅಲಸಂದೆ ಹಾಗೂ ಹೆಸರು ಕಾಳುಗಳನ್ನು ಹದವಾಗಿ ಬೇಯಿಸಿ. ನೀರು ಬೆರಸದೆ ಸರಿಯಾಗಿ ರುಬ್ಬಿ, ಹಸಿ ಮೆಣಸಿನ ಕಾಯಿ ಹಾಗೂ ಶುಂಠಿಯನ್ನು ರುಬ್ಬಿ, 4 ಚಮಚ ಎಣ್ಣೆ ಬಿಸಿ ಮಾಡಿ ಸಾಸುವೆ, ಜೀರಿಗೆ ಒಗ್ಗರಣೆ ಮಾಡಿ, ಇದಕ್ಕೆ ರುಬ್ಬಿದ ಕಾಳಿನ ಮಿಶ್ರಣ, ಶುಂಠಿ ಪೇಸ್ಟ್ ಹಾಕಿ ಬಾಡಿಸಿ, ಬ್ರೆಡ್ ತುಂಡುಗಳನ್ನು ನೀರಿನಲ್ಲಿ ಅದ್ದಿ, ಹಿಂಡಿ ಇದಕ್ಕೆ ಸೇರಿಸಿ. ಇದಕ್ಕೆ ಗರಂಮಸಾಲ ಸೇರಿಸಿ 2 ನಿಮಿಷದ ನಂತರ ಇಳಿಸಿ ಆರಲು ಬಿಡಿ. ನಂತರ ಕೊತ್ತಂಬರಿ ಸೊಪ್ಪು ಸೇರಿಸಿ.

ಮಿಶ್ರಣ ಮಾಡಿದ ಪದಾರ್ಥವನ್ನು ಸಣ್ಣ ಉಂಡೆಗಳಾಗಿ ಮಾಡಿಕೊಂಡು ಕಟ್‌ಲೆಟ್ ತರಹ ಮಾಡಿ ಕಾವಲಿಯನ್ನು ಬಿಸಿ ಮಾಡಿ, ಅದರ ಮೇಲೆ 5-6 ಕಟ್‌ಲೆಟ್ ಹಾಕಿ ಪ್ರತಿಯೊಂದರ ಸುತ್ತಲೂ ಎಣ್ಣೆ ಬಿಡುತ್ತಾ 2 ಕಡೆ ಹದನಾಗಿ ಬೇಯಿಸಿ. ಸೀದಿಸಬಾರದು. ಟೊಮೇಟೋ ಸಾಸ್, ಪುದಿನಾ ಚಟ್ನಿ ಜೊತೆ ಬಿಸಿ ಇರುವಾಗಲೇ ತಿನ್ನಲು ಚೆನ್ನಾಗಿರುವುದು.

– **ಕೆ.ಪದ್ಮಿನಿ**, ದಾವಣಗೆರೆ.


ಸಿಹಿ ಮಂಗಳೂರು ಬಜ್ಜಿ

ಬೇಕಾಗುವ ಸಾಮಗ್ರಿಗಳು :

1/2ಕಪ್ ಗೋಧಿ ಹಿಟ್ಟು, 1/2ಕಪ್‌ಮೈದಾ, ಮುಕ್ಕಾಲು ಕಪ್ ಬೆಲ್ಲ ಅಥವಾ ಸಕ್ಕರೆ, 2 ಬಾಳೆಹಣ್ಣು, ಗೋಡಂಬಿ, ಏಲಕ್ಕಿ ಒಣ ದ್ರಾಕ್ಷಿ.

ಮಾಡುವ ವಿಧಾನ :

ಗೋಧಿ ಹಿಟ್ಟು ಮೈದಾಹಿಟ್ಟು ಎರಡೂ ಸೇರಿಸಿ ಜರಡಿ



ಹಿಡಿದು ಅದರಲ್ಲಿ ಸಕ್ಕರೆ ಅಥವಾ ಬೆಲ್ಲ ಕೂಡಿಸಿ ಬಾಳೆ ಹಣ್ಣು ಸಣ್ಣ ತುಂಡು ಮಾಡಿ ಹಾಕಬೇಕು. ಏಲಕ್ಕಿ ಪುಡಿ, ಗೋಡಂಬಿ, ದ್ರಾಕ್ಷಿ ಚೂರುಗಳನ್ನು ಚೆನ್ನಾಗಿ ನೀರು ಹಾಕಿ ಕಲಸಿ ನಂತರ ಚಿಕ್ಕ ಚಿಕ್ಕ ಉಂಡೆ ಮಾಡಿ ಎಣ್ಣೆ ಅಥವಾ ಡಾಲ್ಡಾ (ವನಸ್ಪತಿ)ದಲ್ಲಿ ಕರಿಯಬೇಕು. ಸಿಹಿ ಬಜ್ಜಿಯ ಬದಲಾಗಿ ಖಾರ ಬೇಕಾದರೆ ಹಸಿಮೆಣಸಿನಕಾಯಿ, ಕೊತ್ತಂಬರಿ, ಮೆಣಸು, ಜೀರಿಗೆ, ತೆಂಗಿನಕಾಯಿ ಚೂರು, ಸೋಡಾಪುಡಿ ಎಲ್ಲಾ ಹಾಕಿ ಖಾರದ ಬಜ್ಜಿ ಕೂಡ ಮಾಡಬಹುದು.

–**ಪುಷ್ಪಲತಾ ಪಿ.ಲದವಾ**, ಬಾಗಲಕೋಟೆ

ಪುಳಿಯೊಗರೆ

ಬೇಕಾಗುವ ಸಾಮಗ್ರಿಗಳು :



ಅರ್ಧ ಅಥವಾ 1 ಕೆ.ಜಿ. ಅಕ್ಕಿ, 1 ಚಮಚ ಕೊತ್ತಂಬರಿ ಬೀಜ, 1 ಚಮಚ ಕಡಲೆ ಬೇಳೆ, 1 ಚಮಚ ಎಳ್ಳು, 5 ಒಣ ಮೆಣಸಿನಕಾಯಿ, 1 ಚಮಚ ಸಾಸಿವೆ, 1 ಚಮಚ ಮೆಂತ್ಯ, 1 ಚಮಚ ಅರಿಶಿಣ, 1 ಚಮಚ ಶೇಂಗಾ ಬೀಜ, 1 ಚಮಚ ಗೋಡಂಬಿ, ಅರ್ಧ ಬಟ್ಟಲು ಹುಣಸೆ ರಸ, ಕರಿಬೇವು ಎಲೆಗಳು, 1 ಚಿಟಿಕೆ ಇಂಗು ಎಣ್ಣೆ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ :

ತೊಳೆದ ಅಕ್ಕಿಯನ್ನು ನೀರಿನಲ್ಲಿ ಬೇಯಿಸಿ, ಬಳಿಕ ತಟ್ಟೆಯ ಮೇಲೆ ಬಸಿಯಿರಿ, 4 ಚಮಚ ಕಾದ ಎಣ್ಣೆಯಲ್ಲಿ ಮೆಣಸಿನಕಾಯಿ, ಸಾಸಿವೆ, ಮೆಂತ್ಯ ಇಂಗು ಮತ್ತು ಅರಿಶಿಣವನ್ನು ಹಾಕಿ ಹುರಿಯಿರಿ. ಹುಣಸೆ ರಸ, ಉಪ್ಪು ಸೇರಿಸಿ ರಸಗಟ್ಟಿಯಾಗುವವರೆಗೂ ಬೇಯಿಸಿ. ಕೊತ್ತಂಬರಿ ಹಾಗೂ ಎಳ್ಳು ಕಡಲೆ ಬೇಳೆಗಳನ್ನು ಕುಟ್ಟಿ ಪುಡಿಮಾಡಿ ಅನ್ನದ ಮೇಲೆ ಸಿಂಪಡಿಸಿ. ಗೋಡಂಬಿ, ಶೇಂಗಾ ಬೀಜ, ಕಡಲೆ ಬೇಳೆಗಳನ್ನು ಹುರಿದು ಬೇಯಿಸಿದ ಹುಣಸೆ ಹಣ್ಣಿನ ಮಿಶ್ರಣದೊಂದಿಗೆ ಅನ್ನಕ್ಕೆ ಸೇರಿಸಿ ಚೆನ್ನಾಗಿ ಬೆರೆಸಿ ಬೇಕಿದ್ದರೆ ಒಂದು ಚಮಚ ಎಣ್ಣೆ ಬಿಸಿ ಮಾಡಿ ಹಾಕಿ, ಪುಳಿಯೊಗರೆಯಲ್ಲಿ ಚೆನ್ನಾಗಿ ಕೈಯಾಡಿಸಿ ಕಲಸಿ ತಿನ್ನಲು ಕೊಡಿ.

– **ಕೆ. ಪದ್ಮಾವತಿ**, ಹರಪನಹಳ್ಳಿ

ನೀವೂ ಬರೆಯಬಹುದು

ಇದು ಮಹಿಳೆಯರ ಅಂಕಣ. ಮಹಿಳೆಯರು ತಮಗೆ ಗೊತ್ತಿರುವ ಅಡುಗೆಗಳ ಬಗ್ಗೆ ಅವುಗಳನ್ನು ತಯಾರಿಸುವ ವಿಧಾನದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಬಹುದು. ಬರಹದ ಜತೆಗೆ ತಮ್ಮದೊಂದು ಭಾವಚಿತ್ರ ಕಳಿಸಿ.

ವಿಳಾಸ

ಸಂಪಾದಕರು, ಬಿಸಿಲ ಬದುಕು,
ಅಂಕುರ ಪ್ರಕಾಶನ ಅಂಚೆ ಪೆಟ್ಟಿಗೆ : 7951
ಬಸವೇಶ್ವರನಗರ, ಬೆಂಗಳೂರು - 560 079.



ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ

ಆತ ದಪ್ಪ ನಾನು ತೆಳು

ನಾನು ಅಂತಿಮ ಬಿ.ಎ. ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ. ನಾನು ಒಬ್ಬ ಹುಡುಗನನ್ನು ಪ್ರೀತಿಸುತ್ತಿರುವೆ. ನಾನು ಮದುವೆಯಾಗುವುದಾದರೆ ಆತನನ್ನೇ ಎಂಬ ನಿರ್ಧಾರಕ್ಕೂ ಬಂದಿರುವೆ. ಆತ ಕೂಡ ಅದಕ್ಕೆ ಅಂಗೀಕಾರ ನೀಡಿದ್ದಾನೆ. ಆತ ಬಹಳ ದಪ್ಪಗಿದ್ದಾನೆ. ನಾನು ತುಂಬಾ ತೆಳ್ಳಗಿರುವೆ. ನಾವು ಮದುವೆಯಾದ ಮೇಲೆ ಆತ ನನ್ನೊಡನೆ ಸಂಭೋಗಿಸುವುದು ಹೇಗೆಂಬುದೆ ಸಮಸ್ಯೆಯಾಗಿದೆ. ಏಕೆಂದರೆ ನನ್ನ 'ಯೋನಿ' ತುಂಬಾ ಚಿಕ್ಕದಿದ್ದು, ಆತನ 'ಶಿಶ್ನ' ದೊಡ್ಡದಿರುವ ಹಾಗಿದೆ. ಆತನ ಶಿಶ್ನ ನನ್ನ ಯೋನಿಯೊಳಗೆ ಪ್ರವೇಶಿಸಬಹುದೇ? ದಯವಿಟ್ಟು ಇದಕ್ಕೆ ಪರಿಹಾರ ಸೂಚಿಸಿ.

– ಎ.ಬಿ.ಸಿ., ಊರುಬೇಡ.

ಸಲಹೆ

ನೀವು ತೆಳ್ಳಗಿರುವುದಾಗಲೀ, ದಪ್ಪಗಿರುವುದಾಗಲೀ ಮದುವೆಗೆ ಹಾಗೂ ದಾಂಪತ್ಯ ಜೀವನಕ್ಕೆ ಖಂಡಿತ ಸಮಸ್ಯೆಯಲ್ಲ. ಯೋನಿಯ ಹಿಗ್ಗುವಿಕೆಯ ಗುಣದಿಂದಾಗಿ ಹೆರಿಗೆಯ ಸಮಯದಲ್ಲಿ ಮಗುವೇ ಹೊರಬರುತ್ತದಲ್ಲವೆ? ಹಾಗಿರುವಾಗ ಸಂಭೋಗಕ್ಕೆ ತೊಂದರೆಯಾಗಲು ಹೇಗೆ ಸಾಧ್ಯ?

ಮದುವೆಗೆ ಮುನ್ನ...

ನಾನು 28 ವರ್ಷದ ಅವಿವಾಹಿತ ತರುಣ. ಬರುವ ನವೆಂಬರ್‌ನಲ್ಲಿ ನನ್ನ ವಿವಾಹ ನಿಶ್ಚಯವಾಗಿದೆ. ಆದ ಕಾರಣ ನನ್ನ ಕೆಲವು ಪ್ರಶ್ನೆಗಳಿಗೆ ಶೀಘ್ರ ಉತ್ತರ ಬೇಕಾಗಿರುತ್ತದೆ. ಪ್ರತಿನಿತ್ಯವೂ ಲೈಂಗಿಕ ಕ್ರೀಡೆಯನ್ನು ನಡೆಸಬಹುದೆ? ಲೈಂಗಿಕ ಕ್ರೀಡೆ ನಡೆಸುವಾಗ ಹೆಣ್ಣಿಗೆ ಪ್ರಜ್ಞೆ ತಪ್ಪುತ್ತದೆಯೇ? ಶಿಶ್ನವನ್ನು ಪೂರ್ಣವಾಗಿ ಯೋನಿಯೊಳಕ್ಕೆ ತೂರಬೇಕೆ? ಶಿಶ್ನ ಹೆಚ್ಚು ಹೆಚ್ಚು ಬಿರುಸಾದಷ್ಟು ಯೋನಿಯೊಳಗೆ ಕಳಿಸಲು ಕಷ್ಟವಾಗುತ್ತದೆಯೆ? ನನ್ನ ಈ ಪ್ರಶ್ನೆಗಳಿಗೆ ನನ್ನ ವಿವಾಹಕ್ಕೂ ಪೂರ್ವದಲ್ಲಿ ದಯವಿಟ್ಟು ತಿಳಿಸುವಿರಾಗಿ ನಂಬಿರುತ್ತೇನೆ.

–ಪ್ರಿಯ ಓದುಗ, ಊರುಬೇಡ


ಸಲಹೆ

– ಪ್ರತಿದಿನವೂ ಲೈಂಗಿಕ ಕ್ರಿಯೆ ನಡೆಸಬಹುದು.
– ಖಂಡಿತ ಪ್ರಜ್ಞೆ ತಪ್ಪುವುದಿಲ್ಲ.
– ಯೋನಿಯ ಮೊದಲ ಮೂರು ಅಂಗುಲದಷ್ಟು ಭಾಗ ಮಾತ್ರ ಸ್ಪರ್ಶಕ್ಕೆ ಸಂವೇದಿಸುತ್ತದಾದ್ದರಿಂದ ಅಷ್ಟು ಮಾತ್ರ ಶಿಶ್ನ ಪ್ರವೇಶಿಸಿದರೂ ಸಾಕು.
– ಯೋನಿಯಲ್ಲಿರುವ ಆರ್ದ್ರತೆಯಿಂದಾಗಿ ಕಷ್ಟವಾಗುವುದಿಲ್ಲ.

ಸೂಕ್ತ ಆಸನ ಯಾವುದು?

ನನಗೆ ಮದುವೆಯಾಗಿ ಒಂದು ವರ್ಷವಾಗಿದೆ. ವಯಸ್ಸು 30 ವರ್ಷ. ಪತ್ನಿಯೊಂದಿಗೆ ಸಂಭೋಗ ಮಾಡುವಾಗ ಅವಳು ನನ್ನ ಶಿಶ್ನವನ್ನು ಹಿಡಿದುಕೊಂಡು ಯೋನಿಯೊಳಕ್ಕ ಇಟ್ಟುಕೊಳ್ಳುತ್ತಾಳೆ. ಕೈ ಬಿಟ್ಟರೆ ಶಿಶ್ನ ಯೋನಿಯೊಳಕ್ಕೆ ಹೋಗುವುದಿಲ್ಲ. ಸಂಭೋಗದ ನಂತರ ಬಹಳಷ್ಟು ವೀರ್ಯ ಹೊರಗೆ ಚೆಲ್ಲಿರುತ್ತದೆ. ಶಿಶ್ನ ನೀಟಾಗಿದೆ. ಆರೋಗ್ಯವಾಗಿದ್ದೇನೆ. ಅಂಗಾತ ಮಲಗಿಯೇ ಅವಳಿಗೆ ಸಂಭೋಗ ಮಾಡಬೇಕು. ಬೇರೆ ಆಸನದ ಮೂಲಕ ಸಂಭೋಗ ಮಾಡ್ತೀನಿ ಅಂದರೆ ನೋವು ಆಗುತ್ತೆ ಅಂತಾಳೆ. ಇನ್ನೂ ಗರ್ಭ ಧರಿಸಿಲ್ಲ. ಅವಳಿಗೆ ನಾನು ಯಾವ ರೀತಿ ಸಂಭೋಗಿಸಬೇಕು? ಸೂಕ್ತ ಸಲಹೆಯನ್ನು ದಯವಿಟ್ಟು ನೀಡಬೇಕೆಂದು ಕೋರುವೆ.

ವಯಸ್ಕರ
ಸಂದೇಹ ಸಲಹೆ



–ಹೆಸರು ಬೇಡ, ಊರು ಬೇಡ

ಸಲಹೆ

ನೀವು ಸಂಭೋಗಕ್ಕೆ ಮುನ್ನ ಪೂರ್ವಸಿದ್ಧತೆ ಅಂದರೆ ಚುಂಬನ, ಪ್ರೀತಿಯ ಮಾತುಕತೆ, ಆಲಿಂಗನ ಮುಂತಾದವುಗಳನ್ನು ಹೆಚ್ಚು ಹೊತ್ತು ಮಾಡಬೇಕು. ಇದರಿಂದ ಯೋನಿಯಲ್ಲಿ ರಸೋತ್ಪತ್ತಿ ಆಗುವುದರಿಂದ ಯಾವುದೇ ಆಸನದಲ್ಲಿ ಸಂಭೋಗ ಮಾಡಿದರೂ ನಿಮ್ಮ ಪತ್ನಿಗೆ ನೋವಾಗುವುದಿಲ್ಲ. ಒಂದು ಮಿಲಿ ಲೀಟರ್ ವೀರ್ಯದಲ್ಲಿ 60 ರಿಂದ 120 ದಶಲಕ್ಷ ವೀರ್ಯಾಣುಗಳಿರುತ್ತವೆ. ಅವುಗಳಲ್ಲಿ ಒಂದೇ ಒಂದು ವೀರ್ಯಾಣುವಿನಿಂದ ಗರ್ಭೋತ್ಪತ್ತಿಯಾಗುತ್ತದಾದ್ದರಿಂದ ಯಾವುದೇ ಆಸನದಲ್ಲಿ ಸಂಭೋಗ ಮಾಡಿದರೂ ಗರ್ಭ ಧರಿಸಲು ಸಾಧ್ಯ.

ಹೀಗೇ ಇರುವುದೇ?

ನನಗೀಗ 25 ವರ್ಷ. ಇದುವರೆಗೂ ಸಂಭೋಗ ಮಾಡಿಲ್ಲ. ನನ್ನ ಸಮಸ್ಯೆ ಏನೆಂದರೆ, ನನ್ನ ಶಿಶ್ನ ಉದ್ರೇಕಗೊಂಡಾಗ ಮುಂದಿನ ಚರ್ಮ ಹಿಡಿದುಕೊಂಡಿರುತ್ತದೆ. ಪೂರ್ತಿ ಹೊರಗೆ ಬರುವುದಿಲ್ಲ. ಇದು ಕೊನೆಯವರೆಗೂ ಹೀಗೇ ಇರುವುದೇ? ಅಥವಾ ಸಂಭೋಗದ ನಂತರ ಚರ್ಮ ಕಟ್ಟಾಗಿ ಪೂರ್ತಿ ಹೊರಗೆ ಬರುವುದೆ? ಹಾಗೆ ಕಟ್ಟಾದಾಗ ಏನಾದರೂ ತೊಂದರೆಯಾಗುವುದೆ? ಸಲಹೆ ನೀಡಿ.

–ಮುರುಗನ್, ಭದ್ರಾವತಿ

ಸಲಹೆ

ನಿಮ್ಮ ಶಿಶ್ನದ ಚರ್ಮ ಬಹಳ ಬಿಗಿಯಾಗಿದ್ದು ಸಹಜವಾಗಿ ಅದು ಹಿಂದೆ ಸರಿಯದಿದ್ದಲ್ಲಿ ಒಂದು ಬಾರಿ ಶಸ್ತ್ರಚಿಕಿತ್ಸಾತಜ್ಞರನ್ನು (ಸರ್ಜನ್) ಭೇಟಿಯಾಗಿ. ಅವರು ಒಂದು ಸಣ್ಣ ಶಸ್ತ್ರಚಿಕಿತ್ಸೆ (ಸರ್‌ಕಮ್‌ಸಿಶನ್) ಮಾಡಿ ಸರಿಪಡಿಸುತ್ತಾರೆ.

ಜೀವನದಲ್ಲಿ ಜುಗುಪ್ಸೆ

ನಾನು 23 ವರ್ಷದ ಯುವಕ. ಬಿ.ಎಸ್ಸಿ. ಓದುತ್ತಿರುವೆ. ನನಗೆ ಯಾವ ಚಟವೂ ಇಲ್ಲ. ನನ್ನ ಜನನಾಂಗವು ಸದಾ ನಿಗುರಿ ನಿಂತಿರುತ್ತದೆ (ರಾತ್ರಿ ಕೂಡಾ). ಇದರಿಂದ ನನಗೆ ಜೀವನವೇ ಬೇಸರವಾಗಿದೆ. ಇದಕ್ಕೆ ಪರಿಹಾರ ಮಾರ್ಗ ಸೂಚಿಸಿ. ಈ ವಿದ್ಯಾರ್ಥಿಯ ಜೀವನ ಬೆಳಗಿಸಲು ಕೋರುತ್ತೇನೆ.

–ಹೆಸರುಬೇಡ, ಬೆಳಗಾವಿ

ಸಲಹೆ

ನಿಮ್ಮ ವಯಸ್ಸಿನವರಲ್ಲಿ ಇದು ಸಹಜವಾದುದು. ಇದು ಸಮಸ್ಯೆ ಅಲ್ಲವೇ ಅಲ್ಲ.

ಅದಕ್ಕಾಗಿ ಚಿಂತಿಸುವ ಕಾರಣವಿಲ್ಲ.

ಸದಾ ಅದೇ ಧ್ಯಾನ

ನಾನು 20 ವರ್ಷದ ಹುಡುಗ. 10-12 ವರ್ಷದಲ್ಲಿರುವಾಗ ಒಂದು ಹುಡುಗಿಯನ್ನು ಮನಸಾರೆ ಪ್ರೀತಿಸುತ್ತಿದ್ದೆ. ಆದರೆ ನಾವಿಬ್ಬರೂ ನಮ್ಮ ತಂದೆ ತಾಯಂದಿರಿಗೆ ಹೆದರಿ ಏಕಾಂತದಲ್ಲಿ ಭೇಟಿಯಾಗುತ್ತಿದ್ದೆವು. ಆಗ ನಮ್ಮಿಬ್ಬರಲ್ಲಿ ಸಂಭೋಗ ಕ್ರಿಯೆ ಶುರುವಾಯಿತು. ಹೀಗೆ 3-4 ವರ್ಷಗಳಾದವು. ಈಗ ಅವಳು ನನ್ನನ್ನು ನಿರಾಕರಿಸಿ ನನ್ನಿಂದ ದೂರವಿದ್ದಾಳೆ. ಅವಳ ಜೊತೆ ಕಳೆದ ಆ ಕ್ಷಣಗಳು ನನ್ನ ಮನದಲ್ಲಿ ಬಂದಾಗ ಉದ್ರೇಕಗೊಳ್ಳುವೆ. ಈಗ ನಾನೇ ವೀರ್ಯ ಸ್ಖಲನ ಮಾಡಿಕೊಳ್ಳುತ್ತಿದ್ದೇನೆ. ಇದರಿಂದ ನಾನು ಅಶಕ್ತನಾಗುತ್ತಿದ್ದೇನೆ ಎಂದೆನಿಸುತ್ತಿದೆ. ನಾನೀಗ ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಫೇಲಾಗಿದ್ದೇನೆ. ನನ್ನ ಮನಸ್ಸು ಅಭ್ಯಾಸದಲ್ಲಿ ಏಕಾಗ್ರತೆಗೊಳ್ಳದೆ, ಬರಿ ವೀರ್ಯ ಸ್ಖಲನ ಮಾಡುವುದರ ಬಗ್ಗೆ ಯೋಚಿಸುತ್ತಿರುತ್ತದೆ. ಹೀಗಾಗಿ ನಾನು ಮಾನಸಿಕ ಗೊಂದಲಕ್ಕೀಡಾಗಿದ್ದೇನೆ. ನನ್ನ ಸಮಸ್ಯೆಗೆ ಸೂಕ್ತ ಸಲಹೆಯನ್ನು ನೀಡುತ್ತೀರಿ ಎಂದು ನಂಬಿದ್ದೇನೆ.

-ಹೆಸರುಬೇಡ, ಗದಗ

ಸಲಹೆ

ನೀವು ಚಿಕ್ಕ ವಯಸ್ಸಿನಲ್ಲಿಯೇ ಸಂಭೋಗ ಕ್ರಿಯೆಯಲ್ಲಿ ತೊಡಗಿದ್ದುದರಿಂದ ನಿಮ್ಮ ಮನಸ್ಸಿನಲ್ಲಿ ಆತಂಕ, ಭಯ ಉಂಟಾಗಿದೆ. ಅದರ ಬಗ್ಗೆ ಸದಾ ಚಿಂತಿಸುತ್ತಿರುವುದರಿಂದ ನಿಮ್ಮ ಮಾನಸಿಕ ಸ್ಥಿತಿ ಗೊಂದಲಕ್ಕೀಡಾಗಿದೆ. ಸಾಹಿತ್ಯ, ಸಂಗೀತ, ಯೋಗ ಮುಂತಾದ ಯಾವುದಾದರೊಂದು ಹವ್ಯಾಸವನ್ನು ರೂಢಿ ಮಾಡಿಕೊಳ್ಳಿ, ಅಶಕ್ತತೆಗೆ ಪುಷ್ಟಿಕರ ಆಹಾರ ಸೇವಿಸಿ. ಓದಿನ ಬಗ್ಗೆ ಹೆಚ್ಚು ಗಮನ ಕೊಡಿ.

ಸಂಶಯ ಬಿತ್ತಿದ ಪತ್ರ

ನಾನು 26 ವರ್ಷದ ಯುವಕ. ಎಂ.ಎಡ್. ಪದವೀಧರ. ನನಗೆ 4 ತಿಂಗಳ ಹಿಂದೆ ಮದುವೆ ನಿಶ್ಚಯವಾಯಿತು. ನಿಶ್ಚಿತಾರ್ಥವಾಗಿ 1 ತಿಂಗಳೊಳಗೆ ನನಗೆ ಒಂದು ಕಾಗದ ಬಂತು. ಅದನ್ನು ಬಿಡಿಸಿ ಓದಿದಾಗ ನನ್ನ ಹೃದಯ ಜಲ್ ಎಂತು. ಕಾರಣ ನಾನು ಮದುವೆ ಆಗುವ ಹುಡುಗಿಯ ನಡತೆ ಸರಿಯಿಲ್ಲ ಎಂದು ಪತ್ರದಲ್ಲಿ ತಿಳಿಸಲಾಗಿತ್ತು. ನಾನು ಈಗ ಅವಳನ್ನು ತುಂಬಾ ಮಾನಸಿಕವಾಗಿ ಹಚ್ಚಿಕೊಂಡಿರುತ್ತೇನೆ. ವಿವಾಹಪೂರ್ವ ಸಂಬಂಧವಿಲ್ಲದ ಹೆಣ್ಣಿಗೆ ಮೊದಲ ರಾತ್ರಿ, ಸಂಭೋಗದ ಸಮಯದಲ್ಲಿ ರಕ್ತಸ್ರಾವವಾಗುತ್ತದೆ ಎಂಬುದು ನನ್ನ ಸ್ನೇಹಿತರ ವಿವರಣೆ. ಇದನ್ನು ಪರೀಕ್ಷಿಸುವುದು ಹೇಗೆ?

-ನಿಮ್ಮ ಮಗನ ಸಮಾನ, ಶಿವಮೊಗ್ಗ

ಸಲಹೆ

ನೀವು ಯಾರದೋ ಪತ್ರದ ಕಾರಣದಿಂದ ಮದುವೆಯಾಗುವ ಹುಡುಗಿಯ ಬಗ್ಗೆ ಅನಾವಶ್ಯಕವಾಗಿ ಸಂಶಯ ಪಡುವುದು ಸರಿಯಲ್ಲ. ಮೊದಲು ಅದನ್ನು ಮನಸ್ಸಿನಿಂದ ತೊಡೆದು ಹಾಕಿ. ಮೊದಲ ರಾತ್ರಿ ಸಂಭೋಗದಲ್ಲಿ ಎಲ್ಲರಿಗೂ ರಕ್ತಸ್ರಾವವಾಗಬೇಕೆಂದೇನೂ ಇಲ್ಲ. ಕನ್ಯಾಪೊರೆ ತುಂಬ ತೆಳುವಾಗಿರುತ್ತದಾದ್ದರಿಂದ ಅದು ಸೈಕ್ಲಿಂಗ್, ಈಜು ಅಥವಾ ಇನ್ಯಾವುದೇ ದೈಹಿಕ ಶ್ರಮದ ಕೆಲಸಗಳನ್ನು ಮಾಡುವುದರಿಂದ ಹರಿದು ಹೋಗಿರುವ ಸಾಧ್ಯತೆ ಹೆಚ್ಚು. ಆದ್ದರಿಂದ ವೃಥಾ ಚಿಂತಿಸದೇ ಮದುವೆಯಾಗಿ ಸುಖ ಸಂತೋಷದ ದಾಂಪತ್ಯ ಜೀವನ ನಡೆಸಿ. ನಿಮ್ಮನ್ನೇ ನಂಬಿ ಬರುವ ಸಂಗಾತಿಗೆ ಒಳ್ಳೆಯ ಬದುಕು ಕೊಡಿ.

ಅತೃಪ್ತ ಹೆಂಡತಿ

ವಯಸ್ಸು 30. ಮದುವೆಯಾಗಿ 8 ವರ್ಷಗಳಾಗಿವೆ. ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಲೆಪ್ರೋಸ್ಕೋಪಿಕ್ ಆಪರೇಷನ್ ಮಾಡಿಸಿಕೊಂಡಿದ್ದೇನೆ. ಸರ್ಕಾರಿ ನೌಕರರಾದ ನನ್ನ ಪತಿಯ ವಯಸ್ಸು 34 ವರ್ಷ. ಅವರ ಮರ್ಮಾಂಗ ಸರಿಯಾದ ಗಾತ್ರದಿದ್ದು, ಮದುವೆಯಾದ 4-5 ವರ್ಷಗಳ ಕಾಲ ಚೆನ್ನಾಗಿ ಸಂಭೋಗಿಸುತ್ತಿದ್ದರು. ಇತ್ತೀಚೆಗೆ ಒಂದೆರಡು ವರ್ಷಗಳಿಂದ ಅವರ ಶಿಶ್ನ ದೊಡ್ಡದಾಗಿದ್ದು ಒಂದೆರಡು ಸಾರಿ ಮಾಡುವಷ್ಟರಲ್ಲಿ ವೀರ್ಯ ಸ್ಖಲನವಾಗುತ್ತದೆ. ನಂತರ ಅವರು ಯಾವ ರೀತಿಯಿಂದಲೂ ಮುಂದುವರಿಯದೆ ಮಲಗಿಬಿಡುತ್ತಾರೆ. ಇದರಿಂದ ನನಗೆ ಬಹಳ ಅತೃಪ್ತಿಯಾಗಿದೆ.

ನನ್ನ ಪತಿ ಮೊದಲು ಹಸ್ತ ಮೈಥುನ ಮಾಡಿಕೊಳ್ಳುತ್ತಿದ್ದರಂತೆ. ವೇಶ್ಯೆಯ ಸಂಗ ಮಾಡಿಲ್ಲವಂತೆ. ಅವರು ಸ್ನೇಹಿತರ ಸಲಹೆಯಂತೆ ಪ್ರತಿ ದಿನ 3-4 ಉಳ್ಳಾಗಡ್ಡೆ ತಿನ್ನುತ್ತಾರೆ. ಬೆಳಿಗ್ಗೆ ಎದ್ದ ಕೂಡಲೇ ಹಾಲಿನಲ್ಲಿ ನೆನಸಿದ ಉದ್ದಿನ ಬೇಳೆ ತಿನ್ನುತ್ತಾರೆ. ಮಲಗುವಾಗ 10 ಒಣ ದ್ರಾಕ್ಷಿ ತಿನ್ನುತ್ತಾರೆ. ಇವುಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನು? ನನಗೆ ವೈದ್ಯರನ್ನು ಭೇಟಿಯಾಗಲು ನಾಚಿಕೆ. ಬಿರುಸಿನಿಂದ ಬಹಳ ಹೊತ್ತು ರತಿ ಸುಖ ಅನುಭವಿಸಲು ಏನು ಮಾಡಬೇಕೆಂದು ದಯವಿಟ್ಟು ತಿಳಿಸಿ.

-ಹೆಸರು ಬೇಡ, ಬೆಳಗಾವಿ

ಸಲಹೆ

ಮದುವೆಯಾದ ಹೊಸದರಲ್ಲಿಯದಕ್ಕಿಂತ ನಂತರದ ವರ್ಷಗಳಲ್ಲಿ ಸಹಜವಾಗಿ ಲೈಂಗಿಕ ಆಸಕ್ತಿ ಕಡಿಮೆಯಾಗುತ್ತದೆ. ನಿಮ್ಮ ಪತಿಯದು ಶೀಘ್ರ ಸ್ಖಲನದ ಸಮಸ್ಯೆ. ನೀವು ಸಂಭೋಗಕ್ಕೆ ಮುನ್ನ ಚುಂಬನ, ಆಲಿಂಗನಗಳಲ್ಲಿ ಹೆಚ್ಚು ಹೊತ್ತು ವಿನಿಯೋಗಿಸಿ. ಅಲ್ಲದೇ 'ನಿಲ್ಲಿಸಿ ಮತ್ತೆ ಮುಂದುವರೆಸುವ ವಿಧಾನ' (Stop & Start Technique) ಮತ್ತು 'ಒತ್ತಿ ಹಿಡಿಯುವ ವಿಧಾನ'(Squeeze Technique)ಗಳಿಂದ ಹೆಚ್ಚು ಹೊತ್ತು ಸಂಭೋಗ ಕ್ರಿಯೆಯಲ್ಲಿ ತೊಡಗಬಹುದು.

ಇದರ ಬಗ್ಗೆ ಹೆಚ್ಚಿನ ವಿವರ ಬೇಕಿದ್ದರೆ ಡಾ.ಸಿ.ಆರ್.ಚಂದ್ರಶೇಖರ್‌ರವರು ಬರೆದ 'ದಾಂಪತ್ಯ ಸಮಸ್ಯೆಗಳು' ಪುಸ್ತಕ ಓದಿ. ಇನ್ನು ಹಾಲಿನಲ್ಲಿ ನೆನಸಿದ ಉದ್ದಿನಬೇಳೆ, ಒಣದ್ರಾಕ್ಷಿ ಸೇವಿಸುವುದರಿಂದ ಅಶಕ್ತತೆ ದೂರವಾಗಬಹುದಷ್ಟೇ ಹೊರತು ಲೈಂಗಿಕ ಶಕ್ತಿ ಹೆಚ್ಚಿಸಲು ಇದರಿಂದ ಪ್ರಯೋಜನವಾಗಲಾರದು.

ಚಿಕ್ಕ ಜನನಾಂಗ

ನಾನು 20 ವರುಷದ ತರುಣಿ. ನನ್ನ ಸಮಸ್ಯೆ ಏನೆಂದರೆ ನನ್ನ ಯೋನಿ ತುಂಬ ಚಿಕ್ಕದಾಗಿದೆ. ಅಂದರೆ ಮೇಲುಭಾಗ ಕೂಡ ತೆಳ್ಳಗಿದೆ. ಚಿಕ್ಕ ಮಗುವಿಗೆ ಇರುವಷ್ಟೂ ದೊಡ್ಡದಿಲ್ಲ. ಮುಟ್ಟಿದರೆ ಬರಿ ಮೂಳೇನೆ ಸಿಗುತ್ತದೆ. ಬೇರೆಯವರ ಹಾಗೆ ಉಬ್ಬಿರುವುದಿಲ್ಲ. ಡಾಕ್ಟ್ರೆ, ದಯವಿಟ್ಟು ನನ್ನ ಸಮಸ್ಯೆಗೆ ಪರಿಹಾರ ತಿಳಿಸಿ. ನಾನು ಯಾರ ಹತ್ತಿರವೂ ಈ ವಿಷಯ ಹೇಳಲಿಲ್ಲ. ನನಗೆ ಗಂಡು ಹುಡುಕುತ್ತ ಇದ್ದಾರೆ. ನಾನು ನನ್ನ ಪತಿಯ ಜೊತೆ ಸಂಭೋಗ ಮಾಡಲು ಅಂಜಿಕೆಯಾಗುತ್ತದೆ. ಪ್ರಪಂಚದಲ್ಲಿ ಯಾರಿಗೂ ಈ ರೀತಿ ಇಲ್ಲ ಅನಿಸುತ್ತದೆ. ಇದರ ಬಗ್ಗೆ ಯೋಚಿಸಿದರೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಅನಿಸುತ್ತದೆ. ಇದನ್ನು ಸರಿ ಮಾಡಲು ಆಗುವುದಿಲ್ಲವೆ?

-ಅಭಿಮಾನಿ, ಬಾಳೇಹೊನ್ನೂರು

ಸಲಹೆ

ನಿಮ್ಮದು ಸಮಸ್ಯೆಯೇ ಅಲ್ಲ. ಆತ್ಮಹತ್ಯೆ ಮಾಡಿಕೊಳ್ಳುವಂತಹದೇನಾಗಿದೆ? ಎಲ್ಲ ಹೆಣ್ಣು ಮಕ್ಕಳಿಗೂ ಸಹಜವಾಗಿ ಹಾಗೆಯೇ ಇರುತ್ತದಾದ್ದರಿಂದ ಅದರ ಬಗ್ಗೆ ಚಿಂತೆ ಬೇಡ.

ನಿಮ್ಮ ಸಮಸ್ಯೆಗಳನ್ನು
ಈ ವಿಳಾಸಕ್ಕೆ ಕಳಿಸಿ :

ಸಂಪಾದಕರು, ಬಿಸಿಲ ಬದುಕು,
ಅಂಕುರ ಪ್ರಕಾಶನ ಅಂಚೆ ಪೆಟ್ಟಿಗೆ : 7951
ಬಸವೇಶ್ವರನಗರ, ಬೆಂಗಳೂರು - 560 079.

ಗಂಡನೇ ದೊಡ್ಡ ಸಮಸ್ಯೆ !

ಪ್ರೀತಿಯ ಆಂಟಿಯವರಿಗೆ, ಈ ಅನಾಮಿಕಳ ನಮಸ್ಕಾರಗಳು. ನನ್ನ ದೊಡ್ಡ ಸಮಸ್ಯೆಯೆಂದರೆ ನನ್ನ ಗಂಡ. ಆತ ನನ್ನ ತಾಯಿ ತಮ್ಮ. ಮೊದಲು ಅಕ್ಕನ ಮಗಳು ಬೇಡ ಅಂದು ನಂತರ ನನ್ನನ್ನು ಮದುವೆಯಾದರು. ಈಗ ನನಗೆ 18 ವರ್ಷ. ಮದುವೆಯಾಗಿ 5 ತಿಂಗಳಾಗಿದೆ. ಮದುವೆಗೆ ಮುಂಚೆ ನಾನು ಅವರನ್ನು ತುಂಬಾ ಸಂಭಾವಿತ ಅಂತ ಭಾವಿಸಿದ್ದೆ. ಆದರೆ ಅವರ ಚಂಚಲ ಗುಣ ಈಗ ಗೊತ್ತಾಗುತ್ತಿದೆ. ಅವರಿಗೆ ನಾನು ರಾತ್ರಿ ಮಾತ್ರ ಬೇಕು. ಅವರಿಗೆ ಬೇರೆ ಹೆಣ್ಣುಗಳ ವ್ಯಾಮೋಹ ಬಹಳವಿದೆ. ಮದುವೆಯಾದವರು, ಮದುವೆಯಾಗದವರು ಎಂಬ ಭೇದವೇ ಇಲ್ಲ. ಎಲ್ಲರನ್ನೂ ಕಾಮುಕ ದೃಷ್ಟಿಯಿಂದ ನೋಡುತ್ತಾರೆ. ಬೇರೆ ಊರಿಗೆ ಹೋಗುವಾಗ ನನಗೆ ಹೇಳದೇ ಹೋಗುತ್ತಾರೆ. ನನಗೆ ಅವರ ಮೇಲೆ ದ್ವೇಷದಷ್ಟೇ ಪ್ರೀತಿ ಇದೆ. ಅನ್ಯ ಹೆಣ್ಣು ಮಕ್ಕಳನ್ನು ಮೈಕೈ ಮುಟ್ಟಿ, ತಟ್ಟಿ ನಗುತ್ತಾ ಮಾತನಾಡಿಸಿದರೆ ನನ್ನನ್ನು ಮಾತ್ರ ಸಿಟ್ಟಿನಿಂದ ಮಾತನಾಡಿಸುವರು. ಅವರ ಈ ವರ್ತನೆಯಿಂದ ಜಗತ್ತಿನಲ್ಲಿ ಇರಬಾರದು ಅನ್ನಿಸುತ್ತಿದೆ. ಹೊಸದಾಗಿ ಮದುವೆಯಾದವರು ಜೋಡಿಯಾಗಿ ಗುಡಿಗಳಿಗೆ ಹೋಗುವುದು, ಬೇಕಾದ್ದನ್ನು ಕೊಡಿಸಿಕೊಳ್ಳುವುದನ್ನು ನೋಡಿದಾಗ ಆ ಭಾಗ್ಯ ನನಗಿಲ್ಲವಲ್ಲ ಎಂದು ಹೃದಯ ಕಿವುಚಿದಂತಾಗುತ್ತದೆ. ಈಗ ನಾನು ಏನು ಮಾಡಲಿ ? ಅವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಲೋ, ನನ್ನಷ್ಟಕ್ಕೆ ನಾನಿದ್ದುಬಿಡಲೋ ? ಇನ್ನೊಂದು ವಿಷಯ : ನಾನು ತೆಳ್ಳಗಿದ್ದೇನೆ. ಅವರು ನೋಡುವುದು ದಪ್ಪಪುಷ್ಟವಾಗಿರುವವರನ್ನು. ದಪ್ಪಗಾಗಲು ಏನು ಮಾಡಬೇಕು ತಿಳಿಸಿ.

- ಅಭಿಮಾನಿ, ಊರುಬೇಡ.

ಸಲಹೆ

ಅವರು ಮೊದಲು ನಿಮ್ಮನ್ನು ಬೇಡವೆಂದು ನಂತರ ಮದುವೆಯಾದರೆಂದು ತಿಳಿಸಿರುವಿರಿ. ಆದ್ದರಿಂದ ನೀವು ನಿಮ್ಮ ಪ್ರೀತಿಯ ನಡವಳಿಕೆಯಿಂದ ಅವರ ಮನಸ್ಸನ್ನು ಗೆಲ್ಲಲು ಪ್ರಯತ್ನಿಸಿ. ಪ್ರೀತಿಗೆ ಸೋಲದಿರುವ ಹೃದಯ ಯಾವುದಿದೆ ಹೇಳಿ ? ನಿಮ್ಮ ಮನದ ಭಾವನೆಯನ್ನು ಅವರ ಮುಂದೆ ವ್ಯಕ್ತಪಡಿಸಿ. ಮದುವೆಯಾಗಿ ಇನ್ನೂ ಐದು ತಿಂಗಳು ಕಳೆದಿದೆಯಾದ್ದರಿಂದ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಸಾಧ್ಯವಾಗಿಲ್ಲವೆಂದು ಅನಿಸುತ್ತದೆ. ನೀವು ಗರ್ಭಿಣಿಯಾಗಿ ಮಗುವೊಂದು ಜನಿಸಿದರೆ ಆಗ ಅವರಿಗೂ ಹೆಂಡತಿ, ಮಗುವೆಂಬ ವಾಂಛೆ ಹುಟ್ಟಿ ಸಂಸಾರದಲ್ಲಿ ತಾನೇ ತಾನಾಗಿ ಆಸಕ್ತಿ ಹುಟ್ಟುತ್ತದೆ. ನೀವು ದಪ್ಪಗಾಗಬೇಕೆಂದರೆ ಸಿಹಿಪದಾರ್ಥ ಹೆಚ್ಚು ಸೇವಿಸಿ. ಚಿಂತೆ ಮಾಡದೇ ಸಮಯಕ್ಕೆ ಸರಿಯಾಗಿ ಪುಷ್ಟಿಕರ ಆಹಾರ ಸೇವಿಸಿ, ಕಣ್ತುಂಬಾ ನಿದ್ರೆ ಮಾಡಿ.

ಹತ್ತು ವರ್ಷದಿಂದ ಮುಟ್ಟಾಗಿಲ್ಲ

ನಾನು ಋತುಮತಿಯಾಗಿ 15 ವರ್ಷಗಳಾದವು. ಮದುವೆಯಾಗಿ 10 ವರ್ಷಗಳಾಗಿವೆ. ನಾನು ಒಂದು ಮಗುವಿನ ತಾಯಿ. ಮಗಳಿಗೆ ಈಗ 9 ವರ್ಷ. ಮಗು ಹುಟ್ಟಿದ ಮೇಲೆ 1 ವರ್ಷಕ್ಕೆ ಮುಟ್ಟಾದ ಮೇಲೆ ಮತ್ತೆ M.C. ಆಗಲೇ ಇಲ್ಲ. ಹಲವಾರು ಸ್ಪೇಷಲಿಷ್ಟ್ ಕಡೆ ತೋರಿಸಿದ್ದೇನೆ ಹಾಗು ಸೋನೋಗ್ರಾಫಿ ಮಾಡಿಸಿದ್ದೇನೆ. ಏನೂ ಇಲ್ಲ, ಎಲ್ಲ ನಾರ್ಮಲ್ ಇದೆ ಎಂದಿದ್ದಾರೆ. ನನಗೆ ಇದೊಂದು ದೊಡ್ಡ ಸಮಸ್ಯೆಯಾಗಿದೆ. ದಿನದಿನಕ್ಕೆ ದಪ್ಪ ಆಗುತ್ತಿದ್ದೇನೆ. ನನ್ನ ವಯಸ್ಸು ಈಗ 28. ದಯವಿಟ್ಟು ಇದಕ್ಕೆ ಪರಿಹಾರ ತಿಳಿಸಿ.

ಕೂದಲುದುರುವ ಸಮಸ್ಯೆ ಒಂದು ಕಡೆ ಕಾಡುತ್ತಿದೆ. 10 ವರ್ಷದ ಹಿಂದೆ ಉದ್ದ ದಪ್ಪ ಇದ್ದ ಕೂದಲು ಈಗ ಜಡೆ ಹಾಕಲು ಬಾರದಂಗೆ ಇವೆ. ನನಗೆ ಈ ಎರಡು ಸಮಸ್ಯೆಗಳಿಂದ ಕಣ್ಣೀರು ಇಡುವ ಪರಿಸ್ಥಿತಿ ಬಂದಿದೆ. ದಯವಿಟ್ಟು ಪರಿಹಾರ ತಿಳಿಸುತ್ತೀರೆಂದು ನಂಬಿದ್ದೇನೆ.

-ಹೆಸರು, ಊರುಬೇಡ

ಸಲಹೆ

ನೀವು ಮುಟ್ಟಾಗದೇ ಇರುವುದಕ್ಕೆ ಎರಡು ಕಾರಣಗಳಿವೆ. ಸ್ಥೂಲದೇಹ ಮತ್ತು ಹಾರ್ಮೋನಿನ ಏರುಪೇರು. ಯೋಗ, ವ್ಯಾಯಾಮ, ಬಿರುಸು ನಡಿಗೆ ಮತ್ತು ಮಿತಾಹಾರ ಮುಂತಾದವುಗಳಿಂದ ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳಿ. ಹಾರ್ಮೋನಿನ ತೊಂದರೆಗೆ ಒಮ್ಮೆ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞ ವೈದ್ಯರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯಿರಿ.

ಇನ್ನು ಕೂದಲುದುರುವ ಸಮಸ್ಯೆಗೆ ನಿಯಮಿತವಾಗಿ ಎಣ್ಣೆ ಹಚ್ಚಿ ತಲೆಗೆ ಸ್ನಾನ ಮಾಡಿ. ಶಾಂಪೂಗಳನ್ನು, ಎಣ್ಣೆಯನ್ನು ಬದಲಾಯಿಸುತ್ತ ಹೋಗಬೇಡಿ. ತಲೆಯ ಸ್ನಾನಕ್ಕೆ ಹೆಚ್ಚು ಬಿಸಿನೀರು ಉಪಯೋಗಿಸಬೇಡಿ. ಆಹಾರದಲ್ಲಿ ಹೆಚ್ಚು ಸೊಪ್ಪು, ತರಕಾರಿ ಉಪಯೋಗಿಸಿ.

ಎರಡು ಪ್ರಶ್ನೆಗಳು

● ನನ್ನ ಮುಖದ ತುಂಬಾ ಬಹಳಷ್ಟು ಮೊಡವೆಗಳಿವೆ (pimples). ಇದರಿಂದ ಮುಖ ವಿಕಾರವಾಗಿ ಕಾಣುತ್ತಿದೆ. ಎಷ್ಟೋ ರೀತಿಯ ಕ್ರೀಂಗಳನ್ನು ಸೋಪುಗಳನ್ನು ಬಳಸಿದೆ, ವೈದ್ಯರ ಬಳಿ ತೋರಿಸಿದೆ. ಪ್ರಯೋಜನವಾಗಲಿಲ್ಲ. ನನ್ನ ಮುಖ ಸುಂದರವಾಗಿ ಕಾಣಲು ಯಾವ ಕ್ರಮ ಕೈಗೊಳ್ಳಬೇಕು?

● ನನಗೆ ಜ್ಞಾಪಕ ಶಕ್ತಿ ಬಹಳಷ್ಟು ಕಡಿಮೆ. ಕಷ್ಟಪಟ್ಟು ಓದಿದರೂ ಎರಡೇ ದಿನಗಳಲ್ಲಿ ಓದಿದ್ದು ಮರೆತುಹೋಗುತ್ತದೆ. ಇದರಿಂದ ಓದಲು ಬೇಜಾರಾಗುತ್ತದೆ. ಜ್ಞಾಪಕಶಕ್ತಿಯನ್ನು ಅತಿ ಹೆಚ್ಚಿನ ರೀತಿಯಲ್ಲಿ ವೃದ್ಧಿಸುವ ಮಾರ್ಗವನ್ನು ತಿಳಿಸಿ. ಏಕಾಗ್ರತೆಯನ್ನು ವೃದ್ಧಿಸುವ ಮಾರ್ಗ ತಿಳಿಸಿ.

-ಹೆಸರು ಬೇಡ, ಯಾದಗಿರಿ

ಸಲಹೆ

● ದಿನಕ್ಕೆ ಮೂರು ನಾಲ್ಕು ಬಾರಿ ಬಿಸಿನೀರಿನಿಂದ ಮುಖ ತೊಳೆಯಿರಿ. ಮುಖ ತೊಳೆಯಲು ಕಡಲೆಹಿಟ್ಟು ಉಪಯೋಗಿಸಿ. ಮುಖ ಒರೆಸುವ ಟವಲನ್ನು ಬೇರೆಯೇ ಇಟ್ಟುಕೊಳ್ಳಿ, ಮುಖಕ್ಕೆ ಯಾವುದೇ ಕ್ರೀಂ ಉಪಯೋಗಿಸಬೇಡಿ. ಪ್ರತಿದಿನ ರಾತ್ರಿ ಮುಖಕ್ಕೆ ಶ್ರೀಗಂಧ ಚಕ್ಕೆ ಹಾಗೂ ಅರಿಶಿಣದ ಬೇರನ್ನು ತೇಯ್ದು ಹಚ್ಚಿಕೊಳ್ಳಿ.

● ನೀವು ಅಧ್ಯಯನದ ಕ್ರಮ ತಿಳಿದುಕೊಳ್ಳಿ, ನಲವತ್ತೈದು ನಿಮಿಷಗಳ ಕಾಲ ಮನಸ್ಸಿಟ್ಟು ಓದಿ, ನಂತರ ಸ್ವಲ್ಪ ಸಮಯ ಬಿಡುವು ಕೊಡಿ. ಆಮೇಲೆ ಓದಿದ್ದನ್ನು ಮನನ ಮಾಡಿಕೊಳ್ಳಿ, ನಂತರ ನೆನಪಿಸಿಕೊಂಡು ಬರೆದಿಡುವುದನ್ನು ಅಭ್ಯಾಸ ಮಾಡಿಕೊಳ್ಳಿ. ಒಂದೇ ಸಮನೆ ಓದುವುದರಿಂದ ಪ್ರಯೋಜನವಿಲ್ಲ. ಓದಿದ್ದನ್ನು ಬರೆಯಬೇಕು ಮತ್ತು ಬೇರೆಯವರೊಂದಿಗೆ ಚರ್ಚೆ ಮಾಡಬೇಕು. ಹೀಗೆ ಮಾಡುವುದರಿಂದ ಓದಿದ ವಿಷಯ ಮರೆಯುವ ಸಂಭವವೇ ಇರುವುದಿಲ್ಲ.

ತಲೆ ತುಂಬ ಬಿಳಿ ಕೂದಲು

ಈ ಪ್ರಶ್ನೆಯನ್ನು ಎಲ್ಲರಿಗೂ ಕೇಳಿದೆ. ಆದರೆ ಯಾರಿಂದಲೂ ಒಳ್ಳೆಯ ಉತ್ತರ ಸಿಕ್ಕಿಲ್ಲ. ನನಗೆ 21 ವರ್ಷ. ತಲೆಯ ತುಂಬಾ ಬಿಳಿ ಕೂದಲು ಇರುವುದು.

ನನಗೆ ರಾಸಾಯನಿಕ ಬಣ್ಣ ಹಚ್ಚಲು ಇಷ್ಟವಿಲ್ಲ. ಇದರಿಂದ ನನಗೆ ತುಂಬಾ ಸಮಸ್ಯೆಯಾಗಿದೆ. ಪರಿಹಾರ ತಿಳಿಸಿ. ಹೊರಗೆ ಹೋಗಲು ನಾಲ್ಕು ಜನರ ಜೊತೆ ಬೆರೆಯಲು ಬೇಜಾರು ಆಗಿದೆ. ಆಯುರ್ವೇದಿಕ್ ಆಸ್ಪತ್ರೆಯಲ್ಲಿ ತೋರಿಸುತ್ತಿರುವೆ. ಆದರೆ ಪರಿಹಾರ ದೊರೆತಿಲ್ಲ. ದಯವಿಟ್ಟು ನನಗೆ ಪರಿಹಾರ ತಿಳಿಸಿ.

-ಸುಮತಿ, ದಾವಣಗೆರೆ

ಸಲಹೆ

ಇತ್ತೀಚೆಗೆ ಬಹಳಷ್ಟು ಜನರಿಗೆ ಚಿಕ್ಕ ವಯಸ್ಸಿನಲ್ಲೇ ಕೂದಲು ಬಿಳಿಯಾಗುತ್ತಿವೆ. ಇದು ನಿಮ್ಮೊಬ್ಬರದೇ ಸಮಸ್ಯೆಯಲ್ಲ. ಬಿಳಿಕೂದಲು ಕಪ್ಪು ಮಾಡಲು ಶಾಶ್ವತವಾದ ಚಿಕಿತ್ಸೆ ಯಾವುದೂ ಇಲ್ಲ. ನೀವು ಹದಿನೈದು ದಿನಕ್ಕೊಮ್ಮೆ ತಲೆಕೂದಲಿಗೆ ಮೆಹಂದಿ ಹಚ್ಚಿಕೊಂಡು ಸ್ನಾನ ಮಾಡಿ. ಇದರಿಂದ ಕೂದಲಿನ ಬಣ್ಣ ಕೆಂಚಗಾಗುತ್ತದೆ. ಮೆಹಂದಿ ತಲೆಯನ್ನು ತಂಪಾಗಿಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಇದನ್ನೊಂದು ಸಮಸ್ಯೆಯೆಂದು ಪರಿಗಣಿಸದೇ ಅದರ ಬಗ್ಗೆ ಯೋಚಿಸುವುದನ್ನು ಬಿಟ್ಟು ಎಲ್ಲರೊಡನೆ ನಗುನಗುತ್ತಾ ಬೆರೆಯಿರಿ.

ಕುಂದಿದ ಬೆಳವಣಿಗೆ

ಈಗ ನನಗೆ 17 ವರ್ಷ ಮತ್ತು ನನ್ನ ತಮ್ಮನಿಗೆ 15 ವರ್ಷ. ಆದರೂ ವಯಸ್ಸಿಗೆ ಅನುಗುಣವಾಗಿ ನಾವು ಬೆಳೆದಿಲ್ಲ. ನಾನು ಕೇವಲ 5 ಅಡಿ ಮತ್ತು ನನ್ನ ತಮ್ಮ 4 ಅಡಿ ಎತ್ತರವಿದ್ದೇವೆ. ಭಾರ 25 ಮತ್ತು 20 ಕೆ.ಜಿ. ನಮಗೆ ಮಿತ್ರರಲ್ಲಿ ಇರಲು ನಾಚಿಕೆ ಬರುವುದು. ಎಷ್ಟೋ ಆಯುರ್ವೇದಿಕ್ ಔಷಧಿ ಉಪಚಾರ ಮಾಡಿದರೂ ನಾವು ಹೀಗೇ ಇದ್ದೇವೆ. ನಮ್ಮ ತಂದೆ ತಾಯಿಗಳು ಸದೃಢವಾಗಿ ಎತ್ತರವಾಗಿ ಚೆನ್ನಾಗಿಯೇ ಇದ್ದಾರೆ. ದಯವಿಟ್ಟು ನಮ್ಮನ್ನು ಕಷ್ಟದಿಂದ ಪಾರು ಮಾಡಿರಿ.

-ಎ.ಬಿ.ಸಿ. ಬಳ್ಳಾರಿ

ಸಲಹೆ

ಪಿಟ್ಯುಟರಿ ಹಾರ್ಮೋನಿನ ವ್ಯತ್ಯಾಸದಿಂದಾಗಿ ಕೆಲವರಲ್ಲಿ ಬೆಳವಣಿಗೆ ಕಡಿಮೆಯಾಗುತ್ತದೆ. ನೀವು ಒಂದು ಬಾರಿ ನಿರ್ನಾಳ ಗ್ರಂಥಿ ತಜ್ಞರನ್ನು (Endocrinologist) ಭೇಟಿಯಾಗಿ ಹಾರ್ಮೋನಿನ ಚಿಕಿತ್ಸೆ ತೆಗೆದುಕೊಳ್ಳುವುದರಿಂದ ಸ್ವಲ್ಪ ಮಟ್ಟಿಗೆ ಬೆಳವಣಿಗೆ ಹೆಚ್ಚಬಹುದು.

ಗೊಂದಲ ಸ್ಥಿತಿ

ನಾನು 19 ವರ್ಷದ ಬಿ.ಎ. ವಿದ್ಯಾರ್ಥಿನಿ. ಪಿ.ಯು.ಸಿ. ಮೊದಲ ವರ್ಷದಲ್ಲಿ ನನ್ನ ಕ್ಲಾಸಿನ ಒಬ್ಬ ಹುಡುಗನನ್ನು ಪ್ರೀತಿಸಿದೆ. ಆದರೆ ಕೆಲವು ದಿನಗಳ ನಂತರ ಅವನು ಮೊದಲೊಂದು ಹುಡುಗಿಯನ್ನು ಪ್ರೇಮಿಸಿದ್ದ ಎಂಬ ವಿಷಯ ತಿಳಿಯಿತು. ಅವನಲ್ಲಿ ನೇರವಾಗಿ ಕೇಳಿದೆ. ಅವಳು ನನ್ನ ಸಹೋದರಿ ಎಂದ. ಆದರೆ ನನಗೆ ನಂಬಿಕೆ ಬರುತ್ತಿಲ್ಲ. ನಮ್ಮ ಸವಿಜೇನಿನಂತ ಪ್ರೀತಿಯಲ್ಲಿ ಸಂಶಯ ಎಂಬ ವಿಷ ಬೀಜ ಬಿದ್ದಿದೆ. ಇಂತಹ ಸಂಶಯ ಪ್ರೇಮವನ್ನು ಮುಂದುವರೆಸಬೇಕೆ, ಬಿಡಬೇಕೆ ಎಂಬುದನ್ನು ದಯವಿಟ್ಟು ತಿಳಿಸಿ.

-ದುಃಖಿಗೊಂಡ ವಿದ್ಯಾರ್ಥಿನಿ, ಸಿದ್ಧಾಪುರ

ಸಲಹೆ

ಪ್ರೀತಿಯು ಪರಸ್ಪರ ವಿಶ್ವಾಸದ ತಳಹದಿಯ ಮೇಲೆ ಇರಬೇಕಾಗುತ್ತದೆ. ನಿಮಗೆ ಸಂಶಯವಿದ್ದರೆ 'ಆ ಹುಡುಗಿಯನ್ನೇ' ನೇರವಾಗಿ ಕೇಳಿ. ನೀವು ಪ್ರೀತಿ, ಪ್ರೇಮ ಎಂದು ತಲೆಕೆಡಿಸಿಕೊಳ್ಳದೇ ವಿದ್ಯಾಭ್ಯಾಸದ ಬಗ್ಗೆ ಗಮನ ಕೊಟ್ಟು ಒಳ್ಳೆಯ ಅಂಕಗಳಿಸಿ ಆರ್ಥಿಕ ಸ್ವಾವಲಂಬಿಯಾಗುವುದರ ಬಗ್ಗೆ ಯೋಚಿಸಿ.

ತೊದಲಿಗೆ ಚಿಕಿತ್ಸೆ

ನಾನು 23 ವರ್ಷದ ಯುವಕ. ನನಗೆ 'ರ' ಅಕ್ಷರ ಉಚ್ಚರಿಸಲು ಬರುವುದಿಲ್ಲ. ಆದ್ದರಿಂದ ಮಾತನಾಡುವಾಗ ತೊದಲುತ್ತೇನೆ. ಬೇರೆಯವರ ಜೊತೆ ಮಾತನಾಡುವಾಗ ಮುಜುಗರವಾಗುತ್ತದೆ. ತೊದಲು ಮಾತಿನ ಚಿಕಿತ್ಸೆಗೆ ಅನೇಕ ತಜ್ಞ ಸಂಸ್ಥೆಗಳಿವೆ ಎಂದು ಕೇಳಿದೆ. ದಯವಿಟ್ಟು ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ತಿಳಿಸಿ. ಅವುಗಳ ವಿಳಾಸ ತಿಳಿಸಿರಿ.

-ಬಿ. ಎಸ್. ವಿಜಯವಾಡ, ಮುದ್ದೇಬಿಹಾಳ

ಸಲಹೆ

ತೊದಲು ಮಾತಿನ ಚಿಕಿತ್ಸೆಗೆ ಬೆಂಗಳೂರಿನ ಹೆಣ್ಣೂರು ಬಾಣಸವಾಡಿ ರಸ್ತೆಯಲ್ಲಿನ ಸರಕಾರಿ ವಾಕ್ ಮತ್ತು ಶ್ರವಣ ಸಂಸ್ಥೆಯನ್ನು ಸಂಪರ್ಕಿಸಿ. ಇಲ್ಲವೇ ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆಯನ್ನು ಸಂಪರ್ಕಿಸಿ.

ಗೋತ್ರದ ಸಮಸ್ಯೆ

ನಾನು ಪ್ರೀತಿಸುವ ಹುಡುಗಿಯ ಗೋತ್ರದ ಪ್ರಕಾರ ಅವಳು ನನಗೆ ತಂಗಿಯಾಗುತ್ತಾಳೆ. ಅವಳಿಗೂ ನನ್ನ ಮೇಲೆ ಮನಸ್ಸಿದೆ. ನಾವು ಬ್ರಾಹ್ಮಣ ಮತದವರಾದ್ದರಿಂದ ಗೋತ್ರದ ಮೂಲಕ ಮದುವೆ ನಿಶ್ಚಯ ಮಾಡುತ್ತಾರೆ. ಇದಕ್ಕೆ ನಿಮ್ಮ ಅಭಿಪ್ರಾಯ ತಿಳಿಸಿ. ಅವಳು ಮದುವೆ ಆದರೆ ನಿನ್ನನ್ನೇ ಇಲ್ಲದಿದ್ದರೆ ಇಲ್ಲ ಎಂದು ತಿಳಿಸಿದ್ದಾಳೆ. ನಾನು ಮತ್ತು ಆವರ ಮನೆಯವರು ಒಂದೇ ಊರಿನಲ್ಲಿ ಅಣ್ಣ ತಮ್ಮಂದಿರಂತೆ ಇದ್ದೇವೆ. ನಾನು ಅವಳನ್ನು ಪ್ರೀತಿಸಿದರೂ ಕೂಡ ಅವರಪ್ಪನನ್ನು ಕಾಕಾ ಎಂದೇ ಕರೆಯುತ್ತೇನೆ. ಇದಕ್ಕೊಂದು ಪರಿಹಾರ ತಿಳಿಸಿ.

-ಜಿ.ಕೆ. ಜಾಗಿರದಾರ, ಗುಲಬರ್ಗಾ

ಸಲಹೆ

ಸಗೋತ್ರದ ವಿವಾಹದಿಂದ, ನಿಮ್ಮ ಕುಟುಂಬದಲ್ಲಿ ಅನುವಂಶೀಯ ಕಾಯಿಲೆಗಳೇನಾದ್ರೂ ಇದ್ದಲ್ಲಿ ಮುಂದೆ ನಿಮ್ಮ ಮಕ್ಕಳಿಗೆ ಬರಬಹುದಾದ ಸಾಧ್ಯತೆ ಇರುತ್ತದೆ. ಅಂತಹ ಯಾವುದೇ ಕಾಯಿಲೆಗಳು ನಿಮ್ಮ ಕುಟುಂಬದಲ್ಲಿ ಇಲ್ಲದಿದ್ದ ಪಕ್ಷದಲ್ಲಿ ಸಗೋತ್ರದಲ್ಲಿ ಮದುವೆಯಾಗಬಹುದು.

ಕಷ್ಟ ಕೊಡುವ ಅತ್ತಿಗೆ

ನಾನು ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದೆ. ಈಗ ಪಿ.ಯು.ಸಿ.ಯಲ್ಲಿ 325 ಅಂಕ ಪಡೆದರೂ ಭೌತಶಾಸ್ತ್ರದಲ್ಲಿ 28 ಅಂಕಗಳಿಸಿ ಫೇಲಾಗಿದ್ದೇನೆ. ನಾನು ಪರಿಶಿಷ್ಟ ಪಂಗಡದವನು. ಬಿ.ಎಸ್.ಆರ್.ಬಿ. ಪರೀಕ್ಷೆ ಕಟ್ಟಿದ್ದೇನೆ. ನನ್ನ ವಿದ್ಯಾಭ್ಯಾಸಕ್ಕೆ ನನ್ನ ಅಣ್ಣ ಅತ್ತಿಗೆಯೇ ಆಧಾರ. ಆದರೆ ಅತ್ತಿಗೆ ನನಗೆ ತುಂಬಾ ಕಷ್ಟ ಕೊಡುತ್ತಾರೆ. ನಾನು ಈಗ 18 ವರ್ಷದ ಒಬ್ಬ ಹುಡುಗಿಯನ್ನು ಮನಸಾರೆ ಪ್ರೀತಿಸುತ್ತಿದ್ದೇನೆ. ಆದರೆ ನಾನು ನನ್ನ ಪ್ರೀತಿಯನ್ನು ಆಕೆಗೆ ಹೇಳಿಲ್ಲ. ಆದರೆ ನನ್ನ ಅತ್ತಿಗೆ ನನಗೆ ಕಷ್ಟ ಕೊಡುವುದನ್ನು ಒಂದು ಪತ್ರದಲ್ಲಿ ತಿಳಿಸಿದೆ. ಆಕೆ ಅದೇ ಪತ್ರದಲ್ಲಿ 'ನಿಮ್ಮ ಅತ್ತಿಗೆ ಎಷ್ಟೇ ಕಷ್ಟ ಕೊಟ್ಟರೂ ನಿನಗೆ ಕೆಲಸ ಸಿಗುವವರೆಗೂ ತಾಳ್ಮೆಯಿಂದ ಇರು' ಎಂದು ಬರೆದು ವಾಪಾಸ್ಸು ಕೊಟ್ಟಿದ್ದಳು. ಆಕೆ ನನ್ನನ್ನು ಪ್ರೀತಿಸುತ್ತಿರುವಳೋ? ಇಲ್ಲವೋ? ನನಗೆ ಸರಿಯಾಗಿ ಗೊತ್ತಿಲ್ಲ. ನಾನು ನನ್ನ ಪ್ರೀತಿಯನ್ನು ಆಕೆಗೆ ಧೈರ್ಯವಾಗಿ ಹೇಳಲೋ? ಅಥವಾ ಬೇಡವೇ? ದಯವಿಟ್ಟು ನನ್ನ ಈ ಸಮಸ್ಯೆಗೆ ಪರಿಹಾರ ತಿಳಿಸಿ.

-ಹೆಸರು ಬೇಡ, ಮಧುಗಿರಿ

ಸಲಹೆ

ಮೊದಲು ನಿಮ್ಮ ವಿದ್ಯಾಭ್ಯಾಸ, ಕೆಲಸದ ಬಗೆಗೆ ಗಮನ ಕೊಡಿ. ಆ ಹುಡುಗಿ ನಿಮಗೆ ಒಬ್ಬ ಗೆಳತಿಯಾಗಿ ಸಲಹೆ ನೀಡಿರಬಹುದು. ಅದನ್ನೇ ನೀವು ಪ್ರೀತಿಯೆಂದು ಭಾವಿಸಿದರೆ ಹೇಗೆ? ಕೆಲಸ ಸಿಕ್ಕ ನಂತರ ನೇರವಾಗಿ ಆಕೆಯಲ್ಲಿ ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ. ಆಕೆಗೂ ನಿಮ್ಮಲ್ಲಿ ಪ್ರೀತಿಯಿದ್ದರೆ ಮದುವೆಯಾಗಿ.

ರಾಷ್ಟ್ರದ 18 ಪ್ರತಿಷ್ಠಿತ ಶಾಲೆಗಳಲ್ಲಿ ಇದೂ ಒಂದು

ಬಿಜಾಪುರದ ಸೈನಿಕ ಶಾಲೆ

ರಾಷ್ಟ್ರ ರಕ್ಷಣೆಯ ಹೊಣೆ ಯಾರದು? ಪಂಜಾಬಿಗಳದ್ದೆ, ಮಲಯಾಳಿಗಳದ್ದೆ, ಗೂರ್ಖಾ ಜನಾಂಗದ್ದೇ... ಎಂಬ ಪ್ರಶ್ನೆಗೆ ಉತ್ತರ ಹೇಳುವ ಮೊದಲು ಇನ್ನೊಂದು ಪ್ರಶ್ನೆ ಕೇಳಬೇಕಾಗುತ್ತದೆ. ಈ ರಾಷ್ಟ್ರ ಯಾರದು? 'ನಮ್ಮದು.. ಭಾರತೀಯರೆಲ್ಲರದೂ' ಎಂಬ ಉತ್ತರ ದೊರೆಯುತ್ತದೆ. ಹಾಗೆಯೇ ರಾಷ್ಟ್ರರಕ್ಷಣೆಯ ಹೊಣೆಯೂ ಕೂಡ ಭಾರತದಲ್ಲಿ ವಾಸಿಸುವ ಎಲ್ಲರದೂ!

ಬ್ರಿಟಿಷರ ಆಳ್ವಿಕೆಯ ಕಾಲದಿಂದಲೂ, ಭಾರತದ ಕೆಲವು ಆಯ್ದ ಭಾಗಗಳ ಜನರು ಮಾತ್ರ ಸೈನಿಕರಾಗಿ ಆಯ್ಕೆಯಾಗುತ್ತಿದ್ದರು. ದೇಶದ ಮೂಲೆ ಮೂಲೆಗಳಿಂದ ಯುವಕರು ಸೈನ್ಯಕ್ಕೆ ಸೇರ್ಪಡೆಯಾಗಬೇಕು. ರಕ್ಷಣಾ ವ್ಯವಸ್ಥೆಯಲ್ಲಿನ ಪ್ರಾದೇಶಿಕ ಅಸಮಾನತೆ ಅಳಿಸಿ ಎಲ್ಲ ಭಾಗಗಳ

✧

ಈ ಶಾಲೆಯಲ್ಲಿ ಕಲಿತ ಸುಮಾರು 10 ಜನ ಐ.ಎ.ಎಸ್. ಹಾಗೂ 24 ಜನ ಐ.ಪಿ.ಎಸ್. ಅಧಿಕಾರಿಗಳಾಗಿದ್ದಾರೆ.

✧

ಜನ ಸೈನಿಕರಾಗಬೇಕು; ಸೇನೆಯ ಎಲ್ಲ ಹಂತಗಳಲ್ಲೂ ಸೇವೆ ಸಲ್ಲಿಸಬೇಕು ಎಂಬ ಘನ ಉದ್ದೇಶಗಳನ್ನಿಟ್ಟುಕೊಂಡು ಸೈನಿಕ ಶಾಲೆಗಳು ಪ್ರಾರಂಭವಾದವು. ಹೀಗೆ ದೇಶಾದ್ಯಂತ ಸ್ಥಾಪನೆಗೊಂಡ 18 ಸೈನಿಕ ಶಾಲೆಗಳಲ್ಲಿ ಬಿಜಾಪುರದ ಶಾಲೆಯೂ ಒಂದು.

ಅಂದಿನ ಮೈಸೂರು ರಾಜ್ಯ ಸರಕಾರ, ಐತಿಹಾಸಿಕ ನಗರ ಬಿಜಾಪುರದಲ್ಲಿ ಸೈನಿಕ ಶಾಲೆ ಸ್ಥಾಪಿಸಲು ನಿರ್ಧರಿಸಿತು. ಸೆಪ್ಟಂಬರ್ 16, 1963 ರಲ್ಲಿ, ಬಿಜಾಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಿಜಯ ಕಾಲೇಜು ಆವರಣದಲ್ಲಿ ಸೈನಿಕ ಶಾಲೆ ಆರಂಭವಾಯಿತು.

65 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯಲ್ಲಿ ಈಗ 629 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಸುಮಾರು 605 ಎಕರೆ ವಿಸ್ತೀರ್ಣವುಳ್ಳ ವಿಶಾಲ ಆವರಣದಲ್ಲಿ ಇಂದು ಸೈನಿಕ ಶಾಲೆ ತಲೆ ಎತ್ತಿ ನಿಂತಿದೆ.

ಈ ಶಾಲೆಯ ಆವರಣ ಅನೇಕ ರಾಜಕೀಯ ಧುರೀಣರಿಗೆ ಅದೃಷ್ಟವನ್ನು ಒದಗಿಸಿದೆ; 1963ರಲ್ಲಿ ಈ ಶಾಲೆಗೆ ಅಡಿಗಲ್ಲನ್ನು ಇರಿಸಿದ ಇಂದಿರಾಗಾಂಧಿ ಪ್ರಧಾನಮಂತ್ರಿ ಆದರು; ಕಟ್ಟಡವನ್ನು ಉದ್ಘಾಟನೆ



ಸುಭಾಸ ಯಾದವಾಡ

ಮಾಡಿದ ಉಪರಾಷ್ಟ್ರಪತಿ ಝಾಕೀರ್ ಹುಸೇನ್ ರಾಷ್ಟ್ರಪತಿಗಳಾದರು, ಶಾಲೆಗೆ ಭೇಟಿಕೊಟ್ಟ ವಿ.ವಿ. ಗಿರಿ ರಾಷ್ಟ್ರಾಧ್ಯಕ್ಷರಾದರು, ಬಿ.ಡಿ. ಜತ್ತಿ ಉಪರಾಷ್ಟ್ರಪತಿಯಾದರು.

ಕರ್ನಾಟಕ ರಾಜ್ಯ ಕ್ರೀಡಾ ಹಾಗು ಯುವಜನ



ಎಸ್. ಭಟ್ಟಾಚಾರ್ಯಜಿ
ಪ್ರಾಚಾರ್ಯರು

ಸೇವಾ ಖಾತೆಯ ಮಾಜಿ ಮಂತ್ರಿ ಅಜಯಕುಮಾರ ಸರನಾಯಕ್, ಬಿಜಾಪುರ ಹಾಗೂ ರಾಯಚೂರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಅರವಿಂದನ್ನು ಹಾಗೂ ಅಶೋಕ ಎಂ. ದಳವಾಯಿ ಬಿಜಾಪುರ ಸೈನಿಕ ಶಾಲೆಯ ಈಗಿನ ಹೆಡ್‌ಮಾಸ್ತರ ಎ.ಕೆ. ಶರ್ಮಾ, NCERT ಸದಸ್ಯರಾದ ಗುರುಪಾದ ಹೆಗಡಿ ಮುಂತಾದವರು ಈ ಶಾಲೆಯ ಹಿಂದಿನ ವಿದ್ಯಾರ್ಥಿ-ಗಳು. ಈ ಶಾಲೆಯಲ್ಲಿ ಕಲಿತ ಸುಮಾರು 10 ಜನ ಐ.ಎ.ಎಸ್. ಹಾಗೂ 24 ಜನ ಐ.ಪಿ.ಎಸ್ ಅಧಿಕಾರಿಗಳಾಗಿದ್ದಾರೆ.

ಬಿಜಾಪುರ ಸೈನಿಕ ಶಾಲೆಯ ಹಿಂದಿನ ವಿದ್ಯಾರ್ಥಿಗಳ ಸಂಘವೊಂದು 1983ರಿಂದ ಅಸ್ತಿತ್ವದಲ್ಲಿದೆ. ಅದು ಈವರೆಗೆ 10 ಸಮಾವೇಶಗಳನ್ನು ನಡೆಸಿದೆ. ಕಳೆದ ವರ್ಷದಿಂದ 'ಅಜಿತ್ ಟೈಮ್ಸ್' ಎಂಬ ಖಾಸಗಿ ಸಮಾಚಾರ ಪತ್ರವನ್ನು ಹೊರತರುತ್ತಿದೆ.

ಆಡಳಿತ ನಿರ್ವಹಣೆ

ಎಲ್ಲ ಸೈನಿಕ ಶಾಲೆಗಳ ಆಡಳಿತವನ್ನು

ಬೋರ್ಡ್ ಆಫ್ ಗವರ್ನರ್ಸ್ ಎಂಬ ಸ್ವಾಯತ್ತ ಮಂಡಳಿಯು ನೋಡಿಕೊಳ್ಳುತ್ತದೆ. ಕೇಂದ್ರ ರಕ್ಷಣಾ ಮಂತ್ರಿಗಳು ಈ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಸೈನಿಕ ಶಾಲೆಗಳುಳ್ಳ ರಾಜ್ಯಗಳ ಮುಖ್ಯಮಂತ್ರಿಗಳು ಅಥವಾ ಶಿಕ್ಷಣ ಸಚಿವರು ಈ ಮಂಡಳಿಯ ಸದಸ್ಯರಾಗಿರುತ್ತಾರೆ.

ಪ್ರತಿ ಸೈನಿಕ ಶಾಲೆಗೂ ಒಂದು ಸ್ಥಳೀಯ ಆಡಳಿತ ಮಂಡಳಿ ಇರುತ್ತದೆ. ರಾಜ್ಯದಲ್ಲಿರುವ ಹಿರಿಯ ಸೇನಾಧಿಕಾರಿ ಅಧ್ಯಕ್ಷರಾಗಿರುತ್ತಾರೆ. ಶಿಕ್ಷಣ ಹಾಗು ಹಣಕಾಸು ಇಲಾಖೆಯ ಒಬ್ಬೊಬ್ಬ ಪ್ರತಿನಿಧಿ, ಪಬ್ಲಿಕ್ ಇನ್‌ಸ್ಟ್ರಕ್ಷನ್ ಕಮೀಶನರರು, ಸ್ಥಳೀಯ ಲೋಕಸಭಾ ಸದಸ್ಯರು, ಜಿಲ್ಲಾಧಿಕಾರಿಗಳು, ಪಾಲಕರ ಒಬ್ಬ ಪ್ರತಿನಿಧಿ, ಇಬ್ಬರು ಶಿಕ್ಷಣ ತಜ್ಞರು ಸದಸ್ಯರಾಗಿರುವ ಈ ಮಂಡಳಿಯಲ್ಲಿ ಶಾಲೆಯ ಪ್ರಾಚಾರ್ಯರು ಸದಸ್ಯ-ಕಾರ್ಯದರ್ಶಿಯಾಗಿ ಕಾರ್ಯ ಮಾಡುತ್ತಾರೆ.

ಪ್ರಾಚಾರ್ಯರು ಸೈನಿಕ ಶಾಲೆಯ ಮುಖ್ಯಸ್ಥರಾಗಿದ್ದು; ಹೆಡ್‌ಮಾಸ್ಟರ್ ಶಾಲೆಯ ಶೈಕ್ಷಣಿಕ ಚಟುವಟಿಕೆಗಳನ್ನು ಹಾಗು ರಿಜಿಸ್ಟ್ರಾರ್ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಈ ಮೂರು ಜನ ಅಧಿಕಾರಿಗಳು ರಾಷ್ಟ್ರೀಯ ರಕ್ಷಣಾ ವಿಭಾಗಗಳಾದ ಆರ್ಮಿ, ನೇವಿ ಹಾಗೂ ಏರ್ ಫೋರ್ಸ್‌ಗಳನ್ನು ಪ್ರತಿನಿಧಿಸುತ್ತಾರೆ. ಅವರ ಸಂಬಳ-ಭತ್ಯೆ ಮುಂತಾದವುಗಳು ರಕ್ಷಣಾ ಸೇವೆಯ ನಿಯಮದಂತೆ ಆಯಾ ವಿಭಾಗಗಳಿಂದ ದೊರೆಯುತ್ತವೆ. ಇವರು ಮೂವರನ್ನು ಹೊರತುಪಡಿಸಿ ಉಳಿದೆಲ್ಲ ಸಿಬ್ಬಂದಿ ಸಾರ್ವಜನಿಕ ಸೇವೆಯಿಂದಲೇ ಬಂದಿರುತ್ತಾರೆ.

ಬಿಜಾಪುರ ಸೈನಿಕ ಶಾಲೆಯ ಸಿಬ್ಬಂದಿ ವಿವರ ಹೀಗಿದೆ:

1.	ರಕ್ಷಣಾ ಸಚಿವಾಲಯದ ಅಧಿಕಾರಿಗಳು	3
2.	ಶೈಕ್ಷಣಿಕ ಸಿಬ್ಬಂದಿ	36
3.	ಆಡಳಿತ ನಿರ್ವಹಣೆ ಸಿಬ್ಬಂದಿ	26
4.	ಇತರ ಸಿಬ್ಬಂದಿ	70

ವಿದ್ಯಾರ್ಥಿಗಳ ಪ್ರವೇಶ

ಸೈನಿಕ ಶಾಲೆಯ 6ನೇ ವರ್ಗ ಹಾಗು 9ನೇ ವರ್ಗಗಳ ಪ್ರವೇಶಕ್ಕಾಗಿ ಅಖಿಲ ಭಾರತ ಪ್ರವೇಶ ಪರೀಕ್ಷೆಗಳನ್ನು ನಡೆಸಲಾಗುವುದು. ಸಾಮಾನ್ಯವಾಗಿ ಪ್ರತಿವರ್ಷ ಫೆಬ್ರುವರಿ ತಿಂಗಳ ಮೂರನೆಯ ರವಿವಾರ ದೇಶಾದ್ಯಂತ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗುವುದು. ಕರ್ನಾಟಕದ, ಬಿಜಾಪುರ, ಬೆಳಗಾವಿ, ಬೆಂಗಳೂರು ಹಾಗೂ ಗುಲಬರ್ಗಾಗಳಲ್ಲಿ ಪರೀಕ್ಷಾ ಕೇಂದ್ರಗಳಿವೆ.

ರಾಜ್ಯದ ಪ್ರಮುಖ ದಿನ ಪತ್ರಿಕೆಗಳಲ್ಲಿ ಪ್ರವೇಶ ಪರೀಕ್ಷೆಯ ಕುರಿತು ತಿಳುವಳಿಕೆ ನೀಡಲಾಗುವುದು. ಸಾಮಾನ್ಯವಾಗಿ ನವಂಬರ್/ಡಿಸೆಂಬರ್ ತಿಂಗಳಲ್ಲಿ ವಿವರವಾದ ಪತ್ರಿಕೆಗಳಲ್ಲಿ ಪ್ರಕಟಣೆ ಬರುವುದು.

6ನೇ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿ, ಆ ವರ್ಷ ಜುಲೈ 1 ರಂದು 10 ವರ್ಷ ದಾಟಿದ್ದು 11 ವರ್ಷದ ಒಳಗಿರಬೇಕು. 9ನೇ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗೆ 13 ವರ್ಷ ತುಂಬಿದ್ದು 14 ವರ್ಷ ವಯೋಮಿತಿಯ ಒಳಗಿರಬೇಕು.

ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಯ ಆಯ್ಕೆಯಾಗುತ್ತದೆ. ಪರೀಕ್ಷೆಯ ಫಲಿತಾಂಶವನ್ನು ಒಂದು ಅಥವಾ ಎರಡು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿ. ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು.


ಪ್ರತಿಶತ 67 ರಷ್ಟು ಸ್ಥಾನಗಳನ್ನು ರಾಜ್ಯದ ಅಭ್ಯರ್ಥಿಗಳಿಗೆ ಮೀಸಲಾಗಿಡಲಾಗುವುದು. ಉಳಿದ ಸ್ಥಾನಗಳು ಬೇರೆ ರಾಜ್ಯ ಹಾಗು ಕೇಂದ್ರಾಡಳಿತ ಪ್ರದೇಶಗಳ ವಿದ್ಯಾರ್ಥಿಗಳಿಗಾಗಿ ಇರುವುದು. ಒಟ್ಟು ಸ್ಥಾನಗಳಲ್ಲಿ ಶೇಕಡಾ 25 ರಷ್ಟು ಸೈನಿಕ ಸೇವೆಯಲ್ಲಿರುವ ಹಾಗೂ ಸೈನಿಕ ಸೇವೆಯಿಂದ ನಿವೃತ್ತರಾಗಿರುವವರ ಮಕ್ಕಳಿಗಾಗಿ ಮೀಸಲಾಗಿರುವುವು. ಪ್ರತಿವರ್ಷ 70-80 ವಿದ್ಯಾರ್ಥಿಗಳನ್ನು 7ನೇ ವರ್ಗಕ್ಕೂ, 15-20 ವಿದ್ಯಾರ್ಥಿಗಳನ್ನು 9ನೇ ವರ್ಗಕ್ಕೂ ಸೇರಿಸಿಕೊಳ್ಳಲಾಗುವುದು.

ಸ್ಕಾಲರ್‌ಶಿಪ್


ಕರ್ನಾಟಕ ರಾಜ್ಯ ಸರ್ಕಾರ ರಾಜ್ಯದ ಅರ್ಹ ವಿದ್ಯಾರ್ಥಿಗಳಿಗೆ ಮುಕ್ತವಾಗಿ ಸ್ಕಾಲರ್‌ಶಿಪ್ ನೀಡುತ್ತಿದೆ. ಉಳಿದವರಿಗೆ ಕೇಂದ್ರ ಸರಕಾರ ಸ್ಕಾಲರ್‌ಶಿಪ್ ಒದಗಿಸುತ್ತದೆ.

ಸರಕಾರ ಪ್ರತಿ ವರ್ಷ ಪ್ರತಿ ವಿದ್ಯಾರ್ಥಿಗೆ ರೂ. 11,500/- ವಿದ್ಯಾರ್ಥಿ ವೇತನ ನೀಡುತ್ತಿದ್ದು; ಈ ವರ್ಷದಿಂದ ಅದನ್ನು ರೂ. 14,000/-ಕ್ಕೆ ಹೆಚ್ಚಿಸಲಾಗಿದೆ. ವಿದ್ಯಾರ್ಥಿಗಳ ಮೆರಿಟ್, ಪಾಲಕರ ಆದಾಯ ಮುಂತಾದವುಗಳನ್ನು ಪರಿಗಣಿಸಿ ಸ್ಕಾಲರ್‌ಶಿಪ್ ಪ್ರಮಾಣ ನಿರ್ಧರಿಸಲ್ಪಡುವುದು.

ಸ್ಕಾಲರ್‌ಶಿಪ್ ಪಡೆಯುವ ಪ್ರತಿ ವಿದ್ಯಾರ್ಥಿಗೂ ಅವರ ಪಾಲಕರು ಪ್ರತಿ ವರ್ಷ ರೂ. 2,500/- ಪಾಕೆಟ್ ಹಣ ಎಂದು ಕೊಡಬೇಕಾಗುವುದು. ಈ ಹಣವನ್ನು ವಿದ್ಯಾರ್ಥಿಯ ಸಾಬೂನು, ಅಂಚೆ ಚೀಟಿ, ಮನರಂಜನೆ, ಪ್ರವಾಸ ಮುಂತಾದವುಗಳಿಗೆ ವೆಚ್ಚ ಮಾಡಲಾಗುವುದು. ಪ್ರಾರಂಭದಲ್ಲಿ


ಅರವಿಂದ ಜನ್ನು, ಜಿಲ್ಲಾಧಿಕಾರಿ

ಸೈನಿಕ ಶಾಲೆಯಲ್ಲಿ ರೂಪುಗೊಂಡವರು


ಅಶೋಕ ಎಂ. ದಳವಾಯಿ, ಜಿಲ್ಲಾಧಿಕಾರಿ


ಅಜಯಕುಮಾರ್ ಸರನಾಯಕ್

ರೂ. 1,000/- ಕಾಶನ್ ಡಿಪಾಜಿಟ್ ಇಡಬೇಕಾಗುವುದು. ಖಾಸಗಿ ಬಟ್ಟೆ ಮುಂತಾದವುಗಳನ್ನು ಪಾಲಕರೇ ಒದಗಿಸಬೇಕಾಗುವುದು.

ಸುಮಾರು ಶೇ.95 ಹಣಕಾಸಿನ ನೆರವು ರಾಜ್ಯ ಸರಕಾರದಿಂದಲೂ, ಉಳಿದದ್ದು ಕೇಂದ್ರ ಸರಕಾರ ದಿಂದಲೂ ಸೈನಿಕ ಶಾಲೆಗೆ ದೊರೆಯುವುದು.

ಶಾಲೆಯಲ್ಲಿರುವ ಸೌಲಭ್ಯಗಳು

ಅರ್ಹ ಹಾಗೂ ಸುದೀರ್ಘ ಅನುಭವವುಳ್ಳ ಸಿಬ್ಬಂದಿ ಇದ್ದು; ಪ್ರತಿ ವಿದ್ಯಾರ್ಥಿಯ ಕಡೆಗೂ ವೈಯಕ್ತಿಕ ಗಮನ ಕೊಡಲಾಗುವುದು. ಪಾಠದಲ್ಲಿ ಹಿಂದುಳಿಯುವ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ವ್ಯವಸ್ಥೆ ಮಾಡಲಾಗುವುದು.

ವಿದ್ಯಾರ್ಥಿಗಳಿಗಾಗಿ 6 ವಸತಿ ನಿಲಯಗಳಿದ್ದು; ಅವುಗಳಿಗೆ ಕರ್ನಾಟಕದ ಸುಪ್ರಸಿದ್ಧ ರಾಜಮನೆತನಗಳಾದ, ಚಾಲುಕ್ಯ, ಹೊಯ್ಸಳ, ಆದಿಲ್‌ಶಾಹಿ, ವಿಜಯನಗರ, ಒಡೆಯರ್ ಹಾಗು ರಾಷ್ಟ್ರಕೂಟ ಎಂದು ಹೆಸರಿಸಲಾಗಿದೆ. ಪ್ರತಿ ವಸತಿ ನಿಲಯಕ್ಕೂ ಒಬ್ಬೊಬ್ಬ ಮೇಲ್ವಿಚಾರಕರಿದ್ದಾರೆ. ಅವರು ವಿದ್ಯಾರ್ಥಿಗಳಲ್ಲಿನ ಶಿಸ್ತು, ಆರೋಗ್ಯ ಸ್ವಚ್ಛತೆಗಳ

ಸ್ಕ್ರೀನ್ ಪ್ರಿಂಟಿಂಗ್ ಬುಕ್ ಬೈಂಡಿಂಗ್ ತರಬೇತಿ

ನೆಲಮಂಗಲದ ಸಮೀಪ ಅರಿಶಿನಕುಂಟೆಯಲ್ಲಿರುವ ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆ (ರುಡ್‌ಸೆಟ್) ಯು ಬರುವ ಅಕ್ಟೋಬರ್ 5ನೇ ತಾರೀಖಿನಿಂದ ಸ್ಕ್ರೀನ್ ಪ್ರಿಂಟಿಂಗ್ ಹಾಗೂ ಬುಕ್ ಬೈಂಡಿಂಗ್ ತರಬೇತಿಯನ್ನು ನಡೆಸಲಿದೆ. 13 ದಿನಗಳ ತರಬೇತಿಯು ಉಚಿತವಾಗಿದ್ದು ಉಚಿತ ವಸತಿ ಹಾಗೂ ಊಟದ ವ್ಯವಸ್ಥೆಯನ್ನು ಹೊಂದಿರುತ್ತದೆ. ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಹಾಗೂ ತುಮಕೂರು ಜಿಲ್ಲೆಯ ಕನ್ನಡ ಓದು ಬರಹ ಬಲ್ಲ ವಯಸ್ಕ ನಿರುದ್ಯೋಗಿಗಳು ಸೆಪ್ಟಂಬರ್ 29 ರಂದು ನೇರವಾಗಿ ಸಂದರ್ಶನಕ್ಕೆ ಹಾಜರಾಗಬಹುದು. ಸ್ಕ್ರೀನ್ ಪ್ರಿಂಟಿಂಗ್‌ನಲ್ಲಿ ಪ್ರಾಥಮಿಕ ಜ್ಞಾನ ಹಾಗೂ ಅನುಭವವುಳ್ಳವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ:

ನಿರ್ದೇಶಕರು, ರುಡ್‌ಸೆಟ್ ಸಂಸ್ಥೆ,
ಚೆಕ್ ಪೋಸ್ಟ್ ಹಿಂಭಾಗ, ಅರಿಶಿನ ಕುಂಟೆ,
ಫೋನ್ : 08118-23166.

ಕಡೆಗೆ ಗಮನ ಹರಿಸುತ್ತಾರೆ.

ವಿದ್ಯಾರ್ಥಿಗಳ ಆರೋಗ್ಯ ನೋಡಿಕೊಳ್ಳಲು ವೈದ್ಯಾಧಿಕಾರಿಗಳಿದ್ದಾರೆ. 8 ಹಾಸಿಗೆಯುಳ್ಳ ಆಸ್ಪತ್ರೆ ಹಾಗು 4 ಹಾಸಿಗೆಗಳ ಪ್ರತ್ಯೇಕ ವಾರ್ಡ್ ಶಾಲೆಯ ಆವರಣದಲ್ಲಿವೆ. ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತದೆ. ತೀರ ಅಸ್ವಸ್ಥತೆ ಉಂಟಾದಾಗ ಪಾಲಕರಿಗೆ ತಿಳಿಸಲಾಗುತ್ತದೆ.

ಉಟೋಪಚಾರಕ್ಕಾಗಿ ಸುವ್ಯವಸ್ಥಿತ ಭೋಜನಾಲಯವಿದೆ. ಶಾಲೆಯಲ್ಲಿಯೇ ಇರುವ ಡೈರಿ ಪ್ರತಿ ದಿನ 200 ಲೀಟರ್ ಹಾಲನ್ನು ಉತ್ಪಾದಿಸುತ್ತದೆ. ಕೋಳಿ ಹಾಗು ಆಡು ಸಾಕಾಣಿಕಾ ಫಾರ್ಮ್‌ಗಳಿದ್ದು; ಭೋಜನಾಲಯಕ್ಕೆ ಅಗತ್ಯ ಇರುವ ತತ್ತಿ ಹಾಗು ಮಾಂಸಗಳನ್ನು ಪೂರೈಸುತ್ತವೆ. ದಾಳಿಂಬರ, ಪಪ್ಪಾಯಿ, ಮಾವು ಮುಂತಾದ ಹಣ್ಣುಗಳನ್ನಲ್ಲದೇ 20 ಎಕರೆ ಭೂಮಿಯಲ್ಲಿ ಗೋಧಿ, ಬೇಳೆಕಾಳು, ಶೇಂಗಾ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಶಾಕಾಹಾರಿ ಹಾಗು ಮಾಂಸಾಹಾರಿ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ವ್ಯವಸ್ಥೆ ಇದೆ.

ಆಟಕ್ಕಾಗಿ ವಿಶಾಲವಾದ ಮೈದಾನ, ಕುದುರೆ ಸವಾರಿ, ಈಜುಗೊಳ, ಸುಸಜ್ಜಿತ ವ್ಯಾಯಾಮ ಶಾಲೆ, ರೈಫಲ್ ತರಬೇತಿ, ಮನರಂಜನೆಗಾಗಿ ಸಿನಿಮಾ ಕೋಣೆ ಮುಂತಾದ ಸೌಲಭ್ಯಗಳು ಇಲ್ಲಿವೆ.

ಪಠ್ಯಕ್ರಮ

ಎಲ್ಲ ವಿದ್ಯಾರ್ಥಿಗಳೂ ಇಂಗ್ಲಿಷ್ ಮಾಧ್ಯಮದಲ್ಲಿ ಪಾಠಗಳನ್ನು ಕಲಿಯುವರು. ತ್ರಿಭಾಷಾ ಸೂತ್ರವನ್ನು ಇಲ್ಲಿ ಅಂಗೀಕರಿಸಲಾಗಿದೆ. ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜ್ಯುಕೇಶನ್ (CBSE) ನಿಯಮದಂತೆ ಪಠ್ಯಕ್ರಮವನ್ನು ಅಳವಡಿಸಲಾಗಿದೆ.

ವಿದ್ಯಾರ್ಥಿಗಳೆಲ್ಲರೂ ನ್ಯಾಶನಲ್ ಕೆಡೆಟ್ ಕಾರ್ಪ್ಸ್ (NCC) ಕಿರಿಯ ವಿಭಾಗದ ಸದಸ್ಯರಾಗಿರುತ್ತಾರೆ. ಹಿರಿಯ ವಿದ್ಯಾರ್ಥಿಗಳು ವಿಶೇಷ ಬೇಸಿಗೆಯ ಶಿಬಿರಗಳಲ್ಲಿ ಭಾಗವಹಿಸಿ ಬಂಡೆ ಏರುವುದು, ಸಾಹಸ ಕಾರ್ಯಗಳಲ್ಲಿ ಮುನ್ನುಗ್ಗುವುದು, ಮುಖಂಡತ್ವದ ಗುಣಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಮುಂತಾದವುಗಳನ್ನು ಕಲಿಯುತ್ತಾರೆ.

ಪ್ರತಿ ವರ್ಷ ಶೇಕಡಾ 98-99ರಷ್ಟು ವಿದ್ಯಾರ್ಥಿಗಳು ಪಾಸಾಗುತ್ತಾರೆ. ಅವರಲ್ಲಿ ಎಷ್ಟು ಜನ ನ್ಯಾಶನಲ್ ಡಿಫೆನ್ಸ್ ಅಕಾಡೆಮಿ (NDA)ಗೆ ಆಯ್ಕೆಯಾಗುತ್ತಾರೆ ಎಂಬುದು ಮಹತ್ವದ್ದು. 1996-97ರಲ್ಲಿ 14 ಜನ ಬಿಜಾಪುರ ಸೈನಿಕ ಶಾಲೆಯಿಂದ ಎನ್.ಡಿ.ಎ.ಗೆ ಆಯ್ಕೆಯಾಗಿದ್ದಾರೆ. ಈ ಶಾಲೆಯ ಯು.ವಿ.ತಲ್ಲೂರ ಎಂಬ ವಿದ್ಯಾರ್ಥಿ NDA ಪ್ರವೇಶ ಪರೀಕ್ಷೆಯಲ್ಲಿ ಇಡೀ ದೇಶಕ್ಕೆ ಪ್ರಥಮ ರ್‍ಯಾಂಕ್ ಪಡೆದಿರುವುದು ಒಂದು ಹೆಮ್ಮೆಯ ಸಂಗತಿ. ■

ಸಂಸ್ಕೃತ ಶಿಕ್ಷಣ

ಸಂಸ್ಕೃತ ಭಾರತಿ ಸಂಸ್ಥೆಯು ಅಂಚೆ ಮೂಲಕ ಸಂಸ್ಕೃತ ಶಿಕ್ಷಣ ಕೊಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಕಳೆದ 15 ವರ್ಷಗಳಿಂದ 45 ಸಾವಿರಕ್ಕೂ ಹೆಚ್ಚು ಜನರು ಈ ಯೋಜನೆಯಡಿ ಸಂಸ್ಕೃತ ಕಲಿತಿದ್ದಾರೆ. ಎರಡು ವರ್ಷಗಳ ಅಭ್ಯಾಸದ ಅವಧಿಯುಳ್ಳ ಈ ಯೋಜನೆಯಲ್ಲಿ ಪ್ರವೇಶ, ಪರಿಚಯ, ಶಿಕ್ಷಾ ಮತ್ತು ಕೋವಿದ ಎಂಬ ನಾಲ್ಕು ಹಂತಗಳಿವೆ. ಶಿಕ್ಷಣ ಮಾಧ್ಯಮವು ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಇರುತ್ತದೆ.

ಪ್ರತಿ ಆರು ತಿಂಗಳಿಗೊಮ್ಮೆ ಹೊಸ ತಂಡಕ್ಕೆ ಪ್ರವೇಶಾವಕಾಶ. ಪರೀಕ್ಷೆಗೆ ವಯೋಮಿತಿ ಕನಿಷ್ಠ 16 ವರ್ಷ. ಆಸಕ್ತರು ಅರ್ಜಿಗಳನ್ನು ಅ. 10ರ ಒಳಗೆ ಸಂಸ್ಕೃತ ಭಾರತಿ, ಅಂಚೆ ಮೂಲಕ ಸಂಸ್ಕೃತ, 8ನೇ ಅಡ್ಡರಸ್ತೆ, 2ನೇ ಹಂತ, ಗಿರಿನಗರ, ಬೆಂಗಳೂರು-85 (ದೂರವಾಣಿ - 6721052) ಇಲ್ಲಿಗೆ ಕಳಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಹಾಗೂ ಪ್ರವೇಶ ಪತ್ರಕ್ಕಾಗಿ ಸ್ವವಿಳಾಸ ಇರುವ ರೂ.3 ಕವರ್ ನೊಂದಿಗೆ ಮೇಲಿನ ವಿಳಾಸ ಸಂಪರ್ಕಿಸಬಹುದು.

■ ಡಾ. ಎಸ್.ಸಿ. ಶರ್ಮಾ



ಮಾರ್ಗದರ್ಶಿ

ಪ್ರಾಧ್ಯಾಪಕರು,
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - 59.

ಕೆ.ಎಸ್. ಶೈಲೇಶಚಂದ್ರ, ಮದಲಾಪುರ

ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ತೃತೀಯ ಬಿ.ಕಾಂ. ಓದುತ್ತಿರುವೆನು. ನನಗೆ ಪ್ರಥಮ ಮತ್ತು ತೃತೀಯ ಬಿ.ಕಾಂ.ನಲ್ಲಿ ಶೇ.45 ರಷ್ಟು ಅಂಕಗಳು ಬಂದಿವೆ. ನನಗೆ MBA ಅಥವಾ MCA ಮಾಡಬೇಕೆಂಬ ಆಸೆ ಇದೆ. ನಾನು ತೃತೀಯ ಬಿ.ಕಾಂ ನಲ್ಲಿ ತೆಗೆದ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೊ ಅಥವಾ ಮೂರು ವರ್ಷದ ಪದವಿಯನ್ನು ಗಣನೆಗೆ ತೆಗೆದುಕೊಳ್ಳುತ್ತಾರೊ ತಿಳಿಸಿ. ಅಂಚೆ ತೆರಪಿನ ಶಿಕ್ಷಣದ ಮೂಲಕ LLB ಮಾಡಿದರೆ ವಕೀಲಿ ವೃತ್ತಿ ಮಾಡಬಹುದೇ ತಿಳಿಸಿ.

MCA or MBA ಗೆ ಸಾಮಾನ್ಯವಾಗಿ ಮೂರು ವರ್ಷಗಳ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಅಂಚೆ ತೆರಪಿನ ಮೂಲಕ LLB ಮಾಡಿದರೆ ವಕೀಲಿ ವೃತ್ತಿಯನ್ನು ಮಾಡಬಹುದು.

ಇ. ಅಜಗರ ಅಲಿ ಗಂಗಾವತಿ

ನಾನು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಚೆನ್ನಾಗಿ ಕ್ರಿಕೆಟ್ ವೀಕ್ಷಕ ವಿವರಣೆಯನ್ನು ಹೇಳುತ್ತೇನೆ. ಇನ್ನು ಹೆಚ್ಚಿನ ತರಬೇತಿಯನ್ನು ಪಡೆಯಲು ಯೋಗ್ಯವಾದ ತರಬೇತಿ ಕೇಂದ್ರಗಳು ಕರ್ನಾಟಕ ಹಾಗೂ ಬೇರೆ ರಾಜ್ಯಗಳಲ್ಲಿ ಇದ್ದರೆ ತಿಳಿಸಿ.

ಕ್ರಿಕೆಟ್ ಆಟದ ವಿವರಣೆಯನ್ನು ಹೇಳುವವರನ್ನು ತರಬೇತಿಗೊಳಿಸಲು ಯಾವುದೇ ತರಬೇತಿ ಶಾಲೆಗಳು ಇರುವುದಿಲ್ಲ. ಈ ಆಟಗಳಲ್ಲಿ ಅನುಭವ ಪಡೆದವರನ್ನು, ಅಂಪೈರ್‌ಗಳನ್ನು ಕ್ರಿಕೆಟ್ ಆಟದ ವಿವರಣೆಯನ್ನು ಕೊಡಲು ನೇಮಿಸಿಕೊಳ್ಳುತ್ತಾರೆ.

ಬಾದಾಮಿ, ಹೆಸರಿಲ್ಲ

ನಾನು ಪಿ.ಯು.ಸಿ. ಕಾಮರ್ಸ್ ಮುಗಿಸಿದ್ದೇನೆ. ಅಲ್ಲದೆ ನಾನು ಈಗ ಸೇವೆಯಲ್ಲಿದ್ದೇನೆ. ಈಗ ಬಿ.ಎ. ಪದವಿ ಪಡೆಯಬೇಕೆಂದಿದ್ದೇನೆ. ಇದು ಸಾಧ್ಯವೇ? ಯಾವ ವಿಶ್ವವಿದ್ಯಾಲಯದಿಂದ ಮಾಡಬಹುದು ತಿಳಿಸಿ. ಹಾಗೆಯೇ ಸರಳವಾದ ವಿಷಯಗಳಾವುವು ತಿಳಿಸಿ.

ನೀವು ವಯಸ್ಸಿನ ಆಧಾರದ ಮೇಲೆ, ಹಿಂದಿನ ಯಾವುದೇ ವಿದ್ಯಾರ್ಹತೆ ಇಲ್ಲದೆ ಬಿ.ಎ. ಮಾಡಬಹುದು. ಆದರೆ ಒಮ್ಮೆಲೇ ಅಂತಿಮ ಬಿ.ಎ. ಪರೀಕ್ಷೆ ಮಾತ್ರ ಬರೆಯಲು ಬರುವುದಿಲ್ಲ. ನೀವು 3 ವರ್ಷಗಳ ಪರೀಕ್ಷೆಯನ್ನು ಬರೆಯಬೇಕು. ಇದಕ್ಕೆ ಈ ವಿಳಾಸ ಸಂಪರ್ಕಿಸಿ. ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈ ನಗರ -608 002.

ರಾಘವೇಂದ್ರ ಡಿ. ಸಂಗನಗೌಡ, ಮನಿಹಾಳ

ನಾನು J.O.D.C. (Electrical Appliances) ದಲ್ಲಿ II year ಪಾಸಾಗಿದ್ದು, ಈಗ ಅಪ್ರೆಂಟಿಸ್ ಮಾಡಬೇಕೆಂದಿರುವೆ. ಅದಕ್ಕಾಗಿ ಯಾರನ್ನು ಸಂಪರ್ಕಿಸಬೇಕು ತಿಳಿಸಿ. ಅಪ್ರೆಂಟಿಸ್ ಮಾಡಿದರ ಸರ್ಕಾರದಿಂದ ಮಾನ್ಯತೆ ಸಿಗಬಹುದೆ ತಿಳಿಸಿ.

ನೀವು ಅಪ್ರೆಂಟಿಸ್‌ನ್ನು ಮಾಡಬಹುದು. ಇದರ ಸಂಬಂಧ ಈ ವಿಳಾಸವನ್ನು ಸಂಪರ್ಕಿಸಿ.

ಡೈರೆಕ್ಟರ್, ತಾಂತ್ರಿಕ ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಕೆ. ಆರ್.ಸರ್ಕಲ್ ಹತ್ತಿರ, ಬೆಂಗಳೂರು. ಸರ್ಕಾರದಿಂದ ಕೊಡುವ ಈ ಅಪ್ರೆಂಟಿಸ್ ಮಾನ್ಯತೆ ಪಡೆದಿರುತ್ತದೆ.

ವಾಣಿ, ಬೆಳ್ತಂಗಡಿ

ನನ್ನ ವಯಸ್ಸು 20 ವರ್ಷ. ನಾನು 8ನೇ ತರಗತಿಯಲ್ಲಿ ಅನುತ್ತೀರ್ಣಳಾಗಿ ವಿದ್ಯಾಭ್ಯಾಸವನ್ನು ನಿಲ್ಲಿಸಿರುತ್ತೇನೆ. ನನಗೆ II P.U.C. ಮಾಡಬೇಕೆಂಬ ಆಸೆ ಇದೆ. ಮನೆಯಲ್ಲೇ ಕುಳಿತು PUC ಮಾಡಲು ಸಾಧ್ಯವೇ? ಹಾಗೂ ಸುಲಭವಾಗಿ ಪಾಸಾಗಲು ಯಾವ ವಿಷಯಗಳನ್ನು ಆಯ್ಕೆಮಾಡಿಕೊಳ್ಳಬೇಕು ತಿಳಿಸಿ.

ನಿಮಗೆ 20 ವರ್ಷವಾಗಿರುವುದರಿಂದ ನೀವು ಖಾಸಗಿಯಾಗಿ ದ್ವಿತೀಯ ಪಿ.ಯು.ಸಿ. ಪರೀಕ್ಷೆ ಬರೆಯಬಹುದು. ನಿಮಗೆ ಯಾವುದರಲ್ಲಿ ಆಸಕ್ತಿಯಿದೆಯೋ ಆ ವಿಷಯಗಳನ್ನೇ ತೆಗೆದುಕೊಳ್ಳಿ.

ಮಹೇಶ ಜೀನಗಾರ, ಬಳ್ಳಾರಿ

ನಾನು ಮೂರು ವರ್ಷದ ಡಿಪ್ಲೊಮೊ ಮೆಕ್ಯಾನಿಕಲ್ ಕೋರ್ಸ್ ಮುಗಿಸಿದ್ದೇನೆ. ಮುಂದೆ ಯಾವುದಾದರೂ ಫ್ಯಾಕ್ಟರಿಯಲ್ಲಿ ಸೇರಬೇಕೇ? ಇಲ್ಲವೇ ಬಿ.ಇ. ಮಾಡಬೇಕೇ, AMIE ಮಾಡಬೇಕೇ? ಕಡಿಮೆ ಖರ್ಚಿನಲ್ಲಿ ಯಾವುದು ಸಾಧ್ಯ ತಿಳಿಸಿ.

ನೀವು ಡಿಪ್ಲೊಮೊ ನಂತರ ಫ್ಯಾಕ್ಟರಿಗೆ ಸೇರುವುದು, ನಿಮ್ಮ ಆರ್ಥಿಕ ಸ್ಥಿತಿ ಮತ್ತು ಮುಂದೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇಲ್ಲದಿರುವುದನ್ನು ಅವಲಂಬಿಸಿರುತ್ತದೆ. ವಿದ್ಯಾಭ್ಯಾಸದಲ್ಲಿ ಆಸಕ್ತಿ ಇದ್ದಲ್ಲಿ ಬಿ.ಇ. ಮಾಡಬಹುದು. ಇದು 4 ವರ್ಷವಾಗುತ್ತದೆ. AMIE ಆದರೆ 2 ವರ್ಷವಾಗುತ್ತದೆ ಮತ್ತು ಇದಕ್ಕೆ ಖರ್ಚು ಸಹ ಕಡಿಮೆಯಾಗುತ್ತದೆ.

ರಾಘವೇಂದ್ರ, ಪಾರಂಪಳ್ಳಿ

ನಾನು ಈಗ ತೃತೀಯ ಬಿ.ಕಾಂ.ನಲ್ಲಿ ಓದುತ್ತಿದ್ದೇನೆ. ಪದವಿ ಮುಗಿಸಿ ಸಿ.ಎ. ಕೋರ್ಸ್ ಮಾಡಬೇಕೆಂಬ ಆಸೆ ಇದೆ. ಇದಕ್ಕೆ ಸೇರಲು ಪದವಿಯಲ್ಲಿ ಎಷ್ಟು ಅಂಕಗಳು ಬಂದಿರಬೇಕು ಮತ್ತು ಎಲ್ಲಿ ಮಾಡಿದರೆ ಉತ್ತಮ ತಿಳಿಸಿ. (ಉಡುಪಿ ಜಿಲ್ಲೆಗೆ ಸಮೀಪ)

ನೀವು ಸಿ.ಎ. ಮಾಡಬೇಕಾದಲ್ಲಿ ಪದವಿಯಲ್ಲಿ ಶೇ.50 ರಷ್ಟು ಅಂಕಗಳನ್ನು ಪಡೆದಿರಬೇಕು. ಹೆಚ್ಚಿನ ವಿವರಗಳಿಗೆ ಈ ವಿಳಾಸ ಸಂಪರ್ಕಿಸಿ. ದಿ. ಜಾಯಿಂಟ್ ಡೈರಕ್ಟರ್ ಆಫ್ ಸ್ಟಡೀಸ್, ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ನಂ. 122, ವಂಗಂ ಬಕ್ಕಂ ಹೈರೋಡ್, ಪೋಸ್ಟ್ ಬಾಕ್ಸ್ ನಂ. 3314, ಚೆನ್ನೈ- 600 034.

ವೀರಭದ್ರ ಶಾಸ್ತ್ರಿ, ಬಳ್ಳಾರಿ

ನಾನು ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇ.41 ರಷ್ಟು ಅಂಕ ಪಡೆದು ಪಾಸಾಗಿದ್ದೇನೆ. ನನಗೆ ಮುಂದೆ ಫಿಸಿಯೋಥೆರಪಿ ಮಾಡಬೇಕೆಂಬ ಆಸೆ ಇದೆ. PCB ಯಲ್ಲಿ (41.1%) ಹಾಗೂ PCM ನಲ್ಲಿ (46%) ರಷ್ಟು ಅಂಕಗಳು ಬಂದಿವೆ. ಇದಕ್ಕೆ ಎಷ್ಟು ಅಂಕಗಳು ಬಂದಿರಬೇಕು ಹಾಗೂ ಕರ್ನಾಟಕದಲ್ಲಿ ಈ ಕೋರ್ಸ್ ಎಲ್ಲಿದೆ? ಡೊನೇಷನ್ ಕಟ್ಟಬೇಕೇ. ದಯವಿಟ್ಟು ತಿಳಿಸಿ.

ಫಿಸಿಯೋಥೆರಪಿ ಕೋರ್ಸ್ ಸಾಮಾನ್ಯವಾಗಿ ಮೆಡಿಕಲ್ ಕಾಲೇಜ್‌ನಲ್ಲಿ, ಫಾರ್ಮಸಿ ಕಾಲೇಜುಗಳಲ್ಲಿ ಲಭ್ಯವಿರುತ್ತದೆ. ಅನೇಕ ಖಾಸಗಿ ಕಾಲೇಜುಗಳಲ್ಲಿಯೂ ಲಭ್ಯವಿರುತ್ತದೆ. ಸರ್ಕಾರಿ ಕಾಲೇಜುಗಳಲ್ಲಿ ಸೀಟ್ ಸಿಗಬೇಕಾದರೆ ಹೆಚ್ಚು ಅಂಕಗಳಿಸಿರಬೇಕು. ಡೊನೇಷನ್ ಮೊತ್ತ ಶಿಕ್ಷಣ ಸಂಸ್ಥೆಗಳನ್ನು ಅವಲಂಬಿಸಿರುತ್ತದೆ.

ರಾಜು ಟಿ. ಸಂಪಗಾಂವ, ಹೂಲಿಕಟ್ಟೆ

ನಾನು ಬಿ.ಕಾಂ ನಲ್ಲಿ ಮೊದಲನೆ ದರ್ಜೆಯಲ್ಲಿ ಪಾಸಾಗಿದ್ದು, ನನಗೆ ಬಿ.ಎಡ್. ಮಾಡಬೇಕೆಂಬ ಆಸೆ ಇದೆ. ಇದನ್ನು ಮಾಡಲು ಅವಕಾಶವಿದೆಯೇ ಹಾಗು ಬಿ.ಕಾಂ. ಮೇಲೆ ಎಂ.ಎ. ಮಾಡಲು ಅವಕಾಶವಿದೆಯೇ ತಿಳಿಸಿ.

ನೀವು ನಿಸ್ಸಂದೇಹವಾಗಿ ಬಿ.ಎಡ್ ಅನ್ನು ಅಂಚೆ ತೆರಪಿನ ಶಿಕ್ಷಣದ ಮೂಲಕ ಮಾಡಬಹುದು. ನೀವು ಎಂ.ಎ. ಮಾಡಬೇಕಿದ್ದಲ್ಲಿ ಹಿಂದಿನ ಯಾವುದೇ ವಿದ್ಯಾರ್ಹತೆ ಇಲ್ಲದೆ ವಯಸ್ಸಿನ ಆಧಾರದ ಮೇಲೆ ಮಾಡಬಹುದು. ನಿಮಗೆ 25 ವರ್ಷವಾಗಿದ್ದರೆ ನೀವು ಎಂ.ಎ. ಮಾಡಬಹುದು.

ಸಿ.ಆರ್. ಧನಂಜಯ, ಹಾಸನ

ನನಗೆ ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಆಸೆ ಇದೆ. ನನಗೆ ದೊಡ್ಡ ಪುಸ್ತಕ, ಕತೆ, ಕಾದಂಬರಿ, ಕವನ ಸಂಕಲನ ಇವುಗಳನ್ನು ಬರೆಯಬೇಕೆಂಬ ಆಸೆ ಇದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮಾರ್ಗದರ್ಶನ ನೀಡಿ.

ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ತಮ್ಮ ಆಸೆ ಅಥವಾ ಗುರಿ ಹೊಂದಿರುವುದು ತುಂಬಾ ಸಂತೋಷ. ನೀವು ಕತೆ, ಕಾದಂಬರಿ, ಕವನ ಸಂಕಲನಗಳನ್ನು ಬರೆಯಬೇಕಾದರೆ, ಸಾಹಿತ್ಯದ ಬಗ್ಗೆ ಸಾಕಷ್ಟು ಜ್ಞಾನ ಹೊಂದಿರಬೇಕು. ಕನ್ನಡದ ಹೆಸರಾಂತ ಸಾಹಿತಿಗಳ ಕೃತಿಗಳನ್ನು ಓದಿರಬೇಕು. ಉತ್ತಮವಾದ ಬರಿವಣಿಗೆಯನ್ನು ಹೊಂದಿರಬೇಕು. ಕನ್ನಡ ಸಾಹಿತ್ಯ ಪದಗಳ ಸಾರ್ವಭೌಮತ್ವ ಹೊಂದಿರಬೇಕು. ಸಾಹಿತಿಗಳ ಸಂಪರ್ಕ, ವಿಚಾರ ಸಂಕಿರಣ, ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಹೆಚ್ಚಿನ ಜ್ಞಾನಾರ್ಜನೆ ಹೊಂದುವುದರಿಂದ ಉತ್ತಮ ಸಾಹಿತ್ಯ ಕೃತಿಗಳನ್ನು ರಚಿಸಲು ಸಾಧ್ಯವಾಗುತ್ತದೆ.

ಬಿ.ಎಚ್. ರುದ್ರಾಂಬಿಕ, ಚಳ್ಳಕೆರೆ

ನಾನು ದ್ವಿತೀಯ ವರ್ಷದ J.O.C. Lab Technician ನಲ್ಲಿ ಶೇ.80 ರಷ್ಟು ಅಂಕಗಳನ್ನು ಗಳಿಸಿದ್ದೇನೆ. ನಾನು ಮುಂದೆ B.A.M.S.ಗೆ ಸೇರಬೇಕೆಂದಿದ್ದೇನೆ. ಆದ್ದರಿಂದ B.A.M.S. ಗೆ ನಮಗೆ ಅರ್ಹತೆ ಇದೆಯೇ ಇಲ್ಲವೋ ಎಂಬುದನ್ನು ತಾವುಗಳು ನನಗೆ ತಿಳಿಸಬೇಕೆಂದು ಮನವಿ. ಹಾಗೆಯೇ ಹಿಂದಿ ಬಿ.ಎ. ಮಾಡಿದ್ದೇನೆ. ಅದರ ಆಧಾರದ ಮೇಲೆ ಕೆ.ಎ.ಎಸ್ ಪರೀಕ್ಷೆಯನ್ನು ತೆಗೆದುಕೊಳ್ಳಬಹುದೆ ತಿಳಿಸಿ.

JOC Lab Technician ಕೋರ್ಸ್ ಮಾಡಿದವರಿಗೆ BAMS ಕೋರ್ಸ್ ಮಾಡಲು ಅವಕಾಶವಿರುವುದಿಲ್ಲ. BAMS ಮಾಡಲು ಪಿ.ಯು.ಸಿಯಲ್ಲಿ PCMB ಓದಿರಬೇಕು.

ಹಿಂದಿ ಬಿ.ಎ. ಆಧಾರದ ಮೇಲೆ ಕೆ.ಎ.ಎಸ್. ಪರೀಕ್ಷೆ ತೆಗೆದುಕೊಳ್ಳಬಹುದು.

ರಾಜು, ನಂಜನಗೂಡು

ನಾನು ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಪರೀಕ್ಷೆ ಬರೆದಿದ್ದೆ. ಒಟ್ಟು 300 ಅಂಕಗಳಿಗೆ 180 ಅಂಕಗಳು ಬಂದಿವೆ. ಸಂದರ್ಶನ ಪತ್ರ ಕಳುಹಿಸುವ ಸಂದರ್ಭದಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಕೃಪಾಂಕಗಳನ್ನು ಸೇರಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಹಾಗಾದರೆ ನನಗೆ ಎಷ್ಟು ಅಂಕಗಳು ಸೇರ್ಪಡೆಯಾಗಬಹುದು ತಿಳಿಸಿ.

ಗ್ರಾಮೀಣ ಅಭ್ಯರ್ಥಿಗಳಿಗೆ 10 ಕೃಪಾಂಕಗಳನ್ನು ಸೇರಿಸಲಾಗುತ್ತದೆ. ಹೆಚ್ಚಿನ ಮಾಹಿತಿಯನ್ನು KPSCಯಿಂದಲೇ ಪಡೆಯಬಹುದು.

ಮಂಜುನಾಥ ಟಿ, ಹಗರಿಬೊಮ್ಮನಹಳ್ಳಿ

ನಾನು ಎಸ್ ಎಸ್ ಎಲ್ ಸಿ ಮುಗಿದ ತಕ್ಷಣ Diploma in Electronics ಮುಗಿಸಿದ್ದೇನೆ. ಈಗ ನನಗೆ 21 ವರ್ಷ ವಯಸ್ಸಾಗಿದೆ. ನಾನು ಯಾವುದಾದರೂ ಡಿಗ್ರಿ (ಬಿ.ಎ. ಅಥವಾ ಬಿ.ಕಾಂ.)ನ್ನು ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ನೇರವಾಗಿ ಮಾಡಬಹುದೇ ತಿಳಿಸಿ. ಬಿ.ಎ. ಅಂತಿಮ ವರ್ಷದ ಪರೀಕ್ಷೆಯನ್ನು ನೇರವಾಗಿ ತೆಗೆದುಕೊಳ್ಳಬಹುದೆ? ಆ ರೀತಿ ಪರೀಕ್ಷೆ ನಡೆಸುವ ವಿಶ್ವವಿದ್ಯಾಲಯವನ್ನು ತಿಳಿಸಿ.

ನಿಮಗೆ ಈಗ 21 ವರ್ಷವಾಗಿರುವುದರಿಂದ ವಯಸ್ಸಿನ ಆಧಾರದ ಮೇಲೆ ಯಾವುದೇ ಪದವಿ ಪಡೆಯಬಹುದು. ನೇರವಾಗಿ ಅಂತಿಮ ಬಿ.ಎ. ಪರೀಕ್ಷೆ ಬರೆಯಲು ಸಾಧ್ಯವಿಲ್ಲ. ಮೊದಲ ಎರಡು ವರ್ಷಗಳ ಪರೀಕ್ಷೆ ನಂತರವೇ ಅಂತಿಮ ಬಿ.ಎ. ಪರೀಕ್ಷೆ ಬರೆಯಲು ಸಾಧ್ಯ. ಹೆಚ್ಚಿನ ವಿವರಗಳಿಗೆ ಈ ವಿಳಾಸ ಸಂಪರ್ಕಿಸಿ.

IGNOU Regional Centre, No.293, 39th Cross, VIII Block, Jayanagar, Bangalore -560 082.

ಎಸ್.ಕೊಟ್ರೇಶ, ಜಿ. ಕೋಡಿಹಳ್ಳಿ

ನಾನು 9 ನೇ ತರಗತಿಯಲ್ಲಿ ಡ್ರಾಯಿಂಗ್ ಗ್ರೇಡ್ (ಹೈಯರ್/ಲೋಯರ್)ಎರಡನ್ನು ಬರೆದಿದ್ದೇನೆ. ಇದರಿಂದ ನನಗೆ ಏನು ಉಪಯೋಗವಾಗುತ್ತದೆ ತಿಳಿಸಿರಿ.

ಡ್ರಾಯಿಂಗ್ ಹೈಯರ್/ಲೋಯರ್ ಗ್ರೇಡನ್ನು ಪಾಸ್ ಮಾಡಿರುವುದರಿಂದ ಡಿಪ್ಲೊಮೊ ಇನ್ ಆರ್ಟ್ ಮುಂತಾದ ಕೋರ್ಸ್‌ಗಳಲ್ಲಿ ಉಪಯೋಗವಾಗುತ್ತದೆ.

ರಮೇಶ್ ಕುಮಾರ್

ನಾನು ಪಿ.ಯು.ಸಿ. ಪ್ರಥಮ ವರ್ಷದಲ್ಲಿ ಪ್ರಥಮ ವರ್ಗದಲ್ಲಿ ಪಾಸಾಗಿದ್ದೇನೆ. (ಶಿಕ್ಷಣ ಶಾಸ್ತ್ರ) ಈಗ ನಾನು ಪಿಯುಸಿ. II yearನಲ್ಲಿ ರ್‍ಯಾಂಕ್ ಗಳಿಸಬೇಕೆಂಬ ಆಸೆ. ಅದಕ್ಕಾಗಿ ನಾನು ಯಾವ ರೀತಿ ಓದಬೇಕು ಹಾಗೂ ರ್‍ಯಾಂಕ್ ಗಳಿಸುವ ಪುಸ್ತಕಗಳಿದ್ದರೆ ತಿಳಿಸಿ.

ನೀವು ದ್ವಿತೀಯ ಪಿಯುಸಿಯಲ್ಲಿ ರ್‍ಯಾಂಕ್ ಗಳಿಸಬೇಕೆಂದರೆ ಕಷ್ಟಪಟ್ಟು ಓದಿ. ಇದಕ್ಕಾಗಿ ಯಾವುದೇ ಪುಸ್ತಕಗಳಿಲ್ಲ.

ಪಿ.ಸಿ. ಅನೂಪಕುಮಾರ್, ಬೆಂಗಳೂರು

ನಾನು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 53% ಅಂಕಗಳನ್ನು ಪಡೆದು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದೇನೆ. ಮೆಕ್ಯಾನಿಕಲ್ ಅಥವಾ ಎಲೆಕ್ಟ್ರಾನಿಕ್ಸ್ ಮಾಡಬೇಕೆಂಬ ಆಸೆ ಇತ್ತು. ಆದರೆ ವಿಜ್ಞಾನ ಮತ್ತು ಗಣಿತದಲ್ಲಿ ಕಡಿಮೆ ಅಂಕಗಳು ಬಂದಿರುವ ಕಾರಣ ಅದು ಲಭ್ಯವಾಗಲಿಲ್ಲ. ಈಗ ನಾನು ಮುಂದೆ ಏನು ಮಾಡಲಿ ತಿಳಿಸಿ.

ನೀವು ಎಸ್ ಎಸ್ ಎಲ್ ಸಿ ಮಾಡಿರುವುದರಿಂದ ವಿಜ್ಞಾನದಲ್ಲಿ ಪಿಯುಸಿ ಓದಿ ಒಳ್ಳೆಯ ಅಂಕ ಪಡೆದು ಸಾಮಾನ್ಯ ಪ್ರವೇಶ ಪರೀಕ್ಷೆ ಬರೆದು ನಿಮ್ಮ ಇಚ್ಛೆಯ ಮೆಕ್ಯಾನಿಕಲ್ ಅಥವಾ ಎಲೆಕ್ಟ್ರಾನಿಕ್ಸ್‌ನಲ್ಲಿ ಇಂಜಿನಿಯರಿಂಗ್ ಪದವಿ ಪಡೆಯಬಹುದು.

ಮಾರ್ಗದರ್ಶಿ ವಿಭಾಗದ ನಿಮ್ಮ ಪತ್ರಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ:
ವಿಳಾಸ:
ಬಿಸಿಲ ಬದುಕು ಮಾಸಪತ್ರಿಕೆ,
ಮಾರ್ಗದರ್ಶಿ ವಿಭಾಗ, ಅಂಚೆ ಪೆಟ್ಟಿಗೆ 7951
ಬಸವೇಶ್ವರನಗರ, ಬೆಂಗಳೂರು - 560 079

ಅಗ್ರಮಾನ್ಯ ಪಬ್ಲಿಕ್ ಸ್ಕೂಲೆಂದು ಖ್ಯಾತವಾದ ಸೊಂಡೂರಿನ ವಸತಿ ಶಾಲೆ

ಡಾ. ಮೃತ್ಯುಂಜಯ ಹೊರಕೇರಿ

ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರ ಸ್ಥಳವಾದ ಸೊಂಡೂರು ಹಲವಾರು ವಿಶಿಷ್ಟತೆಗಳನ್ನು ಒಳಗೊಂಡಿದೆ. ಮಹಾತ್ಮಾಗಾಂಧಿಯವರಿಂದ ಪ್ರಶಂಸೆಗೊಳಗಾದ ಈ ಊರಿನಲ್ಲಿ ಪುರಾಣ ಪ್ರಸಿದ್ಧ ಕುಮಾರಸ್ವಾಮಿ ನೆಲೆನಿಂತಿದ್ದಾನೆ. ಜಗತ್ಪ್ರಸಿದ್ಧ ಕಬ್ಬಿಣದ ಅದಿರು ಇಲ್ಲಿ ಅಪಾರವಾಗಿ ಲಭ್ಯವಿದೆ. ಹಸಿರು ತಾಣಗಳ - ಕಣಿವೆಗಳ ಮಧ್ಯದಲ್ಲಿರುವ ಈ ಊರು ಸಣ್ಣ ಕಾಶ್ಮೀರವೆಂಬಂತಿದೆ. ಸೊಂಡೂರಿನಲ್ಲಿ ಕೆ. ಜಿ. ಯಿಂದ ಪಿ.ಜಿ. ಯವರಿಗೆ (ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರ ಶಿಕ್ಷಣ) ಅಧ್ಯಯನಕ್ಕೆ ಅವಕಾಶವಿದೆ. ಇಲ್ಲಿ ಎಸ್. ಆರ್. ಎಸ್. ಎಂದೇ ಖ್ಯಾತಿ ಪಡೆದಿರುವ ಸೊಂಡೂರು ರೆಸಿಡೆನ್ಸಿಯಲ್ ಸ್ಕೂಲ್ ದೇಶದ 60 ಪಬ್ಲಿಕ್ ಸ್ಕೂಲ್‌ಗಳಲ್ಲಿ ಅಗ್ರಮಾನ್ಯವಾದುದಾಗಿದೆ.

ಎಸ್. ಆರ್. ಎಸ್.

1959ರಲ್ಲಿ ಮೂವರು ವಿದ್ಯಾರ್ಥಿಗಳು, ಮೂವರು ಶಿಕ್ಷಕರು, ಮೂರು ಕ್ಲಾಸ್ ರೂಮುಗಳಿಂದ ಪ್ರಾರಂಭವಾದ ಸೊಂಡೂರು ರೆಸಿಡೆನ್ಸಿಯಲ್ ಸ್ಕೂಲ್ ನಾಲ್ಕು ದಶಕಗಳಲ್ಲಿ ಬೃಹತ್ತಾಗಿ ಬೆಳೆದು ಸೊಂಡೂರು ರೆಸಿಡೆನ್ಸಿಯಲ್ ಕಾಂಪೋಜಿಟ್ ಜ್ಯೂನಿಯರ್ ಕಾಲೇಜಾಗಿದೆ. ಬೋರ್ಡರ್ಸ್ ಮತ್ತು ಡೇ ಸ್ಕಾಲರ್ಸ್ ಸೇರಿ ಸಾವಿರದಷ್ಟು ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ಶಿಕ್ಷಕ- ಶಿಕ್ಷಕೇತರ ಸಿಬ್ಬಂದಿ ಸಂಖ್ಯೆ ನೂರಕ್ಕೂ ಮಿಗಿಲಾಗಿದೆ. ಇಪ್ಪತ್ತು ಎಕರೆಗಳ ವಿಸ್ತಾರದಲ್ಲಿ ಡಾರ್ಮಿಟರಿಗಳು, ಉಪನ್ಯಾಸ ಮಂದಿರಗಳು, ಪ್ರಯೋಗ ಶಾಲೆಗಳು, ಭೋಜನ ಶಾಲೆ, ಬಯಲು ರಂಗಮಂದಿರ, ಗ್ರಂಥಾಲಯ, ಕ್ರೀಡಾಂಗಣಗಳನ್ನು ಒಳಗೊಂಡ ಶಿವಪುರ ಅರಮನೆಗೆ ಹೊಂದಿಕೊಂಡಿರುವ ಎಸ್.ಆರ್. ಎಸ್.ಶಾಲೆಯಲ್ಲಿ ಕರ್ನಾಟಕವಲ್ಲದೆ ವಿವಿಧ ರಾಜ್ಯಗಳ ಪಾಲಕರು ತಮ್ಮ ಮಕ್ಕಳನ್ನು ಓದಲು ಬಿಟ್ಟಿದ್ದಾರೆ. ಹೀಗಾಗಿ ಇದೊಂದು ಪುಟ್ಟ ಭಾರತವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಪಠ್ಯ

ಇಲ್ಲಿ ಒಂದನೆಯ ತರಗತಿಯಿಂದ ಆರಂಭಿಸಿ ಪಿಯುಸಿವರೆಗೆ ಓದಲು ಅವಕಾಶವಿದೆ. ಇಂಗ್ಲಿಷ್ ಮಾಧ್ಯಮದಲ್ಲಿ ಸಿಬಿಎಸ್‌ಈ ಸಿಲೆಬಸ್ ಪ್ರಕಾರ ಪಠ್ಯವನ್ನು ಅಳವಡಿಸಲಾಗಿದೆ. ಇಂಗ್ಲಿಷ್ ಜೊತೆಗೆ ಹಿಂದಿ, ಕನ್ನಡ, ತೆಲುಗು, ತಮಿಳು ಇವುಗಳಲ್ಲಿ ಬೇಕಾದ ಎರಡನ್ನು ಆಯ್ಕೆ ಮಾಡಿಕೊಂಡು ತ್ರಿಭಾಷಾ ಸೂತ್ರದನ್ವಯ ಓದುವ ಅವಕಾಶವಿದೆ. ಒಬ್ಬ ವಿದ್ಯಾರ್ಥಿ ಒಂದಕ್ಕಿಂತಲೂ ಹೆಚ್ಚು ಭಾಷೆಗಳನ್ನು ಕಲಿಯಬೇಕೆಂಬುದು ಪಬ್ಲಿಕ್ ಸ್ಕೂಲುಗಳ ಕ್ರಮವಾಗಿದೆ. ಓದಿನ ಬಗೆಗೆ ಹೆಚ್ಚು ಒತ್ತಡವಿಲ್ಲ. ವಿದ್ಯಾರ್ಥಿಯ ಮಾನಸಿಕ ವಿಕಾಸಕ್ಕೆ ಆದ್ಯತೆ ಕೊಡಲಾಗುತ್ತಿದೆ. ಮೊದಲೇ ಸಿದ್ಧಪಡಿಸಿದ ಟೀಚರ್ಸ್ ಹ್ಯಾಂಡ್ ಬುಕ್ ಪ್ರಕಾರ ಪಠ್ಯಕ್ರಮ ನಡೆಯುತ್ತದೆ.

ಕರಕುಶಲ ಕಲೆ

ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳಿಗೆ ಕೈಕೆಲಸಗಳನ್ನು ಕಲಿಸಿಕೊಡಲಾಗುತ್ತಿದೆ. ಚಿತ್ರಕಲೆ, ಸಂಗೀತ, ನೃತ್ಯಕಲೆಗಳೊಂದಿಗೆ ಬಡಿಗತನ, ಬಾಟಿಕ್, ಗೊಂಬೆ ತಯಾರಿಕೆ, ಕುಂಬಾರಿಕೆ, ಸಾಬೂನು ತಯಾರಿಕೆ, ಉಲನ್ ಹೆಣಿಕೆ ಹೀಗೆ ಆ ಮಗು ಇಚ್ಛಿಸಿದ ಕೈಕೆಲಸಗಳನ್ನು ಕಲಿಸಿಕೊಡಲಾಗುವುದಲ್ಲದೇ ವಿದ್ಯಾರ್ಥಿ ಜೀವನದ ನಂತರ ಸ್ವಾವಲಂಬಿ ಜೀವನಕ್ಕೆ ಅಡಿಪಾಯ ಹಾಕಿಕೊಡುವುದು ಇದೆಲ್ಲದರ ಉದ್ದೇಶವಾಗಿದೆ. ಇದರೊಂದಿಗೆ ಒಂದನೆಯ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ.

ಶಿಸ್ತು-ಸೇವೆ

ಮಕ್ಕಳ ಶಿಸ್ತಿನ ಜೀವನಕ್ಕೆ ಎನ್. ಸಿ. ಸಿ. ಯನ್ನು, ಸಮಾಜ ಸೇವಾ ಮನೋಭಾವ ಬೆಳೆಸಲು ಎನ್.ಎಸ್.ಎಸ್. ಘಟಕವನ್ನೂ, ಸಾಹಸ ಹಾಗೂ ಪ್ರಾಮಾಣಿಕ ಜೀವನ ನಡೆಸಲು ಅನುವಾಗುವಂತೆ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣವನ್ನು ಕೊಡಲಾಗುತ್ತದೆ.

ಸಾಂಸ್ಕೃತಿಕ-ವೈಜ್ಞಾನಿಕ

ಪ್ರತಿವರುಷ ಇಂಗ್ಲಿಷ್-ಕನ್ನಡ-ಹಿಂದಿ ಯಾವುದಾದರೊಂದು ಭಾಷೆಯ ನಾಟಕವನ್ನು ಶಾಲಾ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳಿಂದ ಪ್ರದರ್ಶಿಸುವ ಉತ್ತಮ ರೂಢಿಯಿದೆ. ದೆಹಲಿಯಲ್ಲೂ ನಾಟಕ ಪ್ರದರ್ಶಿಸಿ ಬಂದ ಕೀರ್ತಿ ಈ ಶಾಲೆಗಿದೆ. ಹಾಗೆಯೆ ನೀನಾಸಂ ತಂಡಗಳನ್ನು ಆಮಂತ್ರಿಸಿ ನಾಟಕ ಪ್ರದರ್ಶನ ಏರ್ಪಡಿಸಲಾಗುತ್ತಿದೆ. ನೃತ್ಯ, ಹಾಡು, ಸಂಗೀತ ಇದ್ದೇ ಇದೆ. ಆಗಾಗ ಶಾಲೆಯಲ್ಲಿ ವಿದ್ಯಾರ್ಥಿಗಳು ವೈಜ್ಞಾನಿಕ ಪ್ರದರ್ಶನ ನೀಡಿ ಪಾಲಕರ ಗಮನ ಸೆಳೆದಿದ್ದಾರೆ.

ಕ್ರೀಡಾಂಗಣ-ಗ್ರಂಥಾಲಯ

ಮೂರು ವಿಶಾಲವಾದ ಕ್ರೀಡಾಂಗಣಗಳಿವೆ. ನುರಿತ ದೈಹಿಕ ಶಿಕ್ಷಣ ನೀಡುವ ಶಿಕ್ಷಕರಿದ್ದಾರೆ. ಬೆಳಗಿನ ಜಾವದಲ್ಲಿ ಕ್ರೀಡಾಂಗಣದಲ್ಲಿ ಎಲ್ಲಿ ನೋಡಿದರಲ್ಲಿ ವಿದ್ಯಾರ್ಥಿಗಳ ಆಟ-ವ್ಯಾಯಾಮ-ಕಸರತ್ತುಗಳು ಕಂಡು ಬರುತ್ತವೆ. ಸ್ಪರ್ಧೆಗಳನ್ನು ಸಹ ಏರ್ಪಡಿಸಲಾಗುತ್ತಿದೆ. ಆ ಮೂಲಕ ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲಾಗುತ್ತಿದೆ. ಜವಾಹರಲಾಲ್ ನೆಹರೂ ಹೆಸರಿನಲ್ಲಿ ಮುಕ್ತ ಗ್ರಂಥಾಲಯವಿದೆ. ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ಎಂದು ಅದನ್ನು ವಿಭಜಿಸಲಾಗಿದೆ. ಸಾಕಷ್ಟು ಪುಸ್ತಕಗಳ ಸಂಗ್ರಹವಿದೆ. ವಿದ್ಯಾರ್ಥಿ ತನಗೆ ಬೇಕಾದ ಪುಸ್ತಕವನ್ನು ತಾನೇ ಆಯ್ದುಕೊಂಡು ಓದಬಹುದು. ಇಲ್ಲವೇ ಗ್ರಂಥಪಾಲಕರ ಸಹಾಯ ಪಡೆಯಬಹುದಾಗಿದೆ.

ಊಟ-ವಸತಿ

ವಿದ್ಯಾರ್ಥಿಗಳ ವಸತಿಗಾಗಿ ಹತ್ತು

ಡಾರ್ಮಿಟರಿಗಳಿದ್ದು ಪ್ರತಿಯೊಂದಕ್ಕೂ ದೇಶದ ಗಣ್ಯರ ಹೆಸರಿಡಲಾಗಿದೆ. ಪ್ರತಿ ಡಾರ್ಮಿಟರಿಗೆ ಒಬ್ಬರು ಹೌಸ್ ಮಾಸ್ಟರ್ ಇರುತ್ತಾರೆ. ಅವರು ಪ್ರತ್ಯೇಕವಾಗಿ ಡಾರ್ಮಿಟರಿಗೆ ಅಂಟಿಕೊಂಡ ಅವರದೇ ಆದ ಮನೆಯಲ್ಲಿರುತ್ತಾರೆ. ಪ್ರತಿ ವಿದ್ಯಾರ್ಥಿಯ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ಅವರದಾಗಿರುತ್ತದೆ. ವಿಶಾಲವಾದ ಭೋಜನಶಾಲೆಯಿದೆ. ಸಾಮೂಹಿಕ ಭೋಜನ ಕ್ರಮವಿದೆ. ಜಾತಿ-ವರ್ಗ-ಭಾಷೆ ಯಾವ ಗೊಂದಲಗಳಿಗೂ ಅವಕಾಶವಿಲ್ಲ. ರಾಷ್ಟ್ರೀಯ ಭಾವೈಕ್ಯ ಮೂಡಿಸಲಾಗುತ್ತಿದೆ. ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಮಾಂಸಾಹಾರಿಗಳಿಗೂ ಊಟದ ವ್ಯವಸ್ಥೆಯಿದೆ. ವಿದ್ಯಾರ್ಥಿಗಳಿಗೆ ಯಾವ ಕೊರತೆ ಬಾರದಂತೆ ಅವರ ಆಹಾರ- ಆರೋಗ್ಯಗಳ ಕಡೆಗೆ ಹೆಚ್ಚು ಗಮನ ನೀಡಲಾಗುತ್ತಿದೆ.

ಪ್ರವಾಸ-ಪರದೇಶ

ವಿದ್ಯಾರ್ಥಿಗಳನ್ನು ಪಿಕ್‌ನಿಕ್‌ಗಳಿಗೆ ಕರೆದುಕೊಂಡು ಹೋಗುತ್ತಾರೆ. ಹಾಗೆಯೇ ದಕ್ಷಿಣ ಭಾರತ ಹಾಗೂ ಉತ್ತರ ಭಾರತ ಪ್ರವಾಸವನ್ನು ಪ್ರತಿ ವರುಷ ಏರ್ಪಡಿಸುತ್ತಾರೆ. ಕಲೆ-ಸಂಸ್ಕೃತಿ-ಸ್ಥಳ-ಕಾರ್ಖಾನೆಗಳ ಪರಿಚಯ ಮಾಡಿಸಿಕೊಡುವ ಶೈಕ್ಷಣಿಕ ಪ್ರವಾಸ ಅದಾಗಿರುತ್ತದೆ. ಈ ಶಾಲೆಯ ಇನ್ನೊಂದು ವಿಶೇಷವೆಂದರೆ ಪರರಾಷ್ಟ್ರದೊಂದಿಗೆ ಸಾಂಸ್ಕೃತಿಕ ಸಂಬಂಧ. ಇಂಗ್ಲೆಂಡಿನ ಪ್ರಿನ್ಸ್ ವಿಲಿಯಂ ಸ್ಕೂಲ್ ಹಾಗೂ ಸೊಂಡೂರಿನ ಎಸ್.ಆರ್.ಎಸ್. ಪರಸ್ಪರ ಸಂಪರ್ಕವನ್ನಿಟ್ಟುಕೊಂಡಿವೆ. ಒಂದು ವರ್ಷ ಇಂಗ್ಲೆಂಡ್ ಶಾಲೆ ಮಕ್ಕಳು ಸೊಂಡೂರಿಗೆ ಬಂದು ಒಂದು ತಿಂಗಳವರೆಗೆ ಅತಿಥಿಗಳಾಗಿ ಉಳಿಯುವರು. ಇನ್ನೊಂದು ವರ್ಷ ಸೊಂಡೂರಿನ ತಂಡ ಇಂಗ್ಲೆಂಡಿಗೆ ಹೋಗುವುದು. 1995 ಹಾಗೂ 1997ರಲ್ಲಿ ಸೊಂಡೂರು ತಂಡ ಇಂಗ್ಲೆಂಡಿಗೆ ಹೋಗಿ ಬಂದಿದ್ದು ಮತ್ತೆ 1999ರಲ್ಲಿ ಹೋಗುವ ತಯಾರಿ ನಡೆಸಿದೆ. ಈ ವರ್ಷ ಇಂಗ್ಲೆಂಡ್ ತಂಡ ಸೊಂಡೂರಿಗೆ ಬರಲಿದೆ.

ಶಾಲೆಯ ರುವಾರಿ


ಗುಣಮಟ್ಟದ ಶಿಕ್ಷಣ ನೀಡಬೇಕು, ರಾಷ್ಟ್ರಕ್ಕೆ ಉಪಯೋಗವಾಗುವಂಥ ಸನ್ನಡತೆಯ ನಾಗರಿಕರನ್ನು ತಯಾರಿ ಮಾಡಬೇಕು ಎನ್ನುವ ದೂರದೃಷ್ಟಿಯ ಉದ್ದೇಶವನ್ನಿಟ್ಟುಕೊಂಡು ಈ ಸಂಸ್ಥೆಯನ್ನು ಸ್ಥಾಪಿಸಿದವರು ಸೊಂಡೂರಿನ ರಾಜಮನೆತನದ ಎಂ.ವೈ.ಘೋರ್ಪಡೆಯವರು. ರಾಜಕಾರಣಿ, ಆರ್ಥಿಕತಜ್ಞ, ಉದ್ದಿಮೆದಾರ,



ಬರಹಗಾರ, ಗ್ರಾಮೀಣಾಭಿವೃದ್ಧಿಯ ಹರಿಕಾರ, ಅಂತಾರಾಷ್ಟ್ರೀಯ ಮಟ್ಟದ ಛಾಯಾಗ್ರಾಹಕರೆಂದು ಖ್ಯಾತರಾದ ಮುತ್ಸದ್ದಿ ಘೋರ್ಪಡೆಯವರು ಈ ಸಂಸ್ಥೆಯನ್ನು ತಮ್ಮ ಕಣ್ಣಂಚಿನಲ್ಲಿಟ್ಟುಕೊಂಡು ಬೆಳೆಸಿಕೊಂಡು ಬಂದಿದ್ದಾರೆ.

ಮಹಾಲಕ್ಷ್ಮಿ ಅಕ್ಕ

ಆರಂಭದಲ್ಲಿ ಮುಖ್ಯೋಪಾಧ್ಯಾಯಿನಿಯರಾಗಿ ಈ ಶಾಲೆಯ ಜವಾಬ್ದಾರಿ ಹೊತ್ತ ಮಹಾಲಕ್ಷ್ಮೀಯವರು ಸತತ ಮೂರು ದಶಕಗಳವರೆಗೆ ಅವಿರತ ಸೇವೆ ಸಲ್ಲಿಸಿ ಪ್ರಿನ್ಸಿಪಾಲ



ರಾಗಿ ನಿವೃತ್ತರಾಗಿದ್ದರೂ ಶಾಲೆಯ ಆಡಳಿತಾಧಿಕಾರಿಗಳಾಗಿ ಈಗಲೂ ಸೇವೆ ಸಲ್ಲಿಸುತ್ತಿದ್ದಾರೆ. ಇವರನ್ನು ಶಾಲಾವಲಯದಲ್ಲಿ ಪ್ರೀತಿ - ಗೌರವದಿಂದ ಅಕ್ಕಾ ಎಂದೇ ಕರೆಯುತ್ತಾರೆ. ಅಖಿಲ ಭಾರತ ಪಬ್ಲಿಕ್ ಸ್ಕೂಲ್ ಪರಿಷತ್ತಿನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇಂಗ್ಲಿಷ್ ಶಿಕ್ಷಕಿಯಾಗಿರುವ ಅವರು ಕಸೂತಿ ಕಲೆಯಲ್ಲಿ ಆಸಕ್ತರು. ಆ ಮೂಲಕ ಗ್ರಾಮೀಣ ಮಹಿಳೆಯರಿಗೂ ತರಬೇತಿ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಪ್ರಿ: ಎಸ್. ಜೆ. ನಾಯ್ಕ



ಸದ್ಯದ ಪ್ರಿನ್ಸಿಪಾಲರಾಗಿರುವ ಎಸ್.ಜೆ. ನಾಯ್ಕ ಅವರು ಇತಿಹಾಸ ಹಾಗೂ ರಾಜ್ಯಶಾಸ್ತ್ರ ಶಿಕ್ಷಕರಾಗಿದ್ದು ಕಳೆದ 22 ವರ್ಷಗಳಿಂದ ಈ ಶಾಲೆಯಲ್ಲಿ ಸೇವೆ ಸಲ್ಲಿಸುತ್ತ ಬಂದವರಾಗಿದ್ದಾರೆ. ಮಹಾಲಕ್ಷ್ಮಿಯವರ ಮಾರ್ಗದರ್ಶನದಲ್ಲಿ ಅವರ ನಿವೃತ್ತಿಯ ನಂತರ 1991 ರಿಂದ ಶಾಲೆಯ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ನೇತೃತ್ವದಲ್ಲಿ ಶಾಲೆ ಉತ್ತಮವಾಗಿ ಮುನ್ನಡೆದಿದೆ. ■

ಅಂಚೆ ಶಿಕ್ಷಣ ಕೋರ್ಸ್ ನೋಂದಣಿಗೆ ಕಾಲಾವಕಾಶ

ಬೆಂಗಳೂರು ವಿಶ್ವ ವಿದ್ಯಾಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಮೂಲಕ ನಡೆಯುವ ಹಲವಾರು ಕೋರ್ಸ್‌ಗಳಿಗೆ ಹೆಸರು ನೋಂದಾಯಿಸಲು ಅಕ್ಟೋಬರ್ 23 ರವರೆಗೆ ಕಾಲಾವಕಾಶ ನೀಡಲಾಗಿದೆ.

ಆದರೆ, ಈಗಾಗಲೇ ಅರ್ಜಿ ವಿತರಿಸಿರುವ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ನೋಂದಣಿ ಕಾರ್ಯಕ್ರಮ ಈ ಮೊದಲು ಪ್ರಕಟಿಸಿದ ರೀತಿಯಲ್ಲಿ ಸೆಪ್ಟಂಬರ್ 21 ರಿಂದಲೇ ಪ್ರಾರಂಭವಾಗುತ್ತದೆ.

ಅಂಚೆ ಮತ್ತು ತೆರಪಿನ ಶಿಕ್ಷಣ, ಮುಕ್ತ ವಿಶ್ವ ವಿದ್ಯಾಲಯದ ವ್ಯಾಪ್ತಿಯಲ್ಲಿ ಇರುವ ಕೋರ್ಸ್‌ಗಳ ಬಗ್ಗೆ ಹೆಚ್ಚಿನ ಮಾಹಿತಿ ಬಯಸುವ ವಿದ್ಯಾರ್ಥಿಗಳು ಸೆಂಟ್ರಲ್ ಕಾಲೇಜು ಕ್ಯಾಂಪಸ್‌ನಲ್ಲಿ ಇರುವ ಅಂಚೆ ಮತ್ತು ತೆರಪಿನ ಶಿಕ್ಷಣದ ನಿರ್ದೇಶನಾಲಯ ಸಂಪರ್ಕಿಸುವಂತೆ ತಿಳಿಸಲಾಗಿದೆ.

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-9

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

THE INTERCHANGE OF THE DEGREE OF COMPARISON

(ವಿಶೇಷಣಗಳ -ತರ, ತಮಗಳಲ್ಲಿ ಬದಲಾವಣೆ)

ಜಾನ್ : ವಿಶೇಷಣಗಳ -ತರ,ತಮ, ರೂಪಾಂತರಗಳನ್ನು ಕಲಿತಿದ್ದೇವೆ. ನೆನಪಿದೆಯಾ?

ಜಾನಕಿ : ಹೇಳ್ತೀನ ಕೇಳು. **i) Positive Degree-** ಇಲ್ಲಿ ವಿಶೇಷಣದ ಮೂಲರೂಪ. **ii) Comparative Degree-** ಇಲ್ಲಿ ಸ್ವಲ್ಪ ಮಟ್ಟಿಗೆ (-ತರ) ಒಳ್ಳೇದು ಅಥವಾ ಕೆಟ್ಟದ್ದು ಮತ್ತು **iii) Superlative Degree-** ಎಲ್ಲಕ್ಕಿಂತ ಹೆಚ್ಚು (-ತಮ) ಶ್ರೇಷ್ಠ ಅಥವಾ ಕನಿಷ್ಠ - ಈ ರೀತಿಯದು ಹೌದಲ್ಲೊ?

ಜಾನ್ : ಕರೆಕ್ಟ್, ಇನ್ನು ಒಂದು ಮಾತು ಏನಂದರೆ ವಿಶೇಷಣಗಳನ್ನು **Positive** ದಿಂದ **Comparative** ಅಥವಾ **Superlative Degree**ಗೆ ಬದಲಾವಣೆ ಮಾಡುವ ನಿಯಮಗಳನ್ನು ಮರೆತಿಲ್ಲ ಹೌದಲ್ಲೊ?

ಜಾನಕಿ : i)-er, est ii)-r, st iii)ಶಬ್ದದ ಕೊನೆಯ ಅಕ್ಷರ ವ್ಯಂಜನವಿದ್ದು ಹಿಂದೆ ಸ್ವರವಿದ್ದಲ್ಲಿ ವ್ಯಂಜನ Double ಆಗಿ ಅದಕ್ಕೆ -er, est ಹಚ್ಚಬೇಕು ಅಂದರ **-Hot, Hotter, Hottest** iv)ಪದಗಳು ಎರಡಿದ್ದರೆ -more, most ಜೋಡಿಸುವುದು. ಉದಾ ; **useful, more useful, most useful** v) ಶಬ್ದದ ಅಂತ್ಯದಲ್ಲಿ -y ಇದ್ದು ಹಿಂದೆ ವ್ಯಂಜನವಿದ್ದಲ್ಲಿ -y ಲೋಪವಾಗಿ -ier, -iest suffix ಮಾಡುವುದು. ಉದಾ. **Easy, Easier, Easiest.**

ಜಾನ್ : Very good. ವಿಶೇಷಣಗಳನ್ನು ವಾಕ್ಯದಲ್ಲಿ ಉಪಯೋಗಿಸುವುದನ್ನು ಮತ್ತು ವಾಕ್ಯಗಳನ್ನು ಒಂದು Degree ಯಿಂದ ಮತ್ತೊಂದಕ್ಕೆ ಬದಲಾವಣೆ ಮಾಡುವುದನ್ನು ಕಲಿಯುವಾ. ಒಂದು ಮಾತನ್ನು ಸ್ಮರಣೆಯಲ್ಲಿಡಬೇಕು. ವಾಕ್ಯ ಬದಲಾಯಿಸುವಾಗ ಅಂದ ಹಾಗೆ **ಅರ್ಥ** ಬದಲಾಯಿಸಬಾರದು.

ಜಾನಕಿ : ಇದು ಸರಿ ನೋಡು, ಯಾಕೆಂದರೆ ಅರ್ಥ ಬದಲಾದರೆ ವಾಕ್ಯ ಬೇರೆ ಆದ ಹಾಗೆ.....!

ಜಾನ್ : ಹೌದು. ಇಲ್ಲೊಂದು ಅಪವಾದ. ಕೆಲವು ಶಬ್ದಗಳು Comparative Degree ಯಲ್ಲಿ ಇರುವ ಹಾಗಿದ್ದರೂ ಅವುಗಳ ಮುಂದೆ than ಉಪಯೋಗಿಸಬಾರದು, 'to' ಉಪಯೋಗಿಸಬೇಕು. ಉದಾ: **Superior to, Senior to, Junior to, Inferior to, Prior to** ಇತ್ಯಾದಿ.

ಜಾನಕಿ : ಇದರ ಜೊತೆ ಉದಾಹರಣೆ ಹೇಳಿದರೆ ಬಹಳ ಚೆನ್ನಾಗಿರುವುದು.

ಜಾನ್ : ಉದಾಹರಣೆ :

Rama was senior to Laxman.

The quality of this soap is superior to the quality of imported soap.

ಜಾನಕಿ : ವಾಕ್ಯದಲ್ಲಿ -ತರ, ತಮ ಉಪಯೋಗಿಸಿ ಬದಲಾವಣೆ ಮಾಡುವುದನ್ನು ಕಲಿಸ್ತಿಯಾ!

ಜಾನ್ : ಅವಸರಾ ಬೇಡಾ ಅಂತ ಹೇಳಿಲ್ಲ? ಮೇಲೆ ಹೇಳಿದಂತಹ ಶಬ್ದಗಳು ಏಳು ಇರುತ್ತವೆ. **i) Inferior 2) Superior 3) Prior 4) Senior 5) Junior 6) Anterior 7) Posterior.** ಇವು -ತರ ಭಾವನೆ ಹೊಂದಿದ್ದು ಇಲ್ಲಿ 'to' ಜೋಡಿಸುವುದು. ಮತ್ತು ಇನ್ನೂ ಐದು ಪದಗಳಿವೆ. **i) Interior ii) Exterior iii) Ulterior iv) Major v) Minor.** ಇವು -ತರ ಭಾವನೆ ಕಳೆದುಕೊಂಡಿದ್ದು ಇವುಗಳನ್ನು Positive ದಲ್ಲಿಯೇ ಮಾತ್ರ ಉಪಯೋಗಿಸುವುದು.

ಜಾನಕಿ : ಅಂದ್ರ, ಈ ಐದು ಪದಗಳನ್ನು **Comparative Degree** ಮತ್ತು **Superlative Degree**ಗೆ ಬದಲಾಯಿಸುವಂತಿಲ್ಲ. ಉದಾಹರಣೆ ಹೇಳ್ತೀನೆ. i) The **exterior** wall is rough and **interior** part is fine. ii) It is of **minor** importance

ಜಾನ್ : ಈ ರೀತಿ ತಿಳಿದುಕೊಂಡು ಅಭ್ಯಾಸ ಮಾಡುವುದು major importance. ಇನ್ನೊಂದು ಮಾತು ಹೇಳ್ತೀನೆ ನೆನಪಿಡ್ತಿಯಾ. ಇರಲಿ ಬಿಡು. ತಾನೇ ನೆನಪು ಉಳಿಯುತ್ತದೆ. ಅದನ್ನು ಕೇಳಿದರೆ ಹೆಣ್ಣುಮಕ್ಕಳು ಬೆಚ್ಚಿ ಬೀಳ್ತಾರೆ.

ಜಾನಕಿ : ಏನಪ್ಪಾ, ಅಂತಹದು, ನಮ್ಮ ಉದಾಹರಣೆ ಬೇಕೇನು?

ಜಾನ್ : ಇದು ಗಂಡ ಹೆಂಡಿರ ಸಂಬಂಧ. ಹೊಸದಾಗಿ ಮದುವೆ ಆದಾಗ ಒಬ್ಬರೊಬ್ಬರಲ್ಲಿ ಪ್ರೀತಿ ಅಧಿಕ. ಅದನ್ನು ಪತ್ರದಲ್ಲಿ ಮೂಡಿಸಿದರೆ, ಅರ್ಥಕ್ಕೆ ಅಪಾರ್ಥ ಆಗುತ್ತದೆ. ಇಂಗ್ಲಿಷ್ ಸರಿಯಾಗಿ ಗೊತ್ತಿಲ್ಲದಿದ್ದರೆ ಹಾಗೆ ಆಗುವುದು.

ಜಾನಕಿ : ವಿವರಣೆ ಸಾಕು. ಅದೇನು ಹೇಳು.

ಜಾನ್ : ಒಂದಕ್ಕಿಂತ ಹೆಚ್ಚು ವಸ್ತುಗಳು, ಪ್ರಾಣಿ, ವಿಚಾರ ಮುಂತಾದವು ಗಳಿದ್ದರೆ ಅವುಗಳನ್ನು ಹೋಲಿಸಿ ಹೇಳ್ತೀವೆ. ಹಾಗೇ ಪತ್ರ ಬರೆಯಬೇಕಾದರೆ **My dearest wife** ಅಂತಾ ಆಗಲಿ, **My dearest husband** ಅಂತಾ ಬರೆದರೆ...

ಜಾನಕಿ : ನಾನು ಬಹಳ ಪ್ರೀತಿ ಮಾಡ್ತೇನೆ ಅಂತಾ, ಗಂಡ/ಹೆಂಡತಿ....

ಜಾನ್ : ಅದನ್ನೇ ನಾನು ಹೇಳ್ತಾ ಇರೋದು ತಪ್ಪು ಅಂತಾ..... ದಶರಥ ಮಹಾರಾಜನಿಗೆ ಮೂವರು ಹೆಂಡಂದಿರು. ಆತ **My dearest Kaikey** ಅಂತ ಹೇಳಿದರೆ, ಉಳಿದಿಬ್ಬರಿಗಿಂತಲೂ ಹೆಚ್ಚು ಪ್ರೀತಿಸುತ್ತಿದ್ದ ಅಂತ ಅರ್ಥ. ಒಬ್ಬಳೇ ಹೆಂಡ್ತಿ ಇದ್ದಾಗ, ಅವಳನ್ನು ಯಾರಕ್ಕಿಂತ ಹೆಚ್ಚಿಗೆ ಪ್ರೀತಿಸಲಿಕ್ಕೆ ಸಾಧ್ಯ? ಅಂದರೆ ಅಲ್ಲಿ ಕೇವಲ **Positive Degree** ಉಪಯೋಗಿಸಬೇಕು.

ಜಾನಕಿ : ಹೌದಲ್ಲೊ? ಎಷ್ಟು ಸರಳ ಇದೆ. ಆದರ ಅಷ್ಟೇ ಅಪಾಯಕಾರಿನೂ ಆಗ್ತದೆ. **My dear husband/My dear wife** ಹೀಗೆ ಇಷ್ಟೇ ಸಾಕಲ್ಲ!

ಜಾನ್ : Correct. ಇನ್ನೊಂದು ವಿಷಯ. ಕೇವಲ ಎರಡು ಸಂಗತಿ, ಪ್ರಾಣಿ, ವಿಷಯ, ವಸ್ತು, ವಿಚಾರ ಇದ್ದಲ್ಲಿ **Superlative Degree** ಉಪಯೋಗಿಸಬಾರದು.

ಜಾನಕಿ : ಅಂದ್ರೆ, ಅವುಗಳನ್ನು **Positive/Comparative Degree**-ಯಲ್ಲಿ ಹೇಳಬೇಕು. ಅಂತೀಯಾ.....?

ಜಾನ್ : ಉದಾ. **The pen is mightier than sword.**
Rama is taller than his wife.

ಜಾನಕಿ : ಇನ್ನು, ಮುಂದುವರಿಯೋಣ....

ಜಾನ್ : ಆಗಲಿ.
1) **Positive Degree** - Very few Indian towns are **as big as** Bombay.
2) **Comparative Degree** - Bombay is **bigger than** most of the Indian towns.
3) **Superlative Degree**- Bombay is one of the biggest of Indian towns

ಜಾನಕಿ : ನಾನು ಮೇಲಿನಿಂದ ಕೆಳಗೆ.... ಹೇಳ್ತೇನೆ.....
Superlative Degree-Kalidas was the best poet in India.
Comparative Degree -Kalidas was better than any other poet in India.
Positive Degree - No other poet in India was so good as Kalidas.

ಜಾನ್ : Nice, certainly you are wiser than any other student in the class. ಇದನ್ನು Positive-Superlative Degree ಗೆ ಬದಲಾಯಿಸು. ಅರ್ಥ ಬದಲಾಗಬಾರದು.

ಜಾನಕಿ : No other student in the class is so wise as you are. You are the wisest student in the class.

ಜಾನ್ : Really, you are the wisest. ಸಣ್ಣ ಸಣ್ಣ ವಾಕ್ಯಗಳ ಉದಾಹರಣೆ ನೋಡುವಾ.
Positive Degree - I am **as tall as** you **(are)**. ಇದು understood.
Comparative Degree - You are not **taller than** I (am). ಇದು Understood. ಇದನ್ನು Superlative Degree ಯಲ್ಲಿ ಪರಿವರ್ತಿಸು.

ಜಾನಕಿ : ನಿನ್ನ ಜಾಣತನ ಗೊತ್ತಾತು, ಜಾನ್, ಯಾಕಂದರೆ ಎರಡು ಇದ್ದಾಗ Superlative Degree ಯಲ್ಲಿ ಪರಿವರ್ತಿಸಲಿಕ್ಕಾಗದಲ್ಲವೆ? ಇಲ್ಲಿ ಎಷ್ಟು ಜನ ಇರೋದು. I ಮತ್ತು you ಇಬ್ಬರು ಮಾತ್ರವಲ್ಲವೆ?

ಜಾನ್ : Good. ಸರಿ, ಕೇವಲ ಎರಡು ಇರುವಾಗ Positive ಅಥವಾ Comparative Degree ಮಾತ್ರ ಸಾಕು.

ಜಾನಕಿ : ಎರಡಕ್ಕಿಂತ ಹೆಚ್ಚು ಇರುವಾಗ... Superlative Degree ಯಲ್ಲಿ ಸಹ ಹೇಳಬಹುದು. ಅಲ್ಲವೆ?

ಜಾನ್ : ಗೀ... ಗೀ...., ಪದ ಹೇಳಿದ ಹಾಗೆ ಆಯಿತಲ್ಲ! ಈಗ ಕೆಲವು ಉದಾಹರಣೆ ಹೇಳ್ತೇನೆ.
Positive Degree- Simla is not as hot as Bangalore during summer season.
Comparative Degree - During Summer season Bangalore is hotter than Simla.

ಈಗ ರೂಢಿ ಮಾಡಿಕೊಳ್ಳುವುದರಿಂದ ಬೇಗನೆ ಕಲಿಯಬಹುದು. ಐದು ವಾಕ್ಯ ಹೇಳ್ತೇನೆ.

ಕೊನೆಯ ಹನಿ

Change the degree
a) The tiger is the most ferocious of all animals.
b) Lead is heavier than any other metal.
c) A wise enemy is better than a foolish friend.
d) Rama is senior to Laxman.
e) Your tongue is sharper than mine.

ಉತ್ತರಗಳು

ಜಾನಕಿ : **a) Superlative b) Comparative c) Comparative d) Comparative e) Comparative.**

a) i) Comparative Degree - The tiger is more ferocious than all other animals.
ii) Positive Degree - No other animal is so ferocious as the tiger.
b) i) Superlative Degree - Lead is the heaviest of all metals.
ii) Positive Degree - No other metal is as heavy as Lead.
c) Positive Degee - A foolish friend is not as good as wise enemy. ಈ ವಾಕ್ಯವನ್ನು Superlative Degree ಯಲ್ಲಿ ಪರಿವರ್ತಿಸಲಾಗದು.
d) ಇದಕ್ಕೆ **Positive** or **Superlative Degree** ಇರುವುದಿಲ್ಲ.
e) Positive Degree - My tongue is not as sharp as yours tongue. (ಮುಂದಿನ ಸಲ 'ಕ್ರಿಯಾಪದ' Verb ಕುರಿತು)

ಶಬ್ದ ಸಂಪತ್ತು

ಪ್ರತಿ ಶಬ್ದಕ್ಕೆ 4 ಅರ್ಥಕೊಟ್ಟದ್ದು, ಕೊಟ್ಟ ಶಬ್ದದ ಸಮಾನಾರ್ಥಪದ ಹುಡುಕಿರಿ, ನಂತರ ಉತ್ತರ ನೋಡಿ.

a. Lodestar - ಅ. ಮಾರ್ಗಸೂಚಿ ಬ. ಭಾರವಾದ ನಕ್ಷತ್ರ ಕ. ಪಾರದರ್ಶಕ ಡ. ಯಾವುದೂ ಅಲ್ಲ.
b. Lambent - ಅ.ಸೂಕ್ಷ್ಮ ಪ್ರಕಾಶವುಳ್ಳ ಬ. ದೂರವಿರುವ ಕ. ಬಾಗಿದ ಡ. ಕುರಿಮರಿ
c. Homage - ಅ.ಗೌರವ ತೋರಿಸು ಬ. ರಾಷ್ಟ್ರಾಭಿಮಾನ ಕ. ಮನೆಯ ವಯಸ್ಸು ಡ. ನಂಬಿಕೆ.
d. Astute - ಅ.ಸತ್ಯ ಬ.ಮೂರ್ತಿ ಕ. ಆಸೆ ಡ. ಚತುರ
e. Sporadic - ಅ. ಅನಿಯಮಿತ ಬ. ಆಕಸ್ಮಾತ್ ಕ.ತಜ್ಞ ಡ. ಸ್ಪಷ್ಟವಾದ

ಉತ್ತರಗಳು:
a. ಅ b. ಅ c. ಬ d. ಡ e. ಅ

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ

ಸಾಮಾನ್ಯ ಜ್ಞಾನ

1. "IST" ವಿಸ್ತೃತ ರೂಪವೇನು ?
2. ಕಾಂಚನಗಂಗ ಶಿಖರದ ಎತ್ತರವೆಷ್ಟು ?
3. ಟಿಬೆಟ್‌ನ ರಾಜಧಾನಿ ಯಾವುದು ?
4. ಹಿಂದುಗಳಿಗೆ ಪವಿತ್ರವಾದ ಗಂಗಾನದಿಯ ಉಗಮಸ್ಥಳ?
5. ಪುಲಿಕಾಟ್ ಹಾಗೂ ಚಿಲ್ ಸರೋವರಗಳು ಯಾವ ಯಾವ ರಾಜ್ಯಗಳಿಗೆ ಸಂಬಂಧಿಸಿವೆ?
6. ಪೂರ್ವತೀರದ ದಕ್ಷಿಣ ಭಾಗವನ್ನು ಏನೆಂದು ಕರೆಯಲಾಗಿದೆ?
7. ಬ್ರಹ್ಮಪುತ್ರ ನದಿಯ ಉಗಮ ಸ್ಥಳ ?
8. ಮಹಾನದಿ ಜನ್ಮತಳೆಯುವ ಸ್ಥಳ ಯಾವುದು?
9. ನರ್ಮದಾ ನದಿಯ ಉಗಮಸ್ಥಳ ಯಾವುದು?
10. ಭಾರತದ ಪರ್ಯಾಯ ದ್ವೀಪಗಳಲ್ಲೆಲ್ಲಾ ಅತ್ಯಂತ ಉದ್ದವಾದ ನದಿ?
11. ನಿಕೋಬಾರ್ ದ್ವೀಪದಲ್ಲಿರುವ (ದಕ್ಷಿಣ ಭಾಗಕ್ಕೆ) ಭಾರತದ ದಕ್ಷಿಣ ತುದಿಯನ್ನು ಏನೆಂದು ಕರೆಯುತ್ತಾರೆ?
12. 'ಮ್ಯಾಂಗೋಷ ವರ್ಸ್' ಎಂದರೆ?
13. 'ಮಾಸಿಂರಾಮ್'ನಲ್ಲಿ ಬೀಳುವ ವಾರ್ಷಿಕ ಮಳೆಯ ಪ್ರಮಾಣವೆಷ್ಟು?
14. ಭಾರತದಲ್ಲಿ ಸುಮಾರು ಎಷ್ಟು ವರ್ಗದ ಪ್ರಾಣಿಗಳಿವೆ?
15. ಭಾರತದಲ್ಲಿರುವ ರಾಷ್ಟ್ರೀಯ ಉದ್ಯಾನ ವನಗಳ ಸಂಖ್ಯೆ ಎಷ್ಟು ?
16. ಭಾರತದಲ್ಲಿ ಮಾತ್ರ ಕಂಡುಬರುವ ಪ್ರಾಣಿ ಯಾವುದು?
17. 'ಸುಂದರ್‌ಬನ್ಸ್' ಮರಗಳು ಯಾವ ರಾಜ್ಯದಲ್ಲಿ ಕಂಡು ಬರುತ್ತವೆ?
18. 1991ರ ಜನಗಣತಿಯ ಪ್ರಕಾರ ಪ್ರತಿ ಕಿ.ಮಿ. ಜನಸಂಖ್ಯಾ ಸಾಂದ್ರತೆ ಎಷ್ಟು?
19. 1991ರ ಜನಗಣತಿಯ ಪ್ರಕಾರ ಹೆಚ್ಚು ಜನಸಾಂದ್ರತೆಯನ್ನು ಹೊಂದಿದ ರಾಜ್ಯ ಯಾವುದು?
20. ಬತ್ತದ ಉತ್ಪಾದನೆಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?
21. ಬತ್ತದ ಬೆಳೆಗೆ ಬೇಕಾಗುವ ಉಷ್ಣತೆಯ ಪ್ರಮಾಣ?
22. ಕಾಫೀ ಬೆಳೆಯಲು ಬೇಕಾಗುವ ಮಳೆಯ ಪ್ರಮಾಣವೆಷ್ಟು?
23. ಪ್ರಸ್ತುತ ತೈಲ ಶುದ್ಧೀಕರಣ ಕೇಂದ್ರಗಳ ಸಂಖ್ಯೆ ಎಷ್ಟು?
24. ತಾರಾಪುರ ಅಣುಸ್ಥಾವರ ಯಾವ ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟಿದೆ?
25. ತಮಿಳುನಾಡಿನ ಮೊದಲ ವಿದ್ಯುತ್ ಯೋಜನೆ ಯಾವುದು?
26. ಕಾಟನ್ ಪೊಲಿಸ್ ಅಥವಾ ಭಾರತದ ಮ್ಯಾಂಚೆಸ್ಟರ್ ಎಂದು ಯಾವ ನಗರಕ್ಕೆ ಕರೆಯಲಾಗಿದೆ?
27. ಭಾರತದಲ್ಲಿ ಮೊದಲ ಸಲ ಸೆಣಬಿನ ಗಿರಣಿ ಎಲ್ಲಿ ಆರಂಭವಾಯ್ತು?
28. ಕರ್ನಾಟಕದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ?
29. ವೃತ್ತ ಪತ್ರಿಕೆಗಳ ಕಾಗದ ತಯಾರಿಸುವುದು ಎಲ್ಲಿ?
30. ಭದ್ರಾವತಿಯ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆ ನಿರ್ಮಾಣಗೊಂಡಿದ್ದು ಯಾವಾಗ ?
31. "MISCO'ದ ವಿಸ್ತೃತ ರೂಪವೇನು?
32. ಪ್ರಥಮವಾಗಿ ಸಿಮೆಂಟ್ ಕಾರ್ಖಾನೆ ಆರಂಭಗೊಂಡಿದ್ದು ಎಂದು?
33. ಈಶಾನ್ಯ ರೈಲ್ವೆಯ ಆಡಳಿತ ಕೇಂದ್ರವಿರುವ ಸ್ಥಳ ಯಾವುದು?
34. ಭಾರತದ ರೈಲು ವ್ಯವಸ್ಥೆ ಪ್ರಪಂಚದಲ್ಲಿ ಎಷ್ಟನೆಯದು ?
35. ಒಳನಾಡಿನ ಜಲಸಾರಿಗೆ ಪ್ರಾಧಿಕಾರವನ್ನು ಎಂದು ಸ್ಥಾಪಿಸಲಾಯ್ತು?
36. ಭಾರತವು ಪ್ರಮುಖವಾಗಿ ಎಷ್ಟು ಬಂದರುಗಳನ್ನು ಹೊಂದಿದೆ?
37. ISD ಸಂಪರ್ಕ ಸೇವೆ ಎಂದು ಆರಂಭಗೊಂಡಿತು?
38. "Postal Index Number Code' ಎಂಬ ಸಂಕೇತ ಎಂದಿನಿಂದ ಶುರುವಾಯ್ತು?
39. ಜೀತಪದ್ಧತಿಯನ್ನು ನಿರ್ಮೂಲ ಮಾಡುವ ಕಾಯ್ದೆ ಯಾವಾಗ ಆರಂಭಗೊಂಡಿತು?
40. ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಭಾರತ ಸರಕಾರ ಎಂದು ಜಾರಿಗೊಳಿಸಿತು?
41. ಒಂದು ಹೆಕ್ಟೇರಿಗೆ ಎಷ್ಟು ಎಕರೆಗಳು?
42. 'ಗುಡಿಕೈಗಾರಿಕೆ' ಎಂದರೇನು?
43. 'ಭಾರತಕ್ಕಾಗಿ ಯೋಜಿತ ಅರ್ಥವ್ಯವಸ್ಥೆ' ಎಂಬ ಗ್ರಂಥದ ಲೇಖಕರಾರು?
44. ಎಸ್.ಎನ್. ಅಗರ್‌ವಾಲಾರವರು ಎಂದು ಗಾಂಧಿಯೋಜನೆಯನ್ನು ತಯಾರಿಸಿದರು?
45. ಕನ್ನಡದ ಮೊದಲ ಕವಯಿತ್ರಿ ಅಕ್ಕಮಹಾದೇವಿಯನ್ನು ಮದುವೆಯಾದ ರಾಜನಾರು?
46. ''ಆದಿಗ್ರಂಥ''ದ ಕರ್ತೃ ಯಾರು ?
47. 'ಸಮಾಜ ಸಮತ್ ಸಂಘ'ದ ನಿರ್ಮಾಪಕರು ಯಾರು?
48. 1954ರಲ್ಲಿ ''ಭಾರತ ರತ್ನ'' ಪ್ರಶಸ್ತಿ ಪಡೆದ ಭಾರತೀಯ ವಿಜ್ಞಾನಿ ಯಾರು?
49. ಪ್ರಸಿದ್ಧ ತಾಜ್‌ಮಹಲ್ ಯಾವ ನದಿಯ ದಡದ ಮೇಲಿದೆ?
50. 1857ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದದ್ದು ಯಾವ ಸ್ಥಳದಲ್ಲಿ?

ಉತ್ತರಗಳು

1.Indian Standard Time, 2. 8,598 ಮೀಟರ್, 3. ಲ್ಹಾಸಾ, 4. ಗಂಗೋತ್ರಿ, 5. ತಮಿಳುನಾಡು ಮತ್ತು ಓರಿಸ್ಸಾ, 6. ಕೋರಮಂಡಲ ತೀರ, 7. ಚಿಮಯುಂಗ್ ಢಂಗ್, 8. 'ಸಿವಾಹ', 9. ಅಮರ ಕಂಟಕ, 10. ಗೋದಾವರಿ, 11. ಇಂದಿರಾ ಪಾಯಿಂಟ್, 12. ಮಾವು ಫಸಲಿನ ಮಳೆ, 13. 1141 ಸೆಂ.ಮೀ., 14. 75,000, 15. 73, 16. ಸ್ವಾಂಪ್ ಡೀರ್, 17. ಪಶ್ಚಿಮ ಬಂಗಾಳ, 18. 267, 19. ಪಶ್ಚಿಮ ಬಂಗಾಳ, 20. 2ನೇ ಸ್ಥಾನದಲ್ಲಿ, 21. 21^{0} ಸೆಲ್ಸಿಯಸ್, 22. 200 ರಿಂದ 250 ಸೆಂ.ಮೀ., 23. 12, 24. ಮಹಾರಾಷ್ಟ್ರ, 25. ಪೈಕರ್, 26. ಬೊಂಬಾಯಿ, 27. ಕಲ್ಕತ್ತದ ಬಳಿ 'ರಿಶ್ರಾ' ಎಂಬಲ್ಲಿ 28. 25, 29. ಮಧ್ಯಪ್ರದೇಶದ ನೇಫಾ, 30. 1923ರಲ್ಲಿ, 31. ಮೈಸೂರು ಐರನ್ ಅಂಡ್ ಸ್ಟೀಲ್ ಕಂಪನಿ, 32. 1904ರಲ್ಲಿ, 33. ಗೋರಕ್‌ಪುರ, 34. 4ನೇಯದು, 35. 1985ರಲ್ಲಿ, 36. 12., 37. 1973ರಲ್ಲಿ, 38. 1972ರಲ್ಲಿ, 39. 1976ರಲ್ಲಿ, 40. 1975ರಲ್ಲಿ, 41. 2.47, 42. ಗೃಹ ಕೈಗಾರಿಕೆ, 43. ಸರ್.ಎಂ. ವಿಶ್ವೇಶ್ವರಯ್ಯ, 44. 1944ರಲ್ಲಿ, 45. ಕೌಶಿಕ ಮಹಾರಾಜ, 46. ಗುರುನಾನಕ, 47. ಡಾ.ಬಿ. ಆರ್. ಅಂಬೇಡ್ಕರ್, 48. ಸರ್.ಸಿ.ವಿ.ರಾಮನ್, 49. ಯಮುನಾ, 50. ಮೀರತ್,

■ ಶಿ.ಕಾ.ಬಡಿಗೇರ

ಯೇತಿಯನ್ನು ಕಂಡ ಪರ್ವತಾರೋಹಿ

ಭಾಗ - 7

ಸರ್ ಎಡ್ಮಂಡ್ ಹಿಲೇರಿಯ ಹೆಸರು ಎಲ್ಲರಿಗೂ ಚಿರಪರಿಚಿತ. ಎವರೆಸ್ಟ್ ಶಿಖರವನ್ನು ಹತ್ತಿದ ಪ್ರಥಮನೆಂಬ ಖ್ಯಾತಿ ಇವನಿಗಿದೆ. ಆದರೆ ಈತನು ಯೇತಿಗಳ ಬಗ್ಗೆ ನಡೆಸಿದ ಶೋಧನೆ ಕಾರ್ಯದ ಬಗ್ಗೆ ನಿಮಗೇನಾದರೂ ಗೊತ್ತೇ?



ಯೇತಿ ಭೇಟಿ ನೀಡಿದೆಯೆಂದು ಭಾವಿಸಲಾದ ಸ್ಥಳ.



ಯೇತಿಯ ತಲೆಗೂದಲಿನ ಜತೆಗೆ ಎಡ್ಮಂಡ್ ಹಿಲೇರಿ

1975ರಲ್ಲಿ ಪೋಲ್ಯಾಂಡ್‌ನ ಪರ್ವತಾರೋಹಿಯೊಬ್ಬ ತನ್ನ ಹಾಗು ಯೇತಿಯ ಭೇಟಿಯ ಬಗ್ಗೆ ವಿವರ ನೀಡಿದ. Januz Tomaszczuk ಎನ್ನುವವ ಎವರೆಸ್ಟ್ ಶಿಖರ ಹತ್ತುತ್ತಿರುವಾಗ ಆತನ ಮೊಣಕಾಲಿನಲ್ಲಿ ಸೆಳೆತ ಉಂಟಾಗಿ ನೋಯತೊಡಗಿತು. ಅದು ನೀವೆಷ್ಟೇ ಕೂಗಿಕೊಂಡರೂ ಬೊಬ್ಬೆ ಹಾಕಿದರೂ ಯಾರೂ ಇರದ ಪ್ರದೇಶ. ನರಳುತ್ತಾ ಕ್ಯಾಂಪಿಗೆ ಹಿಂತಿರುಗುತ್ತಿದ್ದಾಗ, ಎದುರಿನಿಂದ ಯಾವುದೋ ಒಂದು ಆಕೃತಿ ತನ್ನ ಬಳಿ ಬರುತ್ತಿರುವಂತೆ ತೋರಿತು. ಆತ ಸಹಾಯಕ್ಕಾಗಿ ಕಿರಿಚಿಕೊಂಡ. ಆ ಆಕೃತಿ ಅವನತ್ತ ಧಾವಿಸತೊಡಗಿತು. ಅಲ್ಲಿಂದ ಬರುತ್ತಿರುವುದು ಏನೆಂದು ತೀರಾ ಸ್ಪಷ್ಟವಾಗಿ ತಿಳಿದಾಗ ಈತ ಮೂರ್ಛೆ ಹೋಗುವುದೊಂದು ಬಾಕಿ. ಕಾರಣ ಇವನ ಸಹಾಯಕ್ಕೆ ಬಂದದ್ದು 6 ಅಡಿ ಎತ್ತರದ ದೈತ್ಯ ಜೀವಿ. ವಾನರನನ್ನು ಹೋಲುತ್ತಿದ್ದ ಆ ಜೀವಿಯಿಂದ ಇವನಿಗೇನಾದರೂ ಸಹಾಯ ಹಸ್ತ ದೊರಕಿದ್ದರೆ, ಅವನ ಗತಿ ಏನಾಗುತ್ತಿತ್ತೋ! ಅಂತಹ ದೈತ್ಯ ಜೀವಿಯನ್ನು ಕಂಡು Janusz ಚೀರಿಕೊಂಡಿದ್ದರಿಂದ, ಅದು ಅಲ್ಲಿಂದ ಕಂಬಿ ಕಿತ್ತಿತ್ತು.

ಯೇತಿಯ ಬಗ್ಗೆ ಪುರಾವೆಗಳು

ಸರ್ ಎಡ್ಮಂಡ್ ಹಿಲೇರಿಯ ಹೆಸರು ಎಲ್ಲರಿಗೂ ಚಿರಪರಿಚಿತ. ಎವರೆಸ್ಟ್ ಶಿಖರವನ್ನು ಹತ್ತಿದ ಪ್ರಥಮನೆಂಬ ಖ್ಯಾತಿ ಇವನಿಗಿದೆ. ಆದರೆ ಈತನು ಯೇತಿಗಳ ಬಗ್ಗೆ ನಡೆಸಿದ ಶೋಧನೆ ಕಾರ್ಯದ ಬಗ್ಗೆ ನಿಮಗೇನಾದರೂ ಗೊತ್ತೇ?

1960ರಲ್ಲಿ ಅಮೇರಿಕದ World book Encyclopedia ಯೇತಿಗಳ ಇರುವಿಕೆಯನ್ನು ಪತ್ತೆ ಹಚ್ಚಲು ಸರ್ ಎಡ್ಮಂಡ್ ಹಿಲೇರಿ ಹಾಗೂ ಡೆಸ್ಮಂಡ್ ದೋಯಿಗ್ (Desmond Doig)

■ ನಾರಾಯಣ ಎಂ. ಭಟ್

ಅವರ ಮುಂದಾಳತ್ವದಲ್ಲಿ ಒಂದು ಅನ್ವೇಷಣೆ ತಂಡವನ್ನು ಹಿಮಾಲಯಕ್ಕೆ ಕಳುಹಿಸಲು ಧನ ಸಹಾಯ ಮಾಡಿತು. ಡೆಸ್ಮಂಡ್ ದೋಯಿಗ್ ಸುಮಾರು ವರ್ಷಗಳ ಕಾಲ ಹಿಮಾಲಯ ಪ್ರದೇಶದಲ್ಲಿ ವಾಸವಿದ್ದರಿಂದ ಆತ ಯೇತಿಗಳು ಹೆಚ್ಚಾಗಿ ಯಾವ ಸ್ಥಳದಲ್ಲಿ ಕಂಡು ಬರುತ್ತವೆ ಮತ್ತು ಅವುಗಳಲ್ಲಿರುವ ಪ್ರಕಾರಗಳ ಬಗ್ಗೆ ಸ್ಥಳೀಯರಿಂದ ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಅನ್ವೇಷಣೆಯನ್ನು ರೂಪಿಸಿಕೊಂಡ. ಈ ಅನ್ವೇಷಣೆ ಕಾರ್ಯವನ್ನು ತುಂಬಾ ದುರ್ಭರವಾದ ಪರಿಸ್ಥಿತಿಯಲ್ಲಿ ನಡೆಸಲಾಯಿತು.

ಮೈ ಕೊರೆಯುವಷ್ಟು ಚಳಿಯನ್ನು ಲೆಕ್ಕಿಸದೆ, ಅವರೆಲ್ಲ ಹತ್ತು ತಿಂಗಳು ಕಾಲ ಹಿಮಾಲಯದಲ್ಲಿ ಸುತ್ತಾಡಿದರು. ಯೇತಿಗಳ ಇರುವಿಕೆಯನ್ನು ಇಡೀ ಜಗತ್ತಿಗೆ ಸಾರಲು, ಕ್ಯಾಮರಾ, ಇನ್‌ಫ್ರಾರೆಡ್ ಛಾಯಾಗ್ರಹಣ ಮತ್ತು ಟೈಂಲ್ಯಾಪ್ಸ್ (Time lapse) ಮುಂತಾದ ಆಧುನಿಕ ಉಪಕರಣಗಳೊಂದಿಗೆ ಅವರು ಸದಾ ಸಿದ್ಧರಿದ್ದರು. ಯಾವ ಯೇತಿಯೂ ಬಳಿ ಸುಳಿಯಲಿಲ್ಲ! ಯೇತಿಗಳ ಇರುವಿಕೆ ನಿಗೂಢವಾಗಿಯೇ ಉಳಿಯಿತು.

ಆದರೆ, ಯೇತಿಯ ನೆತ್ತಿಯ (Scalp) ಭಾಗವೊಂದು ಕುಮ್‌ಜುಂಗ್ ಎಂಬ ಹಳ್ಳಿಯಲ್ಲಿದೆ ಎಂದು ವಿಷಯ ತಿಳಿದ ಹಿಲೇರಿ ಹಾಗು ದೋಯಿಗ್, ಕಪ್ಪು ಕೂದಲಿರುವ ಆ ನೆತ್ತಿಯನ್ನು ಪಡೆದು ಇಡೀ ವಿಶ್ವದಾದ್ಯಂತ ಪರ್ಯಟನೆ ಕೈಗೊಳ್ಳುವ ಬೃಹತ್ ಯೋಜನೆಯೊಂದನ್ನು ರೂಪಿಸಿದರು. ಆದರೆ, ಹಳ್ಳಿಯ ಜನ ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಅಂತೂ ಇಂತೂ ಅವರನ್ನೆಲ್ಲ ಒಪ್ಪಿಸಲು ಹಿಲೇರಿ ಅವರಿಗೆ ಸಾಧ್ಯವಾಯಿತು.

ತಮ್ಮೊಂದಿಗೆ ಯೇತಿಯ ನೆತ್ತಿಯ ನಿಜವಾದ ಒಡೆಯನಾದ ಕುನ್‌ಜೋ ಚುಂಬಿ (Kunjo Chumbi) ಎನ್ನುವವನನ್ನೂ ಕರೆದೊಯ್ಯಲು ಒಪ್ಪಿಕೊಂಡರು. ಯೇತಿಯ ನೆತ್ತಿಯನ್ನು ಹೊತ್ತುಕೊಂಡು ಇವರು ನಡೆಸಿದ ವಿಶ್ವ ಪರ್ಯಟನೆ ಎಲ್ಲಡೆ ಚರ್ಚೆಯ ವಿಷಯವಾಯಿತು. ಪತ್ರಿಕೆಗಳು ಪ್ರಮುಖ ಲೇಖನಗಳನ್ನು ಪ್ರಕಟಿಸಿದವು. ಯೇತಿಯ ನೆತ್ತಿಯು ಪ್ರಮುಖ ನಗರಗಳಾದ ಹೊನಲು, ಚಿಕಾಗೋ, ಪ್ಯಾರೀಸ್‌ನಲ್ಲಿ ಜನರ ಅತೀವ ಆಸಕ್ತಿಯನ್ನು ಕೆರಳಿಸಿತು. ಲಂಡನ್‌ನ ಬಕಿಂಗ್ ಹ್ಯಾಮ್ ಅರಮನೆಯ ದ್ವಾರಗಳೂ ಇದಕ್ಕೆ ಸ್ವಾಗತ ಕೋರಿದವು. ಕುನ್‌ಜೋ ಚುಂಬಿಯು ದೊಡ್ಡ ಟಿ.ವಿ. ಸ್ಟಾರ್ ಆಗಿಬಿಟ್ಟ. ಯಾಕೆಂದರೆ, ವಿಶ್ವ ಪರ್ಯಟನೆಯ ವೇಳೆಯಲ್ಲಿ ಅವರೆಲ್ಲ ಉಳಿದುಕೊಂಡ ಸ್ಥಳಗಳಲ್ಲಿ ಅಲ್ಲಿನ ಟಿ.ವಿ. ಕ್ಯಾಮರಾ ತಂಡಗಳು 'ಚುಂಬಿ'ಯ ಹಿಂದೆಯೇ ಬಿದ್ದಿರುತ್ತಿದ್ದವು. ಆತನು ಯೇತಿಗಳು ಯಾವ ತರಹದಲ್ಲಿ ತಾರಕ ಸ್ವರದಲ್ಲಿ ಅರಚಾಡುತ್ತವೆ ಎನ್ನುವುದನ್ನು ಅಣಕ ಮಾಡಿ ತೋರಿಸುತ್ತಿದ್ದ. ಈ ರೀತಿಯ ವಿಚಿತ್ರ ಸ್ವರಗಳು ಟಿ.ವಿ. ಪ್ರೇಕ್ಷಕರನ್ನು ರಂಜಿಸುತ್ತಿತ್ತು. ಯೇತಿಯ ನೆತ್ತಿಯ ಭಾಗದ ಬಗ್ಗೆ ಹಲವು ತಜ್ಞರು ಪರೀಕ್ಷೆ ನಡೆಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದರು. ಒಟ್ಟಿನಲ್ಲಿ ಯೇತಿಯ ನೆತ್ತಿ ಯಾತ್ರೆಯು ಸಮೂಹ ಮಾಧ್ಯಮದ ಪಾಲಿಗೆ ಪ್ರತಿನಿತ್ಯ ಹೊಸ ಸುದ್ದಿಯನ್ನೇ ನೀಡುತ್ತಿತ್ತು ಎಂದರೆ ತಪ್ಪಿಲ್ಲ.

ಆದರೆ ಈ ಯಾತ್ರೆಯು ಕೇವಲ 42 ದಿನಗಳಲ್ಲಿಯೇ ಮುಗಿಯಬೇಕಾಗಿತ್ತು. ಯಾಕೆಂ



'ಬಿಗ್‌ಫೂಟ್' (ಮಹಾಪಾದಿ) ಚಲನಚಿತ್ರದ ಒಂದು ದೃಶ್ಯ.



ಅಲ್ಮಾ ದೈತ್ಯಜೀವಿಯ ಪಾದ ಮುದ್ರೆ.

ದರೆ, ಹಳ್ಳಿಯ ಜನ ಹಾಗು ಹಿಲೇರಿ ಅವರ ನಡುವೆ ಆದ ಒಪ್ಪಂದದಂತೆ 42 ದಿನಗೊಳಗಾಗಿ ಯೇತಿಯ ನೆತ್ತಿಯನ್ನು ಹಿಂತಿರುಗಿಸದಿದ್ದರೆ ಅವರ ಬಳಿ ಕೆಲಸಕ್ಕಿದ್ದ ಶೇರ್ಪಾಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡುಬಿಡಬಹುದಾಗಿತ್ತು. ಆದ್ದರಿಂದ 42ನೇ ದಿನ ಮುಗಿಯುವುದರೊಳಗೇ ಹಿಲೇರಿ 'ಯೇತಿಯ ನೆತ್ತಿ' ಯೊಂದಿಗೆ ಹೆಲಿಕಾಪ್ಟರ್‌ನಲ್ಲಿ ಹಳ್ಳಿಗೆ ವಾಪಾಸು ಹಾರಿಬಂದು ಬಿಟ್ಟರು.

ಈ ಪರ್ಯಟನೆಯಲ್ಲಿ ಯೇತಿಯ ನೆತ್ತಿಯನ್ನು ಪರೀಕ್ಷಿಸಿದ ಹಲವಾರು ಜನ ಇದು ಯೇತಿಯ ನೆತ್ತಿಯ ಕೂದಲು ಅಥವಾ ಚರ್ಮ ಎನ್ನುವುದರ ಬಗ್ಗೆ ಸಂದೇಹ ವ್ಯಕ್ತ ಪಡಿಸಿದರು. ಸ್ವತಃ ಹಿಲೇರಿ ಸಹ ಕೊನೆಗೆ ಇದು ಯೇತಿಯ ನೆತ್ತಿಯಲ್ಲ ಎಂದು ನಂಬಿಬಿಟ್ಟ! ಅವನ ಪ್ರಕಾರ ಇದನ್ನು ಹಿಮಾಲಯದಲ್ಲಿ ಕಂಡು ಬರುವ Serowgoat ಎನ್ನುವ ಪ್ರಾಣಿಯ ಚರ್ಮವನ್ನು ಹದಮಾಡಿ ತಯಾರಿಸಲಾಗಿತ್ತು.

ಹೀಗಾಗಿ ಯೇತಿಯ ಬಗ್ಗೆ ಲಭ್ಯವಿದ್ದ ಏಕೈಕ ಪುರಾವೆಯೂ ಸತ್ಯವೆಂದು ರುಜುವಾಗಲಿಲ್ಲ.

ದೋಯಿಗ್ ಭಿನ್ನಾಭಿಪ್ರಾಯ

ಯೇತಿಯ ನೆತ್ತಿಯ ಬಗ್ಗೆ ಸರ್ ಹಿಲೇರಿಯ ಅಭಿಪ್ರಾಯವನ್ನು ದೆಸ್ಮಂಡ್ ದೋಯಿಗ್ 1960ರಲ್ಲಿ ಒಪ್ಪಿಕೊಂಡಿದ್ದರು. ಆದರೆ 20 ವರ್ಷಗಳ ನಂತರ 1980ರ ಸುಮಾರಿನಲ್ಲಿ ದೋಯಿಗ್ ಅಂದು ತಾವು ತಳೆದ ನಿರ್ಧಾರ ಸರಿಯಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದರು. ಇದಕ್ಕೆ ಕಾರಣವೇನೆಂದರೆ, ಅಂದು ತಾವು ಕೈಗೊಂಡ ಅನ್ವೇಷಣೆಯು ತುಂಬಾ ಅವಸರದಲ್ಲಿ ನಡೆದಿದ್ದರಿಂದ ಯೇತಿಗಳ ಇರುವಿಕೆಯನ್ನು ಪತ್ತೆ ಹಚ್ಚಲಾಗಲಿಲ್ಲವೆಂದು ಅವರು ಹೇಳಿದರು. 'ಯೇತಿಯ ನೆತ್ತಿ' ಯು ಸುಳ್ಳು ಎಂದ ಮಾತ್ರಕ್ಕೆ ಯೇತಿಗಳೇ ಇಲ್ಲ ಎಂದು ರುಜುವಾಗುವುದಿಲ್ಲವಲ್ಲ? ಎಂದು ಮರು ಸವಾಲು ಹಾಕಿ ದೋಯಿಗ್ ಯೇತಿಗಳ ಬಗ್ಗೆ ಹೊಸದೊಂದು ವಿವಾದಕ್ಕೆ ದಾರಿ ಮಾಡಿಕೊಟ್ಟರು.

ಈ ರೀತಿ ಯೇತಿಗಳ ಬಗ್ಗೆ ಯಾವ ಗಟ್ಟಿ ಪುರಾವೆಗಳು ಸಿಗದೆ ಇದ್ದರೂ, ಅವುಗಳ ಬಗ್ಗೆ ಇರುವ ನಿಗೂಢತೆಯಲ್ಲಿ ಕಿಂಚಿತ್ತೂ ಬದಲಾವಣೆಯಾಗಿಲ್ಲ. ಯೇತಿಗಳ ಬಗ್ಗೆ ಶೇರ್ಪಾಗಳು ಹೇಳುವ ಕತೆಗಳನ್ನು ಕಟ್ಟು ಕತೆಗಳೆಂದು ಕರೆದರೂ, ಯೇತಿಗಳು ಮೂಡಿಸಿವೆ ಎನ್ನಲಾದ ದೈತ್ಯ ಹೆಜ್ಜೆಗಳ ಛಾಯಾಚಿತ್ರಗಳನ್ನು ಅಷ್ಟು ಸುಲಭವಾಗಿ ಅಲ್ಲಗಳೆಯಲಾಗದು. ಅದರಲ್ಲೂ ಶಿಪ್‌ಟನ್ (Shipton) ತೆಗೆದ ಚಿತ್ರಗಳು ಬಹಳ ಸ್ಪಷ್ಟವಾಗಿವೆ.

ಕೆಲವು ಜನ 'ಯೇತಿ'ಗಳಿಗೆ ಹಿಮಾಲಯದಷ್ಟು ಎತ್ತರವಾದ ಪ್ರದೇಶಗಳಲ್ಲಿ ಆಹಾರ ದೊರೆಯುವುದಾದರೂ ಎಲ್ಲಿ ಎಂದು ಪ್ರಶ್ನೆ ಒಡ್ಡುತ್ತಾರೆ. ಆದರೆ ಯೇತಿಗಳಿವೆ ಎಂದು ನಂಬುವ ಜನ ಅಂತಹ ಎತ್ತರದ ಪ್ರದೇಶಗಳಲ್ಲಿ Wolly wolf (ಒಂದು ಬಗೆಯ ತೋಳ), ಹಾಗು

Ibex ಎಂಬ ಜೀವಿಗಳು ಬದುಕುಳಿದಿವೆ ಯಲ್ಲವೇ? ಎಂದು ಮರು ಸವಾಲು ಹಾಕುತ್ತಾರೆ.

ಯೇತಿಗಳ ವಿಷಯವನ್ನು ಮುಂದುವರೆಸುವ ಮುನ್ನ ನಾನು ವಿಶ್ವದ ಇತರೆಡೆಗಳಲ್ಲಿ ಕಾಣಿಸಿ ಕೊಂಡಿವೆ ಎನ್ನಲಾದ ಇತರ ದೈತ್ಯ ಜೀವಿಗಳ ಬಗ್ಗೆ ವಿವರಿಸುವುದು ಅಗತ್ಯ ಎಂದು ತೋರುತ್ತದೆ. ಅವುಗಳ ಪೈಕಿ ಬಿಗ್ ಫೂಟ್ ಹಾಗು (ಅಂದಿನ) ಸೋವಿಯತ್ ಗಣರಾಜ್ಯದಲ್ಲಿ ಕಂಡು ಬರುವ ಅಲ್ಮಾ (Alma)ಗಳ ಬಗ್ಗೆ ಇಲ್ಲಿ ಉಲ್ಲೇಖಿಸಲೇಬೇಕು.

ಬಿಗ್‌ಫೂಟ್

ಯೇತಿಗಳಂತಹ ದೈತ್ಯ ಜೀವಿಗಳು, ವಿಶ್ವದ ಬೇರೆ ಭಾಗಗಳಲ್ಲೂ ಆಗಾಗ ತೋರಿಬಂದಿವೆ. ಅಮೇರಿಕದಲ್ಲಿ ಬಿಗ್‌ಫೂಟ್ (Big foot) ಎಂಬ ಜೀವಿಯನ್ನು ಹಲವರು ಕಂಡಿರುವುದಾಗಿ ಸಾಕ್ಷಿ ನೀಡಿದ್ದಾರೆ. ಈ Bigfootಗಳು ಸಹ ಯೇತಿಗಳಂತೆಯೇ ನಿಗೂಢ ಜೀವಿಗಳಾಗಿಯೇ ಉಳಿದುಬಿಟ್ಟಿವೆ.

'ಬಿಗ್‌ಫೂಟ್' ಎಂದರೆ ದೈತ್ಯ ಆಕಾರದ ಪಾದಗಳು ಎಂದರ್ಥ. ಯೇತಿಗಳಂತೆಯೇ ಈ ದೈತ್ಯ ಜೀವಿಗಳ ಬಗ್ಗೆ ಅನೇಕ ಭಯಾನಕವಾದ ಕಥೆಗಳಿವೆ. 1969ರ ಜೂನ್ 30ನೇ ತಾರೀಖು ಅಮೇರಿಕದ National Bulletin ಎಂಬ ದಿನ ಪತ್ರಿಕೆಯ ಮುಖ ಪುಟಗಳಲ್ಲಿ ಬಿಗ್‌ಫೂಟ್ ನಿಂದ ಮಹಿಳೆಯೊಬ್ಬಳ ಬಲತ್ಕಾರ ಎಂಬ ಸುದ್ದಿ ಪ್ರಕಟವಾಯಿತು. ಕ್ಯಾಲಿಫೋರ್ನಿಯಾದ ಬಳಿ ಇರುವ ಕಾಡು ಪ್ರದೇಶದಿಂದ ಬಂದ 'ಬಿಗ್‌ಫೂಟ್' ತನ್ನನ್ನು 'ರೇಪ್' ಮಾಡಿತು ಎಂದು ಆ ಮಹಿಳೆ ಹೇಳಿಕೆ ಕೊಟ್ಟಿದ್ದಳು.

ಒರೆಗಾನ್ ಪ್ರದೇಶದ ಉಸ್ಪಾಕಾಡ ಎನ್ನುವಲ್ಲಿ ವಾಸಿಸುವ ಜಿ. ಥೋಮಸ್ ಎನ್ನುವ ವ್ಯಕ್ತಿ ಟಾರಜಿನ್ ಸ್ಪ್ರಿಂಗ್ ಎನ್ನುವ ಪ್ರದೇಶದಲ್ಲಿ ನಡೆದು ಹೋಗುತ್ತಿರುವಾಗ 6 ರಿಂದ 7 ಅಡಿ ಎತ್ತರದ ಜೀವಿಗಳನ್ನು ಕಂಡಿರುವುದಾಗಿ ಹೇಳಿಕೊಂಡಿದ್ದಾನೆ. ಒಂದು ಮಗುವಿನೊಂದಿಗೆ ಆ ದೈತ್ಯ ಹೆಣ್ಣುಜೀವಿ ನಡೆದಾಡುತ್ತಿದ್ದಾಗ ಗಂಡು ಜೀವಿ ಇಲಿಗಳನ್ನು ಹಿಡಿದು ಭಕ್ಷಿಸುತ್ತಿತ್ತಂತೆ. 1966ರಲ್ಲಿ Jackson Hole ಎನ್ನುವಲ್ಲಿ ಬೇಟೆಗೆ ಹೋದ ಇಬ್ಬರು ಯುವಕರು ಗೋರಿಲ್ಲಾದಂತೆ ಕಾಣುವ ದೈತ್ಯ ಜೀವಿಯನ್ನು ಗುರಿಯಿಟ್ಟು ಹೊಡೆದು ಕೊಂದರು. ಆದರೆ ಹತ್ತಿರ ಹೋದ ನಂತರ ಅವರು ಹಿಂದೆಂದೂ ಕಂಡಿರದಂತಹ ದೈತ್ಯ ಶವವೊಂದು ಅಲ್ಲಿ ಬಿದ್ದಿತ್ತು. ಭಯಭೀತರಾದ ಅವರಿಬ್ಬರು ಅಲ್ಲಿಂದ ಆ ಕೂಡಲೇ ಪರಾರಿಯಾದರು.

ದೈತ್ಯಪಾದಿ ಚಿತ್ರ

ಬಿಗ್‌ಫೂಟ್‌ಗಳ ಅಸ್ತಿತ್ವದ ಬಗ್ಗೆ, ಲಭ್ಯವಿರುವ ಸಾಕ್ಷ್ಯಗಳ ಪೈಕಿ 1967ರಲ್ಲಿ ರೋಜರ್ ಪ್ಯಾಟರ್‌ಸನ್ ತೆಗೆದ ಚಿತ್ರಗಳು ಇಂದಿಗೂ ಕುತೂಹಲ ಕಾರಿಯಾಗಿವೆ. ಉತ್ತರ ಕ್ಯಾಲಿಫೋರ್ನಿಯಾದ Bluff Creek ಎನ್ನುವ ಜಾಗದಲ್ಲಿ ತೆಗೆದ ಈ ಚಿತ್ರಗಳಲ್ಲಿ ಹೆಣ್ಣು ದೈತ್ಯ ಜೀವಿಯೊಂದು ಚಲಿಸುವುದನ್ನು ಸೆರೆ ಹಿಡಿಯಲಾಗಿದೆ. ಈ ಚಿತ್ರವನ್ನು ಫೋಟೋಗ್ರಾಫಿಕ್ ಟ್ರಿಕ್ ಎಂದು ಅಲ್ಲಗಳೆಯಲಾಗಿಲ್ಲ. ಕಾರಣ ಚಿತ್ರದಲ್ಲಿನ ಹಿನ್ನಲೆಯು Onion Mountain ಬಳಿ ಇರುವ ಚಿಕ್ಕ ರಸ್ತೆಯ ಬದಿಯಲ್ಲಿರುವಂತೆ ಇದ್ದು, ಈ ಸ್ಥಳವನ್ನು ಯಾರು ಬೇಕಾದರೂ ಖುದ್ದಾಗಿ ಹೋಗಿ ನೋಡಬಹುದಾಗಿದೆ. ಪ್ಯಾಟರ್‌ಸನ್ ಆ ದೈತ್ಯಪಾದಿಗಳ ಹೆಜ್ಜೆ ಗುರುತುಗಳ ನಮೂನೆಯನ್ನು ತಯಾರಿಸಿಟ್ಟುಕೊಂಡಿದ್ದಾನೆ.

ಈ ಚಿತ್ರಗಳನ್ನು ಅತ್ಯಂತ ಕೂಲಂಕಷವಾಗಿ ಪರೀಕ್ಷಿಸಿರುವ ಲಂಡನ್‌ನಲ್ಲಿರುವ Dr. D.W. Grieve ಹಾಗು ರಷಿಯಾದಲ್ಲಿರುವ Dr. Bayanov ಹಾಗು Donskoy ಹಾಗು ಅವರ ತಂಡದವರು, ಈ ಚಿತ್ರಗಳಲ್ಲಿ ಚಲಿಸುತ್ತಿರುವ ಜೀವಿಯ ಚಲನವಲನಗಳನ್ನು ಗಮನಿಸಿದಾಗ ಇದು ಖಂಡಿತವಾಗಿಯೂ ವೇಷ ಹಾಕಿದ ಮನುಷ್ಯನದ್ದು ಅಲ್ಲ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಆ ರೀತಿಯಾಗಿ ದಾಪುಗಾಲು ಹಾಕುವುದಾಗಲಿ ಅಥವಾ ಕೈಗಳನ್ನು ಬೀಸುವುದಾಗಲಿ, ತುಪ್ಪಳವು ಉಡುಪು ಹಾಕಿರುವ ಮನುಷ್ಯನಿಂದ ಸಾಧ್ಯವಿಲ್ಲ. ಆದ್ದರಿಂದ ಮನುಷ್ಯನಿಗೆ ತುಪ್ಪಳ ಇರುವ ಉಡುಪು ರಾಶಿ ಹಾಕಿ ಅಲ್ಲಿ ನಡೆದಾಡುವಂತೆ ಮಾಡಿ ಈ ಛಾಯಾಚಿತ್ರ ತೆಗೆದಿರುವುದು ಸಾಧ್ಯವಿಲ್ಲ.

ಆದರೆ, ಕೆಲವು ಜನ, ಈ ಚಿತ್ರಗಳನ್ನು ಯಾವ ವೇಗದಲ್ಲಿ (ಅಂದರೆ ಪ್ರತಿ ಸೆಕೆಂಡಿಗೆ 24 ಅಥವಾ 16 ಫ್ರೇಮ್) ತೆಗೆಯಲಾಯಿತು ಎನ್ನುವುದನ್ನು ಪ್ರಶ್ನಿಸುತ್ತಾರೆ. ಯಾಕೆಂದರೆ, ಈ ಎರಡು ವೇಗಗಳಲ್ಲಿ ಚಿತ್ರವನ್ನು ತೆರೆಯ ಮೇಲೆ ಮೂಡಿಸಿದಾಗ ಭಿನ್ನ ಭಿನ್ನವಾದ ಚಿತ್ರಣ ಮೂಡಿಬರುವುದು ಅನುಮಾನಕ್ಕೆ ಆಸ್ಪದ ಕೊಡುತ್ತದೆ.

ಅಲ್ಮಾಗಳು

ರಷಿಯಾದಲ್ಲಿ ಯೇತಿಗಳ ಬಳಗಕ್ಕೆ ಸೇರಿದ ನಿಗೂಢ ಜೀವಿಗಳನ್ನು 'ಅಲ್ಮಾ' ಎಂಬ ಹೆಸರಿನಿಂದ ಕರೆಯಲಾಗುತ್ತದೆ. 1979ರಲ್ಲಿ Dr. Igor Burstev ಎನ್ನುವ ವಿಜ್ಞಾನಿಯು ಅಲ್ಮಾಗಳ ಹೆಜ್ಜೆ ಗುರುತುಗಳ ಪಡಿಯಚ್ಚುಗಳನ್ನು ತಯಾರಿಸಿಕೊಂಡು ಅವುಗಳ ಬಗ್ಗೆ ಗಂಭೀರ ಅಧ್ಯಯನ ನಡೆಸಿದ. ಆದರೆ, ರಷಿಯಾದಲ್ಲಿ ಅಲ್ಮಾಗಳ ಬಗ್ಗೆ ನಡೆಸಿದ ಅಧ್ಯಯನದ ವಿವರಗಳು ಹೊರ ಜಗತ್ತಿಗೆ ಅಷ್ಟಾಗಿ ತಿಳಿದುಬರುವುದಿಲ್ಲ. ಕಾರಣವೇನೆಂದರೆ, ಕಮ್ಯುನಿಷ್ಟರ ಆಳ್ವಿಕೆಯಲ್ಲಿ ಎಲ್ಲಾ ಶೋಧ-ಸಂಶೋಧನೆಗಳು ರಹಸ್ಯದ ಹಣೆ ಪಟ್ಟಿಯನ್ನು ಹಚ್ಚಿಕೊಂಡಿರುತ್ತಿದ್ದವು ಮತ್ತು ಅಲ್ಮಾಗಳ ಬಗ್ಗೆ ಪಶ್ಚಿಮ ರಾಷ್ಟ್ರಗಳಿಗೆ ತಿಳಿದರೆ, ರಷಿಯನ್ನರು ನಗೆಪಾಟಲಿಗೆ ಗುರಿಯಾಗುವರು ಎಂದು ಆಡಳಿತದ ಪ್ರಭುಗಳು ನಂಬಿದ್ದರು. ಏಕೆಂದರೆ, ವೈಜ್ಞಾನಿಕವಾಗಿ ತಾವು ಯಾರಿಗೂ ಕಮ್ಮಿಯಲ್ಲ ಎಂದು ತೋರಿಸಿಕೊಳ್ಳಲು ಇಚ್ಛಿಸುತ್ತಿದ್ದ ಕಮ್ಯುನಿಷ್ಟರು, ಯಾವ ವೈಜ್ಞಾನಿಕ ಆಧಾರವಿಲ್ಲದ 'ಅಲ್ಮಾ'ಗಳ ಅಧ್ಯಯನವನ್ನು ಕೈಗೊಳ್ಳುತ್ತಿದ್ದಾರೆ ಎಂದು ಇಡೀ ವಿಶ್ವಕ್ಕೆ ಗೊತ್ತಾದರೆ ಏನಾದೀತು ಎಂದು ಅವರ ಆತಂಕ.

ಹೀಗೆ, ಯೇತಿಗಳಾಗಲಿ, ಬಿಗ್‌ಫೂಟ್‌ಗಳಾಗಲಿ ಇಲ್ಲವೇ ಅಲ್ಮಾಗಳಾಗಲಿ ಕೇವಲ ರಂಜಕವಾದ ಕಥೆಗಳಾಗಿಯೇ ಉಳಿದಿವೆ ಹೊರತು, ವೈಜ್ಞಾನಿಕವಾಗಿ ಅವುಗಳ ಇರುವಿಕೆಯನ್ನು ಸಾಬೀತು ಪಡಿಸಲು ಇಲ್ಲಿಯ ತನಕ ಸಾಧ್ಯವಾಗಿಲ್ಲ. ಆದರೂ, ಈ ನಿಗೂಢ ಜೀವಿಗಳ ಪಾದಗಳ ಗುರುತುಗಳು ಅವುಗಳ ಇರುವಿಕೆಯ ಸಾಧ್ಯತೆಯನ್ನು ಬಲಪಡಿಸುತ್ತವೆ. ಒಂದು ವೇಳೆ ಈ ಹೆಜ್ಜೆ ಗುರುತುಗಳು ಯಾರೋ ಕಿಡಿಗೇಡಿಗಳು ಮೂಡಿಸಿದ ನಕಲಿ ಹೆಜ್ಜೆ ಗುರುತುಗಳು ಎಂದು ವಾದಿಸಿದರೂ, ಹಿಮಾಲಯದಲ್ಲಿ ಅಷ್ಟು ಎತ್ತರದಲ್ಲಿ ಇಂತಹ ಕೆಲಸವನ್ನು ಯಾರು ಮತ್ತು ಯಾಕೆ ಮಾಡಿಯಾರು ಎನ್ನುವುದು ನಿಗೂಢವಾಗಿಯೇ ಉಳಿದು ಬಿಡುತ್ತದೆ.

ಮುಂದಿನ ಬಾರಿ ಇನ್ನೊಂದು ನಿಗೂಢ ಜಗತ್ತಿನ ಯಕ್ಷಪ್ರಶ್ನೆ:


ಹಾರಾಡುವ ತಟ್ಟೆಗಳು ಇವೆಯೇ? ■

ಪತ್ನಿಯ ಸ್ವಗತ

ನನ್ನವರಿಗೆ ನನಗಿಂತಲೂ
ಪುಸ್ತಕಗಳ ಮೇಲೆ ಹೆಚ್ಚು ಪ್ರೀತಿ
ಇಂಥವರನ್ನು ಮೆಚ್ಚಿ ಕಟ್ಟಿಕೊಂಡು
ಆಗಿದ್ದೇನೆ ಈಗ ತುಂಬಾ ಫಜೀತಿ.

-ವಿ.ಜಿ ಭಂಡಾರಿ

'ಕಲಾಗ್ರಾಮ'ದ ಕನಸುಗಾರ ಮಾರುತಿ



ಕಲೆ ಸಾಮಾಜಿಕ ಜೀವನದಲ್ಲಿ ಕೆಲವರಿಗೆ ಅವಿಭಾಜ್ಯ ಅಂಗವಾದರೆ, ಇನ್ನೂ ಕೆಲವರು ಕಲೆಯನ್ನು ಪ್ರವೃತ್ತಿಯನ್ನಾಗಿ ಸ್ವೀಕರಿಸುತ್ತಾರೆ. ಕಲೆಯು ಆಯಾ ಸಮಕಾಲೀನ ಸಮಾಜದ ಸಂಸ್ಕೃತಿಯ ಪ್ರತೀಕವೆಂಬುದು ಕೆಲವರ ಅಭಿಪ್ರಾಯ. ಇತ್ತೀಚಿನ ದಿನಗಳಲ್ಲಿ ದೃಶ್ಯ ಕಲೆಗೆ ಹೆಚ್ಚಿನ ಮಹತ್ವವಿರುವುದನ್ನು ನಾವು ಕಾಣುತ್ತೇವೆ. ಈ ಕ್ಷೇತ್ರದಲ್ಲಿ ಹೆಸರಿಸಬಹುದಾದ ವ್ಯಕ್ತಿ ಧಾರವಾಡದ ಮಾರುತಿಯವರು.

'ಕಲೆ ಅನೇಕರನ್ನು ಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ' ಎಂಬ ಅ.ನ.ಕೃ. ರವರ ಮಾತು

ವಿನೋಬಾ ಅವರು ಹೇಳುವ ಹಾಗೆ ಬಡವರ ಮುಖವನ್ನು ಅರಳಿಸುವುದು ಕಲೆ. ಕಾವ್ಯ, ಸಂಗೀತ, ಶಿಲ್ಪ, ನೃತ್ಯ ಇವೆಲ್ಲವೂ ವ್ಯಕ್ತಿಯ ಏಳಿಗೆ ಮತ್ತು ಸುಖಕ್ಕೆ ಸಹಾಯಕವಾಗಿವೆ. ಕಲೆಯಿಂದ ವ್ಯಕ್ತಿ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಮಾರುತಿಯವರಿಗೆ ಅನ್ವಯಿಸುತ್ತದೆ. ಐತಿಹಾಸಿಕ ಸ್ಥಳವಾದ ಹಂಪಿಯ ಹತ್ತಿರದ ಹೊಸಪೇಟೆಯಲ್ಲಿ ಜನಿಸಿದ ಮಾರುತಿಯವರು ಬಾಲ್ಯದಿಂದಲೇ ಚಿತ್ರ ಬಿಡಿಸುವುದು, ಮೂರ್ತಿಗಳನ್ನು ನಿರ್ಮಿಸುವುದರಲ್ಲಿ ಆಸಕ್ತಿ ಹೊಂದಿದ್ದರು. ಹೈಸ್ಕೂಲಿನಲ್ಲಿರುವಾಗ ಚಿತ್ರಕಲಾ ಶಿಕ್ಷಕರಾದ ಕಾಶಿಮ್‌ಸಾಹೇಬರ ಮಾರ್ಗದರ್ಶನ ಹಾಗೂ ಪ್ರೋತ್ಸಾಹ, ಹಂಪೆಯಲ್ಲಿನ ವಾಸ್ತುಶಿಲ್ಪಗಳು, ಮೂರ್ತಿಶಿಲ್ಪಗಳು, ಕೆತ್ತನೆಗಳು ತಮ್ಮ ಕಲೆಗೆ ಪ್ರೇರಣೆಯೆಂದು ಮಾರುತಿಯವರು ಸ್ಮರಿಸುತ್ತಾರೆ. ಕಾಲೇಜು ದಿನಗಳಲ್ಲಿಯೇ ಅನೇಕ ಕವನಗಳನ್ನು ರಚಿಸಿ ಸಾಹಿತ್ಯ ವೇದಿಕೆಗಳಲ್ಲಿ ಭಾಗವಹಿಸಿದ್ದರು. ಜೀವನೋಪಾಯಕ್ಕಾಗಿ ಕುಂಚ ಹಿಡಿದ ಮಾರುತಿಯವರು ಅನೇಕ ವರ್ಣ ಭಾವ ಚಿತ್ರ, ರೇಖಾಚಿತ್ರ, ಮುಖಪುಟ ವಿನ್ಯಾಸ ಇತ್ಯಾದಿ ಬಿಡಿಸಿದರು.


ಸಾಹಿತ್ಯದ ಒಲವನ್ನು ಹೊಂದಿದ ಪತ್ನಿ ಸುಕನ್ಯಾ ಎಂ.ಎ. ಮುಗಿಸಿ ಉಪನ್ಯಾಸಕಿಯಾದರು. ಮಾರುತಿಯವರು ಸಹ ಕುಂಚಕ್ಕೆ ಬಿಡುವು ಕೊಟ್ಟು ಎಂ.ಎ. ವ್ಯಾಸಂಗದ ನಂತರ ಉಪನ್ಯಾಸಕರಾದರು. ಆದರೆ ವೃತ್ತಿಯಲ್ಲಿಯೇ ಮುಂದುವರೆಯಲಿಲ್ಲ. ಗುಲ್ಬರ್ಗಾಕ್ಕೆ ವರ್ಗವಾದ ಕಾರಣ ಧಾರವಾಡ ಬಿಡುವ ಮನಸ್ಸಿಲ್ಲದೆ ಕೆಲಸಕ್ಕೆ ರಾಜೀನಾಮೆ ನೀಡಿದರು. ಸ್ವ-ಉದ್ಯೋಗ ಮಾಡಬೇಕೆಂಬ ಅಪೇಕ್ಷೆಯಿಂದ ತಮ್ಮ ಮಗ ಸಂಗ್ರಾಮನ ಹೆಸರಿನಲ್ಲಿ 'ಸಂಗ್ರಾಮ್ ಎಂಟರ್‌ಪ್ರೈಸಸ್' ಪ್ರಾರಂಭಿಸಿದರು. ಕಲೆಯಲ್ಲಿ ತೀವ್ರ ಆಸಕ್ತಿಯನ್ನು ಹೊಂದಿದ್ದ ಮಾರುತಿಯವರು ವ್ಯಾಪಾರದ ಜೊತೆಗೆ 1994ರಲ್ಲಿ ಪುನಃ ಕುಂಚ ಹಿಡಿದು ಕಲೆ ಜೀವನೋಪಾಯಕ್ಕಲ್ಲ; ಕೀರ್ತಿ ಪ್ರತಿಷ್ಠೆ ದುಡಿಮೆಗೂ ಅಲ್ಲ, ಸೇವಾಭಾವನೆಯಿಂದ ಕೂಡಿದ ನಾಡಿನ ಸಂಸ್ಕೃತಿಯ ಏಳಿಗೆ ಹಾಗೂ ಸಮಾಜದ ಅಂಕುಡೊಂಕುಗಳನ್ನು ತಿದ್ದುವುದಕ್ಕಾಗಿ ಎಂಬ ಭಾವನೆಯೊಂದಿಗೆ ಕುಂಚ ಹಿಡಿದ ಕೇವಲ ನಾಲ್ಕೇ ವರ್ಷದಲ್ಲಿ ಅನೇಕ ತೈಲ ಚಿತ್ರಗಳನ್ನು ಬಿಡಿಸಿದರು.

ಇವರು ರಚಿಸಿರುವ ವರ್ಣ ಚಿತ್ರಗಳು ಜಾನಪದ ಕಲೆಯ ವಿಶಿಷ್ಟ ಶೈಲಿಯನ್ನು ಪ್ರತಿಬಿಂಬಿಸುತ್ತವೆ. ಇವರ ಒಂದೊಂದು ಚಿತ್ರಗಳು ನೋಡುವವರನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತವೆ. ವಿನೋಬಾ ಅವರು ಹೇಳುವ ಹಾಗೆ ಬಡವರ ಮುಖವನ್ನು ಅರಳಿಸುವುದು ಕಲೆ. ಕಾವ್ಯ, ಸಂಗೀತ, ಶಿಲ್ಪ, ನೃತ್ಯ ಇವೆಲ್ಲವೂ ವ್ಯಕ್ತಿಯ ಏಳಿಗೆ ಮತ್ತು ಸುಖಕ್ಕೆ ಸಹಾಯಕವಾಗಿವೆ. ಕಲೆಯಿಂದ ವ್ಯಕ್ತಿ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಮಾರುತಿಯವರು ರಚಿಸಿರುವ ತೈಲ ಚಿತ್ರಗಳು ನಾಡಿನ ಬೇರೆ ಬೇರೆ ಭಾಗಗಳಲ್ಲಿ ಪ್ರದರ್ಶನಗೊಂಡು, ಹಿರಿಯ ಕಲಾವಿದರ ಪ್ರಶಂಸೆಗೆ ಪಾತ್ರವಾಗಿವೆ. ಇತ್ತೀಚೆಗೆ ಇವರು ಧಾರವಾಡದಲ್ಲಿ 'ರೀದಮ್ ಆರ್ಟ್ಸ್ ಸೆಂಟರ್' ಎಂಬ ಸಂಸ್ಥೆ ಸ್ಥಾಪಿಸಿ, ಇದರ ಮುಖಾಂತರ ಅನೇಕ ತರುಣ ಕಲಾವಿದರಿಗೆ ಚಿತ್ರ ಕಲೆಯ ಮಾರ್ಗದರ್ಶನ ದೊಂದಿಗೆ, ಅವರ ಜೀವನೋಪಾಯಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. 'ರಿದಮ್' ಮುಖಾಂತರ ನೂರಾರು ಸುಂದರ ಚಿತ್ರಗಳನ್ನು ಬಿಡಿಸಿ ಮಾರಾಟ ಮಾಡುತ್ತಿದ್ದಾರೆ. ಚಿತ್ರಕಲೆಯಲ್ಲಿ ಇಷ್ಟೆಲ್ಲಾ ಸಾಧನೆ ಮಾಡಿರುವ ಇವರ ಜೀವನದ ಸುಂದರ ಕನಸು: ಕರ್ನಾಟಕದ ಪ್ರಶಾಂತವಾದ ನಿಸರ್ಗರಮ್ಯ ಸ್ಥಳದಲ್ಲಿ 'ಕಲಾಗ್ರಾಮ' ಸ್ಥಾಪಿಸಿ, ಅಲ್ಲಿ ಕಲಾವಿದರಿಗೆ ಅನುಕೂಲ ಒದಗಿಸಿಕೊಡಬೇಕೆಂಬುದು. ಅವರ 'ಕನಸಿನ ಕಲಾಗ್ರಾಮ' ಆದಷ್ಟು ಬೇಗ ನನಸಾಗಿ ಕಲಾವಿದರಿಗೆ ಸಹಾಯವಾದರೆ ಅವರ ಶ್ರಮ ಸಾರ್ಥಕವಾದಿತು.

■ಎಸ್.ಎಂ. ನಾಗಭೂಷಣ

ಅಲ್ಲಾವುದ್ದೀನನ ಅದ್ಭುತ ದೀಪ



ಕಂಪ್ಯೂಟರ್ ಕೊಳ್ಳದವರು ಬೇಕಾದಷ್ಟು ಜನ ಸಿಗಬಹುದು. ಆದರೆ ಕಂಪ್ಯೂಟರ್ ಬಗ್ಗೆ ಕುತೂಹಲ ಇಟ್ಟುಕೊಳ್ಳದವರು ಸಿಗಲಾರರು. ಸಾಮಾನ್ಯ ಜನರಿಗೆ ಕಂಪ್ಯೂಟರ್ ಬಗ್ಗೆ ತಿಳಿಹೇಳಲೆಂದೇ ಈ ಅಂಕಣ ಪ್ರಾರಂಭಿಸುತ್ತಿದ್ದೇವೆ. ಇಲ್ಲಿನ ಭಿನ್ನ ಶೈಲಿಯ ಸರಳ ನಿರೂಪಣೆ ನಿಮಗೆ ಹಿಡಿಸುತ್ತದೆ ಎಂಬ ನಂಬಿಕೆ ನಮ್ಮದು.

ಅರೇಬಿಯನ್ ನೈಟ್ಸ್ ಓದಿದವರಿಗೆಲ್ಲ ಗೊತ್ತು, ಅಲ್ಲಾವುದ್ದೀನನ ಅದ್ಬುತ ದೀಪದ ಬಗ್ಗೆ.

ಈ ದೀಪದ ಮೂತಿಯಿಂದ ಬೃಹದಾಕಾರದ ಭೂತವೊಂದು ಹೊರಗೆ ಬರುತ್ತೆ. ದೀಪದ ಒಡೆಯನ ಗುಲಾಮ ಆ ಭೂತ. ಒಡೆಯ ಹೇಳಿದ್ದನ್ನೆಲ್ಲ ಮಾಡುತ್ತೆ. ಸಾಧ್ಯವಿಲ್ಲ ಎನ್ನುವ ಮಾತೇ ಇಲ್ಲ. ಅದು ಸರ್ವಶಕ್ತ. ಹಾಗೇ ಕಂಪ್ಯೂಟರ್ ಕೂಡ!

ನೀವು ಏನು ಕಲ್ಪಿಸಿಕೊಳ್ಳುತ್ತೀರೋ ಅದನ್ನೆಲ್ಲ ಕಂಪ್ಯೂಟರು ಮಾಡಬಲ್ಲದು. ನಿಮ್ಮ ಆಜ್ಞೆಯನ್ನು ಕಂಪ್ಯೂಟರು ಶಿರಸಾವಹಿಸುತ್ತದೆ. ನೀವು ಯಾರೇ ಆಗಿರಿ, ನಿಮ್ಮ ಕೆಲಸವನ್ನು ಕಂಪ್ಯೂಟರು ಛಟಕ್ಕನೆ ಮಾಡಿ ಮುಗಿಸಬಲ್ಲುದು. ಮನುಷ್ಯನಿಂದ ಅಸಾಧ್ಯವಾದುದನ್ನು ಮಾಡುವ ಅದ್ಬುತ ಶಕ್ತಿ ಕಂಪ್ಯೂಟರಿಗಿದೆ. ನೋಡಿ ಕಂಪ್ಯೂಟರಿನ ಅಗಾಧ ಶಕ್ತಿಯನ್ನು.....

ನೀವು ವ್ಯಾಪಾರಿಯೇ?

ನಿಮ್ಮ ಲೆಕ್ಕಪತ್ರ, ಆದಾಯ-ತೆರಿಗೆ, ಬಿಲ್ಲು-ರಸೀದಿ, ಸ್ಟಾಕು-ಸೆಲ್ಸು, ಸಾಲ-ಬಾಕಿ, ಲಾಭ-ನಷ್ಟ, ಬ್ಯಾಲೆನ್ಸ್‌ಷೀಟು .. ಎಲ್ಲವನ್ನೂ ಕರಾರುವಾಕ್ಕಾಗಿ ಕ್ಷಣದಲ್ಲಿ ಸಿದ್ಧಪಡಿಸಿಬಿಡುತ್ತದೆ ಕಂಪ್ಯೂಟರು.

ಇದರಿಂದ ವರ್ಷದ ಕೊನೆಯಲ್ಲಿ ಆಡಿಟರ್ ಬಳಿ ಹೋಗುವ ಗೊಂದಲ-ಟೆನ್‌ಶನ್ನೇ ಇಲ್ಲ. ಎಲ್ಲಾ ಬೆರಳ ತುದಿಯಲ್ಲಿ ಎನ್ನುತ್ತಾರಲ್ಲ ಹಾಗೆ... ನೀವು ಹೇಗೇ ತಿರುಗಿಸಿ ಮುರುಗಿಸಿ ಮಾಹಿತಿ ಕೇಳಿದರೂ ಕಂಪ್ಯೂಟರು ನಿಮಗೆ ಬೇಕಾದ ಹಾಗೆ ವಿವರ ನೀಡಬಲ್ಲುದು. ಅದೂ ಕ್ಷಣದಲ್ಲಿ! ಬೇರೆ ಅಕೌಂಟೆಂಟು ಆಡಿಟರು ಬೇಕೇ ಇಗಿಲ್ಲ. ಅವರಿಗೆ ನೀಡುವ ಹಣವೆಲ್ಲ ನಿಮಗೆ ಲಾಭ. ಹೇಳಿ ಇಂಥ ಅದ್ಬುತ ವಸ್ತು ನಿಮಗೆ ಬೇಡವೇ?

ನಿಮ್ಮದೊಂದು ಆಫೀಸ್ ಇದೆಯಾ?

ನಿಮ್ಮದೊಂದು ಆಫೀಸ್ ಎನ್ನುವುದಿದ್ದರೆ ನಿಮಗೊಂದು ಕಂಪ್ಯೂಟರ್ ಬೇಕು. ಇದು ನಿಮಗೆ ಸಾಕಷ್ಟು ಹಣ, ವೇಳೆ, ಸ್ಥಳಾವಕಾಶವನ್ನು ಉಳಿಸುತ್ತದೆ. ಇಬ್ಬರು ಅಸಿಸ್ಟೆಂಟುಗಳು ಮಾಡುವ ಕೆಲಸವನ್ನು ಒಂದೇ ಕಂಪ್ಯೂಟರು ಮಾಡಿ ಮುಗಿಸುತ್ತದೆ.

ಫೋನು, ಫ್ಯಾಕ್ಸ್ ಪತ್ರವ್ಯವಹಾರಗಳನ್ನು ಕಂಪ್ಯೂಟರಿನಲ್ಲೇ ಮಾಡಬಹುದು. ಬೇರೆಯ ಫ್ಯಾಕ್ಸ್ ಮಷಿನ್ ಬೇಕಾಗಿಲ್ಲ. ಟೈಪ್‌ರೈಟರನ್ನು ಗುಜರಿಗೆ ಹಾಕಿ. ನಿಮ್ಮ ಕಂಪ್ಯೂಟರು ಯಾವ ಭಾಷೆಯಲ್ಲಿ ಬೇಕೋ... ಆ ಭಾಷೆಯಲ್ಲಿ ಟೈಪ್ ಮಾಡಬಲ್ಲುದು. ಅದೂ ಟೈಪ್‌ರೈಟರ್‌ಗಿಂತ ಸುಂದರವಾಗಿ, ತಪ್ಪಿಲ್ಲದೇ! ಒಂದು ಇಂಟರ್‌ನೆಟ್ ಸಂಪರ್ಕ ಇದ್ದರಂತೂ ನಿಮಗೆ ಎಸ್‌ಟಿಡಿ/ಐಎಸ್‌ಡಿ ಫೋನ್ ಖರ್ಚೇ ಇಲ್ಲ. ಲೋಕಲ್‌ಕಾಲ್ ದರದಲ್ಲೇ ಪ್ರಪಂಚದ ಯಾವ ಮೂಲೆಗೂ ಮಾತನಾಡಬಹುದು. ಪತ್ರ ಕೊರಿಯರ್ ಅಂತ ದುಡ್ಡು ಸಮಯ ಹಾಳುಮಾಡಬೇಡಿ. ಪುಕ್ಕಟೆ ಈ-ಮೇಲ್ ಮಾಡಿ. ನಿಮ್ಮ ಆಫೀಸ್ ಅಸಿಸ್ಟೆಂಟ್ ರಜೆ ಹಾಕಿದ, ಕೆಲಸ ಬಿಟ್ಟುಬಿಟ್ಟ, ಹೊಸಬನನ್ನು ಹುಡುಕಬೇಕು ಎನ್ನುವ ತಾಪತ್ರಯವಿಲ್ಲ. ಕಂಪ್ಯೂಟರನ್ನು ನೀವು ನಂಬಬಹುದು.

ನೀವು ವೈದ್ಯರೇ? ವಕೀಲರೇ?

ನಿಮ್ಮ ವೃತ್ತಿಯಲ್ಲಿ ನಿಮ್ಮ ಗ್ರಾಹಕರ ಕೇಸ್ ಪೇಪರ್‌ಗಳನ್ನು ವ್ಯವಸ್ಥಿತವಾಗಿ ಇಡುವುದು, ಬೇಕೆಂದಾಗ ಹುಡುಕುವುದು, ಇದೆಲ್ಲಾ ಎಷ್ಟು ತಾಪತ್ರಯ ಎಂದು ನಿಮಗೆ ಗೊತ್ತು. ಇದನ್ನು ಕಂಪ್ಯೂಟರ್ ಮಾಡಿದಷ್ಟು ಸಮರ್ಥವಾಗಿ ಇನ್ಯಾರೂ ಮಾಡಲು ಸಾಧ್ಯವಿಲ್ಲ. ಇತ್ತೀಚೆಗೆ ಬಂದಿರುವ ಕೆಲವು ಸಾಫ್ಟ್‌ವೇರ್‌ಗಳಂತೂ ನಿಮ್ಮ ಗ್ರಾಹಕರ ಸಮಸ್ಯೆಗಳಿಗೆ ತಾವೇ ಉತ್ತಮ ಪರಿಹಾರವನ್ನು ಕೊಡುವ ಸಾಮರ್ಥ್ಯ ಹೊಂದಿವೆ. ರೋಗಗಳಿಗೆ ಚಿಕಿತ್ಸೆಯನ್ನು ಸೂಚಿಸುತ್ತವೆ. ವಕೀಲರಿಗೆ ಕಾನೂನು ಪರಿಹಾರ ಹೇಳುತ್ತವೆ! ಇದಲ್ಲದೇ ಆಫೀಸ್ ಹಾಗೂ ವ್ಯಾವಹಾರಿಕ ಅಗತ್ಯಗಳಿಗೆ ವೈದ್ಯರು, ವಕೀಲರು, ತೆರಿಗೆ ಸಲಹೆದಾರರು ಅಥವಾ ಇಂಥ ವೃತ್ತಿಯವರು ಹೇಗೆ ಕಂಪ್ಯೂಟರನ್ನು ಬಳಸಿಕೊಳ್ಳಬಹುದು ಎಂಬುದನ್ನು ಈ ಮೇಲೆ ಹೇಳಲಾಗಿದೆಯಷ್ಟೇ?

ನೀವು ಇಂಜಿನಿಯರೇ? ಡಿಸೈನರೇ?

ನೀವು ಸಿವಿಲ್ ಇಂಜಿನಿಯರ್ ಆಗಿರಿ, ಆರ್ಕಿಟೆಕ್ಟ್ ಆಗಿರಿ ಅಥವಾ ಇಂಟೀರಿಯರ್ ಎಕ್ಸ್‌ಟೀರಿಯರ್ ಡಿಸೈನರ್ ಆಗಿರಿ, ನಿಮ್ಮ ಗ್ರಾಹಕರಿಗೆ ತೃಪ್ತಿ ಎನಿಸುವಂತಹ ಪ್ಲಾನ್‌ಗಳನ್ನು ನೀವು ಸುಲಭವಾಗಿ ನೀಡಬಹುದು. ನಿಮ್ಮ ಡ್ರಾಯಿಂಗ್ ಕೆಲಸ ಕೂಡ ಸುಲಿದ ಬಾಳೆಹಣ್ಣು ತಿಂದಷ್ಟು ಸುಲಭ! ಇದಲ್ಲದೇ ಯಾವುದೇ ಇಂಜಿನಿಯರ್ ವೃತ್ತಿಗೂ ಈಗ ಕಂಪ್ಯೂಟರ್ ಉಪಕಾರಿ. ಎಲ್ಲಕ್ಕಿಂತ ಮಿಗಿಲಾಗಿ ಕಂಪ್ಯೂಟರ್ ಕೌಶಲ್ಯವಿಲ್ಲದ ಇಂಜಿನಿಯರಿಗೆ ಎಲ್ಲೂ ಕೆಲಸ ಸಿಗುವುದಿಲ್ಲ.

ನೀವು ಕಲಾವಿದರೇ?

ನಿಮ್ಮಿಂದ ಬಿಡಿಸಲು ಸಾಧ್ಯವಿಲ್ಲದ್ದನ್ನು ಅತ್ಯಂತ ಕರಾರುವಾಕ್ಕಾಗಿ ಕಂಪ್ಯೂಟರು ಬಿಡಿಸ ಬಲ್ಲದು. ಪೆನ್ಸಿಲು, ಬಣ್ಣದಿಂದ ಮಾಡಬಹುದಾದದ್ದನ್ನಷ್ಟೇ ಅಲ್ಲದೇ ಇನ್ನೂ ಅದ್ಭುತವಾದದ್ದನ್ನೂ ಕಂಪ್ಯೂಟರಿನಿಂದ ಮಾಡಲು ಸಾಧ್ಯ. ಇಂದು ಪ್ರಪಂಚದ ಅಗ್ರಗಣ್ಯ ಕಲಾವಿದರಿಂದ ಹಿಡಿದು ಪತ್ರಿಕೆಗಳಲ್ಲಿ, ಜಾಹೀರಾತು ಕಚೇರಿಗಳಲ್ಲಿ ಕೆಲಸ ಮಾಡುವ ಕಮರ್ಷಿಯಲ್ ಆರ್ಟಿಸ್ಟ್‌ಗಳವರೆಗೆ ಎಲ್ಲರೂ ಕಂಪ್ಯೂಟರಿನಲ್ಲೇ ಚಿತ್ರ ರಚಿಸುತ್ತಾರೆ. ಭಾವಚಿತ್ರದಿಂದ ಹಿಡಿದು ಮಾಡರ್ನ್ ಆರ್ಟ್‌ವರೆಗೆ ಎಲ್ಲ ಶೈಲಿಯಲ್ಲೂ ಚಿತ್ರ ಬಿಡಿಸಿ ಬಣ್ಣ ಹಾಕಲು ಸಾಧ್ಯವಿದೆ. ಇದನ್ನೇ ಡಿಜಿಟಲ್ ಆರ್ಟ್ ಎನ್ನುತ್ತಾರೆ.

ನೀವು ಸಿನಿಮಾ ಮಂದಿಯೇ?

ಸಿನಿಮಾ ಹಾಗೂ ಕಂಪ್ಯೂಟರು ಈಗ ಒಂದೇ ನಾಣ್ಯದ ಎರಡು ಮುಖಗಳಿದ್ದ ಹಾಗೆ. ಜುರಾಸಿಕ್ ಪಾರ್ಕಿನ ಪೆಡಂಭೂತಗಳಿಂದ ಹಿಡಿದು ಇತ್ತೀಚಿನ ಗಾಡ್‌ಝಿಲಾವರೆಗೆ ಏನೇನನ್ನೆಲ್ಲ ಕಂಪ್ಯೂಟರ್‌ನಲ್ಲಿ ಮಾಡಿ ಅದ್ಭುತ ಸಿನಿಮಾವನ್ನು ತಯಾರಿಸಲಾಗಿದೆ ಗೊತ್ತಲ್ಲ? ಉತ್ತಮ ಸಂಕಲನ, ಉತ್ತಮ ಪ್ರಾಸೆಸಿಂಗ್, ಉತ್ತಮ ಧ್ವನಿಮುದ್ರಣ ಮಾಡುವ ಎಲ್ಲ ಹಂತಗಳಲ್ಲೂ ಕಂಪ್ಯೂಟರ್ ಬೇಕು. ಕಾರ್ಟೂನ್ ಚಿತ್ರಮಾಡುವುದಂತೂ ಕಂಪ್ಯೂಟರಿನಿಂದಾಗಿ ಅತ್ಯಂತ ಸುಲಭವಾಗಿದೆ. ಹಾಗಾಗಿ ನೀವು ಸಿನಿಮಾ ಕ್ಷೇತ್ರದವರಾದರೆ, ಕಂಪ್ಯೂಟರ್‌ನ ಚಮತ್ಕಾರ ನಿಮಗೆ ಅತ್ಯಗತ್ಯ. ಇಲ್ಲವಾದರೆ ಈ ಹೈಟೆಕ್ ಯುಗದಲ್ಲಿ ನೀವು ಫ್ಲಾಪ್!

ನೀವು ನಿರುದ್ಯೋಗಿಗಳೇ?

ನಿಜಕ್ಕೂ ಕಂಪ್ಯೂಟರುಗಳು ನಿರುದ್ಯೋಗಿಗಳಿಗೆ ಒಂದು ವರ. ಅದನ್ನು ಅವರು ಅರ್ಥ ಮಾಡಿಕೊಂಡಿಲ್ಲ. ಅರ್ಥ ಮಾಡಿಕೊಂಡಿದ್ದರೆ ಈಗಾಗಲೇ ಅವರು ಉದ್ಯೋಗಿಗಳಾಗಿರುತ್ತಿದ್ದರು. 'ಕಂಪ್ಯೂಟರ್ ಸರ್ವಿಸಸ್' ಎನ್ನುವುದು ಇದೀಗ ಅತ್ಯಂತ ಲಾಭದಾಯಕ ವ್ಯವಹಾರ. ಒಂದು ಕಂಪ್ಯೂಟರನ್ನು ಕೊಂಡು ಬಾಡಿಗೆಗೆ ಕೊಡುವುದರಿಂದ ಹಿಡಿದು, ವಿವಿಧ ಸೇವೆಗಳನ್ನು ಒದಗಿಸುವವರೆಗೆ ನೂರಾರು ರೀತಿಯಲ್ಲಿ ಸ್ವಯಂ ಉದ್ಯೋಗ ಮಾಡಬಹುದು. ಕಂಪ್ಯೂಟರನ್ನು ಕಲಿಸುವುದು ಸಹ ಈಗ ದೊಡ್ಡ ಬಿಸಿನೆಸ್ಸೇ ಆಗಿದೆ. ಈ ಕುರಿತು ಬರುವ ವಾರಗಳಲ್ಲಿ ಚರ್ಚಿಸೋಣ.

ನೀವು ಫೋಟೋಗ್ರಾಫರೇ?

ಎಲ್ಲರಿಗೂ ಒಂದು ಗೊಂದಲವಿರುತ್ತದೆ. ಹೀಗೆ ಹೇರ್ ಸ್ಟೈಲ್ ಮಾಡಿಕೊಂಡರೆ ಹೇಗಿರುತ್ತೆ? ಈ ಥರಾ ಡ್ರೆಸ್ ಹಾಕಿಕೊಂಡರೆ ಚಂದ ಕಾಣ್ತೀನಾ? ಯಾವ ಆ್ಯಂಗಲ್‌ನಲ್ಲಿ ನನ್ನ ಫೋಟೋ ಚೆನ್ನಾಗಿ ಬರುತ್ತೆ? ಇಂಥ ಪ್ರಶ್ನೆಗಳಿಗೆ ಉತ್ತರಿಸಲು ಕಂಪ್ಯೂಟರ್ ನೆರವು ನೀಡುತ್ತದೆ. ಯಾವುದು ಸೂಕ್ತ ಎಂದು ಸಲಹೆ ನೀಡುತ್ತದೆ. ಇಂಥ ಸೌಲಭ್ಯವುಳ್ಳ ಕಂಪ್ಯೂಟರ್‌ಗಳನ್ನು ಫೋಟೋಗ್ರಾಫರು, ಟೈಲರು, ಬ್ಯೂಟೀಷಿಯನ್ ಮುಂತಾದವರು ಸ್ಥಾಪಿಸಿದರೆ ಅವರ ಅಂಗಡಿ ಎದುರು ಜನ ಕ್ಯೂ ನಿಲ್ಲುತ್ತಾರೆ!

ನೀವು ಗೃಹಸ್ಥರೇ? ಗೃಹಿಣಿಯೇ?

ಕಂಪ್ಯೂಟರು ಬರೀ ಕೆಲಸ ಮಾಡಲು ಮಾತ್ರವಲ್ಲ, ಮನರಂಜನೆಗೆ, ಜ್ಞಾನಾರ್ಜನೆಗೆ, ಕಾಲಕ್ಷೇಪಕ್ಕೆ ಕೂಡ ಉಪಯುಕ್ತ. ಒಂದು ಕಂಪ್ಯೂಟರು ಮನೆಯಲ್ಲಿದ್ದರೆ, ಒಬ್ಬ ವೈದ್ಯಕೀಯ ಸಲಹೆಗಾರ, ಒಬ್ಬ ಟ್ಯೂಶನ್ ಮಾಸ್ತರು, ಒಬ್ಬ ಸಂಗೀತ ಮೇಸ್ಟ್ರು, ಹೊಸ ರುಚಿ ಪುಸ್ತಕ, ಟೈಪಿಂಗ್ ಕ್ಲಾಸು, ಆಟದ ಬಯಲು, ಅಷ್ಟೇ ಏಕೆ ಎನ್‌ಸೈಕ್ಲೋಪೀಡಿಯಾ ಮೂಲಕ ಬ್ರಹ್ಮಾಂಡವೇ ನಿಮ್ಮ ಮನೆಯಲ್ಲಿದ್ದ ಹಾಗೆ! ಈ ಬಗ್ಗೆ ಇನ್ನೊಮ್ಮೆ ವಿವರವಾಗಿ ನೋಡೋಣ. ಒಂದಂತೂ ಹೇಳಬಲ್ಲೆ ಇತ್ತೀಚೆಗೆ ಬಂದಿರುವ ಒಂದು ಕಂಪ್ಯೂಟರನ್ನು ಕೊಂಡರೆ ನೀವು ಪ್ರತ್ಯೇಕವಾಗಿ ಟೀವಿ, ಸ್ಟೀರಿಯೋ, ವಿಸಿಆರ್, ರೇಡಿಯೋ, ಗಡಿಯಾರ, ಕ್ಯಾಲ್ಕ್ಯುಲೇಟರ್, ಅಡ್ರೆಸ್ ಬುಕ್, ಫೋನು, ಫ್ಯಾಕ್ಸು ಏನೂ ಕೊಳ್ಳಬೇಕಾಗಿಲ್ಲ. ಎಲ್ಲಾ ಕಂಪ್ಯೂಟರ್‌ನಲ್ಲೇ ಇರುತ್ತೆ! ಇಂಟರ್‌ನೆಟ್ ಸಂಪರ್ಕ ಇದ್ದರಂತೂ ಮುಗಿಯಿತು. ಪ್ರಪಂಚವೇ ನಿಮ್ಮ ಮನೆಯಲ್ಲಿದ್ದಂತೇ ಲೆಕ್ಕ.

ನೀವು ಮನುಷ್ಯರೇ?

ಕೊನೆಯದಾಗಿ ಒಂದು ಮಾತು. ಈ ಮೇಲೆ ಹೇಳಿದ ಯಾರೂ ನೀವಾಗಿರದಿದ್ದರೆ ನೀವು ಮನುಷ್ಯರಂತೂ ಆಗಿರಲೇ ಬೇಕಲ್ಲ. ಹಾಗಾದರೆ ನಿಮಗೆ ಒಂದಲ್ಲ ಒಂದು ರೀತಿಯಲ್ಲಿ ಕಂಪ್ಯೂಟರು ಬೇಕೇಬೇಕು. ಕಂಪ್ಯೂಟರು ಯಾರಿಗೆ ಬೇಡ

ಕಂಪ್ಯೂಟರ್ - ಟಿವಿ: ಟೂ ಇನ್ ಒನ್

ಟಿವಿ ಕಂಪ್ಯೂಟರ್ ಆಗುತ್ತೋ? ಕಂಪ್ಯೂಟರ್ ಟಿವಿಯಾಗುತ್ತೋ? ಗೊತ್ತಿಲ್ಲ. ಅಂತೂ.. ಇನ್ನು ಎರಡೇ ವರ್ಷದಲ್ಲಿ ಎರಡೂ ಒಂದೇ ಆಗುತ್ತೆ. ಟೂ ಇನ್ ಒನ್!

ಟಿವಿಯನ್ನೇ ಕಂಪ್ಯೂಟರ್ ಮಾಡಲು ಟಿವಿ ಕಂಪನಿಗಳು ಈಗಾಗಲೇ ಯತ್ನಿಸುತ್ತಿವೆ. ಟಿವಿಯಲ್ಲಿ ಸಿಡಿ ಪ್ಲೇಯರ್, ಫ್ಯಾಕ್ಸ್, ಫೋನ್, ಡಿಜಿಟಲ್ ಕ್ಯಾಮರಾ, ಇಂಟರ್‌ನೆಟ್ ಸಾಫ್ಟ್‌ವೇರ್, ವಿಡಿಯೋಗೇಮ್ಸ್ ಮುಂತಾದವುಗಳನ್ನೆಲ್ಲ ಅಳವಡಿಸುತ್ತಿವೆ.

ಇದರಿಂದ ವಿಸಿಆರ್ ಬೇಕಾಗಿಲ್ಲ. ಸಿಡಿಗಳ ಮೂಲಕ ಬೇಕಾದ ಸಿನಿಮಾ ನೋಡಬಹುದು. ಸಂಗೀತ ಆಲಿಸಬಹುದು ಅಥವಾ ಬೇಕಾದದ್ದನ್ನು ರೆಕಾರ್ಡ್ ಕೂಡ ಮಾಡಿಕೊಳ್ಳಬಹುದು. ಫ್ಯಾಕ್ಸ್ ಉಪಕರಣ ಬೇಕಾಗಿಲ್ಲ. ಕೇಬಲ್ ಟೀವಿಯವನ ಕೇಬಲ್ ಜಾಲದ ಮೂಲಕ ಫ್ಯಾಕ್ಸ್ ಸಂದೇಶ ಹರಿದುಬಂದು ಟೀವಿಯಲ್ಲಿ ಕಾಣಿಸುತ್ತದೆ. ಬೇಕಾದರೆ ಟೀವಿ ತಲೆಯಲ್ಲಿರಿಸಿದ ಕಾಗದದ ಮೇಲೆ ಪ್ರಿಂಟಾಗಿ ಹೊರಬರುತ್ತದೆ.

ಡಿಜಿಟಲ್ ಕ್ಯಾಮರಾ ಹಾಗೂ ಫೋನು ಟಿವಿಯಲ್ಲೇ ಇರುವುದರಿಂದ ಫೋನಿನಲ್ಲಿ ಮಾತನಾಡುವಾಗ ಆಚೆ ಮಾತನಾಡುವವರನ್ನು ನೋಡಬಹುದು. ನೀವೂ ಅವರಿಗೆ ಕಾಣುತ್ತೀರಿ. ಇದೊಂಥರ ವೀಡಿಯೋ ಕಾನ್ಫರೆನ್ಸ್ ಇದ್ದಂತೆ.

ಕೇಬಲ್ ಟೀವಿ ಆಪರೇಟರ್‌ಗಳು ಸದ್ಯವೇ ತಮ್ಮ ಕೇಬಲ್‌ಗಳಲ್ಲಿ ಇಂಟರ್‌ನೆಟ್ ಸಂಪರ್ಕವನ್ನು ಕೊಡಲಿದ್ದಾರೆ. ಆಗ ಟಿವಿ ಚಾನಲ್ ಬದಲಾಯಿಸಿದಂತೇ ಇಂಟರ್‌ನೆಟ್ ಜಾಲದಲ್ಲೂ ನೀವು ಹರಿದಾಡಬಹುದು. ಶೀಘ್ರದಲ್ಲಿ ನನಸಾಗಲಿರುವ ಈ ಕನಸೇ ಒಂದು ಥ್ರಿಲ್ಲು!

ಟಿವಿಯನ್ನು ಕಂಪ್ಯೂಟರ್ ಮಾಡುವ ಮೊದಲ ಹೆಜ್ಜೆಯಾಗಿ ಈಗಾಗಲೇ ಸ್ಯಾನ್‌ಸುಯಿ ಟೀವಿ ಕಂಪನಿ ತನ್ನ ಕಂಪ್ಯೂಟರಿನಲ್ಲಿ 100 ಹರ್ಟ್ಸ್ ಕಂಪ್ಯೂಟರ್ ಚಿಪ್ ಅಳವಡಿಸಿದೆ. ಅದು ಈಗಾಗಲೇ ರಾಜ್ಯದ ಮಾರುಕಟ್ಟೆಗೂ ಬಿಡುಗಡೆಯಾಗಿದೆ. ■

ಅಂದರೆ.... ಪ್ರಾಣಿಗಳಿಗೆ ಪಕ್ಷಿಗಳಿಗೆ ಕಾಡುಮರಗಳಿಗೆ, ಕಲ್ಲುಮಣ್ಣು ಮುಂತಾದ ಜಡವಸ್ತುಗಳಿಗೆ! ಹೇಳಿ ನಿಮಗೆ ಬೇಡವೇ ಕಂಪ್ಯೂಟರ್? ■

ಚಾಟ್ ರೂಂ

ನನ್ನದೊಂದು ಟೈಪಿಂಗ್ ಸೆಂಟರ್ ಇದೆ. ಇಲೆಕ್ಟ್ರಾನಿಕ್ ಟೈಪರೈಟರ್ ಖರೀದಿ ಮಾಡೋಣ ಎಂದುಕೊಂಡಿದ್ದೆ. ಆದರ ಬದಲಿಗೆ ಕಂಪ್ಯೂಟರ್ ಹಾಕು ಎಂದು ಯಾರೋ ಹೇಳಿದರು. ಏನು ಮಾಡಲಿ? ನನಗೆ ಕಂಪ್ಯೂಟರ್ ಬಗ್ಗೆ ಏನೂ ಗೊತ್ತಿಲ್ಲ. ಮಾರ್ಗದರ್ಶನ ನೀಡಿ.

-ಬಿ.ಸಿ. ಗೋಪಾಲ, ಮೈಸೂರು

ಟೈಪಿಂಗ್ ಸೆಂಟರ್ ಈಗ ಔಟ್‌ಡೇಟೆಡ್. ಇಲೆಕ್ಟ್ರಾನಿಕ್ ಟೈಪ್‌ರೈಟರ್ ಕೂಡ ಲಾಭದಾಯಕವಲ್ಲ. ಅದರ ಬದಲಿಗೆ ಕಂಪ್ಯೂಟರ್ ಹಾಗೂ ಒಂದು ಲೇಸರ್ ಪ್ರಿಂಟರ್ ಅಥವಾ ಉತ್ತಮ ಇಂಕ್‌ಜೆಟ್ ಪ್ರಿಂಟರ್ ಕೊಳ್ಳುವುದು ಒಳ್ಳೆಯದು. ಯಾರೋ ನಿಮಗೆ ಒಳ್ಳೆಯ ಸಲಹೆಯನ್ನೇ ನೀಡಿದ್ದಾರೆ.

ಟೈಪಿಂಗ್ ಕೆಲಸಕ್ಕಷ್ಟೇ ಬಳಸುವುದಾದರೆ, ನೀವು ಇನ್ಯಾವ ತರಬೇತಿಯನ್ನು ಪಡೆಯುವುದು ಬೇಡ. ಕಂಪ್ಯೂಟರ್ ಜೊತೆಯಲ್ಲಿ **Windows** ಪ್ಯಾಕೇಜ್ ಜೊತೆ **Write** ಎಂಬ ಪ್ರೋಗಾಂ ಇರುತ್ತದೆ. ಇದು ನಿಮ್ಮ ಟೈಪಿಂಗ್‌ಗೆ ಸಮಾನವಾಗಿದೆ. ಆದ್ದರಿಂದ ಕೇವಲ ಒಂದೆರಡು ಗಂಟೆಯಲ್ಲಿ ನೀವು ಅದನ್ನೆಲ್ಲ ಕಲಿತುಬಿಡಬಹುದು.

ಆದರೆ ಕಂಪ್ಯೂಟರ್ ಇರುವಾಗ ಬರೀ ಟೈಪಿಂಗ್‌ಗೆ ಮಾತ್ರ ಯಾಕೆ ಸೀಮಿತವಾಗಬೇಕು. ನಿಮ್ಮ ಕೆಪ್ಯಾಸಿಟಿ ಇನ್ನೂ ಹೆಚ್ಚಾಗಿರುತ್ತದೆ. ಟೈಪಿಂಗ್ ಸೆಂಟರ್ ಎನ್ನುವ ಬದಲಿಗೆ ಡಿಟಿಪಿ ಸೆಂಟರ್ ಎಂದು ಹೆಸರು ಬದಲಾಯಿಸಿ ಬಿಡಿ.

ಆಗ ನೀವು **DTP - Desk Top Publishing** ಕಲಿಯಬೇಕಾಗುತ್ತದೆ. ಇದೇನೂ ಮಹಾವಿದ್ಯೆಯಲ್ಲ. ಒಂದು ವಾರದಿಂದ ಒಂದು ತಿಂಗಳೊಳಗಾಗಿ ನೀವು ಕಲಿತುಬಿಡಬಹುದು. ಪ್ರಚಲಿತ **DTP** ಪ್ಯಾಕೇಜ್ ಎಂದರೆ **Pagemaker,** ಇದನ್ನು ಬಿಟ್ಟರೆ **Quark xpress** ಎನ್ನುವ ಪ್ಯಾಕೇಜ್ ಚೆನ್ನಾಗಿದೆ. **Ventura** ಎನ್ನುವ ಇನ್ನೊಂದು ಪ್ಯಾಕೇಜ್ ಕೂಡ ಪರವಾಗಿಲ್ಲ. ಜೊತೆಯಲ್ಲಿ ನೀವು **Windows, Fundamentals** ಕೂಡ ಕಲಿಯಬೇಕು. ಇದನ್ನು 1 ತಾಸಿನಲ್ಲಿ ಕಲಿತು ಬಿಡಬಹುದು...ಬಿಡಿ.

ಇದಲ್ಲದೇ **Wordstar** ಕಾಂಪೊಸಿಂಗ್ ಪ್ಯಾಕೇಜ್ ಕಲಿತಿದ್ದರೆ ಒಳ್ಳೆಯದು. ಪುಸ್ತಕಗಳ **DTP** ಕೆಲಸಕ್ಕೆ ಅನುಕೂಲವಾಗುತ್ತದೆ. ಇನ್ನು ಕನ್ನಡ ಅಥವಾ ಇತರ ಭಾರತೀಯ ಭಾಷೆಗಳ **DTP** ಕೆಲಸಕ್ಕೆ ಪ್ರತ್ಯೇಕ ಪ್ಯಾಕೇಜ್ ಇದೆ. **Sreelipi** ಪ್ರಸಿದ್ಧ ಪ್ಯಾಕೇಜ್. ಪೇಜ್‌ಮೇಕರ್ ಕಲಿತರೆ ಇದು ಏನೂ ಮಹಾ ಅಲ್ಲ. ಎಲ್ಲೋ ಅಲ್ಪಸ್ವಲ್ಪ ಬದಲಾವಣೆ ಅಷ್ಟೆ.

ಪೇಜ್‌ಮೇಕರ್ ಇದ್ದರೆ, ಯಾರಾದರೂ ಸಾಫ್ಟ್‌ವೇರ್ ಇಂಜಿನಿಯರ್ ನೆರವಿನಿಂದ ಭಾರತೀಯ ಭಾಷೆಗೆ ಕಸ್ಟಮೈಸ್ ಮಾಡಿಸಿಕೊಳ್ಳಬಹುದು. ಆಗ **Sreelipi** ಬೇಕಾಗಿಲ್ಲ. ಎರಡರಲ್ಲಿ ಯಾವುದಾದರೂ ಒಂದು ಪ್ಯಾಕೇಜ್ ಸಾಕು. **Sreelipi** ಬಹಳ ಸೋವಿ. **Pagemaker** ಹೆಚ್ಚು ಪವರ್‌ಫುಲ್. ಆದರೆ ದುಬಾರಿ.

ಇದನ್ನೆಲ್ಲ ಕಲಿಯಲು ಸಾಧಾರಣ 1000 ರೂ.ನಿಂದ 3000 ರೂ. ಆಗಬಹುದು. ■

Y2K ಟೈಂ ಬಾಂಬ್

31.12.1999ರ ರಾತ್ರಿ 12 ಗಂಟೆ ದಾಟಿದ ಮರುಕ್ಷಣ ಪ್ರಪಂಚಾದ್ಯಂತ ಕಂಪ್ಯೂಟರ್‌ನಲ್ಲಿ ಟೈಂಬಾಂಬ್ ಸಿಡಿಯಲಿದೆ. ಈ ಬಗ್ಗೆ ನೀವು ಈಗಾಗಲೇ ಕೇಳಿರಬಹುದು. ಇದನ್ನು ಸಾಮಾನ್ಯವಾಗಿ **Y2K** (ವೈ ಟುಕೆ) ಪ್ರಾಬ್ಲಂ ಎಂದು ಕರೆಯಲಾಗುತ್ತಿದೆ.

ಈ ಟೈಂಬಾಂಬ್ ನಿಜಕ್ಕೂ ಸಿಡಿಯುವಂಥದ್ದಲ್ಲ. ಆದರೆ 2000ನೇ ಇಸ್ವಿಯ ಆರಂಭದ ಕ್ಷಣದಿಂದ ಪ್ರಪಂಚದ ಎಲ್ಲಾ ಕಂಪ್ಯೂಟರುಗಳೂ ಎಡವಟ್ಟಾಗುತ್ತವೆ. ಲೆಕ್ಕ ತಪ್ಪುತ್ತವೆ. ಎರ್ರಾಬಿರ್ರಿಯಾಗಿ ಉತ್ತರ ನೀಡುತ್ತವೆ. ಯಾಕೆ?

ಯಾಕೆಂದರೆ, ಈಗಿನ ಕಂಪ್ಯೂಟರ್‌ನಲ್ಲಿ ಸಾಫ್ಟ್‌ವೇರ್ ಪ್ರೋಗ್ರಾಂ ಬರೆಯುವಾಗ ಒಂದು ಸಣ್ಣ ತಪ್ಪಾಗಿದೆ. ದಿನಾಂಕ ಬರೆಯುವಾಗ ಇಸ್ವಿಯಲ್ಲಿನ ನಾಲ್ಕು ಅಂಕೆಗಳ ಬದಲು ಕೊನೆಯ ಎರಡು ಅಂಕೆಗಳನ್ನು ಮಾತ್ರ ಕಂಪ್ಯೂಟರು ಗುರುತಿಸುವಂತೆ ಮಾಡಲಾಗಿದೆ. ಇದರಿಂದ 1998ನ್ನು 98 ಅಂತಲೂ 1999ನ್ನು 99 ಎಂತಲೂ 2000ವನ್ನು ಕಂಪ್ಯೂಟರು 00 ಎಂತಲೂ ಗುರುತಿಸುತ್ತದೆ. ಸರಿಯಷ್ಟೇ?

ಇದೇ ಸಮಸ್ಯೆಯ ಮೂಲ. 2000 ನೇ ಇಸ್ವಿಯ ಆರಂಭದ ಕ್ಷಣದಿಂದ ಕಂಪ್ಯೂಟರು ಯಾವುದೇ ದಿನಾಂಕವನ್ನು '00' ದಿಂದ ಕಳೆಯಲು, ಗುಣಿಸಲು, ಕೂಡಿಸಲು, ಭಾಗಿಸಲು ಆರಂಭಿಸುತ್ತದೆ. ಆಗ ಉತ್ತರ ಎರ್ರಾಬಿರ್ರಿಯಾಗಿರುತ್ತದೆಯಲ್ಲವೇ? ನಿಜಕ್ಕೂ '00' ಬದಲು 2000 ಎಂದಿದ್ದರೆ ಈ ಸಮಸ್ಯೆಯೇ ಇರುತ್ತಿರಲಿಲ್ಲ.

ಈ ಸಣ್ಣ ತಪ್ಪಿನಿಂದಾಗಿ ಪ್ರಪಂಚಾದ್ಯಂತ ಎಲ್ಲಾ ಬ್ಯಾಂಕುಗಳು, ವಿಮಾ ಕಂಪನಿಗಳು ಮುಂತಾದವುಗಳ ಮೇಲೆ ಭಯಂಕರ ಪರಿಣಾಮ ಬೀರುತ್ತದೆ. ಅಣುಶಕ್ತಿ ಕೇಂದ್ರದ ಕಂಪ್ಯೂಟರುಗಳು ಈ ರೀತಿ ಯರ್ರಾಬಿರ್ರಿಯಾದರೆ ಒಂದೊಂದು ಅಣುಶಕ್ತಿಕೇಂದ್ರವೂ ಸ್ಫೋಟಿಸಬಹುದು! ಅಂದರೆ ಭೂಮಿ ನಾಶವಾಗಿಬಿಡಬಹುದು!

ಆದರೆ, ಅದೃಷ್ಟವಶಾತ್ ಹಾಗಾಗುವುದಿಲ್ಲ. ಈ ತಪ್ಪನ್ನು ಸರಿಪಡಿಸಲು ಈಗ ಪ್ರಯತ್ನಿಸಲಾಗುತ್ತಿದೆ. '00' ಬದಲು '2000' ಎಂದು ಕಂಪ್ಯೂಟರಿನಲ್ಲಿ ಪೂರ್ಣ ಇಸ್ವಿಯನ್ನು ಬರೆಯಲಾಗುತ್ತಿದೆ. ಈ ಕೆಲಸ 31-12-1999 ಮಧ್ಯರಾತ್ರಿಯೊಳಗಾಗಿ ಮುಗಿಯಬೇಕಾಗಿದೆ. ಅದಕ್ಕೇ ಲಕ್ಷಾಂತರ ಎಂಜಿನಿಯರುಗಳು ದುಡಿಯುತ್ತಿದ್ದಾರೆ. ಅಂಥ ಇಂಜಿನಿಯರುಗಳಿಗೆ ಈಗ ಸಿಕ್ಕಾಪಟ್ಟೆ ಬೇಡಿಕೆ.

ಇಷ್ಟಕ್ಕೂ **Y2K** ಎಂದರೆ ಏನು ಗೊತ್ತಾ?

Y ಅಂದರೆ **Year**

2K ಅಂದರೆ **2 Kilo**

ಅಂದರೆ 2000

ಅರ್ಥಾತ್ 'ಇಯರ್ 2000' ಸಮಸ್ಯೆ ಎಂದು.

ತಮಾಷೆಯ ವಿಷಯ ಎಂದರೆ ಕಂಪ್ಯೂಟರ್ ಇಂಜಿನಿಯರುಗಳು ಈಗ ಸಾವಿರ, ಥೌಸಂಡ್ ಎನ್ನುವ ಶಬ್ದವನ್ನೇ ಬಿಟ್ಟುಬಿಟ್ಟಿದ್ದಾರೆ. ಸಾವಿರ ಎನ್ನುವ ಬದಲು 'ಕಿಲೊ' ಎನ್ನುತ್ತಾರೆ. ನಿಮಗೆ ಎಷ್ಟು ಸಂಬಳ ಎಂದು ಪ್ರಶ್ನಿಸಿದರೆ 15 ಕಿಲೋ ಎನ್ನುತ್ತಾರೆ!

ಅವರಿಗೆ ಕಿಲೋಗಟ್ಟಲೆ ಸಂಬಳ. ಅವರಲ್ಲೇ ಇನ್ನೂ ಬುದ್ಧಿವಂತರಿಗೆ ಟನ್‌ಗಟ್ಟಲೆ! ■

ಪುನರ್ಜನ್ಮದ ಚಿದಂಬರ ರಹಸ್ಯ 'ಕೇಸಿ' ವಾಚನಗಳು

ಎಡ್ಗರ್ ಕೇಸಿ (Edgar Cayce- 1877-1945), ಅಮೇರಿಕೆಯ ಕೆಂಟಕಿಯಲ್ಲಿ ಜನಿಸಿ ವರ್ಜಿನಿಯಾದ ಬೀಚ್‌ನಲ್ಲಿ ವಾಸಿಸಿದ. ಆತನಿಗೆ ಒಂದು ಪ್ರಕಾರದ ನಿದ್ರೆ ಬರುತ್ತಿತ್ತು. ಆ ಅವಸ್ಥೆಯಲ್ಲಿ ಆತ ಅತಿ ವಿಶಿಷ್ಟ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ. ಆತ ನುಡಿದದ್ದೆಲ್ಲವನ್ನು ಶೀಘ್ರಲಿಪಿಯಲ್ಲಿ ನೋಂದಾಯಿಸಿಕೊಂಡು ಬಳಿಕ ಅದನ್ನು ವಾಚನ (reading) ಎಂದು ಪ್ರಕಟಿಸಲಾಗುತ್ತಿತ್ತು. ಆತ 43 ವರ್ಷ ಈ ಕೆಲಸ ಮಾಡಿದ. ಆ ಅವಧಿಯಲ್ಲಿ ಪ್ರತ್ಯಕ್ಷವಾಗಿ, ಪತ್ರಮುಖೇನ ಆತನನ್ನು ಸಂಪರ್ಕಿಸಿದ ಜ್ಞಾತ ಅಜ್ಞಾತ ವ್ಯಕ್ತಿಗಳಲ್ಲಿ 6000 ಜನರಿಗೆ ಆತ ನೀಡಿದ ಸಲಹೆ, ಸಮಾಧಾನಗಳನ್ನೊಳಗೊಂಡ ವಾಚನಗಳು 14,000 ಕ್ಕೂ ಹೆಚ್ಚಿವೆ. ಇದರಿಂದ ಖ್ಯಾತನಾದ ಕೇಸಿಯನ್ನು ''ವರ್ಜಿನಿಯಾ ಬೀಚಿನ ಪವಾಡ ಪುರುಷ'' ಎಂದು ಕರೆಯಲಾಗುತ್ತಿತ್ತು.

ಆಗಸ್ಟ್ ಸಂಚಿಕೆಯಲ್ಲಿ ಪುನರ್ಜನ್ಮದ ಬಗ್ಗೆ ಅಭಿಪ್ರಾಯ ಸಂಗ್ರಹಣೆ ನೀಡಲಾಯಿತು. ಈ ಚರ್ಚೆಗೆ ಹೊಸ ಆಯಾಮ ದೊರಕಿಸುವಂತಹ ವಿವರಗಳು ಇಲ್ಲಿವೆ.

■ ಬಸವರಾಜ ಪುರಾಣಿಕ

ಏಕೈಕ ವ್ಯಕ್ತಿಯಿಂದ ಉದ್ಭವಿಸಿದ ಮಾನಸಿಕ ವಾಚನಗಳ ಅತಿ ದೊಡ್ಡ ಹಾಗೂ ಅಷ್ಟೇ ಪ್ರಭಾವಶಾಲಿಯಾದ ದಾಖಲೆ ಎಂದು ಪರಿಗಣಿಸಲ್ಪಟ್ಟಿದೆ. ಈ ವಾಚನಗಳನ್ನು ಹಾಗೂ ಅವುಗಳಿಗೆ ಸಂಬಂಧಿಸಿದ ವಿವರಗಳು, ಪತ್ರವ್ಯವಹಾರಗಳನ್ನು ಒಂದೆಡೆ ಸೇರಿಸಿ ಅವುಗಳನ್ನು ಸಾವಿರಾರು ವಿಷಯಗಳ ತಲೆಬರಹಗಳ ಅಡಿಯಲ್ಲಿ ಪ್ರತಿಸೂಚಿತ (Cross index) ಮಾಡಲಾಗಿದೆ. ಆ ದಾಖಲೆಗಳನ್ನು ಪರೀಕ್ಷಿಸಲೆಂದು ಇಂದಿಗೂ ಮಾನಸಶಾಸ್ತ್ರಜ್ಞರು, ವಿದ್ಯಾರ್ಥಿಗಳು, ಲೇಖಕರು ಹಾಗೂ ತನಿಖೆದಾರರು ಬರುವುದುಂಟು. ಅವರ ಗಮನಕ್ಕೆ ಎಲ್ಲ ದಾಖಲೆಗಳನ್ನು ಒದಗಿಸಲಾಗುತ್ತದೆ.

ಕೇಸಿ ಅಷ್ಟೆಲ್ಲ ಖ್ಯಾತಿ ಪಡೆದಿದ್ದರೂ ಅದನ್ನೆಂದು ಆತ ತನಗಾಗಿ ಬಳಸಿಕೊಳ್ಳಲಿಲ್ಲ. ಹಾಳತನಾದ (frugal) ಜೀವನ ನಡೆಸಿದ. ಆತನ 'ವಾಚನ'ಗಳಿಂದ ಪ್ರಭಾವಿತರಾಗಿ ಆತನಲ್ಲಿ ಸಮಾಧಾನಕ್ಕಾಗಿ ಬರುವ ಜನರ ಸಂಖ್ಯೆ ಅಧಿಕವಾದಂತೆ ಅದು ಆತನಿಗೆ ದೊಡ್ಡ ಭಾರ ಎನಿಸಿತು. ಆದರೂ ಯಾವೊಬ್ಬನನ್ನು ಅವನ ಸಮಸ್ಯೆಗೆ ಪರಿಹಾರ ನೀಡದೆ ಹಿಂದಿರುಗಿಸಲಿಲ್ಲ.

ಕೇಸಿ 'ವಾಚನ'ಗಳಲ್ಲಿ ಪುನರ್ಜನ್ಮದ ಪ್ರಸ್ತಾಪ ಸಾಕಷ್ಟಿದೆ; ಕರ್ಮಸಿದ್ಧಾಂತದ ಉಲ್ಲೇಖ ಪದೇ ಪದೇ ಕಂಡುಬರುತ್ತದೆ. ಆತನ ವಾಚನಗಳಿಂದ ತಮ್ಮ ಹಿಂದಿನ ಜನ್ಮದ ತಫಸೀಲು ಪಡೆದುಕೊಂಡು ಅವುಗಳನ್ನು ದೃಢೀಕರಿಸಿ ಆಶ್ಚರ್ಯದೊಂದಿಗೆ ಆರೋಗ್ಯ ಸಂಪಾದಿಸಿದವರು ಅನೇಕ. ಸಾವಿರಾರು ಮೈಲುಗಳಷ್ಟು ದೂರ ಇರುವ ಅಪರಿಚಿತನ ಅನಾರೋಗ್ಯದ ನಿರ್ಧಾರ ಮಾಡುವಾಗ ಅವನ ಪೂರ್ವಜನ್ಮದ ಕರ್ಮಸಂಚಯದಿಂದುಂಟಾದ ಏರುಪೇರುಗಳಿಗೆ ನಿವಾರಣೆ ಸೂಚಿಸುತ್ತಿದ್ದ. ಅವು ಫಲಪ್ರದವಾದದ್ದು ದಾಖಲೆಯಾಗಿವೆ.

ಇಷ್ಟು ಪರೀಕ್ಷೆಗೆ ಒಳಪಟ್ಟು ಸಾರ್ವಜನಿಕವಾಗಿ ಚರ್ಚಿತವಾಗಿರುವ ಹಾಗೂ ಲಕ್ಷಾವಧಿ ಜನಕ್ಕೆ ದಾರಿ ತೋರಿ, ನೆಮ್ಮದಿ ನೀಡಿದ ಕೇಸಿ ವಾಚನಗಳು ಇನ್ನೂ ವಿಜ್ಞಾನ ಲೋಕದ ಅಧಿಕೃತ ನಿವಾಸಿಗಳಿಗೆ ಅಸ್ಪೃಶ್ಯ ಆಗಿವೆ. ಬ್ರಿಟಾನಿಕಾ ವಿಶ್ವಕೋಶದಲ್ಲಿ ಕೇಸಿ ಇನ್ನೂ ಪ್ರವೇಶ ಪಡೆದಿಲ್ಲ. ವಿಶ್ವವಿಖ್ಯಾತ ವಿಶ್ವವಿದ್ಯಾಲಯಗಳಲ್ಲಿ ವೈದ್ಯಶಾಸ್ತ್ರ, ಮನಃಶಾಸ್ತ್ರ, ತತ್ವಜ್ಞಾನ ಅದೇಕೆ ಇನ್ನಾವುದೇ ವಿಷಯದ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಈ ಅಪರೂಪದ ಹೀಲರ್ (healer)ನ ಬಗ್ಗ

ಜೀವನ ಎಂದರೆ ಏನು ?

''ಜೀವನವೆಂದರೆ ಏನು? ಅದು ಭೌತಿಕ ಮಟ್ಟದಲ್ಲಿ ಪ್ರಕಟಿತವಾದ ದೇವರು. ಯಾಕೆಂದರೆ ಆತನಲ್ಲಿ ವಾಸಿಸುತ್ತೇವೆ, ಚಲಿಸುತ್ತೇವೆ ಹಾಗೂ ನಮ್ಮ ಅಸ್ತಿತ್ವ ಪಡೆದಿದ್ದೇವೆ.''

''ಮನುಷ್ಯನಿಗೆ ವಿದ್ಯುಚ್ಛಕ್ತಿ ಏನೆಲ್ಲ ಆಗಿದೆಯೋ, ಅದೇ ದೇವರ ಶಕ್ತಿ ಆಗಿರುವುದು.''

''ಪ್ರತಿ ಆತ್ಮ, ದೈವಿಕ ಶಕ್ತಿಯ ಒಂದು ಭಾಗ, ಹಾಗೂ ಆ ಶಕ್ತಿಯಂತೆ ಶಾಶ್ವತವಾಗಿರುವುದು.''

''ನೀವು ಸ್ವರ್ಗಕ್ಕೆ ಹೋಗುವುದಿಲ್ಲ; ನೀವು ಸ್ವರ್ಗಕ್ಕೆ ಬೆಳೆಯುವಿರಿ. ಯಾಕೆಂದರೆ, ಜೀವನ ನಿರಂತರವಾದುದು. ಅಲ್ಲಿ ನಿಲ್ದಾಣವಿಲ್ಲ. ನಾವು ಪ್ರಗತಿ ಹೊಂದುವೆವು, ಇಲ್ಲವೆ ಅವನತಿ ಪಡೆಯುವೆವು.''

''ಒಂದು ವಸ್ತು ಕೇವಲ ಆಕಸ್ಮಿಕವಾಗಿ ಜನಿಸುವುದಿಲ್ಲ. ಯಾಕೆಂದರೆ ಭೂಲೋಕವು ಕಾರಣ ವಿಧಾನದ ಜಗತ್ತು. ಕಾರ್ಯಕಾರಣಗಳು ಭೂಮಿಯ ಮೇಲೆ ಸಹಜ ನಿಯಮ ಆಗಿವೆ. ಭೌತಿಕ ಮಟ್ಟದಲ್ಲಿ ಪ್ರವೇಶಿಸುವ ಪ್ರತಿ ಆತ್ಮಕ್ಕೆ ಈ ಸತ್ಯವನ್ನು ಮನಗಾಣುವ ಅಥವಾ ಇತರರಿಗೆ ಅದರ ಅರಿವು ಮೂಡಿಸುವ ಗುರಿ ಇರುತ್ತದೆ.''

''ಮೊದಲು ದೇವರ ಸಂಗಾತಿತನ ಹೊಂದಿದ್ದ ನಾವು ಭೌತಿಕ ಬಯಕೆಯ ತೃಪ್ತಿಗಾಗಿ ಆತನ ಸಂಗ ತೊರೆದ ಕಾರಣ ನಾವು ಪುನಃ ಪುನಃ ಭೌತಿಕ ಮಟ್ಟದಲ್ಲಿ ಹಾಗೂ ದೇವರೊಂದಿಗೆ ಇರುವ ಮೂಲ ನಿಯಮ ಪಾಲಿಸಲೆಂದು ಪ್ರವೇಶಿಸುತ್ತೇವೆ.''

''ನನ್ನ ತಂದೆಯ ಮನೆಯಲ್ಲಿ ಅನೇಕ ಮಹಲುಗಳಿವೆ ; ನೀನು ನಿನ್ನ ಕೆಲಸಕ್ಕೆ ಹೋಗುವಾಗ ಅದರಲ್ಲಿ ಒಂದು ಗಂಟೆಯಲ್ಲ, ಒಂದು ನಿಮಿಷವಲ್ಲ ಒಂದು ದಿನದವರೆಗೆ ವಾಸಿಸು.'' ಬೈಬಲ್ ವಾಣಿ.

''ನಮ್ಮ ದೇಹ - ಅದು ದೇವಾಲಯ. ಆ ದೇಹದಲ್ಲಿ ಅನೇಕ ಮಹಲುಗಳಿವೆ - ಅನೇಕ ದೇವಾಲಯಗಳಿವೆ. ಯಾಕೆಂದರೆ, ದೇಹವು ಪುನಃ ಪುನಃ ಈ ಭೂಮಿಯ ಮಣ್ಣಿನ ಅನುಭವದೊಂದಿಗೆ ಇರುತ್ತಲೇ ಇದೆ. ಅವು ಕೆಲವು ಸಲ ಮಹಲುಗಳಾಗಿವೆ. ಕೆಲವು ಸಲ ಮನೆಗಳಾಗಿವೆ, ಕೆಲವು ಸಲ ಗುಡಿಸಲಾಗಿವೆ.''

ತಿಳಿದುಕೊಳ್ಳುವ ಅವಕಾಶಗಳು ಇಲ್ಲವೆನ್ನುವಷ್ಟರ ಮಟ್ಟಿಗೆ ಇವೆ. ಹೀಗೆ ಕೇಸಿ ವಿಜ್ಞಾನಿಗಳ ಅವಜ್ಞೆಗೆ ಬಲಿಯಾಗಿರುವನು.

ಪಂಚ ಜ್ಞಾನೇಂದ್ರಿಯ ಮುಖೇನ ಲಭಿಸಿ, ಸಿದ್ಧಿಸಿ, ಸಾಧಿಸಿ, ಪ್ರತಿಷ್ಠಾಪಿತವಾದದ್ದು ಮಾತ್ರ ಸತ್ಯ, ಉಳಿದದ್ದು ಮಿಥ್ಯೆ ಎಂದು ಬಗೆಯುವ ವಿಜ್ಞಾನಕ್ಕೆ ಅತಿಮಾನಸಲೋಕದ ಪುನರ್‌ಜನ್ಮದ ರಹಸ್ಯ ಹೇಗೆ ಹೊಳೆದೀತು? ತನ್ನ ಮೂಗಿನ ಕೆಳಗೆ ಕಂಡದ್ದೆ ಸತ್ಯ ಎನ್ನುವ ಕರ್ಮಠತನದಿಂದ ಬಿಡಿಸಿಕೊಂಡು ತನ್ನ ಪಂಚೇಂದ್ರಿಯಗ್ರಾಹ್ಯ ಲೋಕಕ್ಕಿಂತಲೂ ಬೇರೆ ಲೋಕಗಳಿವೆ ಎಂಬ ತೆರೆದ ಮನಸ್ಸು ಹೊಂದಿ, ಕೇಸಿಯಂಥ ಹೀಲರ್‌ಗಳು ಬಿಟ್ಟು ಹೋಗಿರುವ ದಾಖಲೆಗಳನ್ನು ತನಿಖೆ ಮಾಡಿ, ಅದರಲ್ಲಿರುವ ಸುಳುಹುಗಳನ್ನು ಹೊಳಹುಗಳನ್ನು ಬೆಂಬತ್ತಿ ಇನ್ನಷ್ಟು ಬೆಳಕು ಬೀರುವಂತೆ, ವಸ್ತುನಿಷ್ಠ ಅಧ್ಯಯನ ಮಾಡುವ ಅಗತ್ಯ ಹಾಗೂ ಹೊಣೆ ವಿಜ್ಞಾನದ್ದು.

ಮಾನಸಶಾಸ್ತ್ರದಲ್ಲಿ ಅಪಾರ ಸಂಶೋಧನೆ ನಡೆದಿದೆ. ನಮ್ಮ ದೇಶದಲ್ಲಿ ಸಾಗರ್ ವಿಶ್ವವಿದ್ಯಾಲಯ ಹಾಗೂ ಬೆಂಗಳೂರು NIMHANSದಲ್ಲಿ ಪುನರ್ಜನ್ಮ ಕುರಿತು ಪ್ರಯೋಗ ಪರಿಶೀಲನೆ ನಡೆದಿದೆ. ಅದಕ್ಕೆ ಅಧಿಕೃತತೆ ಬರಬೇಕಾದರೆ ಕೇಸಿಯಂಥ ಅತೀಂದ್ರಿಯ ದೃಷ್ಟಿವಂತ (clairvoyant)ರು ಬಿಟ್ಟು ಹೋಗಿರುವ ನಿಗಮನಾತ್ಮಕ (inferential) ದಾಖಲೆಗಳ ಪುನರ್ ಅಧ್ಯಯನ ನಡೆಯಬೇಕು. ಸಂಮೋಹನ (hypnosis) ಹಾಗೂ ಅತೀಂದ್ರಿಯ ದೃಷ್ಟಿ - ಈ ವಿಶೇಷ ಶಕ್ತಿ ಹೊಂದಿದವರೊಂದಿಗೆ ವಿಜ್ಞಾನ ಸಹಜೀವನ, ಸಹಚಿಂತನೆ ನಡೆಸಿದಾಗ ಪುನರ್ಜನ್ಮದ ಚಿದಂಬರ ರಹಸ್ಯ ಬಯಲಾದೀತೇನೋ?

ಒಂದು ಬಳಕೆಯ ವಸ್ತುವಿನ ಜಾಹೀರಾತಿನಲ್ಲಿ "A trial will convince. If not convinced, money refunded" ಎಂಬ ಆಶ್ವಾಸನೆ ಇರುತ್ತದೆ. ಅದರಂತೆ ಕೇಸಿಯಂಥವರ ವಾಚನಗಳ trial ಮಾಡಬೇಕು. convince ಆದರೆ ಒಳಿತು, ಇಲ್ಲವಾದರೆ ಹಾನಿ ಏನೂ ಇಲ್ಲ. ಈ ವ್ಯಾವಹಾರಿಕ ದೃಷ್ಟಿಯಾದರೂ ವಿಜ್ಞಾನಿಗಳಿಗೆ ಮೂಡಲಿ.

ಕೇಸಿ ಕುರಿತು ಜಿನಾ ಕೆರ್ಮಿನಾರಾ (Gina Cerminara) ಬರೆದ ಅನೇಕ ಮಹಲುಗಳು (Many Mansions) ಎಂಬ ಪುಸ್ತಕ ಓದಲು ಅರ್ಹವಾಗಿದೆ. ■

■ ಕೋ. ಚೆನ್ನಬಸಪ್ಪ

ನಿವೃತ್ತ ನ್ಯಾಯಾಧೀಶರು
10333, ಎಂಬರ್ ಕ್ಲಿನ್ ಡ್ರೈವ್
ಆಸ್ಟಿನ್ (ಟಿ.ಎಕ್ಸ್) - 78726
ಅಮೇರಿಕಾ



ಈ ಕ್ಯಾನ್ಸರ್ ಗುಣಪಡಿಸುವ ಧನ್ವಂತರಿ ಯಾರು?

ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಆಗಸ್ಟ್ ಎರಡನೆ ವಾರದಿಂದ ಶಿಕ್ಷಣ ಸಂಸ್ಥೆಗಳು ಬೇಸಿಗೆಯ ನಂತರ ಬಾಗಿಲು ತೆರೆಯುತ್ತವೆ. ಪ್ರಾಥಮಿಕ ಶಾಲೆಯಿಂದ ಹಿಡಿದು ಸ್ನಾತಕೋತ್ತರ ಪದವಿಗಳವರೆಗೆ ವಿದ್ಯಾರ್ಥಿಗಳ ಪ್ರವೇಶ ಪ್ರಾರಂಭವಾಗುತ್ತದೆ. ಪ್ರಾಥಮಿಕ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಈ ಸಂಭ್ರಮ, ಶೇಕಡಾ 98ರಷ್ಟು ಶಿಕ್ಷಣ ಸಾಧಿಸಿರುವ ಈ ದೇಶದಲ್ಲಿ, ಅವರ್ಣನೀಯ! ಆಶ್ಚರ್ಯಕರ.

ಜುಲೈ ಕೊನೆಯ ವಾರದಿಂದಲೆ ಪತ್ರಿಕೆಗಳಲ್ಲಿ ಶಾಲಾಮಕ್ಕಳ ಪ್ರವೇಶದ ಬಗ್ಗೆ ಸುದ್ದಿ. ಅರಿವೆ, ಆಹಾರ, ದಿನಸಿ ಅಂಗಡಿಗಳು ಆ ಸಂದರ್ಭಕ್ಕೆ ರಿಯಾಯಿತಿಯಲ್ಲಿ ಮಾರಾಟ ನೀಡುವ ಬಗ್ಗೆ ಪುಟ ಪುಟಗಳ ದೊಡ್ಡ ದೊಡ್ಡ ಜಾಹೀರಾತುಗಳು! ಪ್ರತಿಯೊಂದು ಪತ್ರಿಕೆಯಲ್ಲೂ Back to School 'ಶಾಲೆಗೆ ಮರಳಿ' ವಿಶೇಷ ಸುದ್ದಿಗಳು. ನಾನಿರುವ ಈ ಶಹರ ಆಸ್ಟಿನ್ -ಟೆಕ್ಸಸ್ ರಾಜ್ಯದ ರಾಜಧಾನಿಯ ಜನಪ್ರಿಯ ದಿನಪತ್ರಿಕೆ ಆಸ್ಟಿನ್ ಅಮೆರಿಕನ್ ಸ್ಟೇಟ್ಸ್‌ಮನ್ (Austin American Stateman) 'ಶಾಲೆಗೆ ಮರಳಿ' ಎಂಬ ಹದಿನಾಲ್ಕು ಪುಟಗಳ ವಿಶೇಷ ಪುರವಣಿಯನ್ನು ಆಗಸ್ಟ್ 5 ರಂದು ಹೊರಡಿಸಿದೆ. ಕಳೆದ ವರ್ಷದ ಪರೀಕ್ಷೆಗಳಲ್ಲಿ ಈ ದೇಶದ ಎಲ್ಲ ಶಾಲೆಗಳಿಗಿಂತ ಈ ರಾಜ್ಯದ ಶಾಲೆಗಳಿಗೆ ಅತ್ಯುತ್ತಮ ಸಾಧನೆಗೆ (Excellancy) ಪ್ರಥಮ ಸ್ಥಾನ. ಒಟ್ಟು ಎಷ್ಟು ಶಾಲೆಗಳಿವೆ, ಎಲ್ಲೆಲ್ಲಿವೆ, ಯಾವ ಬಡಾವಣೆಯವರು ಎಲ್ಲಿಗೆ ಮಕ್ಕಳನ್ನು ಸೇರಿಸಬೇಕು, ಹೊಸ ಶಾಲೆಗಳು ಯಾವುವು, ಅದಕ್ಕೆ ಯಾವ ಬಡಾವಣೆಯ ಮಕ್ಕಳು ಸೇರಬೇಕು, ಓ..... ಈ ಪುರವಣಿ ಶಿಕ್ಷಣದ ಸುದ್ದಿಯ ಭಂಡಾರ... !!

ಶೇಕಡಾ 98ರಷ್ಟು ಸಾಕ್ಷರತೆಯನ್ನು ಸಾಧಿಸಿರುವ ಈ ರಾಜ್ಯದಲ್ಲಿ ಶಿಕ್ಷಣದ ಬಗ್ಗೆ ಇನ್ನೂ ಆಸಕ್ತಿ, ಮತ್ತೂ ಆಸಕ್ತಿ, ಎಡೆಬಿಡದ ಆಸಕ್ತಿ. ಆಸ್ಟಿನ್ ಮೂಲ ಶಹರದ 5,41,278 (1996) ಪ್ರಜಾಸಂಖ್ಯೆಯಲ್ಲಿ ಶಾಲಾವಯಸ್ಸಿನ ಮಕ್ಕಳು 1,01,279. 1997ರ ದಾಖಲಾತಿ ಈ ಮಕ್ಕಳಲ್ಲಿ 94% ರಷ್ಟು, ಈ ರಾಜ್ಯ ಸರ್ಕಾರ ಪ್ರಜೆಗಳು ತೆರುವ ಪ್ರತಿ ನೂರು ಡಾಲರ್‌ಗಳಲ್ಲಿ 40 ಡಾಲರ್‌ನ್ನು ಶಿಕ್ಷಣಕ್ಕೆ ವ್ಯಯಿಸುತ್ತದೆ! 30 ಡಾಲರ್ ಆರೋಗ್ಯಕ್ಕಾಗಿ, 8 ಡಾಲರ್ ಸಾರ್ವಜನಿಕ ಸುರಕ್ಷತೆಗಾಗಿ, 12ಡಾಲರ್ ವಾಣಿಜ್ಯ ಮತ್ತು ಸಾರಿಗೆ ಅಭಿವೃದ್ಧಿಗಾಗಿ. ಅದರಲ್ಲಿ ಬಹುಭಾಗ ಸಾರಿಗೆ ಸುವ್ಯವಸ್ಥೆಗಾಗಿ. ಉಳಿದ ಶೇಕಡಾ 8 ಡಾಲರ್‌ಗಳಲ್ಲಿ ಸರ್ಕಾರಿ ಸಿಬ್ಬಂದಿಗಾಗಿ ಆರು

> ಸಾಕ್ಷರತಾ ಆಂದೋಳನಕ್ಕಾಗಿ ಕೊಟ್ಟ ಹಣ ಘೋಷಣೆ ಕೂಗುವ, ಗೋಡೆಗಳ ಮೇಲೆ ಬಂಡಿಗಾಲಿ ಗಾತ್ರದ ಘೋಷಣೆ ಬರೆಯುವವರ ಜೇಬಿಗೇ ಸುರಿದು ಹೋಗುತ್ತದೆ! ಅಂದ ಮೇಲೆ ಕಟ್ಟಡಕ್ಕೆ ಹಣವೆಲ್ಲಿ ಉಳಿದೀತು?

ಡಾಲರ್! ಸರ್ಕಾರದ ಯಂತ್ರ ನಿರ್ವಹಣೆಗೆ ಅತ್ಯಲ್ಪ! ಅತ್ಯಲ್ಪ! ಅತ್ಯಲ್ಪ!!!

ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಸರ್ಕಾರಿ ಸಿಬ್ಬಂದಿಗಳಿಗಾಗಿ ರಾಜ್ಯದ ಆಯವ್ಯಯದಲ್ಲಿ ಶೇಕಡಾ 48 ಎಂದು ಐದು ವರ್ಷಗಳ ಹಿಂದೆ ವಿಧಾನಸಭೆಯಲ್ಲಿ ಅಂದಿನ ವಿಧಾನ ಸಭಾಧ್ಯಕ್ಷರು ಲೆಕ್ಕ ತೆಗೆದಿದ್ದರು. ಆ ವೆಚ್ಚದಲ್ಲಿ ಸರ್ಕಾರಿ ಸಿಬ್ಬಂದಿಗೆ ಕೊಡುವ ವೈದ್ಯಕೀಯ ಸೌಲಭ್ಯ, ಉನ್ನತ ಅಧಿಕಾರಿಗಳಿಗೆ ಕೊಡುವ ಪ್ರವಾಸ ಭತ್ಯೆ ಇ...ಸೇರಿರಲಿಲ್ಲ. ಈಗ ಆ ಮೊತ್ತ ಎಷ್ಟಾಗಿದೆ ಎಂಬುದನ್ನು ಇಂದಿನ ಶಾಸಕರು ಲೆಕ್ಕ ತೆಗೆದಿಲ್ಲ. ಈಗ ಆ ಮೊತ್ತ ಶೇಕಡಾ 60 ಕ್ಕೆ ಮುಟ್ಟಿದ್ದರೆ ಆಶ್ಚರ್ಯವಿಲ್ಲ ! ಉಳಿದ ಶೇಕಡಾ 40 ರಲ್ಲಿ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ ಇತ್ಯಾದಿ ಬಾಬುಗಳಿಗೆ ಬಹುಭಾಗ ಹೋಗುತ್ತದೆ. ನಮ್ಮ ರಾಜ್ಯದ ವಾರ್ಷಿಕ ಆಯವ್ಯಯದಲ್ಲಿ ಶೇಕಡಾ 18 ರಿಂದ 20 ಶಿಕ್ಷಣಕ್ಕಾಗಿ ವೆಚ್ಚವಾಗುತ್ತದೆ ಎಂದು ಹೇಳುತ್ತಾರೆ. ಅದರಲ್ಲಿ ಶೇಕಡಾ 60 ರಿಂದ 65ರಷ್ಟು ಉನ್ನತ ಶಿಕ್ಷಣಕ್ಕಾಗಿಯೆ ಖರ್ಚಾಗುತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ನೂರಿಪ್ಪತ್ತು (ಅಂದಾಜು) ಖರ್ಚಾದರೆ ವೈದ್ಯಕೀಯ ವಿದ್ಯಾರ್ಥಿಗೆ ಸುಮಾರು ಆರೆಂಟು ಸಾವಿರ ರೂಪಾಯಿಗಳು ಖರ್ಚಾಗುತ್ತದೆ ಎಂದು ಓದಿದ ನೆನಪು! ಅಂದ ಮೇಲೆ ನಮ್ಮನ್ನಾಳುವ ಮಹಾಪ್ರಭುಗಳು ಪ್ರಾಥಮಿಕ ಶಿಕ್ಷಣಕ್ಕಾಗಿ ಕೊಡುವ ಮಹತ್ವವನ್ನು ತಿಳಿಯಬಹುದಲ್ಲ!

ಇಲ್ಲಿ ಶಿಕ್ಷಣಕ್ಕಾಗಿ- ಅದರಲ್ಲೂ ಪ್ರಾಥಮಿಕ ಶಿಕ್ಷಣಕ್ಕಾಗಿ ಎಷ್ಟು ಹಣ ವೆಚ್ಚ ಮಾಡುತ್ತಾರೆಂಬುದನ್ನು ತಿಳಿಯಬೇಕಾದರೆ ಈ ಶಾಲಾ ಕಟ್ಟಡಗಳನ್ನು ನೋಡಬೇಕು. ಆಸ್ಟಿನ್ ಶರಹದ ಕ್ಯಾನಿಯನ್ ಕ್ರೀಕ್ ಬಡಾವಣೆಯಲ್ಲಿ ಒಂದು ಹೊಸ ಪ್ರಾಥಮಿಕ ಶಾಲಾ ಕಟ್ಟಡವನ್ನು ಕಟ್ಟಿದ್ದಾರೆ. ಇಲ್ಲಿ ನಮ್ಮ ಮೊಮ್ಮಗಳು ಒಂದನೆಯ ತರಗತಿಗೆ ಹೋಗುತ್ತಾಳೆ. ಆಗಸ್ಟ್ 6 ರಿಂದ ಪ್ರಾರಂಭವಾಗಬೇಕಾದ ಆ ಶಾಲೆಯನ್ನು ನೋಡಲು ಆಗಸ್ಟ್ 3 ರ ಸಂಜೆ ಹೋಗಿದ್ದೆ. ಅದೆಷ್ಟು ದೊಡ್ಡದಿರಬಹುದೆಂದು ಅಂದಾಜು ಮಾಡಲು ಒಮ್ಮೆ ಅದರ ಸುತ್ತ ನಡೆದೆ. ಎಂಟು ನಿಮಿಷ ಬೇಕಾಯ್ತು. ಅಂದರೆ ಅಂದಾಜು 600 ಮೀಟರುಗಳಿರಬೇಕು! ಪ್ರತಿಯೊಂದು ಕೊಠಡಿಗೂ ಪ್ರತ್ಯೇಕ ಶೌಚಾಲಯ! ಊಟದ ಕೊಠಡಿ! ನಮ್ಮ ಅತ್ಯುತ್ತಮ ಪ್ರಥಮ ದರ್ಜೆ ಕಾಲೇಜಿಗಿಂತ ದೊಡ್ಡದು. ಒಮ್ಮೆ ಪ್ರದಕ್ಷಿಣೆ ಮಾಡಿ ಕಟ್ಟಡದ ಮುಂದಕ್ಕೆ ಬಂದಾಗ ಸತ್ಯವಾಗಿ ಕೈಯೆತ್ತಿ ಮುಗಿಯಬೇಕೆನಿಸಿತು! ಇಲ್ಲಿಯ ಶಾಲಾ ಕಟ್ಟಡ ನನಗೆ ನಮ್ಮ ದೇವಾಲಯಗಳಿಗಿಂತಲೂ

ಪವಿತ್ರಸ್ಥಾನಗಳೆಂಬಂತೆ ಕಾಣುತ್ತವೆ!

ನಮ್ಮ ದೇಶದಲ್ಲಿ ಅನೇಕ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳೇ ಇಲ್ಲವೆಂದು ಚಿನ್ನಪ್ಪರೆಡ್ಡಿ ಆಯೋಗ ಅಂಕಿ ಸಂಖ್ಯೆಗಳಿಂದ ವರದಿ ಮಾಡಿತ್ತು! ಒಂದೇ ಕೊಠಡಿಯಲ್ಲಿ ನಾಲ್ಕು ತರಗತಿಯ ವಿದ್ಯಾರ್ಥಿಗಳು ಕಲಿಯುವ ಯಮಯಾತನೆ ಅನುಭವಿಸಬೇಕೆಂದೂ ವರದಿಯಲ್ಲಿ ಎತ್ತಿ ತೋರಿಸಲಾಗಿತ್ತು. ಆ ಒಂದು ಕೊಠಡಿಯೂ ಮಾಳಿಗೆಗೆ ಹೆಂಚಿಲ್ಲದೆ, ಕಿಟಕಿ ಬಾಗಿಲುಗಳಿಲ್ಲದೆ ದನದ ಹಟ್ಟಿಗಳಿಗಿಂತ ದುಃಸ್ಥಿತಿಯಲ್ಲಿವೆ ಎಂದು ನಮ್ಮ ರಾಜ್ಯದ ಪ್ರತಿಷ್ಠಿತ ದಿನ ಪತ್ರಿಕೆಗಳು ಚಿತ್ರ ಸುದ್ದಿ ಪ್ರಕಟಿಸಿದ್ದವು!! ಆ ಎಲ್ಲ ಮಾಹಿತಿ ಸಂಗ್ರಹಿಸಿ, ಆ ಚಿತ್ರಗಳ ಸಹಿತ ರಿಟ್ ಅರ್ಜಿ ದಾಖಲು ಮಾಡಿ ಸರ್ಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಾದರೂ ಕಟ್ಟಡಗಳಿಲ್ಲದ ಶಾಲೆಗಳಿಗೆ ಕಟ್ಟಡವನ್ನು ಕಟ್ಟಿಸಬೇಕೆಂದು ಆದೇಶ ಕೊಡಬೇಕೆಂದು ಈಗ ಶಾಸಕರಾಗಿರುವ ಒಬ್ಬರಿಂದ ಪ್ರಾರ್ಥಿಸಿದೆ. ಅದು ಇನ್ನೂ ಇತ್ಯರ್ಥವಾಗಬೇಕಾಗಿದೆ!! ಈ ಅರ್ಜಿಯನ್ನು ವಿರೋಧಿಸಿ ಸರ್ಕಾರ ತಕರಾರು ಸಲ್ಲಿಸಿದೆ! ಅಂದ ಮೇಲೆ ಪ್ರಾಥಮಿಕ ಶಿಕ್ಷಣ ಎಲ್ಲಿಗೆ ಬಂತು!?

ಆದರೂ ನಮ್ಮ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮಂತ್ರಿಗಳು ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕೆಂದೂ, ಸಾರ್ವತ್ರಿಕವಾಗಿ ಹಬ್ಬಬೇಕೆಂದೂ ಬೊಬ್ಬೆ ಹೊಡೆಯುತ್ತಿವೆ. ಕಪ್ಪುಹಲಗೆ ಆಂದೋಳನ, ಸಾಕ್ಷರತಾ ಆಂದೋಳನ.... ಇ...ಇ.. ಪ್ರಚಾರಗಳು ಆಗುತ್ತಲೇ ಇವೆ. ಈ ಆಂದೋಳನಕ್ಕಾಗಿ ಕೇಂದ್ರ ಸರ್ಕಾರ ಪ್ರತಿ ಜಿಲ್ಲೆಗೂ ಒಂದೊಂದು ಕೋಟಿ ರೂಪಾಯಿಗಳ ಅನುದಾನವನ್ನು ನೀಡುತ್ತಿರುವುದಾಗಿ ಘೋಷಣೆ. ನಮ್ಮ ಲೋಕಸಭಾ ಸದಸ್ಯರಿಗೆ ಪ್ರತಿವರ್ಷ ಒಬ್ಬೊಬ್ಬರಿಗೆ ತಮ್ಮ ಕ್ಷೇತ್ರಾಭಿವೃದ್ಧಿಗಾಗಿ ತಲಾ ಒಂದು ಕೋಟಿ ರೂಪಾಯಿ ಕೊಡುತ್ತದೆ. ನಮ್ಮ ಶಾಸಕರಿಗೆ ಪ್ರತಿ ವರ್ಷ ತಲಾ ಐದು ಲಕ್ಷ ರೂಪಾಯಿಗಳನ್ನು ತಮ್ಮ ಕ್ಷೇತ್ರಾಭಿವೃದ್ಧಿಗಾಗಿ ಕೊಡುತ್ತಿದೆ. ಈ ಹಣದಲ್ಲಿ ಕೇವಲ ಸ್ವಲ್ಪ ಭಾಗ ಶಾಲಾ ಕಟ್ಟಡಗಳಿಗಾಗಿ ವೆಚ್ಚವಾಗಿದ್ದರೆ ಚಿನ್ನಪ್ಪ ರೆಡ್ಡಿ ಆಯೋಗ ಎತ್ತಿ ತೋರಿಸಿದ ಕಟ್ಟಡದ ಕೊರತೆಯನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸಬಹುದಾಗಿತ್ತು. ಆದರೆ ನಮ್ಮ ಲೋಕಸಭಾ ಸದಸ್ಯರು, ಶಾಸಕರು ಪ್ರಾಥಮಿಕ ಶಿಕ್ಷಣದ ಬಗ್ಗೆ ಭಾಷಣದ ಹೊರತಾಗಿ ಹೆಚ್ಚಿನ ಮುತುವರ್ಜಿ ವಹಿಸಿದ್ದು ಕಾಣದು. ಸಾಕ್ಷರತಾ ಆಂದೋಳನಕ್ಕಾಗಿ ಕೊಟ್ಟ ಹಣ ಘೋಷಣೆ ಕೂಗುವ, ಗೋಡೆಗಳ ಮೇಲೆ ಬಂಡಿಗಾಲಿ ಗಾತ್ರದ ಘೋಷಣೆ ಬರೆಯುವವರ ಜೇಬಿಗೇ ಸುರಿದುಹೋಗುತ್ತದೆ! ಅಂದ ಮೇಲೆ ಕಟ್ಟಡಕ್ಕೆ ಹಣವೆಲ್ಲಿ ಉಳಿದೀತು?

ನಮ್ಮ ಬಾಲಕರು ನಿಜವಾಗಿಯೂ ವಿದ್ಯಾವಂತರಾಗಬೇಕೆಂದು ನಮ್ಮನ್ನಾಳುವ ಪ್ರಭುಗಳಿಗೆ

> ಆ ಸಂಕಟವನ್ನು ನೋಡಿ ಅನುಭವಿಸಿ ಸಾಕಾಗಿ ಮುಪ್ಪಾಗಿ ನಾಲ್ಕು ತಿಂಗಳು ವಿಶ್ರಾಂತಿಗಾಗಿ ಇಲ್ಲಿಗೆ ಬಂದೆ. ಆದರೆ ಇಲ್ಲಿಯೂ ನನ್ನನ್ನು ಬಿಡದೆ ಬೆಂಬತ್ತಿದೆ ನಮ್ಮ ದೇಶದ ಆ ಮಹಾಮಾರಿ

ಕಾಳಜಿಯಿದೆಯೆ? ಜನ ವಿದ್ಯಾವಂತರಾಗುವುದು ಆಳುವ ಪಟ್ಟಭದ್ರ ಹಿತಾಶಕ್ತಿಗಳಿಗೆ ಬೇಡ ಎಂಬುದು ಲೋಕದ ಇತಿಹಾಸ ಸಾರುವ ಸತ್ಯ. ಅಮೆರಿಕೆಯಲ್ಲಿ ನಿಗ್ರೊ ಜನರ ದಾಸ್ಯ ಪದ್ಧತಿ ರದ್ದಾಗುವ ಮುಂಚೆ ಕರಿಯರಿಗೆ ಶಿಕ್ಷಣ ಕೊಡಲೇಬಾರದೆಂದು ಬಿಳಿಯರು ಉದ್ದೇಶಪಟ್ಟು ಅವರನ್ನು ನಿರಕ್ಷರಿಗಳನ್ನಾಗಿಟ್ಟಿದ್ದರು. ಕಳೆದ ಶತಮಾನದಲ್ಲಿದ್ದ ಫೆಡ್ರಿಕ್ ಡೌಗ್ಲಾಸ್ ಎಂಬ ಕರಿಯ ತನ್ನ ಅನುಭವವನ್ನು ಹೇಳುತ್ತಾನೆ. ಥಾಮಸ್ ಔಲ್ಡ್ ಎಂಬಾತನ ಆಳು (ಆಸ್ತಿ) ಆಗಿದ್ದ. ಅವನನ್ನು ಔಲ್ಡ್ ತನ್ನ ತಮ್ಮ ಹ್ಯೂಗ್ ಎಂಬಾತನ ಮನೆಗೆ ಬಾಲ್ಟಿಮೋರಿಗೆ ವರ್ಗಾಯಿಸಿದ. ಅಲ್ಲಿ ಅವನ ಹೆಂಡತಿ ಸೋಫಿಯಾ, ಡೌಗ್ಲಾಸನಿಗೆ ಓದಲು ಕಲಿಸಿದಳು. ಬೈಬಲ್ ಹೇಳಿಕೊಟ್ಟಳು. ಈ ಸಂಗತಿ ತಿಳಿದ ಔಲ್ಡ್ ಸೋಫಿಯಾಗೆ ಅಪ್ಪಣೆ ಮಾಡಿದ. ಆ ನಿಗ್ಗರ್‌ಗೆ ಓದಲು ಕಲಿಸಬೇಡ. ಓದು ಕಲಿತರೆ ಬರೆಯಲು ಕಲಿಯುತ್ತಾನೆ. ಓದು ಬರಹ ಬಂದರೆ ಅವನು ದಾಸನಾಗಿರಲು ಅನರ್ಹನಾಗುತ್ತಾನೆ. ಎಲ್ಲಿಗಾದರೂ ಓಡಿ ಹೋಗುತ್ತಾನೆ. ಅವನಿಗೆ ಓದು ಕಲಿಸಬೇಡ... ಅವನು ಕಷ್ಟಪಟ್ಟು ಕಲಿತ. ಕರಿಯರ ಮುಂದಾಳುವಾದ. ದೊಡ್ಡ ಹೋರಾಟ ನಡೆಸಿದ!

ಇಲ್ಲಿದೆ ನಮ್ಮ ದೇಶದ ಆಳುವ ಪ್ರಭುಗಳು ಪ್ರಾಥಮಿಕ ಶಿಕ್ಷಣ ಕೊಡದಿರುವುದರ ಮುಖ್ಯ ಕಾರಣ. ಪ್ರಜೆಗಳು ಕಲಿತು ಜಾಣರಾಗಬಾರದು. ಜಾಣರಾದರೆ ಐದು ವರ್ಷಕ್ಕೊಮ್ಮೆ ಬರುವ ಚುನಾವಣೆಯ ನಾಟಕದಲ್ಲಿ ಅವರನ್ನು ಮರುಳು ಮಾಡುವುದು ಕಷ್ಟ. ಮರುಳು ಮಾಡುವುದೇ ಇಲ್ಲವೆಂದಲ್ಲ. ಕಲಿತವರೂ ಮರುಳಾಗುತ್ತಾರೆ. ಆಳುವವರ ಮಾತಿಗೊ, ಅವರು ಎಸೆಯುವ ಎಂಜಲಿಗೊ, ಎಲುಬಿನ ತುಂಡಿಗೊ, ಕುಡಿಸುವ ಸಾರಾಯಿಗೋ, ಕೊಡಿಸುವ ಸೈಕಲ್ಲುಗಳಿಗೊ ನೋಟಿಗೊ ಮರುಳಾಗಿ ತಮ್ಮ ಮತ ಮಾರಿಕೊಳ್ಳುವವರು ಇದ್ದಾರೆ.

ಇಲ್ಲಿ ಶಿಕ್ಷಣಕ್ಕೆ -ಪ್ರಾಥಮಿಕ ಶಿಕ್ಷಣಕ್ಕೆ -ಕರಿಯರು ಕೊಡುವ ಮಹತ್ವವನ್ನು ನಾಗರೀಕ ಹಕ್ಕುಗಳ ಆಂದೋಳನ ಪಿತೃ ಮಾರ್ಟಿನ್ ಲೂಥರ್‌ಕಿಂಗ್ ಅವರ ಮಗ ಮೂರನೆ



ಒಂದ್ಸಲ ನನ್ನ ಐವರು ಅಳಿಯಂದ್ರೂ ದೀಪಾವಳಿಗೆ ಬಂದು ನನ್ನನ್ನ 'ದಿವಾಳಿ' ಮಾಡಿದ್ದನ್ನ ನಾನು ಮರೆತೇ ಇಲ್ಲ!!

ಮಾರ್ಟಿನ್ ಲೂಥರ್ ಕಿಂಗ್ (ಜೂ) ಮೊನ್ನೆ ಒಂದು ಸಭೆಯಲ್ಲಿ ಒತ್ತಿ ಹೇಳಿದ. ಸದರನ್ ಕ್ರಿಶ್ಚಿಯನ್ ಅಡ್ವಾನ್ಸ್‌ಮೆಂಟ್ ಕಾನ್ಫರೆನ್ಸ್ (SCAC) ಅಧ್ಯಕ್ಷತೆ ವಹಿಸಿಕೊಂಡ ದಿನ: ನಮ್ಮ ಸಂಘದ ಸದಸ್ಯರ ಉದ್ಧಾರ ಕಂಪ್ಯೂಟರ್ ಬಳಕೆಯನ್ನು ಕಲಿಯುವುದರಲ್ಲಿದೆ; ಇಂಟರ್‌ನೆಟ್ ಕಲಿಯುವುದರಲ್ಲಿದೆ.. ವಿದ್ಯೆಯಲ್ಲಿ ಪಾರಂಗತರಾಗುವುದರಲ್ಲಿದೆ... ಎಂದು ಎಚ್ಚರಿಸಿದ! ಇಲ್ಲಿ ಓದು ಬರಹ ಡಿಗ್ರಿ ಬಂದರೆ ಸಾಲದು. ಕಂಪ್ಯೂಟರ್ ವಿದ್ಯೆ, ಇಂಟರ್‌ನೆಟ್ ಬಾರದಿದ್ದರೆ ಡಿಗ್ರಿ ಪಡೆದವರೂ ಮೂಗರು, ಕುರುಡರು ಇದ್ದಂತೆ! ಆ ವಿದ್ಯೆ ಬಾರದಿದ್ದರೆ ಉದ್ಯೋಗ ಯಾವುದೂ ಸಿಕ್ಕದು. ಸ್ವಂತ ಉದ್ಯೋಗ ಮಾಡಲೂ ಬಾರದು!

ಆದರೆ ನಮ್ಮ ದೇಶದಲ್ಲಿ ನಾವೆಲ್ಲಿದ್ದೇವೆ? ಕಂಪ್ಯೂಟರ್ ವಿದ್ಯೆ ಬಿಡಿ. ನಮ್ಮ ದಲಿತ ಬಂಧುಗಳು ಕಲಿಯುವುದರ ಬಗ್ಗೆ ಎಷ್ಟು ಆಸಕ್ತಿ ವಹಿಸುತ್ತಾರೆ? ಮೊನ್ನೆ ಇಂಟರ್‌ನೆಟ್‌ನಲ್ಲಿ ಬಂಗಾರಪೇಟೆಯಲ್ಲಿ ಅಂಬೇಡ್ಕರ್ ವಿಗ್ರಹಕ್ಕೆ ಅಪಮಾನ ಮಾಡಿದರೆಂದು ರಾಜ್ಯಾದ್ಯಂತ ಆಂದೋಳನ ನಡೆಯಿತೆಂದು ಓದಿದೆ. ಅದ್ಭುತವಾದ ಹೋರಾಟ! ಹುಬ್ಬಳ್ಳಿ ಬಸ್‌ಸ್ಟಾಂಡ್ ಜನರಿಲ್ಲದೆ 'ಬಿಕೊ' ಎನ್ನುತ್ತಿದ್ದ ಚಿತ್ರ. ಬೆಂಗಳೂರಿನಲ್ಲಿ ರಸ್ತೆ ರೋಕೋ! ಇಡೀ ಕೋಲಾರ ಜಿಲ್ಲೆಯಲ್ಲಿ ಬಂದ್! ಮಾಡಬೇಕಾದ ಪ್ರತಿಭಟನೆಯೆ? ಆದರೆ 'ನಮಗೆ ಶಾಲೆ ಕಟ್ಟಿಸಿ ಕೊಡಿ' 'ಉಪಾಧ್ಯಾಯರನ್ನು ನೇಮಕ ಮಾಡಿ,' 'ಪೀಠೋಪಕರಣ ಕೊಡಿ'.... ಎಂದು ಆಂದೋಳನ ನಡೆಸಿದ್ದನ್ನು ನಾವಿನ್ನೂ ನೋಡಬೇಕಾಗಿದೆ!

ಆ ಸಂಕಟವನ್ನು ನೋಡಿ ನೋಡಿ ಅನುಭವಿಸಿ ಸಾಕಾಗಿ ಮುಪ್ಪಾಗಿ ನಾಲ್ಕು ತಿಂಗಳು ವಿಶ್ರಾಂತಿಗಾಗಿ ಇಲ್ಲಿಗೆ ಬಂದೆ. ಆದರೆ ಇಲ್ಲಿಯೂ ನನ್ನನ್ನು ಬಿಡದೆ ಬೆಂಬತ್ತಿದೆ ನಮ್ಮ ದೇಶದ ಆ ಮಹಾಮಾರಿ ಅನಕ್ಷರತೆ! ಒಟ್ಟು ಅಲ್ಲಿಗೇ ಬರುತ್ತದೆ: ಆಳುವವರು, ಆಳಿಸಿಕೊಳ್ಳುವವರು ಪ್ರಾಮಾಣಿಕರಾಗದಿದ್ದರೆ ಲಕ್ಷ ಕೋಟಿ ಹಣ ಕೊಟ್ಟರೂ ಎಲ್ಲವೂ ಲಂಚದ ಗಟಾರಕ್ಕೆ ಹರಿದು ಹೋಗುತ್ತದೆ! ಉದ್ಧಾರ ಎಂಬುದು ನಕ್ಷತ್ರಲೋಕದ ಈಡೇರಲಾರದ ವಾಸ್ತವ್ಯ..!

ವಾಸಿಯಾಗದ ಈ ಅರ್ಬುದರೋಗ ಗುಣಪಡಿಸುವ ಧನ್ವಂತರಿ ಯಾರು?! ಯಾರೂ ಇಲ್ಲ! ಯಾರ್‍ಯಾರೂ ಇಲ್ಲ!! ಇನ್ನು ನೂರು ವರ್ಷಗಳ ಮೇಲೆಯೂ ಇದೇ ಮಾತು ಬರೆಯುವವರು ಇರಬಹುದು! ಈ ಮಾತು ಉತ್ಪ್ರೇಕ್ಷೆಯಾಗಿ ಕಾಣಬಹುದು. ಸ್ವಾತಂತ್ರ್ಯ ಬಂದ ನಂತರ ಅರ್ಧ ಶತಮಾನವಾದರೂ ನಮ್ಮ ದೇಶದ ಪ್ರಜೆಗಳಲ್ಲಿ ಶೇಕಡಾ 48 ರಷ್ಟು ಅನಕ್ಷರಿಗಳಿದ್ದಾರೆಂದು ಸರ್ಕಾರವೇ ಒಪ್ಪಿಕೊಂಡಿದೆ. ಇನ್ನೊಂದು ಶತಮಾನದಲ್ಲಿ ನಮ್ಮ ದೇಶದ ಪ್ರಜಾಸಂಖ್ಯೆ 300 ಕೋಟಿ ಆದರೆ ಆಶ್ಚರ್ಯವಿಲ್ಲ. ಈಗಿನ ಪ್ರಮಾಣದಲ್ಲೇ ನಮ್ಮ ಜನ ಓದು ಬರಹ ಕಲಿಯುತ್ತಾ ಹೋದರೆ ಇನ್ನೊಂದು ಶತಮಾನದಲ್ಲಿ 200 ಕೋಟಿ ಜನ ಓದು ಕಲಿತಾರು. ಇನ್ನೂ ನೂರು ಕೋಟಿ ಜನ.. ಅಂದರೆ ಆಗಿನ ಜನಸಂಖ್ಯೆಯಲ್ಲಿ ಶೇಕಡಾ 33 ರಷ್ಟು ಅನಕ್ಷರಸ್ಥರಾಗಿಯೆ ಇರುತ್ತಾರೆ. ಈ ಮಾತಿನಲ್ಲಿ ಉತ್ಪ್ರೇಕ್ಷೆ ಏನಿದೆ? ಇದು ಗಣಿತ ಸತ್ಯದಷ್ಟು ಕಟಾಕಟಿ!! ■

ಅಪಾಯದ ಸುಳಿಯಲ್ಲಿ ಬೀರಖೋಲ್ ಗುಡ್ಡ

ಬೀರಖೋಲ್ ಬಿರುಕು ಅಗಲಗೊಂಡು ಜಲಾಶಯಕ್ಕೆ ಕೂಡಿದಲ್ಲಿ ಮುಂದಾಗುವ ಪ್ರವಾಹದ ಪ್ರಳಯದಲ್ಲಿ ಕೊಡಸಳ್ಳಿ ಜಲಾಶಯದ ಕೆಳಗಿನ ಭಾಗದಲ್ಲಿರುವ ಕದ್ರಾ ಅಣೆಕಟ್ಟು, ಅನತಿ ದೂರದಲ್ಲಿ ಕೈಗಾ ಅಣುಸ್ಥಾವರ - ಇವುಗಳ ಸುತ್ತಮುತ್ತಲಿನ ನೂರಾರು ಹಳ್ಳಿಗಳು, 50 ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆ, ಜಾನುವಾರು, ವಸತಿ, ಆನಂತರದಲ್ಲಿ ಬರುವ ಕಾರವಾರ ....ಎಲ್ಲವೂ ಜಲಸಮಾಧಿ. ಇದಕ್ಕಾರು ಹೊಣೆಗಾರರು?




ಬಿರುಕನ್ನು ತೋರಿಸುತ್ತಿರುವ ಶಿವರಾಮ ಗಾಂವ್ಕರ್ ಮತ್ತು ಪಟೇಲ್

ಸಂಪೂರ್ಣ ಮರುಭೂಮಿಯಾಗಲಿದ್ದ ಈಜಿಪ್ತ್‌ಗೆ ನೈಲ್‌ನದಿ ವರಪ್ರಸಾದವಾದರೆ, ಉತ್ತರ ಕನ್ನಡಕ್ಕೆ ಕಾಳಿನದಿ ಶಾಪವಾಗಿ ಪರಿಣಮಿಸಿದೆ. ಒಂದಲ್ಲ, ಎರಡಲ್ಲ ಎಂಟು ಮುಖ್ಯ ಅಣೆಕಟ್ಟುಗಳಿಗೆ ಯಜಮಾನ್ತಿಯಾದ ಕಾಳಿನದಿಯ ಮಹಾತ್ವಾಕಾಂಕ್ಷೆಗೆ ಅದರ ಅಕ್ಕ ಪಕ್ಕದ ಬೆಟ್ಟಗಳು ರೋದಿಸುತ್ತಿವೆ, ಕಂಪಿಸುತ್ತಿವೆ, ಕುಸಿಯಲು ಸಿದ್ಧವಾಗಿವೆ. ಪಾಪ, ಇದರಲ್ಲಿ ಕಾಳಿಯದೇನು ತಪ್ಪು? ಅದರ ಕರಿನೀರನ್ನು ಕಂಡುಕೊಂಡು, ಅದರ ತೆಕ್ಕೆಯಲ್ಲಿ ತಲೆಮಾರುಗಳಿಂದ ವಾಸವಾಗಿದ್ದ ಕೊಡಸಳ್ಳಿ, ಬೀರಖೋಲ್ ಮತ್ತು ಉಳಿದ ಹಳ್ಳಿಗಳ ಜನರನ್ನು ಬಲತ್ಕಾರವಾಗಿ ನಿರಾಶ್ರಿತರನ್ನಾಗಿಸಿದ ಸರಕಾರದ ಕ್ರಮದ ಪರಿಣಾಮ, ಇಂದಿನ ಕೊಡಸಳ್ಳಿ ಯೋಜನೆ. ಸ್ವಾರ್ಥವೋ, ಪರಹಿತವೋ ಏನೊಂದು ತಿಳಿಯದ ಬೀರಖೋಲ್ ಬೆಟ್ಟವಿಂದು ಬಿರುಕು ಬಿಡುವುದರ ಮೂಲಕ ಮುಂದಿನ ದಿನಗಳಲ್ಲಿ ಸಂಗ್ರಹಿಸಿಕೊಳ್ಳಬೇಕಿರುವ ಅಗಾಧ ಮಟ್ಟದ ನೀರಿನ ಒತ್ತಡವನ್ನು ತಡೆದುಕೊಳ್ಳುವ ಸಾಮರ್ಥ್ಯ ತನ್ನಲ್ಲಿಲ್ಲವೆಂದು ತೋರಿಸಿಕೊಟ್ಟಿದೆ.

1988ರಲ್ಲಿ ಪ್ರಾರಂಭವಾದ ಕೊಡಸಳ್ಳಿ ಜಲಾಶಯ ಯೋಜನೆಗೆ ಪ್ರಾರಂಭದಲ್ಲಿಯೇ ಸ್ಥಳೀಕರ ವಿರೋಧವಿತ್ತು. ಈ ಮಟ್ಟದ ವಿರೋಧ ಬಹುಶಃ ರಾಜ್ಯದ ಯಾವ ಯೋಜನೆಗೂ ವ್ಯಕ್ತವಾಗಿಲ್ಲ. ಹಾಗಿದ್ದೂ ಯೋಜನೆಯನ್ನು ಸರಕಾರ ಕೈಗೆತ್ತಿಕೊಂಡದ್ದು ವಿಪರ್ಯಾಸ. 'ಪೂರ್ತಿ ಕಾಳೀ ನದಿ ಒಂದು ಆಳವಾದ ಬಿರುಕಿನಗುಂಟ ಹರಿಯುತ್ತಿದೆ' ಎಂದು ದಿ. ಶಿವರಾಮ ಕಾರಂತರು ಸರ್ಕಾರಕ್ಕೆ ಪದೇ ಪದೇ ಎಚ್ಚರಿಕೆ ನೀಡಿದ್ದರೂ ಸರ್ಕಾರ ಯೋಜನೆಯನ್ನು ಕೈಗೆತ್ತಿಕೊಂಡಿದ್ದಲ್ಲದೆ 11,000 ಎಕರೆ ಅರಣ್ಯವನ್ನು ನಾಶಮಾಡಿತು. ಅಣೆಕಟ್ಟಿನ ನಿರ್ಮಾಣ ಕಾರ್ಯ ಇದೀಗ ಮುಗಿಯುತ್ತಾ ಬಂದಿದ್ದು, ಸ್ವಲ್ಪ ಪ್ರಮಾಣದ ನೀರು ಸಂಗ್ರಹಗೊಂಡಿದೆ. ಇಲ್ಲಿಯೇ ಅಪಾಯದ ಗಂಟೆ ಮೊಳಗುತ್ತಿರುವುದು.

ಬೀರಖೋಲ್ ಗುಡ್ಡಕ್ಕೆ ಹೋಗಿದ್ದ ಅನಂತನಿಗೆ ಗೋಚರಿಸಿದ್ದು ಗುಡ್ಡದ ಉದ್ದಕ್ಕೂ ಬಿಟ್ಟ ಬಿರುಕು. ಅನಂತಗೌಡನಿಂದ ಹಬ್ಬಿದ ಈ ಸುದ್ದಿಯನ್ನು ಪರೀಕ್ಷಿಸಲು ಹೋದ ಸ್ಥಳೀಯ ಪರಿಸರ ಪ್ರೇಮಿ ಶಿವರಾಮ ಗಾಂವ್ಕರ ಮತ್ತು ಅವರ ಸ್ನೇಹಿತರಿಗೆ ಆಘಾತವೇ ಕಾದಿತ್ತು. ಸುಮಾರು 400 ರಿಂದ 500 ಮೀಟರ್ ಬಿರುಕಿಗೆ ಸಿಕ್ಕ ಮರಗಳು ಬುಡ ಸಮೇತ ಉರುಳಿವೆ. ಕಲ್ಲುಬಂಡೆಗಳು ಸೀಳಿನಿಂದ ಬೇರ್ಪಟ್ಟಿವೆ. ಕಾಡ್ಗಿಚ್ಚಿನಂತೆ ಹಬ್ಬಿದ ಈ ಸುದ್ದಿ ಪರಿಸರ ಪ್ರೇಮಿಗಳನ್ನು, ಪತ್ರಕರ್ತರನ್ನು, ಸ್ಥಳೀಯರನ್ನು ತಲ್ಲಣಗೊಳಿಸಿತು. ಇಷ್ಟೆಲ್ಲಾ



ಪೂರ್ಣಗೊಳ್ಳುತ್ತಿರುವ ಜಲಾಶಯ, ಬಿರುಕು ಬಂದ ಬೀರಖೋಲ್ ಗುಡ್ಡದ ವಿಹಂಗಮ ದೃಶ್ಯ

ಆದರೂ ಕೆ.ಪಿ.ಸಿ.ಅಧಿಕಾರಿಗಳು ಎಚ್ಚೆತ್ತುಕೊಳ್ಳಲಿಲ್ಲ. ಜಲಾಶಯದ ನಿರ್ಮಾಣ ಕಾರ್ಯ ಪ್ರಾರಂಭವಾದಾಗ 200 ಮೀಟರ್ ದೂರದಲ್ಲಿ ಭೂಕುಸಿತವುಂಟಾಗಿ ಪ್ರಾಣಹಾನಿ ಸಂಭವಿಸಿದ್ದು, ಅದನ್ನು ಸಹಜ ಮಣ್ಣು ಕುಸಿತವೆಂದು ತಳ್ಳಿಹಾಕಿದ್ದು ಈಗ ಇತಿಹಾಸ. ಆದರಿಂದು ಬೀರಖೋಲ್ ಗುಡ್ಡದಲ್ಲಿ ಬೃಹದಾಕಾರ ಬಿರುಕು ಉಂಟಾಗಿದೆ. ಅದು ಒಂದೊಂದು ಕಡೆ 2-3 ಅಡಿ ಅಗಲಗೊಂಡಿದೆ. ಇದನ್ನೇ ಪತ್ರಕರ್ತರು ವರದಿ ಮಾಡಿದಾಗ ಘನ ಸರ್ಕಾರದ ಮುಖ್ಯಮಂತ್ರಿಗಳಾದ ಜೆ.ಎಚ್. ಪಟೇಲರು 'ಬಿರುಕೂ ಇಲ್ಲ, ಏನೂ ಇಲ್ಲ. ಮಣ್ಣು ತೆಗೆದಾಗ ಉಂಟಾದ ಕುಸಿತವಷ್ಟೆ' ಎಂದು ಹೇಳಿಕೆ ನೀಡಿದರು. 'ಜಲಾಶಯಕ್ಕಿಂತಲೂ 10 ಮೀಟರ್ ಎತ್ತರದಲ್ಲಾದ ಈ ಬಿರುಕಿನಿಂದ ಯಾವುದೇ ರೀತಿಯ ಅಪಾಯವಿಲ್ಲ' ಎಂಬುದು ಕೆ.ಪಿ.ಸಿ.ಯ ಮುಖ್ಯ ಇಂಜಿನಿಯರ್ ಮಲ್ಲಾಪುರರವರ ಅಭಿಪ್ರಾಯ. ಗುಡ್ಡ ಬಿರುಕು ಬಿಟ್ಟು ತಿಂಗಳುಗಳೇ ಉರುಳಿದರೂ ಸ್ಥಳೀಯರನ್ನು ಆತಂಕಕ್ಕೆ ಎಡೆಮಾಡಿರುವ ಈ ಪ್ರಶ್ನೆಗಳಿಗೆ ಉತ್ತರಿಸುವವರಾದರೂ ಯಾರು? 24 ಕಿ.ಮೀ ವಿಸ್ತೀರ್ಣದಲ್ಲಿ ನೀರು ಸಂಗ್ರಹಗೊಂಡ ಮೇಲೆ ಬೀರಖೋಲ್ ಬಿರುಕು ಅಗಲಗೊಂಡು ಜಲಾಶಯಕ್ಕೆ ಕೂಡಿದಲ್ಲಿ ಮುಂದಾಗುವ ಪ್ರವಾಹದ ಪ್ರಳಯದಲ್ಲಿ, ಕೊಡಸಳ್ಳಿ ಜಲಾಶಯದ ಕೆಳಗಿನ ಭಾಗದಲ್ಲಿರುವ ಕದ್ರಾ ಅಣೆಕಟ್ಟು, ಅನತಿ ದೂರದಲ್ಲಿನ ಕೈಗಾ ಅಣುಸ್ಥಾವರ - ಇವುಗಳ ಸುತ್ತಮುತ್ತಲಿನ ನೂರಾರು ಹಳ್ಳಿಗಳು, 50 ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆ, ಜಾನುವಾರು, ವಸತಿ, ಅನಂತರದಲ್ಲಿ ಬರುವ ಕಾರವಾರ ....ಎಲ್ಲವೂ ಜಲಸಮಾಧಿ. ಇದಕ್ಕಾರು ಹೊಣೆಗಾರರು?

ಈಗಾಗಲೇ ಜಿಲ್ಲೆಯ ಜನ ಆತಂಕಕ್ಕೊಳಗಾಗಿದ್ದಾರೆ. ಪರಿಸರ ಹೋರಾಟಗಾರ್ತಿ ಡಾ. ಕುಸುಮಾ ಸೊರಬರವರು ಕೊಡಸಳ್ಳಿ ಜಲಾಶಯ ಕುರಿತು 'ಈ ಪ್ರದೇಶ ಭೂಕಂಪ ವಲಯದಲ್ಲಿ ಬರುತ್ತದೆ. ಕೊಯ್ನ ಅಣೆಕಟ್ಟಿನ ಪ್ರದೇಶ, ಕೊಡಸಳ್ಳಿ ಅಣೆಕಟ್ಟಿನ ಪ್ರದೇಶ ಒಂದೇ ರೇಖೆಯಲ್ಲಿವೆ. ಜಿಲ್ಲೆಯ ಪರಿಸರ ಮತ್ತು ಜನತೆಯ ಒಳಿತಿಗಾಗಿ ತಕ್ಷಣ ಯೋಜನೆಯನ್ನು ಕೈಬಿಡಬೇಕು' ಎಂದು ಆಗ್ರಹಿಸಿದ್ದರು. ಅಲ್ಲದೆ ಗುಡ್ಡ ಬಿರುಕು ಬಿಟ್ಟಾಗ, ಸ್ಥಳಕ್ಕೆ ಹೋಗಿ ಪರಿಶೀಲಿಸಿ ಮುಂದಾಗುವ ಅಪಾಯದ ಕುರಿತು ಖಾಸಗಿ ಭೂವಿಜ್ಞಾನಿಗಳೊಂದಿಗೆ ಚರ್ಚಿಸಿ, ಅದಕ್ಕೊಂದು ಪರಿಹಾರ ಕಂಡುಕೊಳ್ಳುವ ನಿಟ್ಟಿನತ್ತ ಮುನ್ನಡೆದಿದ್ದ ಡಾ. ಕುಸುಮಾರವರು ಅಪಘಾತದ ಸಾವಿಗೆ ತುತ್ತಾಗಿದ್ದು ಜಿಲ್ಲೆಗಾದ ನಷ್ಟ. ಜನರ ಒತ್ತಡದ ಮೇರೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಸ್ಥಳ ಪರಿಶೀಲನೆಯ ನಾಟಕ ನಡೆಸಿದರೂ ಈವರೆಗೂ ಬಿರುಕಿನ ಆಳ-ಅಗಲ ತಿಳಿಯಲಾಗಿಲ್ಲ. ಅಂದ ಮೇಲೆ ಬಿರುಕು ಗಂಭೀರವಾದದ್ದೇ!

ನಮ್ಮ ದೇಶದಲ್ಲಿ ಈಗಾಗಲೇ ಹಲವು ಯೋಜನೆಗಳು ವಿಫಲಗೊಂಡ ಉದಾಹರಣೆಗಳಿವೆ. ಅವುಗಳನ್ನು ಗಣನೆಗೆ ತೆಗೆದುಕೊಂಡಾಗ ಕೊಡಸಳ್ಳಿ ಯೋಜನೆಯಿಂದ ಭವಿಷ್ಯದಲ್ಲಿ ಅನಾಹುತ ಸಂಭವಿಸಬಹುದೆಂದು ನಿಖರವಾಗಿ ಹೇಳಬಹುದು. ಕೈಗಾ ಅಣುಸ್ಥಾವರದ ಗುಮ್ಮಟ ಕುಸಿದಿರುವುದು, ಸೋಮನಹಳ್ಳಿಯಲ್ಲಿ ಹೈಟೆನ್‌ಷನ್ ತಂತಿ ಎಳೆಯಲು ನಿರ್ಮಿಸಿದ್ದ ಸ್ಟೀಲ್ ಟವರ್ ಕುಸಿದಿರುವುದು, ಪ್ರಕೃತಿಯ ವಿಕೋಪದ ಮುನ್ಸೂಚನೆಯೇ? ಎಂಬುದು ಪರಿಸರವಾದಿಗಳ ಪ್ರಶ್ನೆ.

ಕಾಳಿಯ ಬುಡದಿಂದ, ತುದಿಯ ಕಾರವಾರದವರೆಗೆ ಹಲವು ಯೋಜನೆಗಳು ನಿರ್ಮಾಣಗೊಳ್ಳುತ್ತಿವೆ. ಈ ಉದ್ದಕ್ಕೂ ಜನ ತಮ್ಮ ಉಳಿವಿನ ಹೋರಾಟದಲ್ಲಿ ನಿತ್ರಾಣಗೊಳ್ಳುತ್ತಿದ್ದಾರೆ. ಬಲಿಪಶುಗಳಾಗಲು ಹೊರಟಿರುವ ಭವಿಷ್ಯದ ಕುಡಿಗಳಿಗೆ ನ್ಯಾಯ ದೊರಕೀತೆ?

■ **ಎಂ. ರವೀಂದ್ರ, ಯಲ್ಲಾಪುರ**



ಇಂಕು


ಬಾಟಲಿಯಲ್ಲಿ
ಬರಿ ಮಸಿ
ಪತ್ರಿಕೆಯಲ್ಲಿ
ಭಾರೀ ಬಿಸಿ


-ಎಂ.ಎಚ್.ರವಿಶಂಕರ್

ನೀವು ಬದುಕುವಿರಾ? ಅಥವಾ ಬಾಳುವಿರಾ?

ಹೆಜ್ಜೆ - 15

ನಾವು ಕೇವಲ ಸಮಾಜ ಜೀವಿಗಳಾದರೆ ಸಾಲದು. ಸಮಾಜೋಪಯೋಗಿಯಾಗಬೇಕು; ಸಮಾಜ ಪ್ರಿಯರಾಗಬೇಕು. ಕೇವಲ ಬದುಕುವುದಲ್ಲ; ಬಾಳಬೇಕು. ಹಾಗಾದರೆ ನಾವು ಪ್ರಯತ್ನ ಪೂರ್ವಕವಾಗಿ ಸಾಮಾಜಿಕ ಮನೋಭಾವವನ್ನು, ಸಾಮಾಜಿಕ ಒಲವುಗಳನ್ನು ಗಳಿಸಬೇಕು. ಬೆಳೆಯಿಸಬೇಕು. ಈ ರೋಚಕ ವಿಷಯ ಕುರಿತು ಈಗ ಮಾತನಾಡುತ್ತ ಸಾಗುವಾ.





ವಿಶಿಷ್ಟ ಬಗೆಯ ಪ್ರಾಣಿಯಾದ ಮಾನವನಲ್ಲಿ ಸಹಜವಾಗಿ ಪ್ರಾಣಿಗುಣದ ಪ್ರಾಮುಖ್ಯವಿದೆ. ಈ ಪ್ರಾಣಿ, ಸಮಾಜದ ಸಂಬಂಧಗಳ ಮೂಲಕ ಪಡೆದು ಒಟ್ಟಾಗಿಸಿದ ಅನುಭವಗಳು ಆತನಲ್ಲಿ ಸಾಮಾಜಿಕ ಒಲವುಗಳನ್ನು ಬೆಳೆಯಿಸುತ್ತವೆ. ಆತನ ದೈನಂದಿನ ಬದುಕಿನಲ್ಲಿ ಇವೇ ಅಭ್ಯಾಸಗಳು ವ್ಯಕ್ತವಾದಾಗ ಆತನ ವ್ಯಕ್ತಿತ್ವದ ಪರಿಚಯ ಇತರರಿಗೆ ಆಗುತ್ತದೆ. ಅನುಭವಗಳ ಮೂಲಕ ತನ್ನಲ್ಲಿಯ ಪ್ರಾಣಿಗುಣವನ್ನು ಸ್ವಂತದ ಮತ್ತು ಪರರ ಹಿತಕ್ಕಾಗಿ ಬದಲಾಯಿಸಿಕೊಳ್ಳುತ್ತ ಸಾಗುವುದು ಗರ್ಭದಿಂದ ಗೋರಿಯವರೆಗೆ ನಿರಂತರವಾಗಿ ನಡೆಯುವ ಪ್ರಯತ್ನ. ಅದಕ್ಕಾಗಿಯೇ ಇರಬೇಕು, 'ವ್ಯಕಿತ್ವ ವಿಕಾಸದ ಪ್ರಯತ್ನ ಚಲನಶೀಲವಾದುದು' ಎಂಬ ದೊಡ್ಡವರ ಮಾತು.

ನಮ್ಮ ಸಾಮಾಜಿಕ ಒಲವುಗಳು ಬಾಲ್ಯದಲ್ಲಿಯೇ ರೂಪುಗೊಳ್ಳತೊಡಗುತ್ತವೆ. ಪ್ರಚಲಿತ ಸಾಂಪ್ರದಾಯಿಕ ನಂಬುಗೆಗಳು, ಮನೆ ಮತ್ತು ಶಾಲೆಯಂತಹ ಸ್ಥಳಗಳಲ್ಲಿಯ ವಾತಾವರಣ ಒಲವುಗಳ ರೂಪುಗೊಳ್ಳುವಿಕೆಯಲ್ಲಿ ತಮ್ಮ ಪಾತ್ರ ನಿರ್ವಹಿಸುತ್ತವೆ. ಮಾನವ ಸಂಬಂಧಗಳ ಬಗೆಗಿನ ಸರಿಯಾದ ತಿಳಿವಳಿಕೆ ಉತ್ತಮ ಒಲವುಗಳನ್ನು ರೂಪಿಸಿಕೊಳ್ಳಲು ಸಹಕಾರಿ. ಈ ತಿಳಿವಳಿಕೆ ಇಲ್ಲದಿದ್ದರೆ ನಮ್ಮ ಒಲವುಗಳು ಋಣಾತ್ಮಕವಾಗಿ, ಇತರರೊಡನೆ ನಮಗೆ ಬೇಡವಾದ ನಟನೆಯನ್ನು ಮಾಡುತ್ತ, ನಮ್ಮ ಹತ್ತಿಕ್ಕಿದ, ನಿಜವಾದ ಭಾವನೆಗಳು ಎಲ್ಲಿ ರಟ್ಟಾಗುತ್ತವೆಯೋ ಎಂದು ಯಾವಾಗಲೂ ಜಾಗ್ರತೆ ವಹಿಸುತ್ತ ಕಾಲವನ್ನು ತಳ್ಳಬೇಕಾಗುವುದು.

ಹಾಗಾದರೆ ಇತರರ ಬಗೆಗೆ ನಾವು ಬೆಳೆಯಿಸಿಕೊಳ್ಳಬೇಕಾದ ಮನೋಭಾವ ಎಂತಹದಿರಬೇಕು? ಎಲ್ಲರನ್ನೂ ನಂಬಿ ಅವರೆಲ್ಲರಲ್ಲಿಯೂ ವಿಶ್ವಾಸವಿರಿಸಬೇಕೆ? ಅಥವಾ ಎಲ್ಲರನ್ನೂ ಸಂದೇಹ, ಸಂಶಯಗಳಿಂದ ಕಾಣಬೇಕೆ? ಇತರರ ಬಗೆಗೆ ಸಂಶಯ ತಾಳುವ ಮಾರ್ಗವನ್ನು ನಾವು ಆಯ್ದುಕೊಂಡರೆ ಕೃತ್ರಿಮತೆಯ ಮುಖವಾಡವನ್ನು ನಮ್ಮ ಚರ್ಯೆ ಮತ್ತು ಮಾತುಗಳಿಗೆ ತೊಡಿಸಲೇಬೇಕು. ಭಾರವಾಗುತ್ತ ಸಾಗುವ ಈ ಮುಖವಾಡ ಕಾಲಾಂತರದಲ್ಲಿ ಅಸಹನೀಯವಾದೀತು; ಕಳಚಿಯೂ ಬಿಟ್ಟೀತು. ಆಗ ನಮ್ಮ ನಿಜ ಸ್ವರೂಪ ದರ್ಶನ ಇತರರಿಗೆ ಆಗುವುದು. ಇಂಥ ನಿರಾಶಾಜನಕ ಮನೋಭಾವವು ವ್ಯಕ್ತಿತ್ವವನ್ನು ಕಳಾಹೀನಗೊಳಿಸುತ್ತದೆ. ಮುಖ ವಿಕರ್ಷಕವಾಗುತ್ತದೆ; ಧ್ವನಿಯಲ್ಲಿ ಗಡಸು ಹಾಗೂ ಕರ್ಕಶತೆ ಹುಟ್ಟಿಕೊಳ್ಳುತ್ತದೆ; ನಡತೆ ಭಾವನಾರಹಿತ ವಾಗುತ್ತದೆ. ಆದುದರಿಂದಲೇ ಉತ್ತಮ ವ್ಯಕ್ತಿತ್ವವುಳ್ಳವರು ತಮ್ಮ ಸಹಚರರಲ್ಲಿ ಅಚಲ ವಿಶ್ವಾಸ ತಾಳಿರುತ್ತಾರೆ.

ನಮ್ಮ ಜೀವನವೊಂದು ಪಂದ್ಯಾಟ. ಅದನ್ನು ಒಂಟಿಯಾಗಿ ಪೂರೈಸಲಾಗದು. ನಾವೆಲ್ಲರೂ ಪಂಗಡವೊಂದರಲ್ಲಿಯ ಆಟಗಾರರು. ನಮಗೆ ದಕ್ಕಿದ ನಿಶ್ಚಿತ ಸ್ಥಾನದಲ್ಲಿ ನಮ್ಮ ಅತ್ಯುತ್ಕೃಷ್ಟ ಕೊಡುಗೆಯನ್ನು ಪಂಗಡದ ಹಿತಕ್ಕಾಗಿ ನೀಡಬೇಕು. ಆಗ ಮಾತ್ರ ಕ್ರೀಡೆ ಸ್ವಾರಸ್ಯಕರವೂ ಸ್ಪರ್ಧಾತ್ಮಕವೂ, ಫಲಪ್ರದವೂ ಆಗಬಲ್ಲದು. ನಮ್ಮ ಜೀವನ ಸುಖಕರ ಮತ್ತು ಯಶಸ್ವಿಯಾಗಬೇಕಾದರೆ ನಮಗೆ ಇತರರ ಸಹಕಾರ ಮತ್ತು

ಸಹಾನುಭೂತಿಗಳ ಅವಶ್ಯಕತೆಯಿದೆಯೆಂಬುದು ಸಫಲ ವ್ಯಕ್ತಿತ್ವ ಹೊಂದಿರುವವರಿಗೆ ತಿಳಿದಿದೆ. ನಾನು ಬೇರೆಯವರೆಲ್ಲರಿಗೆ ಉಪಯೋಗಿಯಾದರೆ ಬೇರೆಯವರೆಲ್ಲರೂ ನನಗೆ ಉಪಯೋಗಿಯಾಗುವರೆಂಬುದನ್ನು ಬೇಗ ತಿಳಿದಷ್ಟೂ ಹಿತ.

ಜನರಿಗೆ ಉಪಯೋಗಿಯಾಗಿ ಬದುಕುವ ಮೊದಲು ಅವರು ನಮ್ಮನ್ನು ಬಯಸುವಂತಾಗ ಬೇಕು. ಹಾಗಾದರೆ ಜನ ನನ್ನನ್ನು ಅದೇಕೆ ಬಯಸುತ್ತಾರೆ ಅಥವಾ ತಿರಸ್ಕರಿಸುತ್ತಾರೆಂಬುದನ್ನು ಅರಿಯುವುದವಶ್ಯ.

1. ಇತರರ ಮುಖಾಂತರ ನನ್ನ 'ಅಹಂ' ಬೆಳೆಯಿಸುವುದಕ್ಕಾಗಿ
2. ಅವರು ನನ್ನ ಆಸೆಗಳನ್ನು ಪೂರೈಸಲು ಸಿದ್ಧರು, ಸಮರ್ಥರು
3. ಅವರು ನನ್ನ ಪೂರ್ವಾನುಭವಗಳನ್ನು ಪುನರಾವರ್ತಿಸುತ್ತಾರೆ
4. ಅವರು ನನ್ನನ್ನು ಇಷ್ಟಪಡುತ್ತಾರೆ.

ಇಲ್ಲಿ 'ಅಹಂ' ಎಂದರೆ ಸ್ವಂತದ ಇಷ್ಟಾನಿಷ್ಟಗಳು, ದೈಹಿಕ ಕ್ಷೇಮ, ಆಧ್ಯಾತ್ಮಿಕ ಬೆಳವಣಿಗೆ, ಕಾರ್ಯಗಳ ಸಮರ್ಥನೆ, ಧ್ಯೇಯೋದ್ದೇಶಗಳಿಗೆ ಬೆಂಬಲ ದೊರಕಿಸುವಿಕೆ, ಕೌಟುಂಬಿಕ ಸಹಕಾರದ ಅಪೇಕ್ಷೆ ಮುಂತಾದವುಗಳನ್ನೊಳಗೊಂಡ ಒಂದು ಸಮಗ್ರ ವಿಚಾರ. ಯಾರು ನನ್ನ 'ಅಹಂ'ನ್ನು ಪುರಸ್ಕರಿಸುತ್ತಾರೋ ಅವರು ನನಗೆ ಗ್ರಾಹ್ಯ; ಅದಕ್ಕೆ ಪೆಟ್ಟು ಕೊಡುವವರು ತ್ಯಾಜ್ಯ ಎಂಬುದು ಸಾಮಾನ್ಯ ವರ್ತನೆ. ನನ್ನ 'ಅಹಂ'ನ ಘಟಕಗಳೆಲ್ಲವಕ್ಕೂ ನಾನು ಸಮಾನ ಮಹತ್ವ ನೀಡುತ್ತಿರಲಿಕ್ಕಿಲ್ಲ. ಅವುಗಳಲ್ಲಿ ಯಾವುದು(ವು) ಅತಿ ಮಹತ್ವದ್ದೋ(ದವೋ) ಅವುಗಳನ್ನು ಪುರಸ್ಕರಿಸುವವರು ನನಗೆ ಪ್ರಿಯ; ತಿರಸ್ಕರಿಸುವವರು ಅಗ್ರಾಹ್ಯ. ನೀವು ಆಯ್ದುಕೊಳ್ಳುವ ಸ್ನೇಹಿತರು ನಿಮಗೆ ಆತ್ಮೀಯರಾಗುಳಿಯಬೇಕಾದರೆ ಅವರ ಪ್ರೀತಿಪಾತ್ರವಾದ ಅವರ 'ಅಹಂ'ನ ಘಟಕಗಳನ್ನರಿತು ಅವುಗಳನ್ನು ಪುರಸ್ಕರಿಸುವ ಮನಸ್ಸು ಮತ್ತು ಇಚ್ಛೆ ನಿಮಗಿರಬೇಕು. ಸ್ನೇಹಿತರ ಆಯ್ಕೆ ಸುಲಭವಲ್ಲ ಎಂಬುದು ಮನದಟ್ಟಾಯಿತಲ್ಲವೇ?

ಬೇರೆಯವರೊಡನೆ ನಾವು ಸ್ನೇಹಪರರಾಗಿರುವುದರ ಎರಡನೆಯ ಕಾರಣ ಅವರು ನಮ್ಮ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸಹಾಯ ಮಾಡುತ್ತಾರೆಂಬುದು. ಇಂಥ ಸ್ನೇಹ 'ಜೀವನ ಸಂಗ್ರಾಮ'ವನ್ನು ಸಹನೀಯವೂ, ಅರ್ಥಪೂರ್ಣವೂ, ಫಲಪ್ರದವೂ ಆಗುವುದಕ್ಕೆ ಅನುವಾಗುತ್ತದೆ. ಈಗ ನಮ್ಮ ಕರ್ತವ್ಯವೇನು? ನಾವೂ ಸಹ ಇತರರ ಆಸೆ-ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ನಮ್ಮ ಪಾತ್ರವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸಬೇಕು. ಆಸೆಗಳ ಈಡೇರಿಕೆಯ ಪ್ರಯತ್ನ ಸ್ವಾರ್ಥೀಯ ಲಕ್ಷಣವೇ? ನಮ್ಮ ಆಸೆಗಳ ಸ್ವರೂಪ ಎಂತಹದು? ಅವುಗಳ ಈಡೇರಿಕೆಗೆ ನಾವು ಆಯ್ದುಕೊಳ್ಳುವ ಮಾರ್ಗ ಯಾವುದು? ಈ ಪ್ರಶ್ನೆಗಳಿಗೆ ದೊರಕುವ ಉತ್ತರಗಳೇ ನಮಗೆ ಮಾರ್ಗದರ್ಶಕವಾದಾವು. ಬೇರೆಯವರ ಆಸೆ-ಆಕಾಂಕ್ಷೆಗಳನ್ನು ಬಲಿಗೊಟ್ಟಾಗಲೀ ಅಥವಾ ಅವುಗಳನ್ನು ನಿರ್ಲಕ್ಷಿಸಿಯಾಗಲೀ ನನ್ನವನ್ನು ಆದ್ಯತೆ ಕೊಟ್ಟು ಈಡೇರಿಸಿಕೊಂಡರೆ ಅದು ಖಂಡನೀಯವೂ ಹೌದು. ಅಸಮರ್ಥನೀಯವೂ ಕೂಡ. ಒಟ್ಟಾರೆ ಸರ್ವೋದಯದಲ್ಲಿ ವ್ಯಕ್ತಿಯ ಉದಯ ಅಡಗಿದೆಯೆಂಬುದು ನಮಗೆ ಮನದಟ್ಟಾಗಬೇಕು.

ಆರೋಗ್ಯಕರ ಅಥವಾ ರೋಗಗ್ರಸ್ತ ವ್ಯಕ್ತಿತ್ವ ದೊಡನೆ ಯಾರೂ ಜನ್ಮ ತಳೆದಿರುವುದಿಲ್ಲ. ವ್ಯಕ್ತಿಯೊಬ್ಬನು ರೂಪಿಸಿಕೊಳ್ಳುವ ವ್ಯಕ್ತಿತ್ವ ಆತ ಗಳಿಸಿದ ಜೀವನಾನುಭವಗಳನ್ನವಲಂಭಿಸಿರುತ್ತದೆ. ಗತಿಸಿದ ನಿಮ್ಮ ಜೀವನಾನುಭವಗಳ ಪುನರಾವರ್ತನೆಗೆ ಕಾರಣರಾಗುವವರು ನಿಮಗೆ ಆತ್ಮೀಯರಾದಾರು.

ನೀವು ಯುವತಿಯೋರ್ವಳನ್ನು ಪ್ರಪ್ರಥಮ ಸಲ ಸಂಧಿಸಿದಿರೆಂದಿಟ್ಟುಕೊಳ್ಳಿ. ಅನೇಕ ವರ್ಷಗಳಿಂದ ಆಕೆಯನ್ನು ಬಲ್ಲಿರೆಂಬಷ್ಟು ಆತ್ಮೀಯರಾದಿರಿ. ಕ್ಷಣ ಮಾತ್ರದಲ್ಲಿಯೇ ನಿಮ್ಮನ್ನು ಆಕೆಯತ್ತ ಕೊಂಡೊಯ್ದ ಇಂಥ ಶಕ್ತಿ ಯಾವುದು? ದೇಹದಾಕಾರವೇ? ಸೌಂದರ್ಯವೇ? ವರ್ತನೆಯೇ? ಹೇಳಬಲ್ಲಿರಾ? ಹಾಗೆ ನೋಡಿದರೆ ಇವಾವುಗಳಿಂದಲೂ ನೀವು ಪ್ರಭಾವಗೊಂಡಿಲ್ಲ. ಚಂದ್ರಕಾಂತಶಿಲೆ ದೂರದ ಚಂದ್ರರಶ್ಮಿಗಳಿಂದ ದ್ರವೀಕೃತವೇಕಾಗುತ್ತದೆ ಎಂಬುದರ ಕಾರಣವನ್ನೇ ಕಾಳಿದಾಸ 'ಅದೃಶ್ಯ ಅಂತಃಶಕ್ತಿ' ಎಂದು ಚಿತ್ರಿಸಿದ್ದಾನೆ. ನನ್ನಂಥ ಸಾಮಾನ್ಯರು ಇದನ್ನೇ 'ಚುಂಬಕೀಯ ವ್ಯಕ್ತಿತ್ವ'ವೆಂದು ಹೆಸರಿಸಬಹುದು. ಬೇರೊಂದು ರೀತಿಯಲ್ಲೂ ಇದನ್ನು ಸರಳೀಕರಿಸಬಹುದು.

ಉದಾಹರಣೆಯಲ್ಲಿಯ ನಿಮ್ಮ ಹೊಸ ಗೆಳತಿಯ ಧ್ವನಿ ನಿಮ್ಮಿಂದ ಶಾಶ್ವತವಾಗಿ ದೂರವಾದ ಹಳೆ ಗೆಳತಿಯೊಬ್ಬಳ ಮಂಜುಳ, ಮನಕಲಕುವ ಧ್ವನಿಯನ್ನು ಹೋಲುತ್ತದೆಂದು ಊಹಿಸಿ, ಆದರೆ ಆಗ ನಿಮಗೆ ನೆನಪಾಗುವುದು ಆ ಹಳೆ ಗೆಳತಿಯಲ್ಲ. ಅವಳೊಡನೆ ನೀವು ಅನುಭವಿಸಿದ ಸಂತೋಷಕರ ಸನ್ನಿವೇಶಗಳು ನಿಮ್ಮಲ್ಲಿ ಶೇಖರಿಸಿದ ಸಂವೇದನೆಗಳು - 'ಎಣ್ಣೆ ಬದನೇಕಾಯಿಯ' ರುಚಿಯನ್ನು ನೀವು ನೆನೆದು ಬಾಯಿ ಚಪ್ಪರಿಸುವಂತೆ! ಹಳೆಯ ನೆನಪುಗಳು ಕಾಡಿದುದು ಯಾತಕ್ಕಾಗಿ? ಅದಕ್ಕೆ ಕಾರಣ ಹೊಸ ಗೆಳತಿಯ ಆ ಧ್ವನಿ! ಅದಕ್ಕಾಗಿಯೇ ಆಕೆ ಆತ್ಮೀಯಳಾಗಿಬಿಟ್ಟಳು, ಕ್ಷಣಮಾತ್ರದಲ್ಲಿ. ಈಗ ಇನ್ನೊಂದು ಉದಾಹರಣೆ.

ನಾನು ಬೇರೆಯವರೆಲ್ಲರಿಗೆ ಉಪಯೋಗಿಯಾದರೆ ಬೇರೆಯವರೆಲ್ಲರೂ ನನಗೆ ಉಪಯೋಗಿಯಾಗುವರೆಂಬುದನ್ನು ಬೇಗ ತಿಳಿದಷ್ಟೂ ಹಿತ.

ಶಾಲಾಂತ್ಯ ಪರೀಕ್ಷೆಯ ನಂತರ ಶಂಕರ ಮಹಾವಿದ್ಯಾಲಯವೊಂದರಲ್ಲಿ ಪ್ರವೇಶ ಪಡೆದ. ಆತ ಹಳ್ಳಿಯಿಂದ ಬಂದವ. ಆದುದರಿಂದ ಅಲ್ಲಿಯ ವಿದ್ಯಾರ್ಥಿನಿಲಯದಲ್ಲಿಯೂ ಆತ ಪ್ರವೇಶ ದೊರಕಿಸಬೇಕಾಯಿತು.

ಅಲ್ಲಿ ದಿನಗಳೆದಂತೆ ಆತನ ಹಸಿವೆ ಇಂಗತೊಡಗಿತು; ದಣಿವು ಹೆಚ್ಚುತ್ತಾ ಸಾಗಿತು; ದುಮ್ಮಾನ ಆತನನ್ನು ಆವರಿಸುತ್ತ ಆತ ಕಂಗಾಲಾಗತೊಡಗಿದ. ಇದರ ಕಾರಣ ಮೇಲ್ನೋಟಕ್ಕೆ ತಿಳಿಯದಾದಾಗ ದೀರ್ಘ ಚಿಂತನೆಯಿಂದ ಕಂಡು ಬಂದುದಿಷ್ಟು; ವಿದ್ಯಾರ್ಥಿನಿಲಯದ ಎದುರು ರಾಕ್ಷಸಾಕಾರದ ಬೇವಿನ ಮರವಿದೆ. ಎಲ್ಲ ನಿಲಯಾರ್ಥಿಗಳೂ ಅದರ ಆರಾಧಕರು. ಎಲ್ಲರೂ ಅಲ್ಲಿ ಸಂಧಿಸುತ್ತಾರೆ; ವಿಶ್ರಮಿಸುತ್ತಾರೆ; ಓದುತ್ತಾರೆ; ಚರ್ಚಿಸುತ್ತಾರೆ; ಬಯಲೂಟ ಮಾಡುತ್ತಾರೆ.

ಆದರೆ ಶಂಕರನೊಬ್ಬನ ಪ್ರತಿಕ್ರಿಯೆ ಇದಕ್ಕೆ ವಿಪರೀತವಾಗಿದೆ! ಆ ಮರವನ್ನು ಅವನಿಗೆ ಕಂಡರಾಗದು. ಆದರೆ ಅವನು ಅದನ್ನು ಕಾಣುತ್ತಿದ್ದುದ್ದು ಇದೇ ಮೊದಲು. ಆದರೂ ಹೀಗೇಕೆ? ಆತನ ಪ್ರೀತಿ ಪಾತ್ರ ತಂದೆ ಇಂಥದೇ ಬೇವಿನ ಮರಕ್ಕೆ ನೇಣುಬಿಗಿದುಕೊಂಡು ಎರಡು ವರ್ಷಗಳ ಹಿಂದೆ ಅಸುನೀಗಿದ್ದ. ಬೇವಿನ ಮರದ ಪ್ರತಿ ದರ್ಶನ ಹಿಂದಿನ ಅನುಭವ ತಂದೊಡ್ಡಿದ ದುಃಖವನ್ನು ಆತನಲ್ಲಿ ಮರುಕಳಿಸುತ್ತಿತ್ತು. ಆತನಿಗೆ ವಿದ್ಯಾರ್ಥಿನಿಲಯದಿಂದ ಬಿಡುಗಡೆಗೊಳ್ಳುವಂತೆ ತಿಳಿಸಲಾಯಿತು. ಶಂಕರನ ದೈಹಿಕ ತಕರಾರುಗಳು ಆಗ ತಂತಾನೇ ಮಾಯವಾದವು.

ಇದೇ ರೀತಿ ವಿಧವಿಧದ ಹೆಸರುಗಳು, ಬಣ್ಣಗಳು, ಸ್ಥಳಗಳು, ಸಂಗೀತ, ಪರಿಮಳಗಳು ಇತ್ಯಾದಿಗಳೆಲ್ಲ ನಮಗೆ ಏಕೆ ಪ್ರಿಯ ಅಥವಾ ಅಪ್ರಿಯವೆಂಬುದನ್ನು ವಿವರಿಸಬಹುದು.

ಇಂದಿನ ಪ್ರಯಾಣದಲ್ಲಿ ಇಷ್ಟು ಸಾಕು.

■ ಕೃಶಾಂಗ

ನತದೃಷ್ಟ ಪ್ರತಿಭೆ ದೊಡ್ಡ ಗಣೇಶ್

ಆಯ್ಕೆ ಸಮಿತಿಯ ಅವಕೃಪೆಗೆ ಒಳಗಾಗಿ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ಪ್ರತಿಭಾನ್ವಿತ ನತದೃಷ್ಟನೇ ವೇಗದ ಬೌಲರ್ ಕರ್ನಾಟಕದ ದೊಡ್ಡ ಗಣೇಶ್.



ಭಾರತೀಯ ಕ್ರಿಕೆಟ್‌ನ ಆಯ್ಕೆ ಸಮಿತಿಯ ವಿದ್ಯಮಾನಗಳನ್ನು ಅವಲೋಕಿಸಿದಾಗ ನಮಗೆ ಗೋಚರವಾಗುವುದು ಹಲವಾರು ಪ್ರತಿಭೆಗಳ ಪರದಾಟ. ಸಮರ್ಪಕ ಆಯ್ಕೆ ಎಂಬುದಕ್ಕೆ ಮೌಲ್ಯವೇ ಇಲ್ಲ. ಐವರು ಸದಸ್ಯರನ್ನೊಳಗೊಂಡ ಆಯ್ಕೆ ಮಂಡಳಿ ಆಯ್ಕೆ ಮಾಡುವಾಗ ಪ್ರಾದೇಶಿಕ ಹಿತಾಸಕ್ತಿಗಳಿಗೇ ಹೆಚ್ಚಿನ ಪ್ರಾಧಾನ್ಯ ನೀಡುತ್ತಿದೆ ಎಂದರೆ ತಪ್ಪಾಗಲಾರದು. ಇದರಿಂದಾಗಿ ಎಷ್ಟೋ ಪ್ರತಿಭಾನ್ವಿತರಿಗೆ ನೆಲೆಯೇ ಇಲ್ಲದಂತಾಗಿದೆ. ಆಯ್ಕೆ ಸಮಿತಿಯ ಅವಕೃಪೆಗೆ ಒಳಗಾಗಿ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ಪ್ರತಿಭಾನ್ವಿತ ನತದೃಷ್ಟನೇ ವೇಗದ ಬೌಲರ್ ಕರ್ನಾಟಕದ ದೊಡ್ಡ ಗಣೇಶ್.

ಕಳೆದ ಸೆಪ್ಟಂಬರ್ 2 ರಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾಮನ್ವೆಲ್ತ್ ಹಾಗೂ ಸಹರಾ ಕಪ್‌ಗಾಗಿ ಪ್ರಕಟಿಸಿದ ಎರಡು ತಂಡಗಳಲ್ಲೂ ಡಿ.ಗಣೇಶ್‌ರಿಗೆ ಸ್ಥಾನ ಸಿಕ್ಕದಿದ್ದುದು ವಿಪರ್ಯಾಸ. ರಾಷ್ಟ್ರೀಯ ತಂಡದಲ್ಲಿ ಮತ್ತೊಮ್ಮೆ ಭಾಗಿಯಾಗಿ ಪೂರ್ಣ ಪ್ರತಿಭೆಯನ್ನು ಸಾಬೀತು ಪಡಿಸಲೇಬೇಕೆಂದು ಕಾದು ಕುಳಿತಿರುವ ಆಟಗಾರನಿಗೆ ಅವಕಾಶ ಲಭಿಸದಿದ್ದುದು ದುರಂತವೆಂದೇ ಹೇಳಬಹುದು.

ನೀಳಕಾಯದ ಈ ವೇಗದ ಬೌಲರ್ 1996ರಲ್ಲಿ ದೇಶೀಯ ಕ್ರಿಕೆಟ್‌ನಲ್ಲಿ ತೋರ್ಪಡಿಸಿದ ಸಾಮರ್ಥ್ಯ ಗಮನಾರ್ಹ. ಆ ವರ್ಷ ಕರ್ನಾಟಕಕ್ಕೆ ಪ್ರತಿಷ್ಠಿತ ಇರಾನಿ 'ಟ್ರೋಫಿ' ಬರಲು ಗಣೇಶ್ ಅವರೇ ಕಾರಣರು. ಅದರಿಂದಾಗಿ ಆ ವರ್ಷ ರಾಷ್ಟ್ರೀಯ ತಂಡದಲ್ಲಾಡುವ ಭಾಗ್ಯ ಅವರಿಗೆ ಒದಗಿಬಂತು. 1996ಕ್ಕೆ ಅಂತ್ಯದಲ್ಲಿ ಭಾರತ ತಂಡ ದಕ್ಷಿಣ ಆಫ್ರಿಕಾ ಪ್ರವಾಸಗೈದಾಗ ಡಿ.ಗಣೇಶ್ ತಂಡಕ್ಕೆ ಸೇರ್ಪಡೆಯಾದರು. ಆದರೆ ಅವರಿಗೆ ಅಲ್ಲಿ ದೊರೆತ ಅಲ್ಪ ಅವಕಾಶದಿಂದಾಗಿ ಹೆಚ್ಚಿನದನ್ನು ಸಾಧಿಸಲಾಗಲಿಲ್ಲ. 1997ರ ವಿಂಡೀಸ್ ಪ್ರವಾಸದಲ್ಲಿ ಗಣೇಶ್ ಅಮೋಘವಾಗಿ ಆಡಿದರು. ಅವರು ಜಾವಗಲ್ ಶ್ರೀನಾಥ್‌ರ ಅನುಪಸ್ಥಿತಿಯಲ್ಲಿ ಕುರುವಿಲ್ಲಾರಿಗೆ ಉತ್ತಮ ಬೆಂಬಲಿಗರಾದರು. 1997ರಲ್ಲಿ ಭಾರತದಲ್ಲಿ ನಡೆದ ಇಂಡಿಪೆಂಡೆನ್ಸ್ ಕಪ್‌ನಲ್ಲಿ ಗಣೇಶ್‌ರು ತಂಡದ ಸದಸ್ಯನಾಗಿದ್ದರೂ ಆಡುವ ಯೋಗ ಒದಗಲಿಲ್ಲ. ಆಗ ತಂಡದಿಂದ ಹೊರಬಿದ್ದ ಬಳಿಕ ಮತ್ತೆ ವಾಪಾಸ್ಸಾಗಲಿಲ್ಲ.

ನಿಜ, ಯಾವುದೇ ಆಟಗಾರನಾಗಲಿ ದೇಶೀಯ ಕ್ರಿಕೆಟ್‌ನಲ್ಲಿ ಮಿಂಚಿದಷ್ಟು ಸುಲಭವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಲಾಗುವುದಿಲ್ಲ. ಇದಕ್ಕೆ ಹಲವಾರು ಕಾರಣ ಗಳಿರಬಹುದಾದರೂ ಭಾರತದ ದೃಷ್ಟಿಯಿಂದ ಹೇಳುವುದಾದರೆ ಒಂದೇ ಪ್ರಮುಖ ಕಾರಣ. ಅದೆಂದರೆ ಭಾರತ ತಂಡದಲ್ಲಿ ಪಾದಾರ್ಪಣೆಗೈದ ಯಾವುದೇ ಆಟಗಾರನ ಮನದಲ್ಲಿ ಸುಳಿಯುವ ಮೊದಲ ಚಿಂತೆಯೆಂದರೆ ಮುಂದಿನ ಪಂದ್ಯಕ್ಕೆ ನಾನು ತಂಡದಲ್ಲಿರಬಹುದೇ? ಈ ಚಿಂತೆಯ ಭೀತಿಯಲ್ಲೇ ಪೂರ್ಣ ಸಾಮರ್ಥ್ಯ ಪ್ರದರ್ಶಿಸಲಾಗದೇ ನಲುಗಿ ಹೋಗುವುದುಂಟು. ಗಣೇಶ್‌ರಿಗಾದದ್ದು ಹೀಗೆಯೇ. ಅವರಲ್ಲಿ ಪ್ರತಿಭೆಯನ್ನು ಪೂರ್ಣವಾದರೂ ಹೊರಸೂಸುವ ಛಲವಿತ್ತು. ಆದರೆ ಅವರ ನೀರಸ ಆರಂಭ ಇದಕ್ಕೆ ಅಡ್ಡಿಯಾಯಿತು.

ಈ ಬಾರಿಯ ರಣಜಿ ಋತುವಿನಲ್ಲಿ ಡಿ.ಗಣೇಶ್‌ರು 190 ಓವರ್ ಬೌಲ್ ಮಾಡಿ 35 ಮೇಡನ್‌ಗಳಿಂದ 565 ರನ್ ನೀಡಿ 27.00 ರ ಸರಾಸರಿಯಲ್ಲಿ 19 ವಿಕೆಟ್‌ಗಳನ್ನು ಪಡೆದಿದ್ದಾರೆ. ಕಳೆದ ಏಪ್ರಿಲ್‌ನಲ್ಲಿ ಬಾಂಗ್ಲಾ ಹಾಗೂ ಕೀನ್ಯಾಗಳನ್ನೊಳಗೊಂಡ ತ್ರಿಕೋನ ಸರಣಿಯಲ್ಲಿ ಭಾರತದ ಪರ ಆಡಲು ಅನೇಕರಿಗೆ ಅವಕಾಶ ದೊರೆತರೂ ಗಣೇಶ್‌ಗೆ ಮಾತ್ರ ದೊರೆಯಲಿಲ್ಲ. ಇದಲ್ಲದೇ ಭಾರತ 'ಎ' ತಂಡದ ಹಾಲೆಂಡ್ ಪ್ರವಾಸಕ್ಕೂ ಗಣೇಶ್ ಹೊರಗಿರಬೇಕಾಯಿತು.


ಗಣೇಶ್‌ರ ಜೀವನದ ದುರ್ದೈವ ಎಂದರೆ ಅದೃಷ್ಟ ಮತ್ತು ಪ್ರತಿಭೆ ಏಕಮುಖವಾಗಿ ಸಾಗದಿರುವುದು. ಬೆಟ್ಟದಷ್ಟು ಆಸೆ ತೋರಿಸಿ ಪ್ರಪಾತಕ್ಕೆ ನೂಕುವ ಆಯ್ಕೆ ಮಂಡಳಿಯ ಮುಂದೆ ಗಣೇಶ್‌ರ ಪ್ರತಿಭೆ ಶೂನ್ಯವೇ ಆಯಿತು. ಹಾಗೆಂದ ಮಾತ್ರಕ್ಕೆ ಅವರ ಭವಿಷ್ಯ ಕೊನೆಗೊಂಡಿದೆ ಎಂದಲ್ಲ. ಮುಂದೊಂದು ದಿನ ಅವರ ಅಗತ್ಯ ಭಾರತ ತಂಡಕ್ಕೆ ಇದ್ದೇ ಇದೆ. ಆಗ ಗಣೇಶ್‌ರ ನೈಜ ಪ್ರತಿಭೆ ಖಂಡಿತಾ ಹೊರಬೀಳುತ್ತದೆ.

■ ಗರ್ತಿಕೆರೆ ವಿ. ಪ್ರಕಾಶ್

ಎತ್ತರಕ್ಕೇರುತ್ತಿರುವ ಕರಾಟೆ ಪಟು ಉದಯರವಿ

ಉದಯವಾಗುತ್ತಲೇ ಅರಳುವ ಸೂರ್ಯ(ರವಿ) ನಂತೆ ಯಲ್ಲಾಪುರ ತಾಲೂಕಿನ ಆನಗೋಡ ಗ್ರಾಮದ 'ಉದಯರವಿ ಹೆಗಡೆ' ಶೋಟೋಕಾನ ಕರಾಟೆಯಲ್ಲಿ ಎತ್ತರಕ್ಕೇರುತ್ತಿದ್ದಾನೆ.

ಶೋಟೋಕಾನ್ ಕರಾಟೆ ಅಸೋಸಿಯೇಶನ್ಸ್‌ನವರು 1998ರ ಆಗಸ್ಟ್‌ನಲ್ಲಿ ನಡೆಸಿದ ಕರಾಟೆ ಪರೀಕ್ಷೆಯಲ್ಲಿ ಉದಯರವಿ 'ಬ್ಲಾಕ್‌ಬೆಲ್ಟ್' ಪಡೆದ ಯಲ್ಲಾಪುರದ ವಿದ್ಯಾರ್ಥಿಯಾಗಿದ್ದಾನೆ. Black Belt ಪರೀಕ್ಷೆಯಲ್ಲಿ ದ್ವಿತೀಯ ಸ್ಥಾನ ಪಡೆಯುವುದರೊಂದಿಗೆ, ಯಲ್ಲಾಪುರ ತಾಲೂಕಿನಲ್ಲಿ ಬ್ಲಾಕ್‌ಬೆಲ್ಟ್ ಪಡೆದ ಪ್ರಥಮ ವ್ಯಕ್ತಿಯಾಗಿದ್ದಾನೆ.



ಆನಗೋಡಿನ ಯುವಕ ಸಂಘದ ಸದಸ್ಯರಾದ ಆರ್.ಜಿ. ಭಟ್ಟ ಬೆಳಸೂರ. ಇವರು ಸೇವಾದಳ, ಗೃಹರಕ್ಷಕದಳ ಮುಂತಾದ ಸೇವೆಯಿಂದ ರಾಜ್ಯ

ಹಾಗೂ ಜಿಲ್ಲಾ ಮಟ್ಟದ ಮೂರು ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಇಂತಹ ಪ್ರತಿಭೆಗಳಿಂದ ರಾಜ್ಯ ಮಟ್ಟಕ್ಕೇರಿದ ಆನಗೋಡ ಗ್ರಾಮಕ್ಕೆ ಮತ್ತೊಂದು ಹೆಮ್ಮೆಯ ಗರಿಯಾಗಿ ಉದಯರವಿ ಗೌರವ ತಂದಿದ್ದಾನೆ. ನಾಲ್ಕು ವರ್ಷದಿಂದ ಎಸ್. ಎಸ್. ಸುರೇಂದ್ರ ಹಾಗೂ ಶಿರ್ಸಿಯ ಬಿ.ಸಿ. ಸೂರಜ್‌ರವರಿಂದ ಕರಾಟೆ ಶಿಕ್ಷಣ ಪಡೆಯುತ್ತಿರುವ ರವಿ 6 ತಿಂಗಳಿನಿಂದ ತಾಲೂಕಿನಲ್ಲಿ ಕರಾಟೆ ಶಿಕ್ಷಕನಾಗಿಯೂ ಸೇವೆ ಸಲ್ಲಿಸುತ್ತಿದ್ದಾನೆ.

ತನ್ನ ಪದವಿ ವ್ಯಾಸಂಗದ ಜೊತೆಗೆ ಕರಾಟೆಯನ್ನು ಮುಂದುವರಿಸುತ್ತಿರುವ ಉದಯರವಿ ಕರಾಟೆಯಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕೆಂಬ ಛಲ ಹೊಂದಿದ್ದಾರೆ.

■ **ಪ್ರಶಾಂತ ಗಾಂವ್ಕರ್ ಆನಗೋಡ**

ಕ್ರೀಡೆ ಬಗ್ಗೆ ತಿಳಿಯಿರಿ


1. ಒಲಿಂಪಿಕ್ ಪಂದ್ಯಾವಳಿಯಲ್ಲಿ ಕುದುರೆ ಸವಾರಿಯು ಪ್ರಥಮ ಬಾರಿಗೆ ಯಾವಾಗ ಸೇರಿಸಲ್ಪಟ್ಟಿತು?
2. ವೆಸ್ಟ್ ಇಂಡೀಸ್‌ನ ರಾಷ್ಟ್ರೀಯ ಕ್ರಿಕೆಟ್ ಚಾಂಪಿಯನ್‌ಷಿಪ್ ಯಾವುದು?
3. ಭಾರ ಎತ್ತುವಿಕೆಯ ಸ್ಪರ್ಧೆಯಲ್ಲಿ ಈವರೆಗೆ ಕ್ರೀಡಾಪಟುವೊಬ್ಬರು ಎತ್ತಿದ ಹೆಚ್ಚಿನ ಭಾರ ಎಷ್ಟು?
4. ವಿಶ್ವ ಚೆಸ್ ಚಾಂಪಿಯನ್‌ಷಿಪ್ ಪ್ರಶಸ್ತಿ ಎಂದಿನಿಂದ ಆರಂಭವಾಯಿತು?
5. ವಿಶ್ವ ಕ್ರಿಕೆಟ್ ಆಟದ ಅಧಿಕೃತ ನಿಯಮಗಳನ್ನು ರೂಪಿಸುವ ಜವಾಬ್ದಾರಿ ಯಾರದ್ದು?
6. ಕ್ರಿಕೆಟ್ ಇತಿಹಾಸದಲ್ಲಿ ಮೊದಲ ಟೆಸ್ಟ್ ಪಂದ್ಯ ಯಾವಾಗ, ಎಲ್ಲಿ ನಡೆಯಿತು?
7. ಟೆನ್ನಿಸ್ ಚೆಂಡಿನ ವ್ಯಾಸ ಎಷ್ಟಿರಬೇಕು?
8. ವಿಂಬಲ್ಡನ್ ಟೆನ್ನಿಸ್ ಸ್ಪರ್ಧೆಯಲ್ಲಿ ಉಪಾಂತ್ಯ ಪ್ರವೇಶಿಸಿದ ಪ್ರಥಮ ಭಾರತೀಯ ಆಟಗಾರನು ಯಾರು?
9. ಭಾರತದ ಪರ ಮೊದಲ ಕ್ರಿಕೆಟ್ ಟೆಸ್ಟ್ ನಾಯಕರಾದವರು ಯಾರು?
10. ಕ್ರಿಕೆಟ್ ಆಟದ ಪ್ರಾರಂಭಿಕ ಹಂತದಲ್ಲಿ ಎಷ್ಟು ಎಸೆತಗಳಿಗೆ ಒಂದು ಓವರ್ ಎಂದು ಹೇಳುತ್ತಿದ್ದರು?
11. ಚಲಿಸುವ ಪರ್ವತ ಎಂದು ಹೆಸರಾಗಿರುವ ಜಪಾನಿನ ಕುಸ್ತಿ ಪಟು ಯಾರು?
12. ಸತತವಾಗಿ ಆರು ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಹಾಕಿ ಆಟದ ಸ್ವರ್ಣ ಪದಕವನ್ನು ಪಡೆದ ಕೀರ್ತಿ ಯಾವ ದೇಶಕ್ಕೆ ಸಲ್ಲುತ್ತದೆ?
13. ಥಾಮಸ್ ಕಪ್ ಬ್ಯಾಡ್ಮಿಂಟನ್ ಪಂದ್ಯಾವಳಿ ಪ್ರಾರಂಭವಾದದ್ದು ಯಾವಾಗ?
14. ಭಾರತದ ಬ್ಯಾಡ್ಮಿಂಟನ್ ರಂಗದ ಅನಭಿಷಿಕ್ತ ದೊರೆ ಎಂದು ಹೆಸರು ಗಳಿಸಿದ್ದವರಾರು?
15. ಜಾಗತಿಕ ಬಿಲಿಯರ್ಡ್ಸ್ ಪ್ರಶಸ್ತಿಯನ್ನು ಗಳಿಸಿದ ಪ್ರಥಮ ಭಾರತೀಯ ಯಾರು?
16. 400 ಮೀಟರ್, ಮಹಿಳೆಯರ ಅಡೆತಡೆ ಓಟದಲ್ಲಿ ಏಶಿಯಾದ ದಾಖಲೆಯು ಯಾರ ಹೆಸರಿನಲ್ಲಿದೆ?
17. ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಅತಿ ಹೆಚ್ಚು ಶತಕಗಳನ್ನು ಗಳಿಸಿರುವವರು ಯಾರು?
18. ಕ್ರಿಕೆಟ್ ಇತಿಹಾಸದಲ್ಲಿ ಅತ್ಯಂತ ವೇಗದ ದ್ವಿಶತಕ ಗಳಿಸಿರುವವರು ಯಾರು?
19. ಮೂರು ಸ್ಟಂಪುಗಳನ್ನೊಳಗೊಂಡ ಒಂದು ವಿಕೆಟ್ ಬಳಕೆಗೆ ಬಂದಿದ್ದು ಯಾವಾಗ?
20. ಬ್ರಿಟನ್‌ನಲ್ಲಿ ಕುದುರೆ ಪಂದ್ಯಾವಳಿಯ ಅತ್ಯುನ್ನತ ಪ್ರಶಸ್ತಿ ಯಾವುದು?
21. ವಿಶ್ವ ಬಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪ್ರಥಮವಾಗಿ ಜರುಗಿದ್ದು ಎಲ್ಲಿ?
22. 1990ರ ಬೀಜಿಂಗ್ ಏಶಿಯನ್ ಗೇಮ್ಸ್‌ನಲ್ಲಿ ಮಹಿಳಾ ಹಾಗೂ ಪುರುಷರ ಹ್ಯಾಂಡ್‌ಬಾಲ್ ಪ್ರಶಸ್ತಿಗಳನ್ನು ಗಳಿಸಿದ ದೇಶ ಯಾವುದು?
23. ಯುರೋಪಿಯನ್ ಕಪ್ ಹಾಕಿ ಟೂರ್ನಿಯನ್ನು ಸ್ಪೇನ್ ತಂಡವು ಮೊದಲ ಬಾರಿ ಗಳಿಸಿದ್ದು ಯಾವ ವರ್ಷ?
24. ಟೇಬಲ್ ಟೆನ್ನಿಸ್ ಕ್ರೀಡೆ ಯಾವ ಒಲಿಂಪಿಕ್ಸ್ ಪಂದ್ಯಾವಳಿಯಿಂದ ಅಧಿಕೃತವಾಗಿ ಸೇರ್ಪಡೆಯಾಯಿತು?
25. ವಿಶ್ವ ವಾಲಿಬಾಲ್ ಒಕ್ಕೂಟದ ಅಧ್ಯಕ್ಷರಾಗಿದ್ದ ಮಾಜಿ ಒಲಿಂಪಿಕ್ಸ್ ಜಿಮ್ನಾಸ್ಟಿಕ್ಸ್ ಚಾಂಪಿಯನ್ ಯಾರು?
26. ರಿಚರ್ಡ್ ಹ್ಯಾಡ್ಲಿ ಪಡೆದ 300ನೇ ವಿಕೆಟ್ ಯಾರದ್ದು?
27. 74 ಟೆಸ್ಟ್‌ಗಳಲ್ಲಿ ನಾಯಕತ್ವ ವಹಿಸಿ, 36ರಲ್ಲಿ ಗೆದ್ದು, 12 ರಲ್ಲಿ ಸೋತು, 26ರಲ್ಲಿ ಡ್ರಾ ಮಾಡಿಕೊಂಡ ಕ್ರಿಕೆಟ್ ಆಟಗಾರ ಯಾರು?
28. ಪ್ರಖ್ಯಾತ ಕ್ರಿಕೆಟ್ ಆಟಗಾರ ಸುನೀಲ್ ಗವಾಸ್ಕರ್ ಅವರು ಭಾರತ ಕ್ರಿಕೆಟ್ ತಂಡದ ಆಟಗಾರನಾಗಿ ಟೆಸ್ಟ್ ಪಾದಾರ್ಪಣೆ ಮಾಡಿದ್ದು ಯಾವಾಗ?
29. ರಾಹುಲ್ ದ್ರಾವಿಡ್ ಎಷ್ಟನೇ ಟೆಸ್ಟ್‌ನಲ್ಲಿ ಸಾವಿರ ರನ್‌ಗಳ ಸರದಾರ ಎನ್ನಿಸಿಕೊಂಡರು?
30. ಸುನೀಲ್ ಗವಾಸ್ಕರ್ ಅವರು ಜನಿಸಿದ್ದು ಯಾವಾಗ?

ಉತ್ತರಗಳು

1. 1912 ರಲ್ಲಿ
2. ಶಿಲ್ ಶೀಲ್ಡ್
3. 640 ಕೆ.ಜಿ. ವಸ್ಸಿಲಿ ಅಲೆಕ್ಸೀಯನ್
4. 1843 ರಿಂದ
5. ಇಂಗ್ಲೆಂಡಿನ ಎಂ.ಸಿ.ಸಿ.
6. 1877, ಮೆಲ್‌ಬೋರ್ನ್
7. 2.5 ಅಂಗುಲ
8. ರಾಮನಾಥನ್ ಕೃಷ್ಣನ್
9. ಸಿ.ಕೆ. ನಾಯ್ಡು
10. ನಾಲ್ಕು ಎಸೆತಗಳು
11. ಅಂಟೋನಿಯೋ ಇನೊಕಿ
12. ಭಾರತ ದೇಶಕ್ಕೆ
13. 1948ರಲ್ಲಿ
14. ಪ್ರಕಾಶ್ ಪಡುಕೋಣೆ
15. ವಿಲ್ಸನ್ ಜೋನ್ಸ್
16. ಭಾರತದ ಪಿ.ಟಿ. ಉಷಾ
17. ಸುನೀಲ್ ಗವಾಸ್ಕರ್ (34 ಶತಕ)
18. ರವಿಶಾಸ್ತ್ರಿ : 113 ನಿಮಿಷ : 123 ಎಸೆತ
19. 1775ರಲ್ಲಿ
20. ಡರ್ಬಿ
21. 1950ರಲ್ಲಿ, ಬ್ಯೂನೋಸ್ ಏರೀಸ್‌ನಲ್ಲಿ
22. ದಕ್ಷಿಣ ಕೊರಿಯಾ
23. 1947ರಲ್ಲಿ
24. ಸೋಲ್ ಒಲಿಂಪಿಕ್ಸ್ (1988)
25. ಯು.ಎಸ್.ಎಸ್.ಆರ್.ನ ಟ್ಯೂರೈ ಟೈಬೋವ್
26. ಅಲನ್ ಬಾರ್ಡರ್
27. ಕ್ಲೈವ್ ಲಾಯ್ಡ್
28. 6.3.1971
29. 14ನೇ ಟೆಸ್ಟ್
30. 13.1.1948 ರಂದು

ಶಂಕರಗೌಡ ವೈ. ಪಾಟೀಲ

ಪದ ಬಂಧ 9



ಪದಬಂಧ 8 ರ ಸರಿಯುತ್ತರ

ಎಡದಿಂದ ಬಲಕ್ಕೆ:

೧.ಹವಿರ್ಭಾಗ ೪. ಲಕ್ಷ್ಮಾಧೀಶ ೬. ವಿಕಾ ೮. ನಿಜ ೯. ವ್ಯರ್ಥ ೧೦. ಕಮಲ ೧೨. ಕುಲ ೧೫. ರಕ್ಷಾಬಂಧನ ೧೮. ಡಗಿ ೧೯. ಪಾಯಸ ೨೧. ಮಗ ೨೨. ಬನ ೨೩. ಯಶ ೨೫. ಸರದಾರ ೨೬. ನಿಷ್ಕಪಟ.

ಮೇಲಿನಿಂದ ಕೆಳಕ್ಕೆ :

೨. ವಿಚಿತ್ರ ವ್ಯಕ್ತಿ ೩. ಗವಿ ೪. ಲಜ ೫. ಧೀರ ಬಾಲಕ ೭. ಕಾಯಕ ೮. ನಿರ್ಮಲ ೧೧.ಮಹಾ ಬಂಡಾಯ ೧೩.ಧರಣಿ ೧೪.ಕಾನನ ೧೬. ಕಡಲು ತೀರ ೧೭. ರಂಗ ಮಂಟಪ ೧೯. ಪಾವನ ೨೦. ಸಮಯ ೨೨. ಬರ ೨೪. ಶನಿ.

ಎಡದಿಂದ ಬಲಕ್ಕೆ

೧. ಅಮಾನುಷ ಕೃತ್ಯಕ್ಕೆ ಒಳಗಾದ ಏನೂ ಅರಿಯದ ವ್ಯಕ್ತಿ............ (೪)
೪. ಪ್ರಚಾರ ಹೆಚ್ಚಿಸಲು ಕಾರಣವಾದ ಹಸ್ತ ಪತ್ರಿಕೆ .... (೪)
೬. ಮೋಡ ಕವಿದಾಗ ಕಾಣಿಸದ ಸೂರ್ಯ .... (೨)
೮. ಉದ್ದುದ್ದಾಗಿ ಮುಗಿಲು ಮುಟ್ಟಿದ ಬೆಂಕಿಯ ಜ್ವಾಲೆ .... (೨)
೯. ಯಾತ್ರಿಕರು ಪಯಣಿಸಿದ ಇರುಳು ತಿರುಗಿದೆ .... (೨)
೧೦. ಸರಿ ರಾತ್ರಿಯಲ್ಲಿ ಮರಣಕ್ಕೆ ಕಾರಣವಾದ ಯುದ್ಧ .... (೩)
೧೨. ಅಗಣಿತ ಶಕ್ತಿಶಾಲಿಯಾದ ಕುದುರೆ .... (೨)
೧೫. ವಿಧಿವತ್ತಾಗಿ ಆಡಳಿತ ನಡೆಸುವ ರಾಜಧಾನಿಯ ಸೌಧ .... (೫)
೧೮. ಯಥಾ ರೀತಿಯಲ್ಲಿ ಪ್ರಾರಂಭಗೊಂಡ ಹವನ .... (೨)
೧೯. ಸರಸ ಸಲ್ಲಾಪಗಳಲ್ಲಿಯೇ ಕಾಲ ಕಳೆದ ರಾಜ......................... (೩)
೨೧. ಆಹಾರದಲ್ಲಿ ಅಡಗಿದ ಮಾಲೆ.............................. (೨)
೨೨. ಭ್ರಮರ ವಾಸವಾದ ಗಿಡ .... (೨)
೨೩. ಮತ್ತಷ್ಟು ಮದ್ಯಸೇವನೆ ಮಾಡಿದಾಗ ಬಂದ ಅಮಲು .... (೨)
೨೫. ಜೇನು ಸೇವಿಸಿದ ಹೂವಿನ ರಸ .... (೪)
೨೬. ಹಣದ ಅವ್ಯವಹಾರ ನಡೆದಾಗ ಉದ್ಭವವಾದ ಸಮಸ್ಯೆ............ (೪)


ಮೇಲಿನಿಂದ ಕೆಳಕ್ಕೆ

೨. ತಿಂಗಳಿಗೊಮ್ಮೆ ಹೊರಡುವ ನಿಯತಕಾಲಿಕ....................... (೫)
೩. ಆಕರಣೆ ಮಾಡುವ ಸುಂಕ .... (೨)
೪. ಕಮರಿಯಲ್ಲಿ ಬಿದ್ದ ಆನೆ.. (೨)
೫. ಪರಮ ಭಕ್ತರಿಗೆ ದರ್ಶನ ನೀಡಿದ ಈಶ್ವರ............................ (೫)
೭. ರಸ ಸಮಯದಲ್ಲೂ ಉಂಟಾದ ವೈರತ್ವ............................. (೩)
೮. ಉದ್ದರಿ ಹೇಳಿ ತುಂಬಿಸಿಕೊಂಡ ಹೊಟ್ಟೆ.............................. (೩)
೧೧. ಅತೀ ದೊಡ್ಡದಾಗಿ ಬೆಳೆದ ಪಟ್ಟಣ .... (೫)
೧೩. ಕತೆಗಾರ ಮಧ್ಯದಲ್ಲಿ ಹೇಳಿದ ಹಾಡು .... (೩)
೧೪. ಅಂದ ಚೆಂದದಿಂದ ಹಾಡು ಹೇಳುವ ಕುರುಡರು................... (೩)
೧೬. ವಿನಯದಿಂದ ಮೋಸ ಮಾಡುವವ .... (೫)
೧೭. ಬರಗಾಲದಲ್ಲೂ ಬತ್ತದ ಹಾಲಿನ ಸಾಗರ .... (೫)
೧೯. ಅರಸರಿಗೂ ಕಾಡಿದ ರಾಕ್ಷಸ .... (೩)
೨೦. ಸಮವಲ್ಲದ ಸಂಖ್ಯೆ ಏಳನೆಯದ್ದು................................... (೩)
೨೨. ಮದ್ದಾನೆಗೆ ಮರುಕಳಿಸಿದ ಸೊಕ್ಕು.................................. (೨)
೨೪. ಒಂಬತ್ತು ದಾಟಿದ ಮೇಲೆ ಬಂದ ದಶ ತಿರುಗಿದೆ .... (೨)

■ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ಮುದ್ದು ಮಕ್ಕಳೇ



ಶ್ರಾವಣ ಮಾಸ ಬಂತು ಅಂದ್ರೆ ಸಾಕು ಬಹಳ ಖುಷಿ ಅಲ್ವಾ ಮಕ್ಕಳೇ. ಯಾಕಂದ್ರೆ ಹಬ್ಬದ ಮೇಲೆ ಹಬ್ಬ, ರಜದ ಮೇಲೆ ರಜೆ. ಮನೆಯಲ್ಲಿ ಹೋಳಿಗೆ, ಪಾಯಸದ ಊಟ ಮಾಮೂಲಿಯಾಗಿ ಬಿಡುತ್ತೆ. ನಾಗರ ಪಂಚಮಿ ಬಂತು ಅಂದ್ರೆ ಹಬ್ಬದ ಸಾಲೇ ಸಾಲು. ಮೊನ್ನೆ ತಾನೇ ಗಣಪತಿ ಹಬ್ಬ ಆಚರಿಸಿ ಸುಧಾರಿಸಿಕೊಂಡಿಲ್ಲಾ ಆಗ್ಲೇ ಈ ದಸರಾನು ಬಂತು ಇನ್ನು ಈ ದಸರಾ ಮುಗಿಯುವ ಪ್ಪೊತ್ತಿಗೆ ಮನೆ ಬಾಗಿಲಲ್ಲಿ ದೀಪಾವಳಿ ಕಾಯ್ತಾ ಇರುತ್ತೆ.

ಹೌದು ಮಕ್ಕಳೇ, ಗಣಪತಿ ಹಬ್ಬ ಮುಗಿದ ಮಗ್ಗುಲಲ್ಲೇ ದಸರಾ ಹಬ್ಬ ಬಂದ್ಬಿಡ್ತಲ್ಲಾ. ಮೈಸೂರಿನಲ್ಲಿ ನಡೆಯೋ ದಸರಾ ಮೆರವಣಿಗೆ ವಿಶ್ವ ವಿಖ್ಯಾತ. ದಸರಾವನ್ನು ನವರಾತ್ರಿ ಅಂತಲೂ ಕರೀತಾರೆ. ನಿಮಗೆ ಮತ್ತೆ ಅನುಮಾನ ಶುರುವಾಗಿರ್ಬೇಕಲ್ಲಾ? ದಸರಾ ಅಂದ್ರೆ ಹತ್ತು ಅನ್ನೋ ಅರ್ಥ ಬರುತ್ತೆ, ನವರಾತ್ರಿ ಅಂದ್ರೆ ಒಂಬತ್ತು ರಾತ್ರಿ ಅಂಥ ಅರ್ಥ ಬರುತ್ತೆ. ಆದರೆ ಈ ಅಜ್ಜಿ ಎರಡು ಒಂದೇ ಅನ್ನುತ್ತಲ್ಲಾ ಅಂಥಾ ಅನುಮಾನ ಅಲ್ವಾ? ಹೌದು ಮಕ್ಕಳೇ ಈ ಒಂಬತ್ತು ರಾತ್ರಿ ದೇವಿಯನ್ನು ಪೂಜೆ ಮಾಡ್ತೀವಿ. ಸರಸ್ವತಿ, ಲಲಿತ, ದುರ್ಗೆ ಹೀಗೆ ಅವಳ ವಿವಿಧ ಅವತಾರಗಳನ್ನು ಸ್ಮರಿಸುತ್ತಾ ನವಮಿ ದಿವಸ ಅಂದ್ರೆ ಒಂಬತ್ತನೆಯ ದಿವಸ ಆಯುಧ ಪೂಜೆ ಮಾಡ್ತೀವಿ. ಈ ಹಬ್ಬ ನಮ್ಮ ದೇಶದ ರಾಜಸ್ತಾನ, ಗುಜರಾತ್ ಹೀಗೆ ಇನ್ನಿತರ ಕಡೆಯಲ್ಲೂ ಆಚರಿಸುತ್ತಾರೆ. ಒಂಬತ್ತು ದಿನ ದೇವಿಯನ್ನು ಪೂಜಿಸಿ ಹತ್ತನೆಯ ದಿನ ಅಂದ್ರೆ ವಿಜಯ ದಶಮಿ ದಿನ ಮೆರವಣಿಗೆಯ ಮೂಲಕ ಆಯಾ ಊರಿನ ದೊಡ್ಡ ಮೈದಾನದಲ್ಲಿ ಆ ಊರಿನ ಎಲ್ಲಾ ದೇವರನ್ನು ಪಲ್ಲಕ್ಕಿಯಲ್ಲಿ ಕರ್ಕೊಂಡು ಬರ್ತಾರೆ. ಅಲ್ಲಿ ಬನ್ನಿ ಮಂಟಪ ಅಂತಾ ವ್ಯವಸ್ಥೆ ಮಾಡಿರ್ತಾರೆ. ನಂತರ ಆ ಊರಿನ ಪ್ರಮುಖರು ಅಂದ್ರೆ ತಹಶೀಲ್ದಾರ ಅಥವಾ ಪಂಚಾಯಿತಿ ಪ್ರಮುಖರಾದವರು ಬಂದು ಕತ್ತಿಯಿಂದ ಆ ಬನ್ನಿ ಮರವನ್ನು ಕಡೀತಾರೆ. ಇದನ್ನು ನೋಡಲಿಕ್ಕೆ ಊರಿನ ಜನರೆಲ್ಲಾ ಬಂದು ಸೇರಿರ್ತಾರೆ. ಕಡಿದದ್ದೇ ತಡ ಆ ಕಡಿದ ಬನ್ನಿ ಮರದ ಎಲೆನ್ನಾ ತೆಗೆದುಕೊಳ್ಳೋದಿಕ್ಕೆ ಆ ಕಡೆ ಎಲ್ಲರೂ ನುಗ್ತಾರೆ. ಸಿಕ್ಕಿದ್ದನ್ನು ಬಾಚ್ಕೊಂಡು ಆ ಗುಂಪಿನಿಂದ ಹೊರ ಬಂದವರ ಮುಖದಲ್ಲಿ ಖುಷಿಯೋ ಖುಷಿ. ಬಂಗಾರ ಸಿಕ್ಕಿದಷ್ಟೇ ಖುಷಿ. ಯಾಕಂತೀರಾ? ಈ ದಿನ ಬನ್ನಿ ಎಲೆ ಬಂಗಾರದಷ್ಟೇ ಬೆಲೆ. ನಂತರ ಆ ಬನ್ನೀಯನ್ನು ಮನೆಗೆ ತಂದು ಹಿರಿಯರಿಗೆ ನೀಡಿ ಅವರಿಂದ ಆಶೀರ್ವಾದ ಪಡೆಯೋದು ನಮ್ಮ ಸಂಪ್ರದಾಯ.

ಅಂತೂ ದಸರಾನೂ ಕಳೆದು ಹೋಯ್ತು. ಇನ್ನು ಈ ತಿಂಗಳ ಕೊನೆಯಲ್ಲಿ ಮತ್ತೊಂದು ಹಬ್ಬ ಇದೆಯಲ್ಲ ಕೇಳಿಸ್ತು, ನೀವು ಹೇಳ್ತಾ ಇರೋದು. ಅದೇ ನೀವು ಹೇಳ್ತಿರೋದೇ 'ಪಟಾಕಿ ಹೊಡೆಯೋ ಹಬ್ಬ'. ಅದೇ ದೀಪಾವಳಿ. ಈ 'ನರಕ ಚತುರ್ದಶಿ' ಅನ್ನೋ ದಿನ ನಾವೆಲ್ಲಾ ಎಣ್ಣೆ ಹಚ್ಕೊಂಡು ಬಿಸಿಬಿಸಿ ನೀರಲ್ಲಿ ಸ್ನಾನ ಮಾಡ್ತೀವಲ್ಲಾ. ಇದನ್ನ 'ಅಭ್ಯಂಜನ' ಅಂತಾ ಕರೀತಾರೇ. ನರಕಾಸುರ ಅನ್ನೋ ರಾಕ್ಷಸ 16,000 ನಾರಿಯರನ್ನು ಕೂಡಿಹಾಕಿದನಂತೆ. ಈ ಕೃಷ್ಣ ಆ ನರಕಾಸುರನನ್ನು ಕೊಂದು ಅವರನ್ನೆಲ್ಲಾ ಬಂಧನದಿಂದ ಬಿಡುಗಡೆಗೊಳಿಸಿದನಂತೆ. ಇನ್ನು ಲಕ್ಷ್ಮೀ ಪೂಜೆ ದಿನ ನಗ-ನಾಣ್ಯ ಇಟ್ಟು ಲಕ್ಷ್ಮೀ ಪೂಜೆ ಮಾಡೋದು. ಮತ್ತೊಂದು ದಿನ ಬಲಿ ಪಾಡ್ಯಮಿ ಅಂತ. ಈ ದಿನ ಬಲಿ ಚಕ್ರವರ್ತಿ ಅನ್ನೋ ರಾಕ್ಷಸರಾಜ ತನ್ನ ಶೂರತ್ವ, ದಾನತ್ವದಿಂದ ತ್ರಿಲೋಕವನ್ನು ಗೆದ್ದನಂತೆ. ಇಂದ್ರ ತನ್ನ ಪದವಿ ಹೋಯ್ತಲ್ಲ ಅಂತಾ ನಾರಾಯಣನ ಹತ್ತಿರ ಹೋಗಿ ಬೇಡ್ಕೊಂಡನಂತೆ. ನಂತರ ನಾರಾಯಣ ವಾಮನ ಅನ್ನೋ ಬ್ರಾಹ್ಮಣನ ವೇಷ ಹಾಕ್ಕೊಂಡು ಈ ಬಲಿ ಚಕ್ರವರ್ತಿಯ ಬಳಿ ಬಂದು ಮೂರಡಿ ಜಾಗ ಕೇಳಿದನಂತೆ. ರಾಕ್ಷಸರ ಗುರು ಶುಕ್ರಾಚಾರ್ಯ ಬಲಿ ಚಕ್ರವರ್ತಿಗೆ ಈ ಬ್ರಾಹ್ಮಣನ ಕೋರಿಕೆಯನ್ನು ಒಪ್ಪಿಕೊಳ್ಳಬೇಡ ಅಂತಾ ಹೇಳಿದರೂ, ಬಲಿಚಕ್ರವರ್ತಿ ಆಯ್ತು ಎಲ್ಲಿ ಬೇಕು ಅಂತಾ ಬ್ರಾಹ್ಮಣನಿಗೆ ಹೇಳಿದನಂತೆ. ಬ್ರಾಹ್ಮಣ ತನ್ನ ಎರಡ್ಹೆಜ್ಜೆಯಲ್ಲಿ ಅವನು ಗೆದ್ದಿದ್ದ ಎಲ್ಲ ಪ್ರದೇಶವನ್ನು ದಾನ ಪಡೆದು ನೀನ್ಹೇಳಿದಂತೆ ಇನ್ನೊಂದು ಹೆಜ್ಜೆ ಎಲ್ಲಿಡಲಿ ಅಂತಾ ಬಲಿ ಚಕ್ರವರ್ತಿಯ ತಲೆ ಮೇಲೆ ಇಟ್ಟು ಅವನಿಗೆ ಮೋಕ್ಷ ನೀಡಿದನಂತೆ. ಎಷ್ಟೊಂದು ರೋಚಕವಾಗಿದೆಯಲ್ಲಾ! ಅಂದ ಹಾಗೆ ಕೊನೆ ಮಾತು ಏನು ಗೊತ್ತಾ ಮಕ್ಕಳೇ, ಪಟಾಕಿ ಹೊಡೆಯೋವಾಗ ಬಹಳ ಹುಶಾರ್. ಇಲ್ಲಾ ಅಂದ್ರೆ ಪಟಾಕಿ ಬೆಂಕಿ ಮೈಗೆ ತಗುಲಿ ಮೈ ಸುಟ್ಟು ಹೋಗುತ್ತೆ. ದೂರದಿಂದ ಪಟಾಕಿ ಹೊಡೆಯಿರಪ್ಪಾ, ಕೈಯಲ್ಲಿ ಇಟ್ಕೊಂಡು ಹೊಡೆಯೋ ಸಾಹಸ ಮಾಡಬೇಡಿ.

ಇನ್ನು ಜಾಸ್ತಿ ಪಟಾಕೀನ್ನ ಹೊಡೀಬೇಡಿ. ಯಾಕೆ ಗೊತ್ತಾ? ಒಂದು ಕಡೆಯಿಂದ ಸುಮ್ಮನೆ ದುಡ್ಡನ್ನು ಸುಟ್ಟು ಹಾಕಿದ ಹಾಗೆ. ಆ ದುಡ್ಡನ್ನು ಇಟ್ಟುಕೊಂಡ್ರೆ ಬೇರೆ ಏನಾದ್ರೂ ಶರ್ಟು, ಪ್ಯಾಂಟು ಅಥವಾ ಇನ್ನೇನ್ನಾದರೂ ತೆಗೆದುಕೊಳ್ಳಬಹುದಲ್ಲ. ಇನ್ನೊಂದು, ಈ ಪಟಾಕಿಯ ಕೆಟ್ಟ ಹೊಗೆಯಿಂದ ಪರಿಸರ ಹಾಳಾಗಿ ಹೋಗುತ್ತೆ. ಅದರ ಆ ರಾಸಾಯನಿಕ ಗಾಳೀನ್ನ ನಾವೇ ಸೇವಿಸೋದು. ಅದು ಒಂದು ದೃಷ್ಟಿಯಲ್ಲಿ ನಮ್ಮ ಆರೋಗ್ಯಕ್ಕೆ ಒಳ್ಳೆಯದಲ್ಲ. ಹಾಗಾಗಿ ಆ ದುಡ್ಡನ್ನು ಉಳಿಸಿ ಬೇರೆ ಯಾವುದಕ್ಕಾದರೂ ಉಪಯೋಗಿಸಬಹುದು.

■ **ಅಡಗೂಲಜ್ಜಿ**

ಕಳೆದ ತಿಂಗಳ ಅಪೂರ್ಣ ಕಥೆಯ ಮುಕ್ತಾಯ

1

ದುರುಗಣ್ಣ ಮಾಸ್ತರೆಂದರೆ ಮಕ್ಕಳಿಗೆ ಅಚ್ಚುಮೆಚ್ಚು. ಇವರ ಪ್ರೇರಣೆಯಿಂದ ಗಣೇಶಹಬ್ಬವನ್ನು ಅದ್ದೂರಿಯಾಗಿ ಆಚರಿಸಿ, ಗಣೇಶ ವಿಗ್ರಹವನ್ನು ವಿಸರ್ಜನೆ ಮಾಡಲು ತಯಾರಿ ನಡೆಸಿದರು. ದುರದೃಷ್ಟವಶಾತ್ ದುರುಗಣ್ಣ ಮಾಸ್ತರರು ತನ್ನ ತಂದೆಯ ಅಸ್ವಸ್ಥತೆಯಿಂದಾಗಿ ಪಾಲ್ಗೊಳಲಾಗಲಿಲ್ಲ. ಅವರು ಗೈರು ಹಾಜರಿಯಿಂದ ಮಕ್ಕಳಿಗೆ ಬೇಜಾರಾದರೂ ಗಣೇಶ ವಿಗ್ರಹವನ್ನು ವಿಸರ್ಜಿಸಲು ಮೆರವಣಿಗೆಯಲ್ಲಿ ಬಾವಿಯ ಕಡೆ ಬಂದರು. ಆ ವೇಳೆಗೆ ದುರುಗಣ್ಣ ಮಾಸ್ತರರು ಓಡಿಬಂದು ತಡೀರಿ, ಹಾಕಬ್ಯಾಡ್ರಿ ಎಂದು ಹೇಳಿದರು. ಎಲ್ಲರೂ ವಿಸ್ಮಯಗೊಂಡರು. ಆಗ ಮಾಸ್ತರರು ತಾವು ಮಾಡಿದ ತಪ್ಪನ್ನು ವಿದ್ಯಾರ್ಥಿಗಳ ಮುಂದೆ ಸಂಕೋಚವಿಲ್ಲದೇ ಭಿನ್ನವಿಸಿಕೊಂಡರು. ನಾವು ದೈವ ಭಕ್ತರಿಂದ ಯಾವುದೇ ಪ್ರತಿಫಲವನ್ನು ಅಪೇಕ್ಷಿಸದೇ ಪ್ರಸಾದವನ್ನು ನೀಡಬೇಕಾಗಿತ್ತು. ನನ್ನ ಬುದ್ಧಿಗೆ ಮಂಕು ಕವಿದಿತ್ತು. ಆದರೆ ನನಗೆ ದುರಾಸೆಯಂತೂ ಇರಲಿಲ್ಲ. ಆ ಪಾಪ ಕಾರ್ಯದಿಂದ ನನ್ನ ತಂದೆಯ ಆರೋಗ್ಯವು ಕೆಟ್ಟಿತು. ಗಣೇಶನ ಕೃಪೆಯಿಂದ ನನ್ನ ತಂದೆಯ ಆರೋಗ್ಯವು ಸುಧಾರಿಸಿದೆ ಎಂದರು. ಮಾಸ್ತರು ವಿನಾಯಕನಿಗೆ ಕೋಟಿ ಕೋಟಿ ವಂದನೆಗಳನ್ನು ಸಲ್ಲಿಸುತ್ತಾ ಪಾಪಕರ್ಮದಿಂದ ಮುಕ್ತನಾಗಿಸಲು ದೈನ್ಯತೆಯಿಂದ ಬೇಡಿಕೊಂಡರು. ಇದರಿಂದ ಮಕ್ಕಳಿಗೆಲ್ಲಾ ಮಾಸ್ತರರ ಮೇಲಿದ್ದ ಗೌರವ ದುಪ್ಪಟ್ಟಾಯಿತು. ದೇವರಿಗೆ ಭಕ್ತರ ಪರವಾಗಿ ಪೂಜೆ ಸಲ್ಲಿಸಿ ಮೂರ್ತಿಯನ್ನು ಬಾವಿಯಲ್ಲಿ ವಿಸರ್ಜಿಸಿದರು. ಇನ್ನು ಮುಂದೆ ತನ್ನ ಹಣದಿಂದಲೇ ಊರಿನವರಿಗೆಲ್ಲಾ ಪ್ರಸಾದ ಹಂಚಿ ಹಬ್ಬವನ್ನು ಆಚರಿಸುವುದಾಗಿ ಹೇಳಿದರು.

ಎನ್.ಎಲ್. ಕಲ್ಪನಾ, ಬೆಂಗಳೂರು.

2

ದುರುಗಣ್ಣ ಮೇಸ್ಟ್ರು ಬಹಳ ಶ್ರಮಪಟ್ಟು ತಯಾರಿಸಿದ ಗಣೇಶ ಪ್ರತಿಮೆಯ ತಂತ್ರ, ಯಾರಿಗೂ ಗೊತ್ತಿರಲಿಲ್ಲ. ಗಣೇಶನ ಜೊತೆಗೆ ಹಣವೂ ಮಾಯವಾಗಿ ಗಂಗೆಯ ಪಾಲಾದರೆ ಎಂದು ತಿಳಿದ ಮಾಸ್ತರು ಬಹು ದೂರದಿಂದ ಪ್ರಯಾಣ ಮಾಡಿ ಓಡೋಡಿ ಬಂದರು. ತಡೀರಿ, ಹಾಕಬ್ಯಾಡ್ರೀ ಎಂದು ಹೇಳುತ್ತಾ ಹಣವನ್ನು ತೆಗೆದುಕೊಂಡು, ನಂತರ ವಿಸರ್ಜನೆ ಮಾಡಿಸಿದರು. ಅಲ್ಲದೇ ನೀರಿನಲ್ಲಿ ಮುಳುಗಿ ಸ್ಪ್ರಿಂಗು ತಗಡು, ತಂತಿ ಮೊಳೆ ಎಲ್ಲವನ್ನು ತೆಗೆದುಕೊಂಡು ಮಕ್ಕಳೊಂದಿಗೆ ಮನೆಯ ಕಡೆ ನಡೆದರು. ಹಣವನ್ನು ಉಳಿತಾಯ ಮಾಡಿದಲ್ಲದೇ, ಅದಕ್ಕೆ ಬಳಸಿದ್ದ ಸಾಮಾಗ್ರಿಗಳು ಸಿಕ್ಕಿದವು. ಗೌರವವೂ ದೊರೆಯಿತು. ಆದ್ದರಿಂದ ಸಮಯವರಿತು ಕೆಲಸ ಮಾಡಬೇಕು.

-ಎಸ್. ರಮೇಶ್, ಮದ್ದೂರು

3

ವಿದ್ಯಾರ್ಥಿಗಳು ಗಾಬರಿಗೊಂಡು ಏನ್ ಗುರುಗಳೇ ಏನಾಯಿತು ಎಂದು ಕೇಳಿದರು. ದುರಗಣ್ಣ ಮಾಸ್ತರು ಅಯ್ಯೋ! ಮಕ್ಕಳೇ ಗಣೇಶ ನೂರಾರು ಭಕ್ತರಿಗೆ ಲಾಡು ನೀಡಿದ. ಅವರು ನೀಡಿದ ಹಣವೆಲ್ಲಾ ಗಣೇಶನ ಹೊಟ್ಟೆಯಲ್ಲಿದೆ. ಆ ಹಣವನ್ನು ತೆಗೆದುಕೊಂಡು ನಂತರ ಗಣೇಶನನ್ನು ವಿಸರ್ಜಿಸೋಣ ಎಂದರು.

-ಕರಬಸಪ್ಪಾ ಎಸ್. ಕೋರಿ, ಹಾವೇರಿ

4

ದುರುಗಣ್ಣ ಮಾಸ್ತರು ನಿಲ್ಲಿಸಿ ಎಂದು ಓಡುತ್ತಾ ಬರುವುದನ್ನು ಕಂಡು ಅಲ್ಲಿದ್ದವರು ಯಾಕೆ ಮಾಸ್ತರೆ ಎಂದು ಕೇಳಿದಾಗ. ದುರುಗುಣ್ಣ ಮಾಸ್ತರು ನಾನು ತಯಾರು ಮಾಡಿದ್ದು ತಂತ್ರ ಗಣೇಶ. ಭಕ್ತರು ಒಂದು ರೂಪಾಯಿಯನ್ನು ಗಣೇಶನ ಕೈಯಲ್ಲಿನ ಕಳಸದಲ್ಲಿ ಹಾಕಿದರೆ ಒಂದು ಲಾಡು ಕೊಡುತ್ತಿದ್ದ. ನಾನು ಮಾಡಿದ ತಂತ್ರದಿಂದ ಆ ಎಲ್ಲಾ ದುಡ್ಡು ತೆಗೆದುಕೊಳ್ಳೋಣ ಅಂತ ನಾನು ನಮ್ಮ ತಂದೆಯನ್ನು ಆಸ್ಪತ್ರೆಯಲ್ಲಿ ಬಿಟ್ಟು ಬಂದೆ ಎಂದಾಗ, ಅಲ್ಲಿಯ ಸಹ ಶಿಕ್ಷಕರು ವಿದ್ಯಾರ್ಥಿಗಳು ನಕ್ಕಿದ್ದೂ ನಕ್ಕಿದ್ದೂ. ದುರುಗಣ್ಣ ಮಾಸ್ತರರಿಗೆ ಇದನ್ನು ನೋಡಿ ಆಶ್ಚರ್ಯವಾಯಿತು. ಆದರೂ ಶಿಕ್ಷಕರಾದ ವಿಶ್ವನಾಥರು, ದುರುಗಣ್ಣ ಮಾಸ್ತರೆ ನೀವು ನಗರಕ್ಕೆ ಹೋದ ಕಾರಣ ನಾವೇ ಹಣ ತೆಗೆದು ಕೊಂಡೆವು ಎಂದಾಗ ದುರುಗಣ್ಣ ಮಾಸ್ತರು ಬೆಕ್ಕಸ ಬೆರಗಾದರು.

-ಎಸ್. ವಿಶ್ವನಾಥ, ತಂಬ್ರಹಳ್ಳಿ

5

ಮಾಸ್ತರ ಧ್ವನಿ ಕೇಳಿದ ಕೂಡಲೆ ಎಲ್ಲರೂ ಆ ಕಡೆ ತಿರುಗಿದರು. ಗಣೇಶ ವಿಸರ್ಜನೆಯ ದಿನ ದುರುಗಣ್ಣ ಮಾಸ್ತರು ಇಲ್ಲ ಎಂದು ಬೇಸರಗೊಂಡಿದ್ದ, ನಿರಾಶೆಗೊಂಡಿದ್ದ ಮಕ್ಕಳೆಲ್ಲರಿಗೂ ತುಂಬಾ ಸಂತೋಷವಾಯಿತು. ಎಲ್ಲರೂ ಗುರುಗಳು ಬಂದರು ಗುರುಗಳು ಬಂದರು ಎಂದು ಜೋರಾಗಿ ಕೂಗಿ ತಮ್ಮ ಆನಂದ ವ್ಯಕ್ತಪಡಿಸಿದರು. ಕಾಳಾಚಾರಿ, ಜೋಸೆಫ್, ವಿಶ್ವನಾಥ ಮೊದಲಾದ ಮಾಸ್ತರಿಗೂ ಕೂಡ ಸಂತೋಷವಾಯಿತು. ಆದರೆ ಅವರು ಜೋರಾಗಿ ತೇಕುತ್ತ ಓಡಿ ಬಂದದ್ದರಿಂದ ಬೇರೊಂದು ವಿಚಾರ ಬಂದಿತು. ದುರುಗಣ್ಣ ಮಾಸ್ತರ ತಂದೆಯೇನಾದರೂ.,.... ಅಷ್ಟರಲ್ಲಿ ಎಲ್ಲ ಕಡೆಗೂ ಗುಸು ಗುಸು ಪ್ರಾರಂಭವಾಯಿತು. ಇವರ ವಿಚಾರವನ್ನು ಮುರಿಯುವಂತೆ ಮುಂದೆ ಬಂದ ದುರುಗಣ್ಣ ಮಾಸ್ತರು ಜೇಬಿನಲ್ಲಿ ಕೈಹಾಕಿ 1 ರೂಪಾಯಿ ನಾಣ್ಯ ತೆಗೆದು ಗಣಪತಿಯ ಕೈಯಲ್ಲಿನ ಕಳಸದಲ್ಲಿ ಹಾಕಿ ಸೊಂಡಿಲಿನ ಮುಂದೆ ಕೈ ಹಿಡಿದರು. ಅವರ ಕೈಗೆ ಒಂದು ಲಾಡು ಬಿತ್ತು. ಮಾಸ್ತರ ತಂದೆಗೆ ಹುಷಾರಾಗಿ ತಾನು ಗಣಪತಿ ಕೊಡುವ ಲಾಡು ತಿನ್ನಲೇಬೇಕು ಎಂದು ಹಟಹಿಡಿದಿದ್ದರಂತೆ. ಈಗ ಎಲ್ಲರ ಮನಸ್ಸು ಉಲ್ಲಸಿತವಾಗಿತ್ತು. ನಂತರ ದುರುಗಣ್ಣ ಮಾಸ್ತರ ಹಾಜರಿಯಲ್ಲಿ ಗಣೇಶನನ್ನು ನೀರಲ್ಲಿ ಬಿಟ್ಟು ಪ್ರಸಾದ ಮೆಲ್ಲುತ್ತಾ ಎಲ್ಲರೂ ಸಂತೋಷದಿಂದ ಮನೆಯ ಹಾದಿ ಹಿಡಿದರು.

-ಮಹಾದೇವಿ ಎಸ್. ಕುಡವಕ್ಕಲಗಿ, ಐನಾಪುರ

6

ದುರುಗಣ್ಣ ಮಾಸ್ತರು 'ತಡೀರಿ! ಹಾಕಬ್ಯಾಡ್ರಿ!' ಎಂದು ಎದುಸಿರು ಬಿಡುತ್ತಾ ಓಡಿ ಬಂದರು. ಆಗ ದುರುಗಣ್ಣ ಮಾಸ್ತರು 'ನಾನು ಈ ತಂತ್ರದ ಬಿಂದು. ನನ್ನನ್ನೆ ಬಿಟ್ಟು ಗಣೇಶನನ್ನು ವಿಸರ್ಜಿಸಲು ಬಂದಿದ್ದಿರಲ್ಲಾ ಇದು ನ್ಯಾಯವೇ?' ಎಂದು ಕೋಪದಿಂದ ಚೆನ್ನಾಗಿ ಬೈದರು. ಆಗ ಮುಖ್ಯೋಪಾಧ್ಯಾಯರು ದುರುಗಣ್ಣ ಮಾಸ್ತರನ್ನು ಸಮಾಧಾನಗೊಳಿಸುತ್ತಾ ಏನಾಗಿದೆ ನಿಮಗೆ? ಎಂದು ಪ್ರಶ್ನಿಸಿದರು. ಆಗ ದುರುಗಣ್ಣ ಮಾಸ್ತರು ನಿಧಾನವಾಗಿ ವಿಷಯ ಹೇಳಿದರು, 'ನಮ್ಮ ತಂದೆಯವರು ತೀವ್ರ ಅಸ್ವಸ್ಥರಾಗಿದ್ದರಿಂದ ಆಸ್ಪತ್ರೆಗೆ ಸೇರಿಸಿದೆನು. ಆಗ ವೈದ್ಯರು ನಿಮ್ಮ ತಂದೆಯವರ ಆಸೆಗಳನ್ನು ನೆರವೇರಿಸಿ ಎಂದು ಹೇಳಿದರು. ಆಗ ನಮ್ಮ ತಂದೆಯವರು ನಾನು ಲಾಡು ಕೊಡುವ ಗಣಪನನ್ನು ತಯಾರಿಸಿದ ವಿಷಯವನ್ನು ಕೇಳಿ ಸಂತೋಷಪಟ್ಟರು ಮತ್ತು ಆ ಗಣೇಶನನ್ನು ನೋಡಿ ದರ್ಶನ ಮಾಡಿ ಮುಕ್ತಿ ಹೊಂದಬೇಕೆಂದು ಬಯಸಿದರು. ನಾನು ಅವರ ಆಸೆಯಂತೆ ಗಣೇಶ ದರ್ಶನ ಮಾಡಿಸಲು ಶಾಲೆಗೆ ಕರೆದುಕೊಂಡು ಬಂದೆನು. ಆಗ ಅಲ್ಲಿ ಗಣೇಶ ಇಲ್ಲದ್ದನ್ನು ಕಂಡು ಚಕಿತನಾದೆ. ಗಣೇಶನನ್ನು ವಿಸರ್ಜಿಸಲು ಹೋಗಿದ್ದಾರೆ ಎಂಬ ಮಾತನ್ನು ಕೇಳಿ ಇಲ್ಲಿಗೆ ಓಡಿ ಬಂದೆವು ಎಂದು ಹೇಳಿದರು'. ಆಗ ದುರುಗಣ್ಣ ಮಾಸ್ತರು, ಅವರ ತಂದೆ ಗಣೇಶನನ್ನು ನೋಡಿ ಆನಂದಪಟ್ಟರು. 'ಗಣೇಶನಿಗೆ ಜಯವಾಗಲಿ' ಎಂಬ ಘೋಷಣೆ ಮಾಡಿ ಸಂತೋಷದಿಂದ ವಿಸರ್ಜನೆ ಮಾಡಿದರು.

-ಕವಿತಾ ಸರ್‌ಗಣಾಚಾರಿ, ಮಸ್ಕಿ

7

'**ಗ**ಣೇಶನಿಗೆ ಜಯವಾಗಲಿ' ಎಂದು ಎಲ್ಲರೂ ಘೋಷಣೆ ಕೂಗಿ ಬಾವಿಯಲ್ಲಿ ಮೂರ್ತಿಯನ್ನು ವಿಸರ್ಜಿಸಬೇಕೆನ್ನುವಷ್ಟರಲ್ಲಿ ದುರುಗಣ್ಣ ಮಾಸ್ತರು ತಡೀರಿ! ತಡೀರಿ ಹಾಕಬ್ಯಾಡ್ರಿ! ಎಂದು ಎದುಸಿರು ಬಿಡುತ್ತಾ ಓಡಿ ಬಂದರು. ಎಲ್ಲರೂ ಮಾಸ್ತರ ಮುಖವನ್ನು ನೋಡಿ ಭಯಗೊಂಡರು ಎಲ್ಲರ ಮನಸ್ಸು ಮತ್ತು ದೃಷ್ಟಿ ದುರುಗಣ್ಣ ಮಾಸ್ತರ ಕಡೆಗೆ ಕೇಂದ್ರಿಕೃತವಾಗಿತ್ತು. ಆಗ ಎಲ್ಲರೂ ಅವರನ್ನು ಹೌಹಾರಿ ಕೇಳಲು ಪ್ರಾರಂಭಿಸಿ, ಮಾಸ್ತರೆ ಏನಾಯಿತು ಏನಾಯಿತು ಎಂದು ಕೇಳಿದರು. ಆಗ ಅವರು ತಾವು ಈ ಸಲ ಲಾಡು ಕೊಡುವ ಗಣೇಶ ಮೂರ್ತಿಯನ್ನು ಮಾಡಿದ್ದು, ಸೊಂಡಿಲಿನಲ್ಲಿ ಎಲ್ಲ ಸದ್ಭಕ್ತರು ಹಾಕಿದ ಹಣ ಹೊಟ್ಟೆಯಲ್ಲಿ ಸಂಗ್ರಹವಾಗಿತ್ತು. ಈ ವಿಷಯವನ್ನು ನಾನು ನಿಮಗೆ ಕೊನೆಯ ದಿವಸ ಹೇಳುವಷ್ಟರಲ್ಲಿ ನಮ್ಮ ತಂದೆಯವರು ಆಸ್ಪತ್ರೆಗೆ ಸೇರಿದರು. ನಾನು ಅವಸರದಿಂದ ಅಲ್ಲಿಗೆ ಹೋದೆ ಎಂದರು. ಗುರುಗಳು ಸಂಗ್ರಹವಾಗಿದ್ದ ಹಣವನ್ನು ಗಣೇಶನ ಹೊಟ್ಟೆಯಿಂದ ತೆಗೆದ ನಂತರ ಗಣಪತಿ ವಿಗ್ರಹವನ್ನು ವಿಸರ್ಜಿಸಿದರು.

- ಶಂ.ಕ. ಕುಲಕರ್ಣಿ, ಬಾಗಲಕೋಟೆ

ನೀವು ಕಥೆಗಾರರಾಗಬೇಕೆ?......................

ನಿಮಗೂ ಕಥೆಗಾರರಾಗಬೇಕೆಂಬ ಆಸೆ ಇರಬಹುದಲ್ಲವೆ? ನಿಮ್ಮಂತಹ ಚಿಗುರು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಿಕ್ಕಾಗಿಯೇ ಈ ಅಂಕಣ ಮೀಸಲು. ನೀವು ಮಾಡಬೇಕಾದುದಿಷ್ಟೇ; ಈ ಕೆಳಗೆ ನಾವೊಂದು ಕಥೆ ನೀಡಿದ್ದೇವೆ. ಆದರೆ ಅದು ಅಪೂರ್ಣ. ಅದನ್ನು ಪೂರ್ಣಗೊಳಿಸಬೇಕಾದವರು ನೀವೇ!

ಅಪೂರ್ಣ ಕತೆ

ನಂದನವನದ ಶಾಲೆಯಲ್ಲಿ ಓದುತ್ತಿದ್ದ ಹರೀಶ ದಸರಾ ರಜೆಯನ್ನು ಕಳೆಯಲು ತನ್ನ ತಾತನ ಊರಿಗೆ ಬಂದಿದ್ದನು. ತುಂಟ ಬಾಲಕ ತನ್ನ ಅಜ್ಜ ಅಜ್ಜಿಯನ್ನು ತಿಂಡಿ ಕೊಡುವಂತೆ, ಕಥೆ ಹೇಳುವಂತೆ ಯಾವಾಗಲೂ ಕಾಡುತ್ತಿದ್ದನು. ಒಂದೆರಡು ದಿನ ಕಳೆಯುತ್ತಿದ್ದಂತೆಯೇ ನಾಲ್ಕೈದು ಹುಡುಗರು ಪರಿಚಯವಾದರು. ಎಲ್ಲರೂ ಒಟ್ಟಿಗೆ ಸೇರಿ ಆಟವಾಡಲೆಂದು ಊರಿನಿಂದ ಸ್ವಲ್ಪ ದೂರದಲ್ಲಿರುವ ಪಾಪಾಗ್ನಿ ಗುಡ್ಡಕ್ಕೆ ದಿನವೂ ಹೋಗಿ ಬರುತ್ತಿದ್ದರು.

ಬೆಳಗ್ಗೆಯಿಂದ ಸಂಜೆಯವರೆಗೂ ಗುಡ್ಡದಲ್ಲಿಯೇ ಆಟವಾಡುತ್ತಾ ನಿದ್ದೆ ಬಂದಾಗ ಪಕ್ಕದಲ್ಲಿಯೇ ಇದ್ದ ಮರದ ಕೆಳಗೆ ಮಲಗುತ್ತಿದ್ದರು. ನಿತ್ಯವೂ ಒಟ್ಟಿಗೆ ಹೋಗಿ ಸಂತೋಷದಿಂದ ಆಟವಾಡಿ, ಕೇಕೆ ಹಾಕುತ್ತಾ ಕಾಲಕಳೆದು ಸಂಜೆಯ ಹೊತ್ತಿಗೆ ಹಿಂತಿರುಗುತ್ತಿದ್ದರು.

ಹೀಗಿರುವಾಗ ಒಂದು ದಿನ ಮಧ್ಯಾಹ್ನ ಚೆನ್ನಾಗಿ ಆಟವಾಡಿ ಸುಸ್ತಾಗಿ ಮರದ ಕೆಳಗೆ ಮಲಗಿದರು. ತಣ್ಣನೆಯ ಗಾಳಿಯಲ್ಲಿ ಚೆನ್ನಾಗಿ ನಿದ್ದೆ ಹೋಗಿದ್ದ ಹುಡುಗರು ಸಂಜೆಯಾಗುತ್ತಲೇ ಎಚ್ಚರವಾಗಿ ಎಲ್ಲರೂ ಅವರವರ ಮನೆಗೆ ಹಿಂತಿರುಗಿದರು. ಆದರೆ ಹರೀಶ ಮಾತ್ರ ಗಾಢ ನಿದ್ರೆಯಲ್ಲಿಯೇ ತೊಡಗಿದ್ದ. ಮನೆಯಲ್ಲಿ ಅಜ್ಜಿ, ತಾತ ಆತಂಕದಿಂದ ಮೊಮ್ಮಗ ಇನ್ನೂ ಬರಲಿಲ್ಲವೆಂದು ದಾರಿ ಕಾಯುತ್ತಿದ್ದರು. ಸುಮಾರು 7 ಗಂಟೆಯ ವೇಳೆಗೆ ಗುಡ್ಡದಲ್ಲಿ ಭಯಂಕರ ಶಬ್ದ ಕೇಳಿಸಿತು.

ಸೂಚನೆಗಳು :

- ಹತ್ತನೆಯ ತರಗತಿಯವರೆಗಿನ ವಿದ್ಯಾರ್ಥಿಗಳು ಮಾತ್ರ ಈ ಕಥೆಯನ್ನು ಪೂರ್ಣಗೊಳಿಸಿ ಕಳುಹಿಸಲು ಅರ್ಹರು.
- ನಿಮ್ಮ ಬರವಣಿಗೆ ಅರ್ಧ ಫೂಲ್‌ಸ್ಕೇಪ್ ಹಾಳೆ ಮೀರದಿರಲಿ.
- ಆ ಹಾಳೆಯ ಹಿಂಬದಿಯಲ್ಲಿ 'ಕಿಲ ಕಿಲ ಕೂಪನ್' ಅಂಟಿಸಿರಬೇಕು.
- ಮುಂದಿನ ಸಂಚಿಕೆಯಲ್ಲಿ ಫಲಿತಾಂಶ.
- ನಿಮ್ಮ ಬರವಣಿಗೆ ನಮಗೆ ತಲುಪಲು ಅಂತಿಮ ದಿನಾಂಕ 15.10.98

ಕಿಲ ಕಿಲ ಕೂಪನ್ – (ಅಕ್ಟೋಬರ್ 98)

ಹೆಸರು..

ತರಗತಿ.............................. ವಯಸ್ಸು...................

ತಂದೆ..

ತಾಯಿ..

ವಿಳಾಸ..

....

....

....

ಬಾರೊ ಬಾರೊ ಮಳೆರಾಯ!

ಸುರಿಯೆಲೆ ಸುರಿಯೆಲೆ ಮಳೆರಾಯ
ಮೋಡದ ನಾಡಿನ ಮಹರಾಯ ॥ಪ॥
ಚಿಲಿಪಿಲಿ ಗುಟ್ಟುತ ಹಕ್ಕಿಗಳು
ನರ್ತನ ಗೈಯುತ ನವಿಲುಗಳು
ನಿನ್ನನು ಸ್ವಾಗತ ಕೋರುವೆವು
ಸುರಿಸುರಿ ಸುರಿಸುರಿ ಎನ್ನುವೆವು.
ತುಂಬಲಿ ತುಳುಕಲಿ ಕೆರೆ ಕೊಳ್ಳ
ದಡ ದಡ ಹರಿಯಲಿ ಹೊಳೆಹಳ್ಳ
ಬೇಗನೆ ಬಾರೋ ಈ ಧರೆಗೆ
ಈಗಲೆ ನೀಗಿಸು ನೀ ಬೇಗೆ.
ಗಿರಿವನ ತರುಲತೆ ಕೊನರುವವು
ಬೀಸುವ ಗಾಳಿಗೆ ಬಳಕುವವು
ಎಲ್ಲೆಡೆ ಹಸಿರು ಹಾಸುವುದು
ಸುತ್ತಲು ಪರಿಮಳ ಸೂಸುವುದು.
ನಗುವರು ಮಕ್ಕಳು ಕಿಲಕಿಲನೆ
ಕುಣಿವರು ನೀರಲಿ ಥಕಥಕನೆ
ನೀರನು ಚಿಮ್ಮುತ ನೆಗೆಯುವರು
ಒಬ್ಬರಿಗೊಬ್ಬರು ಒಗೆಯುವರು
ರೈತನ ಮೊಗದಲಿ ಚಿಮ್ಮುವುದು
ಸಂತಸದಾ ನಗೆ ಹೊಮ್ಮುವುದು
ಸುರಿಯೆಲೆ ಸುರಿಯೆಲೆ ಮಳೆರಾಯ
ಮೋಡದ ನಾಡಿನ ಮಹರಾಯ

–ಪ.ಗು. ಸಿದ್ದಾಪುರ ಮುಳವಾಡ

ಸೈಕಲ್

ಮೊದಲು ಸೈಕಲ್ ಬಂದಿರಬೇಕು
ನಿಧಾನವಾಗಿ ಸಾಗಿಸಬೇಕು
ಮನುಷ್ಯರು ಬಂದರೆ ಬ್ರೆಕ್ ಹಾಕು

–ಬಿ. ವಿದ್ಯಾವತಿ ವಟಾರ,
5ನೇ ತರಗತಿ

ನನ್ನಣ್ಣ

ಓದು ಅಂದರೆ ಅಳುವನು ನನ್ನಣ್ಣ
ಓದಲು ಕುಳಿತರೆ ಮುಚ್ಚುವನು ತನ್ನ ಕಣ್ಣ

–ಶಾಂತಾ ಕಲ್ಮಠ
7ನೇ ತರಗತಿ

ದೊಡ್ಡಣ್ಣ : ತೂಕಕ್ಕೆ ತಕ್ಕ ಬೆಲೆ?

ಇದುವರೆಗೆ 300 ಚಿತ್ರಗಳಲ್ಲಿ ನಟಿಸಿದರೂ ಯಾವೊಬ್ಬ ನಿರ್ಮಾಪಕನೂ ಕೇಳಿದಷ್ಟು ಸಂಭಾವನೆ ಕೊಟ್ಟದ್ದಿಲ್ಲ.




ಶೋಲೆ ಚಿತ್ರದಲ್ಲಿ 'ಅರೆ ಓ ಸಾಂಬ' ಎಂದು ಅರಚುತ್ತಾ ಚಿಕ್ಕಮಕ್ಕಳ ಚಡ್ಡಿ ಒದ್ದೆ ಮಾಡಿದ್ದ ಗಬ್ಬರ್‌ಸಿಂಗ್ ಅಲಿಯಾಸ್ ಅಮ್ಜದ್‌ಖಾನ್, ಅನಂತರ ಜೋಕರ್ ಆಗಿ ರೂಪಾಂತರ ಗೊಂಡಿದ್ದು ನಿಮಗೆ ನೆನಪಿರಬಹುದು. ಅದಕ್ಕೆ ಏಕೈಕ ಕಾರಣವೆಂದರೆ ಅಮ್ಜದ್ ದೇಹ ಅಗಾಧವಾಗಿ ಬೆಳೆದದ್ದು. ಧಢೂತಿ ಆಸಾಮಿಗಳು ಯಾವತ್ತೂ ಹಾಸ್ಯನಟರಾಗೋದಕ್ಕೆ ಲಾಯಕ್ಕು ಎನ್ನುವುದು ಸಿನಿಮಾರಂಗದ ಅಲಿಖಿತ ನಿಯಮ. ಅಮ್ಜದ್‌ಖಾನ್ ಮಾಡಿದ ತಪ್ಪೇನೆಂದರೆ ಅಪಘಾತದಲ್ಲಿ ಮೈಕೈನೋವು ಮಾಡಿಕೊಂಡು ಆಸ್ಪತ್ರೆಯಲ್ಲಿ ಕೆಲವು ತಿಂಗಳು ಮಲಗಿದ್ದು. ಅಷ್ಟಕ್ಕೇ ದೇಹ ಊದಿ, ಕೊನೆಗೆ ಅದೇ ಕಾರಣಕ್ಕೆ ಆತ ಸಾವನ್ನಪ್ಪಿದ. ಅದಕ್ಕೆ ಮೊದಲು ಹತ್ತಾರು ಚಿತ್ರಗಳಲ್ಲಿ ಜೋಕರ್ ಆಗಿ ಕಾಣಿಸಿಕೊಂಡಿದ್ದ.

ನಮ್ಮ ಲೋಕಲ್ ಹಾಸ್ಯನಟ ದೊಡ್ಡಣ್ಣರನ್ನು ನೋಡಿದರೆ ಅಮ್ಜದ್ ನೆನಪಾಗುತ್ತಾರೆ. ಆದರೆ ದೇವರ ದಯದಿಂದ ಇವರ ಆರೋಗ್ಯ ಚೆನ್ನಾಗಿಯೇ ಇದೆ. ಹೆಸರಿಗೆ ತಕ್ಕಂತೆಯೇ ಬಿಗ್ ಬ್ರದರ್ ಆಗಿರುವ ದೊಡ್ಡಣ್ಣ ಕೂಡಾ ಖಳನಟ ರಾಗಿಯೇ ಚಿತ್ರರಂಗ ಪ್ರವೇಶಿಸಿದವರು. ಅದಕ್ಕೂ ಮೊದಲು ಹವ್ಯಾಸಿ ರಂಗಭೂಮಿಯಲ್ಲಿ ಸ್ತ್ರೀ ವೇಷಧಾರಿ. ಆರು ವರ್ಷಗಳ ಹಿಂದೆ ಒಂದು ಸಣ್ಣ ಅಪಘಾತದಲ್ಲಿ ಸಿಲುಕಿದ ದೊಡ್ಡಣ್ಣಂಗೆ ಡಾಕ್ಟರ್ ಕೆಲಕಾಲ ಬೆಡ್‌ರೆಸ್ಟ್ ತೆಗೆದುಕೊಳ್ಳುವಂತೆ ಸಲಹೆ ನೀಡಿದರಂತೆ. ಓಡಾಡಿದರೆ ಲಕ್ವಾ ಹೊಡೆಯುವ ಸಾಧ್ಯತೆಯೂ ಇದೆ ಅಂತ ಬೆದರಿಸಿದರಂತೆ. ದೊಡ್ಡಣ್ಣ ಮಲಗಿದರು, ಮತ್ತೆ ಏಳುವ ಹೊತ್ತಿಗೆ ದೇಹ ಭಾರವಾಗಿತ್ತು. ಸದ್ಯಕ್ಕೆ ದೊಡ್ಡಣ್ಣ 109 ಕೆ.ಜಿ. ತೂಕದ ವ್ಯಕ್ತಿ, ಆರಡಿ ಎತ್ತರದ ಆಜಾನು ಬಾಹು. ಕನ್ನಡದಲ್ಲಿ ಇವರ ತೂಕಕ್ಕೆ ನಿಲ್ಲಬಲ್ಲ ಹಾಸ್ಯನಟರೇ ಇಲ್ಲ.

ಹಲೋ ಯಮ ಎಂಬ ಎರಡನೇ ದರ್ಜೆ ಚಿತ್ರದಲ್ಲಿ ಯಮನಾಗಿ ನಟಿಸಿದ ದೊಡ್ಡಣ್ಣಂಗೆ ಇದ್ದಕ್ಕಿದ್ದಂತೆ ಸ್ಟಾರ್‌ವಾಲ್ಯೂ ಕುದುರಿದೆ. ಎಸ್.ವಿ. ರಂಗರಾವ್‌ರಂಥ ತೆಲುಗು ನಟರಿಗೆ ಹೋಲಿಸಿದರೆ ತಾನೇನೂ ಅಲ್ಲ ಎಂಬ ಸೌಜನ್ಯ ಇವರದು. ಆದರೆ ತನ್ನ ವ್ಯಕ್ತಿತ್ವವನ್ನೇ ತೂಕಕ್ಕಿಟ್ಟಾಗ ದೊಡ್ಡಣ್ಣನಂಥ ಸಜ್ಜನನೂ ಸೌಜನ್ಯ ಮರೆತು ಮಾತಾಡಬೇಕಾದ ಸಂದರ್ಭ ಒದಗುತ್ತದೆ. ಇತ್ತೀಚೆಗೆ ಅದ್ದೂರಿ ಚಿತ್ರವೊಂದಕ್ಕೆ ಇವರಿಗೆ ಆಫರ್ ಬಂದಿತ್ತು. ಇವರು ಕೇಳಿದ್ದು ಒಂದು ಲಕ್ಷ. ಅವರು ಹೇಳಿದ್ದು 15 ಸಾವಿರ. ದೊಡ್ಡಣ್ಣ ನಿರ್ಮಾಪಕರ ಜನ್ಮ ಜಾಲಾಡಿದರಂತೆ.

ಇದುವರೆಗೆ 300 ಚಿತ್ರಗಳಲ್ಲಿ ನಟಿಸಿದರೂ ಯಾವೊಬ್ಬ ನಿರ್ಮಾಪಕನೂ ಕೇಳಿದಷ್ಟು ಸಂಭಾವನೆ ಕೊಟ್ಟಿದ್ದಿಲ್ಲ ಅಥವಾ ತಾನಾಗಿಯೇ ಕೈಚಾಚಿ ಖುಷಿಯಾಗುವಷ್ಟು ಸಂಭಾವನೆ ಕೊಟ್ಟಿದ್ದಿಲ್ಲ. ಇದು ದೊಡ್ಡಣ್ಣನ ವ್ಯಥೆ. ಕನಿಷ್ಠ ತೂಕಕ್ಕೆ ತಕ್ಕಷ್ಟಾದರೂ ಬೆಲೆ ಕೊಡಬೇಕಲ್ಲ! ■

ಸಾಧುಗೂ ಹೀರೋ ಪಟ್ಟ



ಇತ್ತಿತ್ತಲಾಗಿ ನಟನಾಗಿಯೇ ಹೆಚ್ಚು ಅವಕಾಶ ಸಿಗುತ್ತಿರುವುದರಿಂದ ಸಂಗೀತವನ್ನು ಮರೆತೇಬಿಟ್ಟಿದ್ದಾರೆ. ಅದು ಕನ್ನಡಿಗರ ಭಾಗ್ಯ!

ಇದು ಇನ್ನೊಬ್ಬ ಹಾಸ್ಯನಟನ ಕಥೆ, ಆದರೆ ಇದು ಅದೃಷ್ಟದ ಕಥೆ. ಹಾಗೆ ನೋಡಿದರೆ ಈತನೂ ನೂರಕ್ಕೆ ನೂರು ಹಾಸ್ಯನಟನೇನೂ ಅಲ್ಲ. ಮೊದಲು ಸಂಗೀತ ನಿರ್ದೇಶಕ, ಅದಕ್ಕೂ ಮೊದಲು ಕೀಬೋರ್ಡ್ ಪ್ಲೇಯರ್. ಹೆಸರು ಸಾಧು ಕೋಕಿಲ. ಹೆಸರಿಗೂ ಸಂಗೀತಕ್ಕೂ ಸಂಬಂಧವಿಲ್ಲ.

ಸಂಗೀತ ನಿರ್ದೇಶಕನಾಗಿ ಪ್ರೇಕ್ಷಕರ ಕಿವಿ ಕಿವುಡಾಗುವಂತೆ ವಾದ್ಯಗಳನ್ನು ಚಚ್ಚುವ ಸಾಧು ನಟನಾದ ಮೇಲೆಯೂ ಅದೇ ಶೈಲಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಮುಖ ಕಿವಿಚುವ, ಕೈಕಾಲು ತಿರುಚುವ ಅಭಿನಯ. ನೀಗ್ರೋ ಬುಡಕಟ್ಟಿಗೆ ಸೇರಿದವರಂತೆ ಕಾಣಿಸುವ ಸಾಧು ಇನ್ನೊಂದು ಆ್ಯಂಗಲ್‌ನಲ್ಲಿ ಹಿಂದಿ ಹಾಸ್ಯನಟ ಜಾನಿ

ಲೀವರ್ ಥರನೂ ಕಾಣಿಸುತ್ತಾರೆ. ಅದು ಅವರಿಗೂ ಗೊತ್ತಿರುವುದೇ ತಾಪತ್ರಯ. ಎಲ್ಲಾ ಚಿತ್ರಗಳಲ್ಲು ಲೀವರ್‌ನನ್ನು ಅನುಕರಿಸುವ ಸಾಧು, ಸಂಗೀತದಲ್ಲಿ ಮಾತ್ರ ರೆಹಮಾನ್‌ನ್ನು ಅನುಕರಿಸುತ್ತಾರೆ. ಇತ್ತೀಚೆಗಲಾಗಿ ನಟನಾಗಿಯೇ ಹೆಚ್ಚು ಅವಕಾಶ ಸಿಗುತ್ತಿರುವುದರಿಂದ ಸಂಗೀತವನ್ನು ಮರೆತೇಬಿಟ್ಟಿದ್ದಾರೆ. ಅದು ಕನ್ನಡಿಗರ ಭಾಗ್ಯ.

ವಿಚಿತ್ರವೆಂದರೆ ಸಾಧು ನಟನೆಯನ್ನು ಮೆಚ್ಚುವ ಪ್ರೇಕ್ಷಕ ವರ್ಗವೂ ಇದೆ. ಅದೇ ಮುಂದಿನ ಸಾಲಿನ ಪಡ್ಡೆಗಳು. ಹೀಗಾಗಿ ಸಾಧುಗೆ ದಿಢೀರ್ ಬೇಡಿಕೆ ಸೃಷ್ಟಿಯಾಗಿದೆ. ಇವೆಲ್ಲದರ ಒಟ್ಟಾರೆ ಫಲವೋ ಎಂಬಂತೆ ಇವರೀಗ ನಾಯಕರಾಗಿದ್ದಾರೆ. ಎರಡು ಚಿತ್ರಗಳು ಇವರನ್ನೇ ನೆಚ್ಚಿಕೊಂಡು ತಯಾರಾಗುತ್ತಿವೆ. ತಮಿಳಿನಲ್ಲಿ ಸೆಂದಿಲ್‌ನಂಥ ಹಾಸ್ಯನಟನಿಗೆ ಸಿಕ್ಕ ಮರ್ಯಾದೆ ಕನ್ನಡದಲ್ಲಿ ಸಾಧುಗೆ ಸಿಗುತ್ತಿದೆ.

ಇತಿಹಾಸದಲ್ಲೊಮ್ಮೆ ಇಣುಕಿ ನೋಡಿದರೆ ಹಾಸ್ಯನಟರು ನಾಯಕರಾದ ಉದಾಹರಣೆ ತೀರಾ ವಿರಳ. ಒಬ್ಬ ದ್ವಾರಕೀಶ್, ಇನ್ನೊಬ್ಬ ಕಾಶಿನಾಥ್ ಬಿಟ್ಟರೆ ಬೇರಾರೂ ಇಲ್ಲ (ನಾಯಕನಟರಾಗಲು ಬಂದವರು ಹಾಸ್ಯನಟರಾಗಿದ್ದುಂಟು). ಕಾಶಿನಾಥ್ ವಿಷಯದಲ್ಲೂ ಇದು ತಾತ್ಕಾಲಿಕ. ಹಾಸ್ಯ ಚಿತ್ರಗಳ ಟ್ರೆಂಡ್ ಇರುವಷ್ಟು ದಿನ ಅವರು ಚಾಲ್ತಿಯಲ್ಲಿರುತ್ತಾರೆ. ಆಮೇಲೆ ತ್ರಿಶಂಕುಸ್ವರ್ಗದ ಪ್ರಜೆಯಾಗುತ್ತಾರೆ.

ಹಾಗೆ ನೋಡಿದರೆ ನಾಯಕನಟರಾಗಿದ್ದಾಗಲೇ ಹಾಸ್ಯ ದೃಶ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ನಟರು ನಮ್ಮಲ್ಲಿದ್ದಾರೆ. ಹಿಂದಿಯಲ್ಲಿ ಸಂಜೀವ್‌ಕುಮಾರ್, ಮಲಯಾಳಂನಲ್ಲಿ ಮೋಹನ್‌ಲಾಲ್, ತೆಲುಗಿನಲ್ಲಿ ರಾಜೇಂದ್ರ ಬಾಬು, ಕನ್ನಡದಲ್ಲಿ ಅನಂತ್‌ನಾಗ್, ಇತ್ತೀಚೆಗೆ ರಮೇಶ್, ಹೀಗೆ....


ಹಾಸ್ಯನಟರೆಂದರೆ ಬಾಡಿ ಲಾಂಗ್ವೇಜ್‌ಗಿಂತ ಬ್ಲಡಿ ಲಾಂಗ್ವೇಜೇ ಮುಖ್ಯ ಎಂದುಕೊಂಡಿರುವ ಇತ್ತೀಚಿನ ತಳಿಯಂತೂ ಬಾಳಿಕೆ ಬರುವ ಸಾಧ್ಯತೆಯಿಲ್ಲ. ಬಾಂಬೆ ಹಲ್ವಾ, ಯಮಲೋಕದಲ್ಲಿ ವೀರಪ್ಪನ್, ಜೇಜೂಂಬಾ ಮೊದಲಾದ ಶೀರ್ಷಿಕೆಗಳೇ ಇವರ ಭವಿಷ್ಯವನ್ನು ಸೂಚಿಸುತ್ತವೆ. ■

ವಿರಹ

ಹ್ಯಾಂಗ ಬದುಕಲೇ
ನೋಡದೆ ನಿನ್ನ
ಬಿಲ್ಲ ಹುಬ್ಬಿನ ಬೆಡಗಿ
ಹೊರಟೇ ಹೋದೆಯಲ್ಲೇ
ಮಿಂಚು ನಗೆಯ ಚೆಲ್ಲಿ.

–ರಾಜಪ್ಪ ಕೆ.

ಶಿಲ್ಪಾ ತ್ಯಾಗರಾಣಿ



ಈಕೆಯನ್ನು ಇನ್ನೊಂದು ಅಳುಮುಂಜಿ ಮಾಡುವ ಎಲ್ಲಾ ಪ್ರಯತ್ನಗಳೂ ನಡೆಯುತ್ತಿವೆ. ಇದು ಹೀಗೆಯೇ ಮುಂದುವರಿದರೆ ಕಣ್ಣೀರರಾಣಿ ಪಟ್ಟದಲ್ಲಿ ಕುಳಿತಿದ್ದ ಶ್ರುತಿಗಾದ ಗತಿಯೇ ಶಿಲ್ಪಾಗೂ ಆಗಬಹುದು.

ತ್ರಿಕೋಣ ಪ್ರೇಮಕಥೆಯ ಡೆಫಿನಿಷನ್ ಏನು?


ಒಂದು ಕೋನದಲ್ಲಿ ನಾಯಕಿಯಿದ್ದರೆ ಇನ್ನೆರಡು ಕೋನಗಳಲ್ಲಿ ನಾಯಕರಿರುತ್ತಾರೆ ಅಥವಾ ಒಂದು ಕೋನದಲ್ಲಿ ನಾಯಕನಿದ್ದರೆ ಇನ್ನೆರಡು ಕೋನಗಳಲ್ಲಿ ನಾಯಕಿಯರಿರುತ್ತಾರೆ. ಇಬ್ಬರು ಇರುವ ಜಾಗದಲ್ಲಿ ಒಬ್ಬರು ತ್ಯಾಗ ಮಾಡಲೇಬೇಕು. ಇಲ್ಲದಿದ್ದಲ್ಲಿ ತ್ರಿಕೋನ ಪ್ರೇಮಕಥೆ ಅಪೂರ್ಣ.

ಕನ್ನಡ ಚಿತ್ರಗಳಲ್ಲಿ ತ್ಯಾಗ ಮಾಡುವ ಕೆಲಸವನ್ನು ನಿಭಾಯಿಸುತ್ತಿದ್ದವರು ಹೀರೋಯಿನ್‌ಗಳೇ. ಅಲ್ಲೂ ಹೆಣ್ಣಿನ ಶೋಷಣೆ! ಆದರೆ ರಮೇಶ್ ಬಂದ ಮೇಲೆ ಇದು ಉಲ್ಟಾಪಲ್ಟಾ ಆಯಿತು. ಈಗ ರಮೇಶ್ ಹುಷಾರಾಗಿದ್ದಾರೆ. ಹಾಗಾಗಿ ಮತ್ತೆ ಪ್ಲೇಟ್ ರಿವರ್ಸ್ ಆಗಿದೆ. ಸದ್ಯದ ತ್ಯಾಗರಾಣಿಯೆಂದರೆ ಶಿಲ್ಪ. ಮಲೆಯಾಳಿ ಚಿಪ್ಪಿ ಕನ್ನಡಕ್ಕೆ ಬಂದ ಮೇಲೆ ಶಿಲ್ಪ ಆಗಿದ್ದು ಹಳೇ ಕಥೆ. ಈಕೆ ಒಂದು ಆ್ಯಂಗಲ್‌ನಲ್ಲಿ ಸುಧಾರಾಣಿಯ ಥರಾನೇ ಕಾಣ್ತಾ ಇರುವುದರಿಂದ ಕನ್ನಡಿಗನಿಗೂ ಈಕೆ ಹೊರಗಿನವಳು ಅಂತ ಅನಿಸಲಿಲ್ಲ.

ಆದರೆ ಈಗ ಈಕೆಯನ್ನು ಇನ್ನೊಂದು ಅಳುಮುಂಜಿ ಮಾಡುವ ಎಲ್ಲಾ ಪ್ರಯತ್ನಗಳೂ ನಡೆಯುತ್ತಿವೆ. ಇದು ಹೀಗೆಯೇ ಮುಂದುವರಿದರೆ ಕಣ್ಣೀರರಾಣಿ ಪಟ್ಟದಲ್ಲಿ ಕುಳಿತಿದ್ದ ಶ್ರುತಿಗಾದ ಗತಿಯೇ ಶಿಲ್ಪಾಗೂ ಆಗಬಹುದು. ಉದಾಹರಣೆಗೆ 'ಸುವ್ವಿ ಸುವ್ವಲಾಲಿ' ಚಿತ್ರವನ್ನೇ ನೋಡಿ. ಈಕೆ ವಿನಾಕಾರಣ ತನ್ನ ಗಂಡನನ್ನು ತಂಗಿ ಜೊತೆ ಬೈಟೂ ಮಾಡುತ್ತಾಳೆ.

ಅಂದ ಹಾಗೆ ಮಲೆಯಾಳಂನಲ್ಲಿ ಇನ್ನೂ ಎರಡನೇ ನಾಯಕಿ ಪಟ್ಟದಿಂದ ಬಡ್ತಿ ಪಡೆಯಲಾಗದ ಶಿಲ್ಪ ಕನ್ನಡದಲ್ಲಿ ಈಗಾಗಲೇ ಎರಡು ಪ್ರಶಸ್ತಿಗಳನ್ನು ಗಳಿಸಿದ್ದಾಳೆ. ಒಂದು ರಾಜ್ಯಪ್ರಶಸ್ತಿ, ಇನ್ನೊಂದು ಸಿನಿಮಾ ಎಕ್ಸ್‌ಪ್ರೆಸ್ ಪ್ರಶಸ್ತಿ. ಮುಂದಿನ ವರ್ಷ ಪ್ರಶಸ್ತಿ ಸಿಗುವುದಾದರೆ ಈಕೆಯ ಕಣ್ಣೀರಿಗೋ, ತ್ಯಾಗಕ್ಕೋ ಸಿಗಬೇಕು! ■

ಮಧ್ಯಾಹ್ನದ ಮೆಗಾ ಸೀರಿಯಲ್ 'ಮನೆತನ'



'ಮನೆತನ'ದ ಯಶಸ್ವಿಗೆ ಕಾರಣವೇನು? ನಮ್ಮಲ್ಲಿ ಮನೆಯಲ್ಲಿಯೇ ಕಾಲಕಳೆಯುವ ಜನರಿಗೇನೂ ಕೊರತೆಯಿಲ್ಲ. ಆ ಕಾರಣಕ್ಕಾಗಿ ನಮ್ಮ ಸೀರಿಯಲ್ ಯಶಸ್ವಿಯಾಗಿದೆ ಎನ್ನುತ್ತಾರೆ ನಿರ್ಮಾಪಕ ಶ್ಯಾಂಸುಂದರ್. ಈ ಮಾತು ಜೋಕ್ ಅನಿಸಿದರೂ ವಾಸ್ತವವೂ ಹೌದು.

ಕನ್ನಡದ ಪ್ರಥಮ ಮೆಗಾ ಸೀರಿಯಲ್ 'ಮನೆತನ'ಕ್ಕೆ ಶತಕ ಪೂರೈಸಿದ ಸಂಭ್ರಮ. ಬೆಂಗಳೂರು ದೂರದರ್ಶನದಲ್ಲಿ ಮಧ್ಯಾಹ್ನ 2.30ಕ್ಕೆ ಪ್ರಸಾರವಾಗುತ್ತಿರುವ ಈ ಧಾರಾವಾಹಿ ನೂರು ಕಂತುಗಳನ್ನು ದಾಟಿ, ಪ್ರೇಕ್ಷಕರ ಮನಗೆದ್ದು ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ಈ ಸಂತೋಷವನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು 'ಮನೆತನ'ದ ಬಳಗ ಸೆಪ್ಟಂಬರ್ 6 ರಂದು ನಗರದ ಹರ್ಷ ಹೋಟೆಲ್‌ನಲ್ಲಿ ಸಂತೋಷ ಕೂಟವೊಂದನ್ನು ಏರ್ಪಡಿಸಿತ್ತು. ಆ ಸುಂದರ ಸಂಜೆಯ ರಸ ನಿಮಿಷಗಳನ್ನು ಸವಿಯಲು ಅಲ್ಲಿ 'ಮನೆತನ'ದ ಬಳಗದವರೆಲ್ಲರೂ ಸೇರಿದ್ದರು. ಧಾರಾವಾಹಿಯ ನಿರ್ದೇಶಕ ಗುರುದತ್ ಅವರಿಗಂತೂ ತಡೆಯಲಾರದಷ್ಟು ಸಂತೋಷ. ಹಿರಿಯ-ಕಿರಿಯರೆಂಬ ಯಾವುದೇ ತಾರತಮ್ಯವಿಲ್ಲದೇ ಎಲ್ಲರೂ ಒಂದೇ ಮನೆಯವರಂತೆ ಸುಳಿದಾಡುತ್ತಿದ್ದರು.

ಮನೆ ಎಂದ ಮೇಲೆ ಹಿರಿಯರು ಇರಲೇಬೇಕಲ್ಲವೇ? ಚಿತ್ರರಂಗದಲ್ಲಿ ಎಲ್ಲರಿಗೂ ಅಮ್ಮನಂತಿರುವ ಪಂಢರಿಭಾಯಿ ತಮ್ಮ ಅನಾರೋಗ್ಯವನ್ನು ಲೆಕ್ಕಿಸದೇ ಎಲ್ಲರೊಂದಿಗೆ ತಮ್ಮ ಸಂತೋಷವನ್ನು ಹಂಚಿಕೊಂಡರು. ಮಾತಿನ ನಡುವೆ ಅವರಿಗೆ ಅರಿವಿಲ್ಲದಂತೆಯೇ ಕಣ್ಣಿನಿಂದ ಆನಂದ ಬಾಷ್ಪವಾಗುತ್ತಿತ್ತು. ನಿಮಗೆ ಆರೋಗ್ಯ ಸರಿಯಿಲ್ಲ, ನಟನೆಯಿಂದ ದೂರವಿರಿ ಎಂದು ಗುರು, ಶ್ಯಾಮ್ ಮುಂತಾದವರೆಲ್ಲಾ ಹೇಳಿದರಂತೆ. ಹಾಗಂತ ಅಮ್ಮ ಸುಮ್ಮನಿರುವವರೇ! 'ನಟನೆಯೇ ನನಗೆ ಟಾನಿಕ್. ಅದಿಲ್ಲದೇ ನಾನಿಲ್ಲ' ಎಂಬುದು ಅಮ್ಮ ಅವರ ಮಾತು. ಆತ್ಮ ತೃಪ್ತಿಯಿಂದಲೇ ಆತ್ಮಶಕ್ತಿ ಎನ್ನುವ ಅವರು, ಒಳ್ಳೆಯದು ಕೆಟ್ಟದು ಯಾವುದು ಎಂಬ ತಿರುಳೇ ಮನೆತನ ಎಂದರು.


'ಮನೆತನ'ದ ನಟನಟಿಯರು ಕೂಡ ಒಂದೆರಡು ಮಾತುಗಳನ್ನು ಹೇಳಿದರು. ಶಂಕರ್ ಅಶ್ವಥ್ ಅವರಿಗೆ ಈ ಸೀರಿಯಲ್‌ನಿಂದ ಹೆಚ್ಚಿನ ಜನಪ್ರಿಯತೆ, ಪ್ರಶಂಸೆ, ಪ್ರೋತ್ಸಾಹ ಬಂದಿದೆಯಂತೆ. ಒಬ್ಬ ಕಲಾವಿದ ತನ್ನ ತಪ್ಪುಗಳನ್ನು ತಿದ್ದಿಕೊಳ್ಳಲು ಟೀಕೆಗಳು ಸಹಕಾರಿ; ಟೀಕೆಗಳು ಮತ್ತು ಹೊಗಳಿಕೆಯನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಹೇಳಲು ಅವರು ಮರೆಯಲಿಲ್ಲ. ಮಂಡ್ಯ ರಮೇಶ್ ನಾಟ್ಯ ಶಾಸ್ತ್ರದ ಆಂಗಿಕ, ಆಹಾರ್ಯ, ವಾಚಿಕ, ಅಭಿನಯಗಳ ಬಗ್ಗೆ ಹೇಳುತ್ತಾ, ಇಲ್ಲಿ ಆಂಗಿಕ ಮತ್ತು ಅಭಿನಯಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿದೆ ಎಂದರು. ಶ್ರೀದೇವಿಗಂತೂ ಪ್ರಾರಂಭದಲ್ಲಿ ತಮ್ಮ ಪಾತ್ರ ಹೇಗಿರುತ್ತದೋ ಎಂಬ ಆತಂಕವಿತ್ತಂತೆ. ಆದರೆ ಈಗ ಪಾತ್ರ ತುಂಬಾ ಮೆಚ್ಚುಗೆಯಾಗಿದೆ ಎನ್ನುತ್ತಾರೆ. ಸಿನಿಮಾದಲ್ಲಿ ಸಿಗದ ಅವಕಾಶ ಪ್ರೋತ್ಸಾಹ ಟಿ.ವಿ. ಮಾಧ್ಯಮದಲ್ಲಿ ದೊರೆತಿದೆ ಎಂಬ ಸಂತಸ. ತಾವು ಅಭಿನಯದಲ್ಲಿ ಯಾವತ್ತೂ ಉನ್ನತ ಹಂತವನ್ನು ತಲುಪಿಲ್ಲ ಎಂಬ ವಿನಯದ ಮಾತು ಮೈನಾವತಿಯದು.

'ಮನೆತನ' ಧಾರಾವಾಹಿಯಿಂದ ನಾನು ಮುಂಚೆಗಿಂತಲೂ ಈಗ ಹೆಚ್ಚು ಮನೆ ಮಾತಾಗಿದ್ದೇನೆ. ಸಿನಿಮಾದಲ್ಲಿ ನಟಿಸುವಾಗಲೂ ಇಷ್ಟೊಂದು ಜನಪ್ರಿಯತೆ ದೊರೆತಿರಲಿಲ್ಲ ಎಂಬ ಮಾತು ನಟ ಕಲ್ಯಾಣ್ ಕುಮಾರ್ ಅವರದು. ಮನೆತನ ಬಳಗದವರೆಲ್ಲರೂ ಕಲ್ಯಾಣ್ ಹಾಗೂ ಪಂಢರಿಭಾಯಿ ಜೊತೆ ನಟಿಸುವ ಅವಕಾಶ ಸಿಕ್ಕಿರುವುದು ಅತ್ಯಂತ ಸಂತೋಷದ ವಿಷಯ ಎಂದರು. ಅಂದು ಇಡೀ ಮನೆತನದ ದಂಡೇ ಅಲ್ಲಿ ನೆರೆದಿತ್ತು. ಪಂಢರಿಭಾಯಿ, ಮೈನಾವತಿ, ಸ್ವಾತಿ, ಮಂಡ್ಯ ರಮೇಶ್, ಶ್ರೀದೇವಿ, ನಾಗೇಶ ಮಯ್ಯ, ಶರತ್, ಲೋಹಿತಾಶ್ವ ರಾಜೇಶ್, ಪದ್ಮಾ ವಾಸಂತಿ ಎಲ್ಲರಲ್ಲೂ ಇನ್ನಿಲ್ಲದ ಲವಲವಿಕೆ.

ಈ ಯಶಸ್ವಿಗೆ ಕಾರಣವೇನು? ಎಂದು ನಿರ್ಮಾಪಕ ಶ್ಯಾಂಸುಂದರ್‌ರವರನ್ನು ಪ್ರಶ್ನಿಸಿದಾಗ, ನಮ್ಮಲ್ಲಿ ಮನೆಯಲ್ಲಿಯೇ ಕಾಲಕಳೆಯುವ ಜನರಿಗೇನೂ ಕೊರತೆಯಿಲ್ಲ. ಆ ಕಾರಣಕ್ಕಾಗಿ ನಮ್ಮ ಸೀರಿಯಲ್ ಯಶಸ್ವಿಯಾಗಿದೆ ಎನ್ನುತ್ತಾರೆ. ಈ ಮಾತು ಜೋಕ್ ಅನಿಸಿದರೂ ವಾಸ್ತವವೂ ಹೌದು. ದೂರದರ್ಶನದವರು ನಮಗೆ ಮಧ್ಯಾಹ್ನ ಅವಕಾಶ ನೀಡಿದ್ದರೂ ನಮ್ಮ ಧಾರಾವಾಹಿ ಜನಪ್ರಿಯವಾಗಿದೆ. ಹಲವಾರು ಕಡೆ ಕರೆಂಟ್ ಇಲ್ಲದೇ ಮಧ್ಯಾಹ್ನದ ವೇಳೆ ನೋಡಲು ತೊಂದರೆಯಾಗಿದೆ. ಆದರೂ 'ಮನೆತನ' ಮನೆಯವರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾಗಿದೆ ಎಂದರು.

ಈಗ ಪ್ರಸಾರವಾಗುತ್ತಿರುವ ಮೂರು ಮೆಗಾ ಸೀರಿಯಲ್‌ಗಳಲ್ಲಿ 'ಮನೆತನ'ವೇ ಹೆಚ್ಚು ಜನಪ್ರಿಯವಾಗಿದೆ ಎಂಬ ಹೆಮ್ಮೆ ನಿರ್ಮಾಪಕ ಶ್ಯಾಮ್ ಅವರಿಗೆ. ಉಳಿದೆರಡು ಸೀರಿಯಲ್‌ಗಳು ರೀಮೇಕ್ ಆಗಿವೆ. ನಮ್ಮದು ಒರಿಜಿನಲ್ ಆಗಿರುವುದೇ ಯಶಸ್ಸಿನ ಗುಟ್ಟು ಎನ್ನುತ್ತಾರೆ ಶ್ಯಾಮ್. ಜನರು ಇಷ್ಟಪಡುವುದು ತಮ್ಮದೇ ಪರಿಸರದ ಕಥೆ, ಪಾತ್ರಗಳು ಎಂದರು. 'ಮನೆತನ' ಇನ್ನೂ 250 ದಿನಗಳ ಕಾಲ ಮುಂದುವರೆಯುತ್ತದಂತೆ. ಮೂಲ ಕಥೆ ಅಷ್ಟು ಬಲವಾಗಿರುವುದರಿಂದ ಜಗ್ಗುವ ಅಗತ್ಯವಿಲ್ಲ ಎನ್ನುವ ವಿಶ್ವಾಸ ಗುರುದತ್ ಅವರದು.

■ಎ.ಎಂ. ಸುರೇಶ್



ಸರಕಾರಿ ಆಸ್ಪತ್ರೆ
ಸ.N. ಪ್ರೋಲೇಶಿ
ಸರಕಾರಿ ಆಸ್ಪತ್ರೆ
ಮೂರ್ಛೆ ಹೋಗಿ ಬಿದ್ದರು. ಎಚ್ಚರವಾದಾಗ ತಾನು ಸರಕಾರಿ ಆಸ್ಪತ್ರೆಯಲ್ಲಿರೋದು ಅಂತಾ ತಿಳಿದ ಕೂಡಲೇ ಪ್ರಾಣ ಬಿಟ್ಟರು ನೋಡಿ
ಔಷಧಿ, ಎಕ್ಸರೇ - ಎಲ್ಲ ಸೌಲಭ್ಯವಿದೆ ಕಣ್ರೀ.. ಆದರೆ ಇವುಗಳ ಉಪಯೋಗಕ್ಕೆ ಡಾಕ್ಟರೇ ಇಲ್ಲಾ ನೋಡಿ
ಸ್ಮಶಾನಕ್ಕೆ ದಾರಿ
ಏನಯ್ಯಾ ಸರಕಾರಿ ಆಸ್ಪತ್ರೆ ದಾರಿ ಕೇಳಿದ್ರೆ ನೀನು ಸ್ಮಶಾನದ ದಾರಿ ತೋರಿಸ್ತಿದ್ದೀಯಲ್ಲಾ
ತರಗತಿ V
ಸರಕಾರಿ ಆಸ್ಪತ್ರೆಗಳನ್ನು ಯಾವ ಉದ್ದೇಶದಿಂದ ಸ್ಥಾಪಿಸಿದರು ಅಂದ್ರೆ.. ಶವಗಳ ಪೋಸ್ಟ್‌ಮಾರ್ಟಂ ಮಾಡುವ ಉದ್ದೇಶದಿಂದ ಸರ್ !!

BISILA BADUKU Kannada Monthly OCTOBER 1998 RNI No. 67406 / 97 Regd. BGW / 394

500 ರೂಪಾಯಿ ಹೂಡಿ
6 ತಿಂಗಳಲ್ಲಿ
10 ಲಕ್ಷ ರೂಪಾಯಿ ಗಳಿಸಿ!

ಈ ಬಿಸಿನೆಸ್‌ನಲ್ಲಿ ನಷ್ಟ ಎಂಬುದೇ ಇಲ್ಲ! ಇದು 'ಬದುಕು' ಓದುಗರಿಗೆ ನೀಡುತ್ತಿರುವ ಬಂಪರ್ ಕೊಡುಗೆ!


ಗೃಹಿಣಿಯರು ವಿದ್ಯಾರ್ಥಿಗಳು ನಿರುದ್ಯೋಗಿಗಳು ಸರಕಾರಿ ನೌಕರರು
ಖಾಸಗಿ ನೌಕರರು ಉದ್ಯಮಿಗಳು ವ್ಯಾಪಾರಸ್ಥರು ಶಿಕ್ಷಕರು
.....ಎಲ್ಲರಿಗೂ ಈ ವಿನೂತನ ಯೋಜನೆ ಸೂಕ್ತವಾದುದು.



ಹಣ ಗಳಿಸಲು....

ಅಡ್ಡ ದಾರಿ ಹಿಡಿಯಲೇ ಬೇಕಿಲ್ಲ
ಇನ್ನೊಬ್ಬರಿಗೆ ಮೋಸ ಮಾಡಬೇಕಿಲ್ಲ
ಕಾನೂನು ಕಣ್ಣಿಗೆ ಮಣ್ಣೆರಚಬೇಕಿಲ್ಲ

ನೀತಿಯುತ ಮಾರ್ಗದಲ್ಲೇ ಸಾಗಿ
ಕೈತುಂಬ ಹಣ ಸಂಪಾದಿಸಿ
ನೆಮ್ಮದಿಯ ಬದುಕು ಸಾಗಿಸಲು ಸಾಧ್ಯ.



ಹೇಗೆ? ಹೇಗೆ? ಹೇಗೆ? ಹೇಗೆ?

ಬಹಳ ಸುಲಭ!

ವಿವರಗಳಿಗೆ
ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ''ನೇರ ಮಾರಾಟ ಜಾಲ'' ಲೇಖನ ಓದಿ.
ಅಥವಾ
ಅಂಚೆ ಕಾರ್ಡಿನಲ್ಲಿ ನಿಮ್ಮ ಪೂರ್ಣ ವಿಳಾಸ ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿರಿ.

ವ್ಯವಸ್ಥಾಪಕರು,
'ಬಿಸಿಲ ಬದುಕು' ಮಾಸಪತ್ರಿಕೆ
ಅಂಚೆ ಪೆಟ್ಟಿಗೆ 7951, ಬಸವೇಶ್ವರ ನಗರ, ಬೆಂಗಳೂರು - 560 079. ☎ : 3307810